₹ 6 @vishwavaninews epaper.vishwavani.news vishwavani.news ಬೆಂಗಳೂರು । **ಹುಬ್ಬಳ್ಳಿ** । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ **ಶುಕ್ರವಾರ 04.04.2025** **ಸಂಪುಟ:** 67 **ಸಂಚಿಕೆ:** 330 **ಪುಟಗಳು:** 12 **ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್**

ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವದ ಮೇಲೆ $ ಟ್ರಂಪ್ ಕರ ಸಮರ

ದಶಕಗಳಿಂದ ನಮ್ಮ ದೇಶವನ್ನು ಮಿತ್ರ, ವೈರಿ ರಾಷ್ಟ್ರಗಳು ಎರಡೂ ಸಮಾನವಾಗಿ ಲೂಟಿ ಮಾಡಿವೆ, ಈಗಲೂ ಲೂಟಿ ಮಾಡುತ್ತಿವೆ. ಕೆಲವೊಂದು ದೇಶಗಳು ನಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿವೆ. ಇದು ನಮ್ಮ ಸ್ವಾತಂತ್ರ್ಯದ ಘೋಷಣೆ. ನಾವು ಕನಿಷ್ಠ ಶೇ.10ರಷ್ಟು ತೆರಿಗೆಯನ್ನು ಮೂಲವಾಗಿಟ್ಟುಕೊಂಡಿದ್ದೇವೆ.

– ಡೊನಾಲ್ಡ್ ಟ್ರಂಪ್
ಅಮೆರಿಕ ಅಧ್ಯಕ್ಷ

ವಾಷಿಂಗ್ಟನ್: ಭಾರತ ಸೇರಿ ವಿವಿಧ 180ಕ್ಕೂ ಹೆಚ್ಚು ದೇಶಗಳಿಂದ ಅಮೆರಿಕಕ್ಕೆ ಆಮದಾಗುವ ಉತ್ಪನ್ನಗಳ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಪ್ರತಿಸುಂಕ ಘೋಷಿಸಿದ್ದು, ಏಪ್ರಿಲ್ 9ರಿಂದ ಅನ್ವಯವಾಗಲಿದೆ. ವಿವಿಧ ದೇಶಗಳಿಗೆ ಶೇ.10 ರಿಂದ ಶೇ.49 ವರೆಗೂ ಸುಂಕ ವಿಧಿಸಲಾಗಿದ್ದು, ಭಾರತದಿಂದ ಆಮದಾಗುವ ಉತ್ಪನ್ನಗಳ ಮೇಲೆ ಶೇ.27ರಷ್ಟು ಪ್ರತಿಸುಂಕ ವಿಧಿಸಲಾಗಿದೆ. ನೆರೆಯ ದೇಶಗಳಾದ ಚೀನಾದ ಮೇಲೆ ಶೇ.34, ಪಾಕಿಸ್ತಾನದ ಮೇಲೆ ಶೇ.29, ಬಾಂಗ್ಲಾದೇಶದ ಮೇಲೆ ಶೇ.37, ಥೈಲ್ಯಾಂಡ್ ಮೇಲೆ ಶೇ.36, ಶ್ರೀಲಂಕಾಕ್ಕೆ ಶೇ.44, ಮ್ಯಾನ್ಮಾರ್‌ಗೆ ಶೇ.44, ಭೂತಾನ್ ಮತ್ತು ಮಾಲ್ಡೀವ್ಸ್ ಮೇಲೆ ಶೇ.10 ಪ್ರತಿ ಸುಂಕ ವಿಧಿಸಿದೆ.

ಭಾರತದ ಮೇಲೆ ಶೇ.26 ರಷ್ಟು ಪ್ರತಿಸುಂಕ: ಭಾರತದ ಉತ್ಪನ್ನಗಳ ಮೇಲೆ ಟ್ರಂಪ್ ಶೇ.26ರಷ್ಟು ಪ್ರತಿ ಸುಂಕವನ್ನು ವಿಧಿಸುವ ಮೂಲಕ ಭಾರತದ ರಫ್ತಿನ ಮೇಲೆ ದೊಡ್ಡ ಹೊಡೆತ ಬಿದ್ದಂತಾಗಿದೆ. ಏಪ್ರಿಲ್ 9ರಿಂದ ಈ ಸುಂಕ ಭಾರತಕ್ಕೆ ಅನ್ವಯವಾಗಲಿದೆ. ಈ ಪ್ರತಿಸುಂಕ ಭಾರತಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಲಿದ್ದು, ಹಲವಾರು ಕಂಪನಿಗಳ ಆದಾಯಕ್ಕೆ ಹೊಡೆತ ಬೀಳಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಮತ್ತೊಂದೆಡೆ ಅಮೆರಿಕದ ಪ್ರತಿಸುಂಕದಿಂದ ವಿನಾಯ್ತಿ ಪಡೆದುಕೊಳ್ಳುವ ಕಸರತ್ತಿನ ಭಾಗವಾಗಿ ಭಾರತ ಕೂಡ ಚಿನ್ನಾಭರಣ, ರತ್ನ, ಔಷಧಗಳು ಮತ್ತು ಆಟೋ ಬಿಡಿ ಭಾಗಗಳು ಸೇರಿದಂತೆ 23 ಬಿಲಿಯನ್ ಡಾಲರ್ ಮೌಲ್ಯದ ಅಮೆರಿಕದ ಆಮದುಗಳ ಮೇಲಿನ ಸುಂಕ ಕಡಿತಗೊಳಿಸಲು ಚಿಂತನೆ ನಡೆಸಿದೆ ಎಂದು ತಿಳಿದು ಬಂದಿದೆ. → 4

ಮೋದಿ ನನ್ನ ಉತ್ತಮ ಸ್ನೇಹಿತ. ಇತ್ತೀಚೆಗೆ ಅಮೆರಿಕಕ್ಕೆ ಬಂದು ಹೋಗಿದ್ದರು. ಆದರೆ, ಸುಂಕದ ವಿಚಾರವಾಗಿ ಅವರು ನಮ್ಮನ್ನು ಸರಿಯಾಗಿ ನಡೆಸಿಕೊಳ್ಳುತ್ತಿರಲಿಲ್ಲ. ಅವರು ನಮಗೆ ಶೇ.52ರಷ್ಟು ಸುಂಕ ಹಾಕುತ್ತಿದ್ದಾರೆ. ಅದಕ್ಕೆ ಹೋಲಿಸಿದರೆ ನಮ್ಮದು ಏನೂ ಅಲ್ಲ. ಇತರ ದೇಶಗಳು ಅಮೆರಿಕದಿಂದ ಆಮದಾಗುವ ಉತ್ಪನ್ನಗಳ ಮೇಲೆ ವಿಧಿಸುವ ಅರ್ಧದಷ್ಟು ಸುಂಕವನ್ನು ನಾವು ವಿಧಿಸುತ್ತಿದ್ದೇವೆ.

– ಡೊನಾಲ್ಡ್ ಟ್ರಂಪ್
ಅಮೆರಿಕ ಅಧ್ಯಕ್ಷ

180 ರಾಷ್ಟ್ರಗಳ ಮೇಲೆ ಆಮದು ಸುಂಕ

26% ಭಾರತದ ಮೇಲೆ ಕರಭಾರ

ಯಾವ (ಟಾಪ್ 10) ದೇಶಕ್ಕೆ ಎಷ್ಟು?

1. ಕಾಂಬೋಡಿಯಾ–ಶೇ.49
2. ಲಾವೋಸ್–ಶೇ.48
3. ಮಡ್ಗಾಸ್ಕರ್–ಶೇ.47
4. ವಿಯೆಟ್ನಾಂ–ಶೇ.46
5. ಶ್ರೀಲಂಕಾ–ಶೇ.44
6. ಮ್ಯಾನ್ಮಾರ್–ಶೇ.44
7. ಬೋಟ್ಸ್‌ವಾನಾ–ಶೇ.37
8. ಬಾಂಗ್ಲಾದೇಶ–ಶೇ.37
9. ಸರ್ಬಿಯಾ–ಶೇ.37
10. ಥೈಲ್ಯಾಂಡ್– ಶೇ.36

ಭಾರತದ ಪ್ರತಿಕ್ರಿಯೆ

ಟ್ರಂಪ್ ವಿಧಿಸಿರುವ ಪ್ರತಿಸುಂಕ ನೀತಿಗೆ ಭಾರತ ಪ್ರತಿಕ್ರಿಯಿಸಿದ್ದು, ಇದು ಹಿನ್ನಡೆಯಲ್ಲ, ಮಿಶ್ರ ಫಲ ಎಂದು ಹೇಳಿದೆ. ಶೇ.10ರಷ್ಟು ಸುಂಕಗಳು ಏಪ್ರಿಲ್ 5 ರಿಂದ, ಶೇ.16ರಷ್ಟು ಸುಂಕ ಏಪ್ರಿಲ್ 10 ರಿಂದ ಜಾರಿಗೆ ಬರಲಿವೆ. ಟ್ರಂಪ್ ಘೋಷಿಸಿರುವ ಸುಂಕಗಳ ಪರಿಣಾಮವನ್ನು ಸಚಿವಾಲಯ ವಿಶ್ಲೇಷಿಸುತ್ತಿದೆ ಎಂದು ವಾಣಿಜ್ಯ ಸಚಿವಾಲಯದ ಅಧಿಕಾರಿಗಳು ಹೇಳಿದ್ದು, ಅಮೆರಿಕದ ಕಳವಳಗಳನ್ನು ಭಾರತ ಪರಿಹರಿಸಿದರೆ, ಟ್ರಂಪ್ ಆಡಳಿತ ಸುಂಕವನ್ನು ಮತ್ತಷ್ಟು ಕಡಿಮೆ ಮಾಡಬಹುದು ಎಂದು ಹೇಳಿದ್ದಾರೆ.

ಏನಿದು ಪ್ರತಿಸುಂಕ?

ಒಂದು ದೇಶವು ತನ್ನ ಉತ್ಪನ್ನಗಳ ಮೇಲೆ ಇನ್ನೊಂದು ದೇಶವು ವಿಧಿಸುವ ಆಮದು ಸುಂಕಕ್ಕೆ ಸಮಾನವಾಗಿ ವಿಧಿಸುವ ತೆರಿಗೆಯನ್ನು ಪ್ರತಿಸುಂಕ ಎನ್ನಲಾಗುತ್ತದೆ. ಯಾವುದೇ ದೇಶಗಳ ಉತ್ಪನ್ನಗಳು ತಮ್ಮ ದೇಶದ ಗಡಿಯನ್ನು ದಾಟಿದ ಮೇಲೆ ಅಮೆರಿಕ ಸರಕಾರ ಈ ಉತ್ಪನ್ನಗಳ ಮೇಲೆ ಆಯಾ ದೇಶಗಳಿಗೆ ನಿಗದಿಪಡಿಸಿರುವ ತೆರಿಗೆ ವಿಧಿಸಲಿದೆ. ಈ ಸುಂಕವನ್ನು ಸಾಮಾನ್ಯವಾಗಿ ವಸ್ತುಗಳ ಮೌಲ್ಯದ ಶೇಕಡಾವಾರು ಪ್ರಮಾಣದಲ್ಲಿ ಲೆಕ್ಕಹಾಕಲಾಗುತ್ತದೆ. ಇದನ್ನು ಕ್ರಯಾನುಸಾರ ಜಾಹೀರಾತು ಮೌಲ್ಯ ಸುಂಕ ಎಂದು ಕರೆಯಲಾಗುತ್ತದೆ.

ಏನಿದರ ಉದ್ದೇಶ?

- **ದೇಶೀಯ ಕೈಗಾರಿಕೆಗಳ ರಕ್ಷಣೆ**

ಇತರ ದೇಶಗಳಿಂದ ಆಮದು ಮಾಡಿಕೊಂಡ ವಸ್ತುಗಳನ್ನು ಹೆಚ್ಚು ದುಬಾರಿಯನ್ನಾಗಿ ಮಾಡುವ ಮೂಲಕ ಗ್ರಾಹಕರಿಗೆ ದೇಶೀಯವಾಗಿ ತಯಾರಿಸಿದ ಉತ್ಪನ್ನಗಳನ್ನು ಖರೀದಿಸಲು ಪ್ರೋತ್ಸಾಹಿಸುತ್ತದೆ. ಜತೆಗೆ ವಿದೇಶಿ ಸ್ಪರ್ಧೆಯಿಂದ ದೇಶೀಯ ವಹಿವಾಟನ್ನು ರಕ್ಷಿಸುವ ಉದ್ದೇಶ ಇದಾಗಿದೆ.

- **ಸರಕಾರದ ಆದಾಯ ಹೆಚ್ಚಳ**

ಸುಂಕಗಳಿಂದಾಗಿ ಸರಕಾರಕ್ಕೆ ಆದಾಯದ ಮೂಲ ಒದಗಿಸಲಿದೆ. ತೆರಿಗೆಗೆ ಒಳಪಡುವ ದೇಶಗಳ ಉತ್ಪನ್ನಗಳಿಂದ ಅಮೆರಿಕಕ್ಕೆ ಹೆಚ್ಚಿನ ಆದಾಯ ಹರಿದು ಬರಲಿದೆ.

- **ಅಸಮತೋಲನದ ಬಗೆಹರಿಯುವಿಕೆ**

ಸುಂಕ ಹೇರಿಕೆಯಿಂದ ಆಮದು ಪ್ರಮಾಣ ಕಡಿಮೆಗೊಳಿಸಿ, ರಫ್ತನ್ನು ಉತ್ತೇಜಿಸುವ ಮೂಲಕ ವ್ಯಾಪಾರ ಕೊರತೆಯನ್ನು ಸರಿದೂಗಿಸುವ ಉದ್ದೇಶ ಹೊಂದಿದೆ.

ಕೆಕೆಆರ್ ಎದುರು ಮಂಕಾದ ಸನ್

ವಿವರಪುಟ→12

ಸೊಂಪಾದ ಪುಟಗಳು

ಗಡಕಿಂತ ವಾಸಿ ಕಣ್ರೋ ಬ್ಲೇಡಿನ ದಾಸ್ಯ

ಶಿಶಿರಕಾಲ
ಶಿಶಿರ್ ಹೆಗಡೆ 6

ಹಣ್ಣುಗಳ ಮೆರವಣಿಗೆಗೆ ಬೇಸಗೆಯೇ ಬರಬೇಕೇ?

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ನೀವು ಹಿಂದಕ್ಕೆ ಹೋಗಿ, ಆರಂಭವನ್ನು ಬದಲು ಮಾಡುವುದು ಸಾಧ್ಯವಿಲ್ಲ. ಆದರೆ ನೀವು ಇರುವಲ್ಲಿಂದಲೇ ಆರಂಭ ಮಾಡಿ, ಅಂತ್ಯವನ್ನು ಮಾರ್ಪಡಿಸುವುದು ಸಾಧ್ಯವಿದೆ. ವ್ಯರ್ಥವಾಗಿ ಹೋದ ದಿನಗಳ ಬಗ್ಗೆ ಕೊರಗದೇ, ನಮ್ಮ ಮುಂದಿನ ಬದುಕನ್ನು ಮಾರ್ಪಡಿಸಿಕೊಳ್ಳುವುದು ಜಾಣತನ.

ವಕ್ರತುಂಡೋಕ್ತಿ

ಯಾವ ಪುಸ್ತಕದ ಕೆಲವು ಒಳ್ಳೆಯ ಸಾಲುಗಳನ್ನು ಪದೇ ಪದೆ ಓದಿ, ಇನ್ನುಳಿದ ಪುಟಗಳನ್ನು ಓದದೇ ಬಿಡುವುದಕ್ಕೆ ಉತ್ತಮ ಕೃತಿ ಎಂದು ಹೇಳಬಹುದು.

ಮಹದೇವಪುರದಲ್ಲಿ ಗ್ಯಾಂಗ್ ರೇಪ್

ಬೆಂಗಳೂರು: ಅಣ್ಣ–ತಂಗಿ ನಡೆದು ಹೋಗುತ್ತಿದ್ದಾಗ ಅಣ್ಣನ ಮೇಲೆ ಹಲ್ಲೆ ಮಾಡಿ ತಂಗಿಯನ್ನು ಎಳೆದೊಯ್ದು ಅತ್ಯಾಚಾರವೆಸಗಿರುವ ಘಟನೆ ಮಹದೇವಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಅತ್ಯಾಚಾರಕ್ಕೊಳಗಾದ 19 ವರ್ಷದ ಯುವತಿ ಬಿಹಾರ ಮೂಲದವರು. ಅತ್ಯಾಚಾರವೆಸಗಿದ ಆಟೋ ಚಾಲಕರಾದ ಸೈಯದ್ ಮೂಸಾ ಮತ್ತು ಆಸೀಫ್ ಎಂಬುವವರನ್ನು ಘಟನೆ ನಡೆದ ಐದು ನಿಮಿಷದಲ್ಲೇ ಪೊಲೀಸರು ಬಂಧಿಸಿ, ವಿಚಾರಣೆಗೊಳಪಡಿಸಿದ್ದಾರೆ.



ಮಸೂದೆಗೆ ಬೆಂಬಲ ನೀಡುವಂತೆ ಕೋರಿದ ಸಚಿವ ಕಿರಣ್ ರಿಜಿಜು

ಮೇಲ್ಮನೆಯಲ್ಲಿ ವಕ್ಫ್ ಮಸೂದೆ ಮಂಡನೆ

2004ರಲ್ಲಿ 4.9 ಲಕ್ಷ ವಕ್ಫ್ ಆಸ್ತಿಗಳಿದ್ದವು. ಈಗ ಅವು 8.72 ಲಕ್ಷಕ್ಕೆ ಏರಿವೆ. ರಕ್ಷಣಾ ಮತ್ತು ರೈಲ್ವೆ ಸಚಿವಾಲಯಗಳ ಒಡೆತನದ ಆಸ್ತಿಗಳನ್ನು ಹೊರತುಪಡಿಸಿ, ವಕ್ಫ್ ದೇಶದಲ್ಲಿ ಅತಿ ಹೆಚ್ಚು ಆಸ್ತಿಯನ್ನು ಹೊಂದಿದೆ. ಹಿಂದಿನ ಸರಕಾರಗಳು ಪೂರೈಸದ ಕಾರ್ಯಗಳನ್ನು ಸಾಧಿಸುವ ಗುರಿ ನಮ್ಮ ಸರಕಾರ ಹೊಂದಿದೆ.
ಕಿರಣ್ ರಿಜಿಜು ಕೇಂದ್ರ ಸಚಿವ

ದೆಹಲಿ: ಲೋಕಸಭೆಯಲ್ಲಿ ಅಂಗೀಕಾರ ಪಡೆದುಕೊಂಡ ಬಳಿಕ ಗುರುವಾರ ರಾಜ್ಯಸಭೆಯಲ್ಲೂ ವಕ್ಫ್ (ತಿದ್ದುಪಡಿ) ಮಸೂದೆ–2025 ಅನ್ನು ಕೇಂದ್ರ ಸಚಿವ ಕಿರಣ್ ರಿಜಿಜು ಮಂಡಿಸಿ, ಮಸೂದೆ ಅಂಗೀಕರಿಸಲು ಪ್ರತಿಪಕ್ಷಗಳ ಬೆಂಬಲ ಕೋರಿದರು.

ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಪರಿಶೀಲಿಸಿ ಪುನರ್ ರಚಿಸಿದ ಮಸೂದೆಯನ್ನು ಮೇಲ್ಮನೆಯಲ್ಲಿ ಮಂಡಿಸಿದ ಸಚಿವರು, ಈ ಮಸೂದೆಯು ಮುಸ್ಲಿಮರ ವಿರುದ್ಧವಾಗಿಲ್ಲ. ಅವರ ಧಾರ್ಮಿಕ ಭಾವನೆಗಳನ್ನು ನೋಯಿಸುವ ಉದ್ದೇಶವನ್ನು ಹೊಂದಿಲ್ಲ. ಇದು ವಕ್ಫ್ ಆಸ್ತಿಗಳ ಕಾರ್ಯನಿರ್ವಹಣೆಯನ್ನು ಸುಧಾರಿಸಲು, ಸಮಸ್ಯೆಗಳನ್ನು ಪರಿಹರಿಸಲು, ಪಾರದರ್ಶಕತೆಯನ್ನು ಕಾಪಾಡಲು, ತಂತ್ರಜ್ಞಾನ–ಚಾಲಿತ ನಿರ್ವಹಣೆಯನ್ನು ಉದ್ದೇಶದಿಂದ ಪರಿಚಯಿಸಲಾಗಿದೆ. ಪ್ರತಿಪಕ್ಷ ಸದಸ್ಯರು ರಾಜಕೀಯ ಕಾರಣಗಳಿಗಾಗಿ ವಕ್ಫ್ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಿದ್ದಾರೆ. ಆದರೆ ಅವರು ಈ ಮಸೂದೆಯನ್ನು ಆಳವಾಗಿ ಅಧ್ಯಯನ ಮಾಡಿದರೆ, ಖಂಡಿತವಾಗಿಯೂ ಇದಕ್ಕೆ ಬೆಂಬಲ ನೀಡುತ್ತಾರೆ. ಈ ಮಸೂದೆ ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶ ಹೊಂದಿಲ್ಲ. ಯಾವ ಧರ್ಮದ ಆಂತರಿಕ ವಿಷಯದಲ್ಲೂ ಈ ಮಸೂದೆ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಭರವಸೆ ನೀಡಿದರು.

ವಿಪ್ ನೀಡದಿರಲು ಬಿಜೆಡಿ ನಿರ್ಧಾರ

ಬಿಜು ಜನತಾದಳ ವಕ್ಫ್ (ತಿದ್ದುಪಡಿ) ಮಸೂದೆ ಬಗ್ಗೆ ತನ್ನ ನಿಲುವಿನಲ್ಲಿ ಪ್ರಮುಖ ಬದಲಾವಣೆ ಮಾಡಿದೆ. ಲೋಕಸಭೆಯಲ್ಲಿ ಮಸೂದೆಯನ್ನು ಪರಿಚಯಿಸುವ ಮೊದಲು ಆರಂಭದಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಪಕ್ಷವು ಈಗ ರಾಜ್ಯಸಭೆಯಲ್ಲಿ ತನ್ನ ಸಂಸದರಿಗೆ ವಿಪ್ ನೀಡದಿರಲು ನಿರ್ಧರಿಸಿದೆ. ಅಲ್ಲದೆ ತಮ್ಮ ಸಂಸದರಿಗೆ ಆತ್ಮಸಾಕ್ಷಿಯ ಆಧಾರದ ಮೇಲೆ ಮತ ಚಲಾಯಿಸಲು ಅವಕಾಶ ನೀಡಿದೆ.

ಡಿಎಂಕೆ ಕೋರ್ಟ್‌ಗೆ

ವಕ್ಫ್ (ತಿದ್ದುಪಡಿ) ಮಸೂದೆಗೆ ಆಕ್ಷೇಪ ವ್ಯಕ್ತಪಡಿಸಿರುವ ತ.ನಾಡಿನ ಸಿಎಂ, ಡಿಎಂಕೆ ಅಧ್ಯಕ್ಷ ಸ್ಟಾಲಿನ್ ತಮ್ಮ ಪಕ್ಷ ಸುಪ್ರೀಂಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಿದೆ ಎಂದು ಹೇಳಿದ್ದಾರೆ. ವಕ್ಫ್ ತಿದ್ದುಪಡಿ ಮಸೂದೆ ಧಾರ್ಮಿಕ ಸಾಮರಸ್ಯವನ್ನು ಕೆಡುವುತ್ತದೆ. ಮುಸ್ಲಿಂ ಸಮುದಾಯದ ಮೇಲೆ ಪರಿಣಾಮ ಬೀರಲಿದೆ. ಕೆಲವೇ ಕೆಲವು ಸಮ್ಮಿಶ್ರ ಪಕ್ಷಗಳ ಬೆಂಬಲದೊಂದಿಗೆ ನಸುಕಿನ ಜಾವ 2 ಗಂಟೆಗೆ ಮಸೂದೆಯನ್ನು ಅಂಗೀಕರಿಸುವುದು ಸಂವಿಧಾನದ ಮೇಲೆ ದಾಳಿ ನಡೆಸಿದಂತೆ. ನಾವು ಕಾನೂನು ಕ್ರಮಗಳ ಮೂಲಕ ಮಸೂದೆ ಹಿಂಪಡೆಯುವಂತೆ ಮಾಡುತ್ತೇವೆ ಎಂದು ಹೇಳಿದ್ದಾರೆ.

6ನೇ ಬಂಗಾಳ ಕೊಲ್ಲಿ ಬಹುವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಸಂಘಟನೆ (ಬಿಐಎಂಎಸ್‌ಟಿಇಸಿ) ಶೃಂಗಸಭೆಯಲ್ಲಿ ಭಾಗವಹಿಸಲು ಗುರುವಾರ ಥಾಯ್ಲೆಂಡ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭವ್ಯ ಸ್ವಾಗತ ಕೋರಲಾಯಿತು. ಥಾಯ್ಲೆಂಡ್ ಪ್ರಧಾನಿ ಪೆಟೊಂತಾರ್ನ್ ಶಿನೊವಾರ್ಥ್ ಇದ್ದಾರೆ.

ಸಿಎಂ ನಿವಾಸಕ್ಕೆ ಮುತ್ತಿಗೆ ಯತ್ನ | ಬಿಎಸ್‌ವೈ ಸೇರಿ ಹಲವರು ವಶಕ್ಕೆ

ಬೆಲೆ ಏರಿಕೆ ವಿರುದ್ಧ ಬಿಜೆಪಿ ಸಮರ

ಬೆಂಗಳೂರು: ಬೆಲೆ ಏರಿಕೆ ವಿರೋಧಿಸಿ ಬಿಜೆಪಿ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದು, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಸೇರಿ ಹಲವು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಎರಡು ದಿನಗಳಿಂದ ಫ್ರೀಡಂಪಾರ್ಕ್‌ನಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕರು, ಪದಾಧಿಕಾರಿಗಳು ಮತ್ತಿತರರು ಅಹೋರಾತ್ರಿ ಧರಣಿ ನಡೆಸುತ್ತಿದ್ದರು.

ರಾಜ್ಯದ ಉದ್ದಗಲಕ್ಕೂ ಹೋರಾಟ ಮುಂದುವರಿಸಲಿದ್ದೇವೆ. ಜನ ವಿರೋಧಿ ಕಾರ್ಯಕ್ರಮ ಹಿಂದಕ್ಕೆ ಪಡೆಯುವವರೆಗೆ ನಮ್ಮ ಹೋರಾಟ ನಿರಂತರ ಮುಂದುವರಿಯುತ್ತದೆ.
– ಬಿ.ಎಸ್.ಯಡಿಯೂರಪ್ಪ ಮಾಜಿ ಸಿಎಂ

ಗುರುವಾರ ಯಡಿಯೂರಪ್ಪ ನೇತೃತ್ವದಲ್ಲಿ ಸಿಎಂ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಮುಂದಾದರು. ಈ ವೇಳೆ ಪೊಲೀಸರು ವಶಕ್ಕೆ ಪಡೆದರು.

ಮಂತ್ರಾಲಯ ಮಠಕ್ಕೆ ಪೂಜೆಗೆ ಅವಕಾಶ

ಗಂಗಾವತಿ: ತಾಲೂಕಿನ ಆನೆಗೊಂದಿ ಗ್ರಾಮದ ಸಮೀಪದ ತುಂಗಭದ್ರಾ ನದಿ ನಡುಗಡ್ಡೆಯ ನವ ವೃಂದಾವನದಲ್ಲಿನ ಮಧ್ವಮತದ ಪ್ರಚಾರಕ ಕವೀಂದ್ರ ತೀರ್ಥರ ಹಾಗೂ ವಾಗೀಶ ತೀರ್ಥರ ಆರಾಧನೆಗೆ ಮೊದಲ ಒಂದೂವರೆ ದಿನಕ್ಕೆ ಪೂಜೆ ಮಾಡಲು ಅವಕಾಶ ನೀಡುವಂತೆ ಉತ್ತರಾಧಿಮಠ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ತಳ್ಳಿ ಹಾಕಿದೆ. ಇದರಿಂದ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠಕ್ಕೆ ಮೊದಲ ಒಂದೂವರೆ ದಿನ ಪೂಜೆ ಮಾಡಲು ಅವಕಾಶ ಸಿಕ್ಕಿದೆ.

25 ಸಾವಿರ ಶಿಕ್ಷಕರ ನೇಮಕ ಅಸಿಂಧು

ದೆಹಲಿ: ಪಶ್ಚಿಮ ಬಂಗಾಳದ ಸರಕಾರಿ, ಅನುದಾನಿತ ಶಾಲೆಗಳಲ್ಲಿನ 25,753 ಶಿಕ್ಷಕರು ಹಾಗೂ ಇತರ ಸಿಬ್ಬಂದಿ ನೇಮಕವನ್ನು ಅಸಿಂಧುಗೊಳಿಸಿ ಸುಪ್ರೀಂಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ. ಈ ನೇಮಕಾತಿ ರದ್ದುಗೊಳಿಸಿ ಕಲ್ಕತ್ತಾ ಹೈಕೋರ್ಟ್, 2024ರ ಏಪ್ರಿಲ್ 22ರಂದು ನೀಡಿದ್ದ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಅಲ್ಲದೇ, ಹೊಸದಾಗಿ ನೇಮಕಾತಿ ಪ್ರಕ್ರಿಯೆ ಆರಂಭಿಸಿ, 3 ತಿಂಗಳೊಳಗಾಗಿ ಪೂರ್ಣಗೊಳಿಸಬೇಕು ಎಂದು ಸರಕಾರಕ್ಕೆ ಆದೇಶಿಸಿದೆ.

ಮ್ಯಾನ್ಮಾರ್: 3085ಕ್ಕೆ ಏರಿದ ಸಾವಿನ ಸಂಖ್ಯೆ

ನೈಪೈದಾ: ಸೇನಾಡಳಿತದ ದೇಶ ಮ್ಯಾನ್ಮಾರ್‌ನಲ್ಲಿ ಭೂಕಂಪ ಸಂಭವಿಸಿ ವಾರವೇ ಕಳೆದಿದೆ. ರಕ್ಷಣಾ ಕಾರ್ಯಾಚರಣೆ ಸಮರೋಪಾದಿ ಸಾಗಿದ್ದು, ಅವಶೇಷಗಳನ್ನು ತೆರವುಗೊಳಿಸುತ್ತಾ ಹೋದಂತೆಲ್ಲಾ ಮೃತದೇಹಗಳು ಕಾಣಿಸಿಕೊಳ್ಳುತ್ತಲೇ ಇವೆ. ಮಾ.28ರ ಬೆಳಗ್ಗೆ ಸಂಭವಿಸಿದ 7.7 ಮತ್ತು 6.4ರಷ್ಟು ತೀವ್ರತೆಯ ಕಂಪನ ಮತ್ತು ನಂತರದಲ್ಲಿನ ಸರಣಿ ಭೂಕಂಪಗಳಿಂದಾಗಿ ಕುಸಿದ ಕಟ್ಟಡಗಳಡಿ ಸಿಲುಕಿ ಸಾವಿಗೀಡಾದವರ ಸಂಖ್ಯೆ ಏ.3ರ (ಗುರುವಾರ) ಮಧ್ಯಾಹ್ನದ ವೇಳೆಗೆ 3085ಕ್ಕೆ ತಲುಪಿದೆ.

ಹಿರಿಯ ಸಾಹಿತಿ ಪಿವಿ ನಾರಾಯಣ ಇನ್ನಿಲ್ಲ

ಬೆಂಗಳೂರು: ವಯೋಸಹಜ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಹಿರಿಯ ಸಾಹಿತಿ ಪಿ.ವಿ.ನಾರಾಯಣ (82) ಅವರು ಗುರುವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಸ್ನೇಹಿತರನ್ನು ಅಗಲಿದ್ದಾರೆ. 45ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಅವರು, ಇಂಗ್ಲಿಷ್, ತೆಲುಗಿನಿಂದ 22ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ, ಡಿಸಿಎಂಶಿವಕುಮಾರ್, ಸಚಿವ ಶಿವರಾಜ್ ತಂಗಡಗಿ ಸೇರಿ ಅನೇಕರು ಸಂತಾಪ ಸೂಚಿಸಿದ್ದಾರೆ.

ಅಪಘಾತ: ಪತ್ರಕರ್ತೆ ಸೇರಿ ನಾಲ್ವರ ಸಾವು

ಮಂಡ್ಯ: ತಾಲೂಕಿನ ತೂಬಿನಕೆರೆ ಗ್ರಾಮದ ಸಮೀಪ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಗುರುವಾರ ಐರಾವತ ಬಸ್ ಮತ್ತು ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿ, ಕಾರಿನಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ. ಬೆಂಗಳೂರಿನ ಜೆ.ಪಿ.ನಗರದ ವಿದ್ಯುತ್ ಗುತ್ತಿಗೆದಾರ ಸತ್ಯಾನಂದ ರಾಜೇ ಅರಸ್ (59) ಅವರ ಪತ್ನಿ, ವಿಜಯ ಕರ್ನಾಟಕ ಪತ್ರಿಕೆಯ ಪತ್ರಕರ್ತೆ ನಿಶ್ಚಿತಾ ಅರಸ್ (51), ಸಹೋದರ, ಬೆಸ್ಕಾಂ ನಿವೃತ್ತ ನೌಕರ ಚಂದ್ರಶೇಖರ ರಾಜೇ ಅರಸ್ (62) ಅವರ ಪತ್ನಿ ಸುವೇದಿನಿ ರಾಣಿ (56) ಮೃತಪಟ್ಟವರು. ಸತ್ಯಾನಂದರಾಜೇ ಅರಸ್ ಅವರ ಸೋದರಮಾವ ಎನ್.ರಾಜೇ ಅರಸ್ ಅವರ ಅಂತ್ಯಕ್ರಿಯೆಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಸೀಗೂರಿಗೆ ಹೋಗುವಾಗ ಈ ದುರ್ಘಟನೆ ಸಂಭವಿಸಿದೆ.

ವರವಾದ ಚಂಡಮಾರುತ: ರಾಜ್ಯದಲ್ಲಿ ಮಳೆ

ಒಂದು ವಾರ ವರುಣಾರ್ಭಟ, 21 ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ಚಂಡಮಾರುತದ ಪರಿಚಲನೆಯಾಗಿದ್ದು, ರಾಜ್ಯದ 21 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿರುವುದರಿಂದ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಸಮುದ್ರದ ಎರಡು ಭಾಗಗಳಲ್ಲಿ ವಾಯುಭಾರ ಕುಸಿತದಿಂದ ಸ್ಪಷ್ಟ ಚಂಡಮಾರುತದ ಪರಿಚಲನೆಯುಂಟಾಗಿದ್ದು, ಕರಾವಳಿ, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡು ಸೇರಿದಂತೆ ರಾಜ್ಯದ 21 ಜಿಲ್ಲೆಗಳಲ್ಲಿ ಒಂದು ವಾರಗಳ ಕಾಲ ಗುಡುಗು ಮಿಂಚು, ಬಿರುಗಾಳಿ ಸಹಿತ ಭಾರೀ ಮಳೆಯಾಗಲಿದೆ.

ರಾಜ್ಯದಲ್ಲಿ ಕೆಲವೆಡೆ ಬಿಸಿಲಿನ ತಾಪ ಹೆಚ್ಚಾಗಿತ್ತು, ಈ ಮಧ್ಯೆ ಬದಲಾದ ಹವಾಮಾನ ವೈಪರಿತ್ಯಗಳ ಪ್ರಭಾವದಿಂದಾಗಿ ಸಾಧಾರಣದಿಂದ ಭಾರೀ ಮಳೆ ಅಬ್ಬರಿಸಲಿದ್ದು, ಪೂರ್ವ ಮುಂಗಾರು ಮಳೆ ಮತ್ತಷ್ಟು ಚುರುಕಾಗಲಿದೆ. ಕೆಲವೆಡೆ ಗುಡುಗು, ಮಿಂಚು ಸಹಿತ ಧಾರಾಕಾರ ಮಳೆ ಯಾಗಲಿದೆ. ಈ ವರ್ಷ ಈವರೆಗೆ ಪೂರ್ವ ಮುಂಗಾರು ಪೈಕಿ ಮುಂದಿನ ಮೂರು ದಿನ ಅಬ್ಬರಿಸುವ ಮಳೆ, ಅತ್ಯಧಿಕ ಮಳೆ ಎಂದು ಅಂದಾಜಿಸಲಾಗಿದೆ.

3.6 ಕಿ.ಮೀ ಎತ್ತರದಲ್ಲಿ ಚಂಡಮಾರುತದ ಬಿರುಗಾಳಿ: ಲಕ್ಷದ್ವೀಪದ ಕಡೆಗಿನ ಸಮುದ್ರದಲ್ಲಿ 0.9 ಕಿ.ಮೀ ಎತ್ತರದಲ್ಲಿ ಹಾಗೂ ಕೊಮೆರಿಯನ್ ಪ್ರದೇಶದಲ್ಲಿ 3.6 ಕಿ.ಮೀ ಎತ್ತರದಲ್ಲಿ ಚಂಡಮಾರುತ ಗಾಳಿ ನಿರ್ಮಾಣವಾಗಿ ಚಂಡಮಾರುತವಾಗಿ ಬದಲಾಗಿದೆ. ಈ ಹಿನ್ನೆಲೆ ದಕ್ಷಿಣ ಭಾರತದ ಮೂರರಿಂದ ನಾಲ್ಕು ರಾಜ್ಯಗಳಲ್ಲಿ ಭಾರೀ ಮಳೆಯಾಗಲಿದೆ. ರಾಜ್ಯದಲ್ಲೂ ಸೈಕ್ಲೋನ್‌ನ ಪರಿಣಾಮ ಅತ್ಯಧಿಕ ಪ್ರಮಾಣದಲ್ಲಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಒಳನಾಡಿನ ಜಿಲ್ಲೆಗಳಲ್ಲಿ ಒಂದೇ ದಿನದಲ್ಲಿ ಭಾರೀ ಮಳೆಯಾಗಲಿದ್ದು,ಈ ಹಿನ್ನೆಲೆ 21 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ ಸೇರಿ ಕೆಲವೆಡೆ ಆಲಿಕಲ್ಲು ಸಹಿತ ವ್ಯಾಪಕ ಮಳೆ ಸುರಿಯಲಿದೆ.

ರಾಜಧಾನಿಯಲ್ಲಿ ಭಾರಿ ಮಳೆ

ರಾಜಧಾನಿ ಬೆಂಗಳೂರಿನ ಬಹುತೇಕ ಭಾಗದಲ್ಲಿ ಗುರುವಾರ ಬೆಳಗ್ಗೆಯಿಂದಲೇ ಮೋಡ ಮುಚ್ಚಿದ ವಾತಾವರಣವಿತ್ತು. ಮಧ್ಯಾಹ್ನದ ವೇಳೆಗೆ ಭಾರಿ ಮಳೆಯಾಗಿದ್ದು, ರಸ್ತೆ ಮೇಲೆ ನೀರು ಹರಿಯುತ್ತಿರುವುದರಿಂದ ಸಂಚಾರ ಅಸ್ತವ್ಯಸ್ತವಾಯಿತು. ರಾಜಾಜಿನಗರದ 2ನೇ ಬ್ಲಾಕ್‌ನ 10ನೇ ಮುಖ್ಯ ರಸ್ತೆಯಲ್ಲಿ ಮಳೆಯಿಂದಾಗಿ ಬೃಹತ್ ಗಾತ್ರದ ಮರ ಬಿದ್ದ ಪರಿಣಾಮ 4 ಕಾರು, ಬೈಕ್‌ಗಳು ಜಖಂಗೊಂಡಿದ್ದು, ಯಾವುದೇ ಪ್ರಾಣಾಪಾಯಗಳು ಸಂಭವಿಸಿಲ್ಲ. ಬಿದ್ದ ಮರವನ್ನು ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ ತೆರವುಗೊಳಿಸಿದರು. ಕೋರಮಂಗಲದಲ್ಲಿ 36.50 ಮೀ.ಮೀ, ಎಚ್‌ಎಲ್ ಬಳಿ 29.50 ಮೀಮೀ, ಮಾರತಹಳ್ಳಿಯಲ್ಲಿ 27.50 ಮೀಮಿ ಸೇರಿದಂತೆ ಬಹುತೇಕ ಭಾಗದಲ್ಲಿ ಉತ್ತಮ ಮಳೆಯಾಗಿರುವುದು ವರದಿಯಾಗಿದೆ.

ಪರಿಷತ್ ಸ್ಥಾನಗಳಿಗೆ ನಾಮನಿರ್ದೇಶನ, ಸಂಪುಟ ಪುನಾರಚನೆ, ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆ

ಎಲ್ಲ ನೇಮಕ ತಿಂಗಳು ಮುಂದಕ್ಕೆ

ದೆಹಲಿ/ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರ ದೆಹಲಿ ಪ್ರವಾಸದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್‌ನಲ್ಲಿ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ, ಸಂಪುಟ ಪುನಾ ರಚನೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಯ ಚರ್ಚೆಗೆ ಮತ್ತಷ್ಟು ಪುಷ್ಟಿ ಸಿಕ್ಕಿತ್ತು. ಆದರೆ ಈ ಎಲ್ಲ ವಿಷಯಗಳ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರೊಂದಿಗೆ 'ಒನ್ ಟು ಒನ್' ಚರ್ಚೆ ನಡೆಸಿದ್ದರೂ, ಎಲ್ಲವೂ ತಾತ್ಕಾಲಿಕವಾಗಿ ಮುಂದಕ್ಕೆ ಹೋಗಿವೆ.

ಗುರುವಾರ ಬೆಳಗ್ಗೆ ಸಿಎಂ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರಿಬ್ಬರೇ ಸುಮಾರು 30 ನಿಮಿಷ ಚರ್ಚೆ ನಡೆಸಿದ್ದಾರೆ.

ಈ ವೇಳೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಸೂಚ್ಯವಾಗಿ ಮಾತನಾಡಿದ್ದು, ತಮ್ಮ ಆಪ್ತ ವಲಯದಲ್ಲಿ ಕಾಣಿಸಿಕೊಂಡಿರುವ ಸತೀಶ್ ಜಾರಕಿಹೊಳಿ ಹಾಗೂ ಈಶ್ವರ್ ಖಂಡ್ರೆ ಅವರ ಹೆಸರನ್ನು ತೇಲಿಬಿಟ್ಟಿದ್ದಾರೆ. ಈ ಇಬ್ಬರ ಪೈಕಿ ಈಶ್ವರ್ ಖಂಡ್ರೆ ಹೆಸರಿಗೆ ರಾಹುಲ್ ಗಾಂಧಿಯೂ ಒಲವು ತೋರಿದ್ದಾರೆ. ಆದರೆ ಸದ್ಯಕ್ಕೆ ಯಾವುದೇ ಬದಲಾವಣೆ ಮಾಡುವುದಿಲ್ಲ ಎನ್ನುವ ಸಂದೇಶ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಉಪಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಬದಲಾಯಿಸಬೇಕು ಎನ್ನುವ ಚರ್ಚೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗಳೂ ಇರುವುದರಿಂದ ಈ ಹಂತದಲ್ಲಿ ಬದಲಾವಣೆ ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ. → 4

ದೆಹಲಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರನ್ನು ಗುರುವಾರ ಭೇಟಿಯಾದರು.

- ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಈಶ್ವರ್ ಖಂಡ್ರೆ ಹೆಸರು ಪ್ರಸ್ತಾಪಿಸಿದ ಸಿದ್ದು, ಪರಿಷತ್‌ನ 1 ಸ್ಥಾನಕ್ಕೆ ಬಿ.ಎಲ್. ಶಂಕರ್ ಹೆಸರು ಸೂಚಿಸಿದ ಸಿಎಂ
- ಹೈಕಮಾಂಡ್ ನಾಯಕರ ಕೈಸೇರಿದ ಡಿ.ಕೆ. ಶಿವಕುಮಾರ್ ಪಟ್ಟಿ, 15 ದಿನಗಳ ಬಳಿಕ ಮತ್ತೊಮ್ಮೆ ಚರ್ಚಿಸಲು ರಾಹುಲ್ ತೀರ್ಮಾನ

ಸಮಯ ಕೇಳದ ಡಿಕೆಶಿ

ರಾಹುಲ್ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಎರಡೆರಡು ಬಾರಿ ಭೇಟಿಯಾಗಿ ಚರ್ಚೆ ನಡೆಸಿದರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿಯಾಗದಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಮೂಲಗಳ ಪ್ರಕಾರ, ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿದ್ದರೂ ರಾಹುಲ್ ಗಾಂಧಿಯವರ ಭೇಟಿಗೆ ಸಮಯ ಕೇಳಿರಲಿಲ್ಲ. ಈ ದೆಹಲಿ ಭೇಟಿಯನ್ನು ನೀರಾವರಿ ಇಲಾಖೆಯ ಯೋಜನೆ ಹಾಗೂ ಕರ್ನಾಟಕ ಭವನದ ಉದ್ಘಾಟನೆಗೆ ಸೀಮಿತಗೊಳಿಸಿದ್ದರು ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಗದ್ದೆಯಲ್ಲಿ ವ್ಯಕ್ತಿಯ ಮೃತ ದೇಹ ಪತ್ತೆ

ದಾಂಡೇಲಿ: ತಾಲೂಕಿನ ಬಡಕಾನಶಿರಡಾ ಗ್ರಾಮದ ಗಾವಟಾಣದ ಹತ್ತಿರ ಖಾಲಿ ಗದ್ದೆಯೊಂದರಲ್ಲಿ ವ್ಯಕ್ತಿಯ ಮೃತ ದೇಹವೊಂದು ಪತ್ತೆಯಾಗಿದ್ದು, ಈ ಬಗ್ಗೆ ಇಂದು ಗುರುವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಮಾಧ್ಯಮಕ್ಕೆ ಮಾಹಿತಿ ಲಭ್ಯವಾಗಿದೆ. ಬಡಕಾನಶಿರಡಾ ಗ್ರಾಮದ ನಿವಾಸಿಯಾಗಿರುವ (45) ವರ್ಷ ವಯಸ್ಸಿನ ರಾಮ ಸಿದ್ದಪ್ಪ ಕಾಮ್ರೇಕರ್ ಮೃತಪಟ್ಟ ದುರ್ದೈವಿಯಾಗಿದ್ದಾನೆ. ಸ್ಥಳಕ್ಕೆ ದಾಂಡೇಲಿ ಗ್ರಾಮೀಣ ಠಾಣೆಯ ಪಿಎಸ್ಐಯವರಾದ ಶಿವಾನಂದ ನಾವದಗಿ ಮತ್ತು ಜಗದೀಶ ಹಾಗೂ ಪೊಲೀಸ್ ಸಿಬ್ಬಂದಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿ ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ. ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ.

ಏಪ್ರಿಲ್ 6ರಂದು ಜಂಗಿ ನಿಕಾಲಿ ಕುಸ್ತಿ

ಸಿದ್ದಾಪುರ : ತಾಲೂಕಿನ ಹೊಸೂರಿನ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿಯ 6ನೇ ವರ್ಷದ ಜಂಗಿ ನಿಕಾಲಿ ಕುಸ್ತಿ ಏ. 6ರಂದು ಇಲ್ಲಿನ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆಯಲಿದೆ. ಬಂಕೇಶ್ವರ ದೇವಸ್ಥಾನದಲ್ಲಿ ಸಮಿತಿಯ ಚೈತನ್ಯ ವಿ ಹೊಸೂರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಸಹ ಕುಸ್ತಿ ಪಂದ್ಯಾವಳಿಯನ್ನು ಮುಕ್ತವಾಗಿ ನಡೆಸಲಿದ್ದೇವೆ. ಶಾಸಕ ಭೀಮಣ್ಣ ನಾಯ್ಕ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಾಗರ ಕ್ಷೇತ್ರದ ಗೋಪಾಲಕೃಷ್ಣ ಬೇಲೂರು ಅಂಕಣ ಉದ್ಘಾಟಿಸಲಿದ್ದಾರೆ. ಶ್ರೀ ಬಂಕೇಶ್ವರ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಅಧ್ಯಕ್ಷ ಲಕ್ಷ್ಮಣ್ ವಿ ನಾಯ್ಕ ಅಧ್ಯಕ್ಷತೆ ವಹಿಸುವರು. ಶ್ರೀ ಬಂಕೇಶ್ವರ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಅಧ್ಯಕ್ಷ ಬಸವರಾಜ್ ಡಿ ನಾಯ್ಕ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಕೆ.ಜಿ. ನಾಗರಾಜ್, ಪಟ್ಟಣ ಪಂಚಾಯತ್ ಸದಸ್ಯ ಮಾರುತಿ ನಾಯ್ಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ್ ಎಲ್ ನಾಯ್ಕ್, ಉದ್ಯಮಿ ರೂಡಲ್ಪ್ ಎಂ ಫರ್ನಾಂಡಿಸ್, ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಬಂಕೇಶ್ವರ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಅಧ್ಯಕ್ಷ ಬಸವರಾಜ್ ಡಿ ನಾಯ್ಕ, ಕಾರ್ಯಕ್ರಮದ ಅಧ್ಯಕ್ಷ ಲಕ್ಷ್ಮಣ್ ವಿ ನಾಯ್ಕ, ಉಪಾಧ್ಯಕ್ಷ ಜಗದೀಶ್ವರ ಕೆ ನಾಯ್ಕ ಕಾರ್ಯದರ್ಶಿ ರಾಘವೇಂದ್ರ ಎಂ ಮಡಿವಾಳ್ ಉಪಸ್ಥಿತರಿದ್ದರು.

ವಾರ್ಷಿಕ ಸ್ನೇಹ ಸಮ್ಮೇಳನ ನಾಳೆ

ಶಿರಸಿ: ಮೊಡರ್ನ ಎಜ್ಯುಕೇಶನ್ ಸೊಸೈಟಿಯ ಆರ್. ಎನ್. ಶೆಟ್ಟಿ ಪಾಲಿಟೆಕ್ನಿಕ್ ಕಾಲೇಜಿನ 2024-25ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ, ದತ್ತಿನಿಧಿ ಮತ್ತು ಕ್ರೀಡಾ ಬಹುಮಾನ ವಿತರಣೆ ಹಾಗೂ ಸನ್ಮಾನ ಕಾರ್ಯಕ್ರಮ ಏ. 5ರಂದು ನಡೆಯಲಿದೆ. ಅಂದು ಬೆಳಗ್ಗೆ10.30ಕ್ಕೆ ಪಾಲಿಟೆಕ್ನಿಕ್ ಕಾಲೇಜ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಿಕೆಪ್ಪೊ ಮುಖ್ಯಸ್ಥ ಡಾ. ಮನು ಪಿ. ಹೆಗಡೆ ಹಾಲಳ್ಳ ಅವರನ್ನು ಸನ್ಮಾನಿಸಲಾಗುತ್ತದೆ. ಅಧ್ಯಕ್ಷತೆಯನ್ನು ಮೊಡರ್ನ ಎಜ್ಯುಕೇಶನ್ ಸುಸೈಟಿ ಅಧ್ಯಕ್ಷ ಜಿ.ಎಂ. ಹೆಗಡೆ ಮುಳಖಂಡ ವಹಿಸಲಿದ್ದಾರೆ. ಸಂಚಾರಿ ಪೊಲೀಸ್ ಠಾಣೆ ಉಪ ನಿರೀಕ್ಷಕ ಮಹಾಂತಪ್ಪ ಕುಂಬಾರ, ಲೋಕಧ್ವನಿ ಸ್ಥಾನಿಕ ಸಂಪಾದಕ ನಾಗರಾಜ ಮತ್ತಿಗಾರ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶಿರಸಿ ಅರ್ಬನ್ ಬ್ಯಾಂಕ್ ನೂತನ ದಾಖಲೆ

2361 ಕೋಟಿ ರು. ದಾಟಿದ ವ್ಯವಹಾರ | ಸ್ವಂತ ಬಂಡವಾಳದಲ್ಲಿ 173.72 ಕೋಟಿ ರು.ಗಳಿಗೆ ಏರಿಕೆ

ಶಿರಸಿ: ಕರ್ನಾಟಕದ ಪ್ರತಿಷ್ಠಿತ 119 ವರ್ಷಗಳ ಇತಿಹಾಸ ಹೊಂದಿರುವ ಇಲ್ಲಿನ ಸಹಕಾರಿ ಬ್ಯಾಂಕ್ 'ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕು' ಮಾ.31 ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ ತನ್ನ ಒಟ್ಟು ವ್ಯವಹಾರವನ್ನು 2361 ಕೋಟಿಗಳಿಗೆ ವೃದ್ಧಿಸಿ ನೂತನ ದಾಖಲೆಯನ್ನು ನಿರ್ಮಿಸಿದೆ. 14.92 ಕೋಟಿ ರು.ನಿರ್ವಹಣಾ ಲಾಭ, 11.07 ಕೋಟಿ ರು. ನಿವ್ವಳ ಲಾಭಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಜಯದೇವ ನಿಲೇಕಣಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದಾಖಲೆಯ ಒಟ್ಟು 49,000 ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿದೆ. ಬ್ಯಾಂಕಿನ ಠೇವಣಿಗಳು ಕಳೆದ ವರ್ಷದ 1244 ಕೋಟಿಗಳಿಂದ ಪ್ರಸಕ್ತ ವರ್ಷಾಂತ್ಯಕ್ಕೆ 1378 ಕೋಟಿ ರು.ಗಳಿಗೆ ಹಾಗೂ ಒಟ್ಟು ಸಾಲ ಮತ್ತು ಮುಂಗಡಗಳು ಕಳೆದ ವರ್ಷದ 810 ಕೋಟಿಗಳಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 983 ಕೋಟಿ ರು. ಗಳಿಗೆ ಏರಿಕೆಯಾಗಿದೆ. ಬ್ಯಾಂಕಿನ ಒಟ್ಟು ದುಡಿಯುವ

ಶಿರಸಿಯ ಅರ್ಬನ್ ಸಹಕಾರಿ ಬ್ಯಾಂಕ್

ಬಂಡವಾಳ ಕಳೆದ ವರ್ಷದ ರೂ.1453 ಕೋಟಿಗಳಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 1605 ಕೋಟಿ ರು.ಗಳಿಗೆ ಏರಿಕೆಯಾಗಿದ್ದು, 152 ಕೋಟಿ ರು.ಅಷ್ಟು ಹೆಚ್ಚಳವಾಗುವುದರ ಮೂಲಕ ಶೇ.10.46 ರಷ್ಟು ವೃದ್ಧಿ ದಾಖಲಿಸಿದೆ. ಅಲ್ಲದೇ ಒಟ್ಟು 486 ಕೋಟಿ ಹಣವನ್ನು ರಾಜ್ಯ ಸರಕಾರ, ಕೇಂದ್ರ ಸರಕಾರ ಮತ್ತು ವಿವಿಧ ಬ್ಯಾಂಕ್‌ಗಳಲ್ಲಿ ಗುಂತಾಯಿಸುವ ಮೂಲಕ ಬ್ಯಾಂಕಿನ ಆರ್ಥಿಕ ಸ್ಥಿರತೆಯನ್ನು ದೃಢೀಕರಿಸಿದೆ ಎಂದು ಅವರು ತಿಳಿಸಿದ್ದಾರೆ.

ಬ್ಯಾಂಕು ತನ್ನ ಶೇರು ಬಂಡವಾಳವನ್ನು ಕಳೆದ ವರ್ಷದ 34.12 ಕೋಟಿ ರು.ಗಳಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 41.32 ಕೋಟಿಗಳಿಗೆ ಹೆಚ್ಚಿಸುವುದರ ಮೂಲಕ ಶೇ.21.10 ರಷ್ಟು ವೃದ್ಧಿ ದಾಖಲಿಸಿದೆ. ಸ್ವಂತ ನಿಧಿಗಳನ್ನು 132.40 ಕೋಟಿಗಳಿಗೆ ವೃದ್ಧಿಸುವುದರೊಂದಿಗೆ ಸ್ವಂತ ಬಂಡವಾಳವನ್ನು 173.72 ಕೋಟಿಗಳಿಗೆ ವೃದ್ಧಿಸಿಕೊಂಡಿದೆ. ಬ್ಯಾಂಕು ನಿಕ್ಕಿ ಅನುತ್ಪಾದಕ ಆಸ್ತಿಗಳ ಪ್ರಮಾಣವನ್ನು ಸತತ ಹದಿನಾಲ್ಕು ವರ್ಷಗಳಿಂದ ಪ್ರತಿಶತ ಸೊನ್ನೆಗೆ ಕಾಯ್ದುಕೊಂಡು ಬಂದಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದ್ದಾರೆ.

ಬ್ಯಾಂಕು ತನ್ನ ಗ್ರಾಹಕರಿಗೆ ಹಲವು ಠೇವಣಿ ಹಾಗೂ ಸಾಲ ಮುಂಗಡಗಳನ್ನು ಅತ್ಯಾಕರ್ಷಕ ಬಡ್ಡಿದರದಲ್ಲಿ ನೀಡುತ್ತಿದೆ. ಹಿರಿಯ ನಾಗರಿಕರಿಗೆ ಶೇ.8.50ರ ಬಡ್ಡಿ ದರದಲ್ಲಿ ಸಮೃದ್ಧಿ ಠೇವು ಯೋಜನೆ ಪರಿಚಯಿಸಲಾಗಿದೆ. ಬ್ಯಾಂಕು ಗೃಹ ಸಾಲ ಶೇ.9.25, ಕಾರು ಸಾಲ ಶೇ.9.50, ವ್ಯವಹಾರ, ಉದ್ದಿಮೆಗಳಿಗೆ ದುಡಿಯುವ ಬಂಡವಾಳಕ್ಕಾಗಿ ಶೇ.10.25 ಸ್ಪರ್ಧಾತ್ಮಕ ದರಗಳಲ್ಲಿ ನೀಡುತ್ತಿದ್ದು ಸದಸ್ಯರು ಹಾಗೂ ಗ್ರಾಹಕರು ಈ ಠೇವಣಿ ಹಾಗೂ ಸಾಲ ಯೋಜನೆಗಳ ಲಾಭ ಪಡೆಯಬೇಕೆಂದು ಬ್ಯಾಂಕಿನ ಅಧ್ಯಕ್ಷ ಜಯದೇವ ನಿಲೇಕಣಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಂಕಿನ ಈ ಎಲ್ಲ ಸಾಧನೆಗಳಿಗೆ ಗೌರವಾನ್ವಿತ ಸದಸ್ಯರ, ಅಭಿಮಾನಿ ಗ್ರಾಹಕರ ಅಭೂತಪೂರ್ವ ವಿಶ್ವಾಸ, ನಿರಂತರ ಸಹಕಾರ, ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನ ಹಾಗೂ ಸಿಬ್ಬಂದಿ ನಿಷ್ಠಾಪೂರ್ಣ ಕರ್ತವ್ಯ ನಿರ್ವಹಣೆಯೇ ಕಾರಣವೆಂದು ಬ್ಯಾಂಕಿನ ಅಧ್ಯಕ್ಷ ಜಯದೇವ ಯು. ನಿಲೇಕಣಿ, ಉಪಾಧ್ಯಕ್ಷ ಸಂತೋಷ ಎಸ್. ಪಂಡಿತ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರತಿ ಎಸ್. ಶೆಟ್ಟರ್ ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಂಕು ತನ್ನ ಎಲ್ಲ ಗ್ರಾಹಕರಿಗೆ ಅತ್ಯುತ್ತಮ ಸೇವೆಯನ್ನು ನೀಡಿ ದಾಖಲೆಯ ವ್ಯವಹಾರದೊಂದಿಗೆ ಲಾಭಗಳಿಸಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಕಳೆದ ಸಾಲಿನಲ್ಲಿ ಬ್ಯಾಂಕು ಮಂಗಳೂರು, ಗದಗ, ಧಾರವಾಡ ಹಾಗೂ ಸಿದ್ದಾಪುರದಲ್ಲಿ 4 ನೂತನ ಶಾಖೆಗಳನ್ನು ಪ್ರಾರಂಭಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶಾಖೆಗಳನ್ನು ಪ್ರಾರಂಭಿಸುವ ಯೋಜನೆಯನ್ನು ಬ್ಯಾಂಕು ಹೊಂದಿದೆ.

-ಜಯದೇವ ನಿಲೇಕಣಿ
ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಅಧ್ಯಕ್ಷ

ಹಾಲು ಸಹಕಾರ ಒಕ್ಕೂಟಕ್ಕೆ 20 ಕೋಟಿ ನಷ್ಟ

ಹಾವೇರಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ಕಚೇರಿಯಲ್ಲಿ ಬುಧವಾರ ಅಧ್ಯಕ್ಷರಾದ ಮಂಜನಗೌಡ ಪಾಟೀಲ್ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು.

ಹಾವೇರಿ: ಜಿಲ್ಲೆ ವ್ಯಾಪ್ತಿಯ 8 ತಾಲೂಕುಗಳಿಂದ ಒಟ್ಟು 1.35 ಲಕ್ಷ ಲೀಟರ್ ನಷ್ಟು ಹಾಲನ್ನು ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಶೇಖರಣೆ ಮಾಡುತ್ತಿದೆ ಎಂದು ಹಾವೇರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷ ಮಂಜನಗೌಡ ಪಾಟೀಲ್ ಹೇಳಿದರು.

ನಗರದ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಗೆ ಬೇಡಿಕೆಗಿಂತಲೂ ಹೆಚ್ಚಾಗಿ ಹಾಲು ಪೂರೈಕೆಯಾಗುತ್ತಿದ್ದು, ಇದರಿಂದ ಪ್ರತಿ ನಿತ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ 1.35 ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದೆ ಎಂದರು ಶೇಖರಣೆಯಾದ ಹಾಲಿನಲ್ಲಿ ಪ್ರತಿದಿನ 20 ಸಾವಿರ ಲೀ. ಹಾಲು ಮಾರಾಟ ಮಾಡಲಾಗುತ್ತಿದೆ ಮತ್ತು 30 ಸಾವಿರ ಲೀ. ಹಾಲನ್ನು ಕ್ಷೀರ ಭಾಗ್ಯ ಹಾಲಿನ ಪುಡಿ ಬೆಣ್ಣೆ ಪರಿವರ್ತನೆ ಹಾಗೂ ಯು. ಎಚ್.ಟಿ ಹಾಲಿನ ಉತ್ಪನ್ನಗಳ ತಯಾರಿಕೆಗೆ ನೀಡಲಾಗುತ್ತಿದೆ ಎಂದರು.

ಹಾವೇರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ 20 ಕೋಟಿ ನಷ್ಟ: ಜಿಲ್ಲೆಯಲ್ಲಿ ಬೇಡಿಕೆಗಿಂತ ಹಾಲಿನ ಪೂರೈಕೆ ಹೆಚ್ಚಾಗಿದ್ದು ಅನ್ಯ ಮಾರುಕಟ್ಟೆ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲ ಶೇಖರಣೆ ಯಾದ ಹಾಲಿನಲ್ಲಿ 30 ಸಾವಿರ ಲೀಟರ್ ಹಾಲನ್ನು ಕ್ಷೀರಭಾಗ್ಯ, ಹಾಲಿನ ಪುಡಿ ತಯಾರಿಕೆ ಹಾಗೂ ಯು.ಎಚ್.ಟಿ ಹಾಲಿನ ಉತ್ಪನ್ನಗಳ ತಯಾರಿಕೆಗೆ ನೀಡಲಾಗುತ್ತಿದ್ದೂ, ಇದರಲ್ಲಿ ಯಾವುದೇ ಲಾಭಾಂಶ ಇರುವುದಿಲ್ಲ. ಪ್ರತಿ ಕೆ.ಜಿ. ಕೆನೆರಹಿತ ಹಾಲಿನ ಪುಡಿಗೆ 7.30 ರು. ಕೆನೆಸಹಿತ ಹಾಲಿನ ಪುಡಿಗೆ 2.50 ರು. ರಂತೆ ಹಾಗೂ ಪ್ರತಿ ಲೀಟರ್ ಯು.ಹೆಚ್.ಟಿ ಹಾಲಿನ ಮಾರಾಟದಲ್ಲಿ 4.50 ರು. ರಂತೆ ನಷ್ಟವಾಗುತ್ತಿದೆ ಮತ್ತು ಮಾರಾಟದ ವ್ಯವಸ್ಥೆ ಇಲ್ಲದೇ ಕರ್ನಾಟಕ ಹಾಲು ಮಂಡಳಿ ನಿಗದಿಪಡಿಸಿದ ಐ.ಡಿ.ಆರ್ ದರದಲ್ಲಿ ಇತರೆ ಹಾಲು ಒಕ್ಕೂಟಗಳಿಗೆ ಅಥವಾ ಮದರ ಡೇರಿಗಳಿಗೆ ಪೂರೈಕೆ ಮಾಡಲಾಗುತ್ತಿದೆ.

ಈಗಾಗಲೇ ಸರಕಾರ ಮಾ.29 ರಂದು ಹಾಲು ಮಾರಾಟ ದರವನ್ನು ಪ್ರತಿ ಲೀ.ಗೆ 4 ರು.ರಂತೆ ಹೆಚ್ಚಿಸಿದೆ. ಒಕ್ಕೂಟವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದರು ಕೂಡ ಈಗಾಗಲೇ ಸಂಘಗಳಿಗೆ ಹಾಲು ಶೇಖರಣಾ ದರವನ್ನು 28.05 ರು. ರಿಂದ 4 ರು.ಗಳನ್ನು ಹೆಚ್ಚಿಸಿ 32.05 ರು.(4% ಪ್ಯಾಟ್, 8.5% ಎಸ್.ಎನ್.ಎಫ್) ದರ ಪರಿಷ್ಕರಣೆ ಮಾಡಲಾಗಿದೆ ಎಂದರು.

ಮಾಧ್ಯಮಗೋಷ್ಠಿಯಲ್ಲಿ ಒಕ್ಕೂಟದ ನಿರ್ದೇಶಕರಾದ ಬಸವೇಶಗೌಡ ಪಾಟೀಲ್, ಚಂದ್ರಪ್ಪ ಜಾಲಗಾರ, ಪ್ರಕಾಶ ಬನ್ನಿಹಟ್ಟಿ, ತಿಪ್ಪಣ್ಣ ಸಾತಣ್ಣನವರ,ಅಶೋಕ ಪಾಟೀಲ್, ಎಂ.ಡಿ ಎಚ್.ಟಿ ಅಶೋಕಗೌಡ ಹಾಜರಿದ್ದರು.

ಮಾರುಕಟ್ಟೆಗೆ ಉತ್ತೇಜನ

ಮಾರುಕಟ್ಟೆ ಪ್ರಚಾರ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಎಲ್ಲಾ ವಿತರಣಾ ಮಾರ್ಗದ ಹಾಗೂ ಶೇಖರಣಾ ಮಾರ್ಗದ ವಾಹನಗಳಿಗೆ ಏಕರೂಪದ ನಂದಿನಿ ಬ್ರಾಂಡಿಂಗ್ ಮಾಡಿಸಿ ಜಿಲ್ಲೆಯಾದ್ಯಂತ ಪ್ರಚಾರ ಕಾರ್ಯಕ್ರಮವನ್ನು ಮಾಡಿದೆ. ವ್ಯಾಪಕ ಪ್ರಚಾರದ ಹಿನ್ನೆಲೆಯಲ್ಲಿ ನಂದಿನಿ ನೂತನ ಹಾಲು ಒಕ್ಕೂಟದ ನಂದಿನಿ ಮತ್ತು ನಂದಿನಿ ಹಾಲಿನ ಉತ್ಪನ್ನಗಳ ವಿವರವನ್ನು ಕರಪತ್ರ ಮಾಡಿಸಿ ಹಾಗೂ ಖಾಸಗಿ ಮತ್ತು ನಂದಿನಿ ಹಾಲಿನ ತುಲನಾತ್ಮಕ ದರಪಟ್ಟಿಯನ್ನು ಜಿಲ್ಲೆಯಾದ್ಯಂತ ಪ್ರಚಾರ ಕಾರ್ಯಕ್ರಮವನ್ನು ಮಾಡಲಾಗಿದೆ. ಮಾರುಕಟ್ಟೆ ಅಭಿವೃದ್ಧಿಗಾಗಿ ಡೀಲರುದಾರರಿಗೆ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ನಂದಿನಿ ಬ್ರಾಂಡುಗಳ ಬೋರ್ಡುಗಳನ್ನು, ಹಾಲಿನ ಬ್ಯಾಗುಗಳು, ಟೀಶರ್ಟ, ಕ್ಯಾಪ್‌ಗಳನ್ನು ಮಾರಾಟ ಪ್ರಚಾರ ಕಾರ್ಯಕ್ರಮದಡಿಯಲ್ಲಿ ಒದಗಿಸಲಾಗಿದೆ ಎಂದರು.

ಕುಡಿವ ನೀರಿನ ಅಭಾವ, ಅಗತ್ಯ ಕ್ರಮಕ್ಕೆ ಸೂಚನೆ

ಕಾರವಾರ: ಪ್ರಸ್ತುತ ಬೇಸಿಗೆಗಾಲವಾದ್ದರಿಂದ ಜಿಲ್ಲೆಯ ಕೆಲ ಭಾಗಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ನೀರಿನ ಅಭಾವ ಉಂಟಾಗುವ ಸಾಧ್ಯತೆ ಇದ್ದು, ಜಿಲ್ಲೆಯ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಪಂ ಸಿಇಒ ಈಶ್ವರ ಕಾಂದೂ ಸೂಚನೆ ನೀಡಿದರು.

ಅವರು ಗುರುವಾರ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಕೆಲವು ಅಂಗನವಾಡಿ, ಶಾಲೆ ಹಾಗೂ ವಸತಿ ಶಾಲೆಗಳಿಗೆ ಸರ್ಮಪಕವಾಗಿ ಶುದ್ಧ ಕುಡಿಯುವ ನೀರು ಪೂರೈಕೆಯಾಗದಿರುವ ಬಗ್ಗೆ ಗಮನಕ್ಕೆ ಬಂದಿದ್ದು, ಈ ಕುರಿತಂತೆ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಿ ಕುಡಿಯುವ ನೀರು ಪೂರೈಕೆ ಮಾಡಬೇಕು ಹಾಗೂ ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವ ಕಾರ್ಯ ಮಾಡಬೇಕು ಎಂದ ಅವರು, ತಾಪಂ ಇಒ ಹಾಗೂ ಪಿಡಿಒಗಳು ತಮ್ಮ ತಮ್ಮ ವ್ಯಾಪ್ತಿಯ ನೀರಿನ ಅಭಾವವಿರುವ ಸ್ಥಳಗಳ ಕ್ರೂಢೀಕೃತ ವರದಿ ಸಲ್ಲಿಸಬೇಕು.
-ಈಶ್ವರ ಕಾಂದೂ, ಜಿಪಂ ಸಿಇಒ

ಜಿಲ್ಲೆಯ ಎಲ್ಲ ಅಂಗನವಾಡಿ, ಶಾಲೆ ಹಾಗೂ ವಸತಿ ನಿಲಯಗಳಿಗೆ ಶುದ್ಧ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗುವುದನ್ನು ಖಾತರಿಪಡಿಸಿಕೊಂಡು ವರದಿ ನೀಡುವಂತೆ ಸಂಬಟಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಅವರು, ನೀರಿನ ಅಭಾವ ಇರುವ ಗ್ರಾಪಂಗಳಲ್ಲಿ ಈಗಾಗಲೇ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದ್ದು, ಗ್ರಾಪಂಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸುವ ಮುನ್ನ ಪಿಡಿಒ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಸಮನ್ವಯ ಸಾಧಿಸಿ ಮಾಹಿತಿಯನ್ನು ಪಡೆದು ವರದಿ ಸಲ್ಲಿಸಬೇಕು. ಈ ವರದಿ ಆಧಾರದ ಮೇಲೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮೂಲಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಪಂನಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯಲ್ಲಿ ಜಿಪಂ ಸಿಇಒ ಈಶ್ವರ ಕಾಂದೂ ಮಾತನಾಡಿದರು.

ಈಗಾಗಲೇ ಕೊರೆಯಲಾದ ಬೊರ್‌ವೆಲ್‌ಗಳ ನೀರಿನ ಮಟ್ಟದ ಬಗ್ಗೆ ತಜ್ಞರಿಂದ ಮಾಹಿತಿ ಪಡೆದು ಸಂಬಂಧಪಟ್ಟ ಅಧಿಕಾರಿಗಳು ಸಮನ್ವಯ ಸಾಧಿಸಿ ಮುಂಜಾಗ್ರತೆ ಕ್ರಮವಹಿಸಿ ಸಮರ್ಪಕ ನೀರನ್ನು ಪೂರೈಕೆ ಮಾಡುವುದರ ಬಗ್ಗೆ ಕ್ರಮಕೈಗೊಳ್ಳಬೇಕು ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಎಂಜನಿಯರ್ ಎನ್.ಡಿ ರಘುನಾಥ ಮಾತನಾಡಿ, ಬೇಸಿಗೆ ಕಾಲದಲ್ಲಿ, ಜನರಿಗೆ ನೀರಿನ ಮಿತ ಬಳಕೆಯ ಕುರಿತಂತೆ ಜಾಗೃತಿ ಮೂಡಿಸಬೇಕು ಇದಕ್ಕಾಗಿ ವಿವಿಧ ಇಲಾಖೆಗಳ ಸಹಕಾರ ಅಗತ್ಯವಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ (ಆಡಳಿತ) ನಾಗೇಶ್ ರಾಯ್ಕರ್, ಉಪ ಕಾರ್ಯದರ್ಶಿ (ಅಭಿವೃದ್ಧಿ) ಪ್ರಕಾಶ ಹಾಲಮ್ಮನವರ್, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಶಂಕರ್ ರಾವ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಉಮೇಶ ಉಪಸ್ಥಿತರಿದ್ದರು.

ಪೊಲೀಸರಿಗೆ ಸಮಾಜದ ಬಗ್ಗೆ ಕಳಕಳಿ ಇರಲಿ

ಹಾವೇರಿ:ಪೊಲೀಸರು ಸಮಾಜದ ಬಗ್ಗೆ ಕಳಕಳಿ ಭಾವನೆ ಹೊಂದಬೇಕು ಸಾರ್ವಜನಿಕ ನೆಮ್ಮದಿಗೆ ಕಾರ್ಯ ಪ್ರವೃತ್ತರಾಗಬೇಕು ಎಂದು ನಿವೃತ್ತ ಪಿಎಸ್ಐ ಆರ್.ವಾಯ್ ಅಂಬಿಗೇರ ಹೇಳಿದರು.

ನಗರದ ಕೆರಿಮತ್ತಿಹಳ್ಳಿಯ ಪೊಲೀಸ್ ಪರೇಡ್ ಮೈದಾನದಲ್ಲಿ ಬುಧವಾರ ನಡೆದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ಏ.2 ರಂದು ಪೊಲೀಸ್ ಧ್ವಜ ದಿನ ಆಚರಿಸಲಾಗುತ್ತದೆ ಪೊಲೀಸ್ ಧ್ವಜಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಬಂದಂತಹ ಹಣವನ್ನು ನಿವೃತ್ತಿ ಪೊಲೀಸರ ಕ್ಷೇಮಾಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿತ್ತದೆ ಎಂದರು.

ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ.ಎಂ. ಸಂತೋಷ ಅವರು ವರದಿವಾಚನ ನೀಡಿ, ಕರ್ನಾಟಕ ಪೊಲೀಸ್ ಪಡೆಯನ್ನು 1965 ರ ಏ.2 ರಂದು ಕರ್ನಾಟಕ ಪೊಲೀಸ್ ಕಾಯ್ದೆಗೆ ಒಳಪಡಿಸಲಾಯಿತು. ಅದರ ಸ್ಮರಣೆಗಾಗಿ ಪ್ರತಿ ವರ್ಷ ಪೊಲೀಸ್ ಧ್ವಜ ದಿನವನ್ನಾಗಿ ರಾಜ್ಯದ ಎಲ್ಲ ಘಟಕಗಳಲ್ಲಿ ಆಚರಿಸಲಾಗುತ್ತದೆ. ಕಾನೂನು ಹಾಗೂ ಸಾರ್ವಜನಿಕ ಆಸ್ತಿ ಪಾಸ್ತಿಗಳ ಸಂರಕ್ಷಣೆ ಮಾಡಲು ಈ ದಿನವನ್ನು ಮುಡಿಪಾಗಿಡಲಾಗುತ್ತದೆ. ನಿತ್ಯ ಜೀವನದಲ್ಲಿ ಶಾಂತಿ ಸೌಹಾರ್ದತೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ಧ್ವಜ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಮಾ.31 ರ ಅಂತ್ಯಕ್ಕೆ ಪೊಲೀಸ್ ಧ್ವಜ ಮಾರಾಟ ಮಾಡಿ ಬಂದಂತಹ ಹಣ 15 ಲಕ್ಷ ಇದರಲ್ಲಿ 40 ಸಾವಿರಗಳನ್ನು ಮರಣೋತ್ತರ ಪರಿಹಾರವಾಗಿ ನೀಡಲಾಗಿದೆ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ 8.59 ಲಕ್ಷ ರು.ಒದಗಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪರೇಡ್ ಕಮಾಂಡರ ಆರ್.ಪಿ.ಐ ಶಂಕರಗೌಡ ಪಾಟೀಲ್ ಅವರು ಪೊಲೀಸ್ ಪಡೆಗಳ ಪಥ ಸಂಚಲನದ ನೇತೃತ್ವ ವಹಿಸಿದ್ದರು. ಅಶೋಕ ಹೊಸಮನಿ ಆರ್.ಪಿ.ಐ ಹಾವೇರಿ ಅವರ ನೇತೃತ್ವದಲ್ಲಿ ಪೊಲೀಸ್ ಬ್ಯಾಂಡ್ ಪಥ ಸಂಚಲನ ನಡೆಸಿತು.

ಕಾರ್ಯಕ್ರಮದಲ್ಲಿ ಬ್ಯಾಡಗಿ ಸಿಪಿಐ ಮಾಲತೇಶ ಲಂಬಿ ವಂದಿಸಿದರು, ಹಾಗೂ ಸಂತೋಷ ಜವಳಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ವಿಭಾಗದ ಪೊಲೀಸ್ ಡಿಎಸ್‌ಪಿ, ಸಿಪಿಐ, ಪಿಎಸ್‌ಐ, ಎಎಸ್‌ಐ, ಪೊಲೀಸ್ ಸಿಬ್ಬಂದಿ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪೊಲೀಸ್ ಕರ್ತವ್ಯ ನಿರ್ವಹಿಸುವಾಗ ಪೊಲೀಸ್ ಬಾವುಟ ಅವರು ಬಳಿ ಇರುತ್ತದೆ. ಅವರ ಕರ್ತವ್ಯ ಪ್ರಜ್ಞೆ ಆ ಬಾವುಟವು ಎತ್ತರೆತರಕ್ಕೆ ಹೋಗುತ್ತದೆ ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿದರೆ ಇಲಾಖೆಯ ಘನತೆ ಗೌರವ ಹಾಳಾಗುತ್ತದೆ ಆದ ಕಾರಣ ಪೊಲೀಸರು ಶಿಸ್ತು ಮತ್ತು ಸಂಯಮದಿಂದ ಕರ್ತವ್ಯ ನಿರ್ವಹಿಸಬೇಕಾಗಿರುವುದು ಅವಶ್ಯಕವಾಗಿದೆ.
-ಆರ್.ವಾಯ್ ಅಂಬಿಗೇರ, ನಿವೃತ್ತ ಪಿಎಸ್ಐ

ಕೃಷಿ ಭಾಗ್ಯ ಯೋಜನೆಗೆ ಅರ್ಜಿ

ಮುಂಡಗೋಡ: ತಾಲೂಕಿನಲ್ಲಿ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು ಹಾಗೂ ಸಮರ್ಪಕ ಮಳೆ ನೀರಿನ ಸಂಗ್ರಹಣೆ ಮಾಡಿ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮಪಡಿಸಿ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ 2025-26ನೇ ಸಾಲಿಗೆ ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ನಿರ್ದೇಶನ ನೀಡಲಾಗಿದ್ದು, ರೈತರು ಅರ್ಜಿ ಸಲ್ಲಿಸಬಹುದು.

ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ ಕೃಷಿಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥಿನ್ ಹೊದಿಕೆ, ಕೃಷಿಹೊಂಡದ ಸುತ್ತಲು ತಂತಿಬೇಲಿ ನಿರ್ಮಾಣ, ಹೊಂಡದಿಂದ ನೀರು ಎತ್ತಲು ಡಿಸೇಲ, ಪೆಟ್ರೋಲ ಅಥವಾ ಸೋಲಾರ ಪಂಪ್‌ಸೆಟ್ ಹಾಗೂ ಬೆಳೆಗೆ ನೀರನ್ನು ಹಾಯಿಸಲು ಸೂಕ್ಷ್ಮ ತುಂತುರು ಹನಿ ನೀರಾವರಿ ಘಟಕಗಳಿಗೆ ಸಹಾಯ ದನ ನೀಡಲಾಗುತ್ತದೆ.

ತಾಲೂಕಿಗೆ ನಿಗಧಿತ ಗುರಿಗಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದಲ್ಲಿ ಲಾಟರಿ ಮುಖಾಂತರ ಫಲಾನುಭವಿಗಳ ಆಯ್ಕೆ ಮಾಡಲಾಗುವುದು. ಜೇಷ್ಠತೆ ಆಧಾರದ ಮೇಲೆ ಕೆ-ಕಿಸಾನ ತಂತ್ರಾಂಶದಲ್ಲಿ ನೊಂದಣಿಯಾಗಿ ಆಯ್ಕೆಯಾದ ಅರ್ಹ ಅರ್ಜಿಗಳ ಆಧಾರದ ಮೇಲೆ ಅನುಷ್ಠಾನಗೊಳಿಸುವುದು. ಕಾರ್ಯಾದೇಶ ನೀಡಿದ 15-30 ದಿನಗಳೊಳಗಾಗಿ ಕೃಷಿ ಹೊಂಡ ನಿರ್ಮಿಸದೇ ಇರುವ ಫಲಾನುಭವಿಗಳ ಅರ್ಜಿಗಳನ್ನು ಸ್ಥಗಿತಗೊಳಸಿ ಇತರೆ ಫಲಾನುಭವಿಗಳ ಅರ್ಜಿಗಳನ್ನು ಪರಿಗಣಿಸಲು ಕೆ-ಕಿಸಾನ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಸಂಪರ್ಕಿಸಬಹುದು.

ಸೇನಾ ಆಯ್ಕೆ ಸಿದ್ಧತಾ ತರಬೇತಿಗೆ ಅರ್ಜಿ

ಕಾರವಾರ: ಭಾರತೀಯ ಸೇನೆ/ಇತರೆ ಯೂನಿಫಾರ್ಮ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದೂಳಿದ ವರ್ಗಗಳ ಪ್ರವರ್ಗ-1, 2(ಎ) ಹಾಗೂ 3(ಬಿ)ಗಳ ಅರ್ಹ ಅಭ್ಯರ್ಥಿಗಳಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆಯ್ಕೆ ಪೂರ್ವ ಸಿದ್ದತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, 1 ನೇ ತಂಡದ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ (ಬಾಲಕರಿಗೆ ಮಾತ್ರ) ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ಗರಿಷ್ಟ ವಾರ್ಷಿಕ ಆದಾಯ ಮಿತಿ ಪ್ರವರ್ಗ-1 ಕ್ಕೆ 2.50 ಲಕ್ಷ ರು.ಗಳು ಹಾಗೂ ಪ್ರವರ್ಗ-2(ಎ), 3(ಎ) ಮತ್ತು 3(ಬಿ) ಗಳಿಗೆ 1.00 ಲಕ್ಷ ರು.ಗಳಾಗಿರುತ್ತದೆ. ತರಬೇತಿಯನ್ನು ವೀರ ಬಹದ್ದೂರ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ ಕಾರವಾರದಲ್ಲಿ ನೀಡಲಾಗುವುದು. ಅಭ್ಯರ್ಥಿಗಳು ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಜಿಲ್ಲಾ ಅಧಿಕಾರಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣ, ನೆಲಮಹಡಿ, ಕೊಠಡಿ ಸಂ.1 ಕಾರವಾರ ಉತ್ತರ ಕನ್ನಡ ಜಿಲ್ಲೆ, 581301ಸಲ್ಲಿಸಬಹುದು. ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಯ ಜಿಲ್ಲಾ/ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಡೆದು, ಭರ್ತಿ ಮಾಡಿ ನೊಂದಾಯಿತ ಅಂಚೆಯ ಮುಖಾಂತರ ಸಲ್ಲಿಸಲು ಏ.21 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ.08382-226588 ಗೆ ಸಂಪರ್ಕಿಸಬಹುದಾಗಿದೆ.

ಒಳ ಮೀಸಲು ಬಗ್ಗೆ ಜನ ಜಾಗೃತಿ ಮೂಡಿಸಿ

ಸವಣೂರು: ಒಳಮೀಸಲು ಸಮೀಕ್ಷೆ ಕುರಿತು ತಾಲೂಕು ಮಟ್ಟದಲ್ಲಿ ಮುಂಜಾಗ್ರತೆ ಕ್ರಮವಹಿಸಿ ಜಾಗೃತಿ ಮೂಡಿಸುವಂತೆ ಒತ್ತಾಯಿಸಿ ಉಪವಿಭಾಗಾಧಿಕಾರಿ ಶುಭಂ ಶುಕ್ಲಾ ಅವರಿಗೆ ಮಾದಿಗ ಸಮಾಜದ ವತಿಯಿಂದ ಮನವಿ ಸಲ್ಲಿಸಿದರು.

ಒಳಮೀಸಲು ಹಂಚಿಕೆಗಾಗಿ ಸರಕಾರ ಕೈಗೊಂಡಿರುವ ಪರಿಶಿಷ್ಟ ಜಾತಿಯ ಜನಗಣತಿಯಲ್ಲಿ ಸವಣೂರು ತಾಲೂಕು ಮಟ್ಟದಲ್ಲಿರುವ ಮಾದಿಗ ಸಮಾಜದ ಸಮುದಾಯವನ್ನು ಬೇರೆ ಬೇರೆ ಜಾತಿಯ ಸಮುದಾಯ ಅಡಿಯಲ್ಲಿ ಗುರುತಿಸುತ್ತಿದ್ದು, ಸದರ ಸಮಸ್ಯೆಯನ್ನು ಬಗೆಹರಿಸಲು ಎ.ಜೆ.ಸದಾಶಿವ ಆಯೋಗದ ವರದಿಯಲ್ಲಿನ ಅಂಕಿ ಅಂಶಗಳನ್ನು ಸರಕಾರ ಪರಿಗಣನೆಗೆ ತೆಗೆದುಕೊಂಡು ಬಳಸಬಹುದಿತ್ತು. ಆದರೆ, ಸರಕಾರ ಸಮೀಕ್ಷೆ ನಡೆಸಿ ದತ್ತಾಂಶವನ್ನು ಸಂಗ್ರಹಿಸುವಂತೆ ನಿವೃತ್ತ ನ್ಯಾ. ಎಚ್.ಎನ್.ನಾಗಮೋಹನದಾಸ ಅವರ ಆಯೋಗದ ಶಿಫಾರಸ್ಸನ್ನು ಒಪ್ಪಿದೆ.

ಇದರಿಂದ, ಜಾತಿಯಲ್ಲಿ ಉಪಜಾತಿಯನ್ನು ನಮೂದಿಸುವ ಬಗ್ಗೆ ಪರಿಶಿಷ್ಟ ಜಾತಿಯ ಸಮಾಜದವರಿಗೆ ಬಹಳಷ್ಟು ಗೊಂದಲ ಇರುವುದರಿಂದ ಈ ಕುರಿತು ಸವಣೂರು ಪಟ್ಟಣ ಸೇರಿದಂತೆ ತಾಲೂಕಿನ ಪ್ರತಿ ಗ್ರಾಮಗಳಲ್ಲಿ ಒಳಮೀಸಲಾತಿ ಸಮೀಕ್ಷೆ ಕುರಿತು ಸ್ಪಷ್ಟವಾಗಿ ಧ್ವನಿವರ್ಧಕ, ಡಂಗೂರ ಸಾರುವ ಮೂಲಕ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಮೂಲಕ ಮಾದಿಗ ಸಮಾಜದವರಿಗೆ ಅರಿವು ಮೂಡಿಸಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳ ಬೇಕು ಎಂದು ಮನವಿಯಲ್ಲಿ ಒತ್ತಾಯಿಸಿ ದ್ದಾರೆ. ಈ ಸಂದರ್ಭದಲ್ಲಿ ಲಕ್ಷ್ಮಣ ಕನವಳ್ಳಿ, ಶಿವಾನಂದ ಹುಲ್ಲಮ್ಮನವರ, ಶ್ರೀಕಾಂತ ಲಕ್ಷ್ಮೇಶ್ವರ, ಬಸವರಾಜ ಮೈಲಮ್ಮನವರ, ಆನಂದ ವಡಕಮ್ಮನವರ, ಪುಟ್ಟಪ್ಪ ಕ್ಯಾಡದ, ಪ್ರವೀಣ ಬಾಲೇ ಹೊಸೂರ, ನಾಗರಾಜ ಹರಿಜನ, ಗಂಗಪ್ಪ ಹರಿಜನ, ಪ್ರಶಾಂತ ಮುಗಳಿ, ಮನೋಜ ದೊಡ್ಡಮನಿ, ಅಪ್ಪಣ್ಣ ತೊಂಡೂರ, ಸುನೀಲ ಹರಿಜನ, ರಘು ಬಾಲೇ ಹೊಸೂರ, ಸತೀಶ ಮೈಲಮ್ಮನರ, ಮುತ್ತು ಲಕ್ಷ್ಮೇಶ್ವರ, ಉಮೇಶ ದೊಡ್ಡಮನಿ, ಮನೋಜ ಕನವಳ್ಳಿ, ಮಂಜು ಮೈಲಮ್ಮನವರ, ಲಕ್ಷ್ಮಣ ಮುಗಳಿ ಸೇರಿದಂತೆ ಸಮಾಜ ಬಾಂಧವರು ಇದ್ದರು.


ಮಾದಿಗ ಸಮಾಜದ ವತಿಯಿಂದ ಉಪವಿಭಾಗಾಧಿಕಾರಿ ಶುಭಂ ಶುಕ್ಲ ಅವರಿಗೆ ಮನವಿ ಸಲ್ಲಿಸಿದರು.

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹರಪನಹಳ್ಳಿ
Criminal Miscellaneous No: 131/2025
ಅರ್ಜಿದಾರರು:- ಶ್ರೀ ಕೆ.ಎಸ್.ಉಸ್ಮಾನ್ ಮತ್ತು ಇತರರು
-:: ವಿರುದ್ಧ ::-
ಎದುರುದಾರರು:- ಮುಖ್ಯಾಧಿಕಾರಿಗಳು ಹಾಗೂ ಜನನ ಮತ್ತು ಮರಣ. ನೋಂದಣಿ ಅಧಿಕಾರಿಗಳು, ಪುರಸಭೆ, ಹರಪನಹಳ್ಳಿ.
ಪತ್ರಿಕಾ ಪ್ರಕಟಣೆ
ಸದರಿ ಪ್ರಕರಣದಲ್ಲಿ (1) ಕೆ.ಎಸ್.ಉಸ್ಮಾನ್ ತಂದೆ ಲೇಟ್ ಕೆ.ಷಂಷೀರ್‌ಸಾಬ್, (2) ಶ್ರೀ.ಕೆ.ಎಸ್.ಬುಡೇನ್‌ಸಾಹೇಬ್, ತಂದೆ ಲೇಟ್ ಕೆ. ಷಂಷೀರ್‌ಸಾಬ್, (3) ಶ್ರೀಮತಿ ಫರ್ಜಾನ ಯಾಸೀನ್.ಕೆ.ಎಸ್, ತಂದೆ ಲೇಟ್ ಕೆ.ಷಂಷೀರ್‌ಸಾಬ್, ಮತ್ತು (4) ಶ್ರೀಮತಿ ಕೆ.ಎಸ್.ಫೈರೋಜಾ ತಂದೆ ಲೇಟ್ ಕೆ.ಷಂಷೀರ್‌ಸಾಬ್, ಎಲ್ಲರೂ ಹರಪನಹಳ್ಳಿ ಟೌನ್ ನಿವಾಸಿಗಳಾದ ಇವರು ಅರ್ಜಿದಾರರಾಗಿದ್ದು, ಮತ್ತು ಮುಖ್ಯಾಧಿಕಾರಿಗಳು, ಮತ್ತು ಜನನ ಹಾಗೂ ಮರಣ ನೋಂದಣಿ ಅಧಿಕಾರಿಗಳು, ಪುರಸಭೆ ಕಾರ್ಯಾಲಯ, ಹರಪನಹಳ್ಳಿ, ಇವರು ಎದುರುದಾರರಾಗಿರುತ್ತಾರೆ. ಅರ್ಜಿದಾರರ ತಾಯಿಯಾದ ಕೆ.ಎಸ್.ಫಕ್ರುಮಾಬೀ ಗಂಡ ಲೇಟ್ ಕೆ.ಷಂಷೀರ್‌ಸಾಬ್ ಇವರು ದಿನಾಂಕ 01-01-2001ರಂದು ಹರಪನಹಳ್ಳಿ ಪಟ್ಟಣದ ಪಠಾಣಗೇರಿಯಲ್ಲಿರುವ ಅವರ ಸ್ವಗೃಹದಲ್ಲಿ ಮರಣ ಹೊಂದಿದ್ದು, ಈಗ ಅರ್ಜಿದಾರರು ತಮ್ಮ ಹಿರಿಯರ ಹೆಸರಿಗೆ ಇರುವಂತಹ ಚರ-ಸ್ಥಿರಾಸ್ತಿಗಳನ್ನು ಪೌತಿ ವಾರಸು ಪ್ರಕಾರ ಪೌತಿ ಖಾತೆ ಮಾಡಿಸಿಕೊಳ್ಳಲು, ಪಾಲು ವಿಭಾಗ ಮಾಡಿಕೊಳ್ಳಲು ಮೃತರ ಮರಣ ಪ್ರಮಾಣ ಪತ್ರದ ಅವಶ್ಯತೆ ಇರುವುದರಿಂದ ಸದರಿ ಕೆ.ಎಸ್.ಫಕ್ರುಮಾಬೀ ಗಂಡ ಲೇಟ್ ಕೆ.ಷಂಷೀರ್‌ಸಾಬ್ ಇವರು ಮೇಲ್ಕಂಡ ದಿನಾಂಕದಂದು ಮರಣ ಹೊಂದಿದ ಬಗ್ಗೆ ಎದುರುದಾರರಿಂದ ಮರಣ ಪ್ರಮಾಣ ಪತ್ರದ ಆದೇಶ ಕೋರಿ ಅರ್ಜಿದಾರರು ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿಯಲ್ಲಿ ಜನನ ಮತ್ತು ಮರಣ ನೋಂದಣಿ ಕಾಯ್ದೆ ಕಲಂ.13(3) ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಈ ಪ್ರಕರಣವು ದಿನಾಂಕ:-21-06-2025 ರಂದು ಮಾನ್ಯ ಘನ ನ್ಯಾಯಾಲಯವು ಮುದ್ದತ್ತು ನಿಗಧಿ ಪಡಿಸಿರುತ್ತದೆ. ಸದರಿ ಮೃತ ಕೆ.ಎಸ್.ಫಕ್ರುಮಾಬೀ ಗಂಡ ಲೇಟ್ ಕೆ.ಷಂಷೀರ್‌ಸಾಬ್ ಇವರ ಮರಣ ಪ್ರಮಾಣ ಪತ್ರದ ವಿಚಾರದಲ್ಲಿ ಅರ್ಜಿದಾರರು ಮತ್ತು ಎದುರುದಾರರು ಹೊರತು ಪಡಿಸಿ ಇತರೇ ಯಾರಾದರೂ ಅವಶ್ಯಕ ಪಕ್ಷಗಾರರು ಇದ್ದಲ್ಲಿ, ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತವರು ಮೇಲ್ಕಂಡ ಮುದ್ದತ್ತಿನ ದಿನಾಂಕದಂದು ಬೆಳಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುವುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕ ಪಕ್ಷಿಯವಾಗಿ ತೀರ್ಮಾನಿಸುತ್ತದೆ.
ನ್ಯಾಯಾಲಯದ ಆದೇಶದ ಪರವಾಗಿ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ
ಅರ್ಜಿದಾರರ ಪರ ವಕೀಲರು,
ಹಾಲೇಶ.ಸಿ ವಕೀಲರು
ಸ್ಥಳ:-ಹರಪನಹಳ್ಳಿ ದಿನಾಂಕ:- 27/03/2025

ಕಳೆದಿದೆ
ನಾನು ಶ್ರೀ ಸಾಜೀದಖಾನ ತಂದೆ ಮೈಮೂದಸಾಬ ಬುಕ್ಕಿಟಗಾರ, ಸಾ: ನೇಕಾರ ಓಣಿ, ನವಲೂರ, ಧಾರವಾಡ, ಈ ಮೂಲಕ ಸತ್ಯಪ್ರತಿಜ್ಞೆಯ ಪೂರ್ವಕವಾಗಿ ಮಾಡುವ ಪ್ರಮಾಣ ಪತ್ರ ಏನೆಂದರೆ ನನ್ನ ಹೆಸರಿನಲ್ಲಿ ಪಾರ್ಸಪೋರ್ಟ ನಂ. W8887085 ದಿ:21-12-2022 ಪಡೆದುಕೊಂಡಿದ್ದು ಇದ್ದು, ಸದರಿ ಪಾಸ್ ಪೋರ್ಟನ್ನು ನಾನು ದಿ:05-03-2025 ರಂದು ಮನೆಯನ್ನು ಬದಲಾಯಿಸುವ ಸಮಯದಲ್ಲಿ ನನ್ನ ನಜರ ಚೂಕಿನಿಂದ ಕಳೆದುಕೊಂಡಿರುತ್ತೇನೆ. ಅದನ್ನು ಇದುವರೆಗೂ ಎಷ್ಟೇ ಹುಡುಕಾಡಿದರೂ ಸಿಕ್ಕಿರುವದಿಲ್ಲ. ಅದು ಯಾರಿಗಾದರೂ ಸಿಕ್ಕಲ್ಲಿ ಮೇಲಿನ ವಿಳಾಸಕ್ಕೆ ಹಾಗೂ ಸೆಲ್ ನಂಬರಿಗೆ ಸಂಪರ್ಕಿಸಿರಿ. 9916798554

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹರಪನಹಳ್ಳಿ.
ಕ್ರಿಮಿನಲ್.ಮಿಸ್.ನಂ.26/2025
ಅರ್ಜಿದಾರರು : ಶ್ರೀ. ಶೇಕ್ಷಾವಲಿ ತಂದೆ ಭಂಗಿ ರಾಜ ಅಹಮದ್ ಸಾಬ್, ವಯಸ್ಸು: 46 ವರ್ಷ, ವೃತ್ತಿ:ವ್ಯಾಪಾರ, ವಾಸ:8ನೇ ವಾರ್ಡ್, ಬಂಗೇರಗೇರಿ ಹರಪನಹಳ್ಳಿ ಪಟ್ಟಣ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.
-: ವಿರುದ್ಧ ;-
ಎದುರುದಾರರು.. ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯ ಹರಪನಹಳ್ಳಿ.
ಸಾರ್ವಜನಿಕ ಪ್ರಕಟಣೆ.
ಅರ್ಜಿದಾರನ ತಾಯಿಯಾದ ರಹಮತ್ ಬಿ ಗಂಡ ಭಂಗಿ ರಾಜ ಅಹಮದ್ ಸಾಬ್ ಇವರು ದಿನಾಂಕ 22.04.1974 ರಂದು ಹರಪನಹಳ್ಳಿ ಪಟ್ಟಣದ 8ನೇ ವಾರ್ಡ್ ಬಂಗೇರಗೇರಿಯಲ್ಲಿ ಅರ್ಜಿದಾರನ ಸ್ವ-ಗೃಹದಲ್ಲಿ ಮರಣ ಹೊಂದಿದ್ದು,ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ. ಘನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ: 19.04.2025 ರಂದು ವಿಚಾರಣೆಗೆ ಇರುತ್ತದೆ. ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟವರು ಯಾರಾದರೂ ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ ಅಂತಹವರು ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲಿ ಅಥವಾ ಅವರ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸುತ್ತದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು,
ಶ್ರೀಮತಿ ಜೆ.ಸೀಮಾ
ದಿನಾಂಕ 03.04.2025 ಸ್ಥಳ : ಹರಪನಹಳ್ಳಿ

CHANGE OF NAME
I, Abdulkhadarsab S/o Mohammed Yusuf Kurubagatti, have changed my Son's name **ABDUL LATEEF** to **ABDUL LATEEF KURUBAGATTI,** Father's Name **ABDULKHADAR** to **ABDULKHADARSAB KURUBAGATTI** and Mother's Name **SALMA BEGAM** to **SALMABEGUM** vide affidevit sworn before notary Venkatesh S.Naik, Dharwad on 29-03-2025

ಸಾರ್ವಜನಿಕ ನೋಟೀಸು
ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಈ ಮೂಲಕ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ:-
ಗದಗ ಜಿಲ್ಲಾ ಗದಗ ತಾಲೂಕ, ಬೆಟಗೇರಿ ಹೋಬಳಿಯು, ಹೊಂಬಳ ಗ್ರಾಮದ ಹದ್ದಿನಲ್ಲಿರುವ ಒಣ ಬೇಸಾಯದ ಜಮೀನು ಇದರ ರಿ.ಸ. ನಂ:943/1,ಕ್ಷೇತ್ರ 04ಎಕರೆ 00ಗುಂಟೆ ಹಾಗೂ ಸದರ ಗ್ರಾಮದ ರಿ.ಸ. ನಂ: 943/2 ಕ್ಷೇತ್ರ: 04ಎಕರೆ 00ಗುಂಟೆ ಈ ಕೃಷಿ ಜಮೀನುಗಳು ಮಾರಾಟ ಮಾಡುವುದಿದ್ದು, ಕಾನೂನು ಚೌಕಟ್ಟಿನಡಿಯಲ್ಲಿ ಇದರಿಂದ ಬಾದಿತರಾಗುವವರು ಸೂಕ್ತ ದಾಖಲೆಗಳೊಂದಿಗೆ ಏಳು (7) ದಿನಗಳೊಳಗಾಗಿ ಈ ಕೆಳಗೆ ನಮೂದಿಸಿದ ವಿಳಾಸಕ್ಕೆ ಸಂಪರ್ಕಿಸುವುದು, ಏಳು ದಿನಗಳ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.
ಎಸ್.ಪಿ.ಮಸೂತಿ, ವಕೀಲರು, ದಾಮೋದರ ಕಾಂಪ್ಲೆಕ್ಸ್, ಐಸ್
ಧಾರವಾಡ ಗೇಟ್ ಹತ್ತಿರ, ಧಾರವಾಡ
03/04/2025 ಸೆಲ್: 89042 63060

ಸಮಾಚಾರ ಸಣ್ಣದಲ್ಲ

ಎಲ್ಲ ಅಭಿಯಂತರರಿಗೆ ಮಾದರಿ ಆದರ್ಶ ವ್ಯಕ್ತಿ

ಧಾರವಾಡ: ವೃತ್ತಿ ಜೀವನದ ಜೊತೆಗೆ ಎಲ್ಲ ಅಭಿಯಂತರರ ಜತೆಗೆ ಉತ್ತಮ ಸ್ನೇಹಪರತೆ ಇಟ್ಟುಕೊಂಡು ಎಲ್ಲ ಅಭಿಯಂತರರಿಗೆ ಮಾರ್ಗದರ್ಶನ ಮಾಡುತ್ತಾ ಎಲ್ಲರ ಮನಗೆದ್ದು ಮಾದರಿಯಾದ ವ್ಯಕ್ತಿ ಪ್ರೊ.ವಸುದೇವ ಪರ್ವತಿ ಎಂದು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್, ಲೋಕಲ್ ಸೆಂಟರ್, ಧಾರವಾಡದ ಅಧ್ಯಕ್ಷ ಸುನೀಲ ಬಾಗೇವಾಡಿ ಹೇಳಿದರು. ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್, ಲೋಕಲ್ ಸೆಂಟರ್, ಧಾರ ವಾಡದ ವತಿಯಿಂದ ಎಸ್.ಡಿ.ಎಮ್ ಎಂಜಿನಿಯರ್ ಕಾಲೇಜಿನಲ್ಲಿ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ ನಿವೃತ್ತಿಯಾದ ಪ್ರೊ.ವಸುದೇವ ಪರ್ವತಿ ಅವರನ್ನು ಸನ್ಮಾನಿಸಿ ಮಾತನಾಡಿ, ಸರಳತೆ, ಸಹಕಾರ, ಸ್ನೇಹಪರ ತೆಯಿಂದ ಎಲ್ಲರಿಗೂ ಮತ್ತು ವಿದ್ಯಾರ್ಥಿಗಳಿಗೆ ಮೆಚ್ಚಿನ ಮಾರ್ಗದರ್ಶಕರಾಗಿದ್ದರು ಎಂದು ಹೇಳಿದರು. ಪ್ರೊ.ವಾಸುದೇವ ಪರ್ವತಿ ಸನ್ಮಾನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಎಂಜಿನಿಯರ್‌ಗಳಾದ ಕಬೀರ ನದಾಫ್, ಇಂ.ಪ್ರಕಾಶ ಏಕಂಚಿ, ಬಸವರಾಜ ಲಂಗೋಟಿ, ನಾಗರಾಜ ದೇಸಾಯಿ ಹಾಗೂ ವಿಜಯ ತೋಟಿಗೇರ ಇದ್ದರು.

ತೆರಿಗೆ ಪಾವತಿಗೆ ಗಡುವು

ಗದಗ: ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮಾಲೀಕರುಗಳಿಗೆ, ಅನುಬೋಗದಾರರಿಗೆ ತಿಳಿಸುವುದೇನೆಂದರೆ 2025-26 ನೇ ಸಾಲಿಗೆ ಈ ಕೆಳಗಿನಂತೆ ಆಸ್ತಿ ತೆರಿಗೆ ದರಗಳನ್ನು ವಸತಿ ಕಟ್ಟಡಗಳಿಗೆ ಶೇ.3.5%, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಶೇ.4.5%, ಖಾಲಿ ನಿವೇಶನಗಳಿಗೆ ಶೇ.4% ರಂತೆ ಪರಿಷ್ಕರಣೆ ಮಾಡಿದೆ. ಏ.1ರಿಂದ ಏ.30 ರವರೆಗೆ ಶೇ 5% ರಷ್ಟು ರಿಯಾಯತಿ, ದಂಡ ರಹಿತ ಪಾವತಿ ಮೇ.1ರಿಂದ ಜೂನ್.30 ರವರೆಗೆ, ದಿ.1-7-2025 ರಿಂದ ಆಸ್ತಿ ತೆರಿಗೆ ಮೇಲೆ ಪ್ರತಿ ತಿಂಗಳು ಶೇ.2% ರಷ್ಟು ದಂಡ ವಿಧಿಸಲಾಗುವುದು. ಸಾರ್ವಜನಿಕರು ಸಕಾಲದಲ್ಲಿ ಆಸ್ತಿ ತೆರಿಗೆ ಪಾವತಿಸಿ ಗದಗ-ಬೆಟಗೇರಿ ಅಭಿವೃದ್ಧಿಗೆ ಸಹಕರಿಸಬೇಕೆಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡ್ಡಿ ವಸೂಲಿದಾರರ ವಿರುದ್ಧ ಪ್ರಕರಣ

ಗದಗ: ಕಾನೂನು ಬಾಹಿರವಾಗಿ ಹೆಚ್ಚಿನ ಬಡ್ಡಿ ವಿಧಿಸಿ ಮತ್ತು ಹಿಂಸೆ ನೀಡಿ ವಸೂಲಿ ಮಾಡುವವರ ವಿರುದ್ಧ ಗದಗ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿ, ಪ್ರಕರಣ ತನಿಖೆ ಕೈಗೊಂಡಿದೆ. ಈ ಪ್ರಕರಣಗಳಲ್ಲಿ ಇನ್ನೂ ಕೆಲವು ಸಾಕ್ಷಿದಾರರು ಮುಂದೆ ಬಂದು ಘಟನೆ ಕುರಿತು ಮಾಹಿತಿ ನೀಡುವುದು ಅವಶ್ಯಕವಿದ್ದು, ಕಾರಣ ವಶಪಡಿಸಿಕೊಂಡ ದಾಖಲೆಗಳೊಂದಿಗೆ ತನಿಖಾಧಿ ಕಾರಿಗಳು ಏ.5 ರಂದು ಸಂಭಾಪೂರ ರಸ್ತೆಯ ಪೊಲೀಸ ಭವನದಲ್ಲಿ ಮುಂಜಾನೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಹಾಜರಿ ಇರುವುದರಿಂದ ಸಾರ್ವಜನಿಕರು ಮುಂದೆ ಬಂದು ಈ ಪ್ರಕರಣಗಳಲ್ಲಿ ಹೆಚ್ಚಿನ ಮಾಹಿತಿ ನೀಡಬೇಕೆಂದು ಗದಗ ಜಿಲ್ಲೆ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವರ ದಾಸಿಮಯ್ಯ ಜಯಂತಿ ಆಚರಣೆ

ನರಗುಂದ: ಇಲ್ಲಿನ ತಹಸೀಲ್ದಾರ ಕಾರ್ಯಾಲಯದಲ್ಲಿ ದೇವರ ದಾಸಿಮಯ್ಯ ಜಯಂತಿಯನ್ನು ಸಮಾಜ ಬಾಂಧವರು ಹಾಗೂ ತಹಸೀಲ್ದಾರ ಶ್ರೀಶೈಲ ತಳವಾರ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ರಾಮಕೃಷ್ಣ ಗೊಂಬೆ, ಗೋವಿಂದ ನಿರಳಿಕಾರ, ಮುತ್ತಪ್ಪ ಯಡಹಳ್ಳಿ, ಶಿವಪ್ಪ ಮುಂಡಾಸದ, ರವಿ ಚಿಂತಾಲ, ಹನಮಂತ ಪೂಜಾರ, ಶಿವರುದ್ರಪ್ಪ ದಿಬ್ಬದಮನಿ, ಬಿ.ವಿ.ಹಲಗತ್ತಿ, ಎಸ್.ಐ.ಹಳಕಟ್ಟಿ, ಚಂದ್ರಶೇಖರ, ಸಿದ್ದೇಶ ಹೂವಿನವರ, ವಿ.ಎಸ್.ಯಡಹಳ್ಳಿ, ಪ್ರಭು ಯಡಹಳ್ಳಿ, ಪುಂಡಲಿಕ ಚಿಂತಾಲ,ಪುನೀತ ಯಡಹಳ್ಳಿ ಹಾಗೂ ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

ನಾಳೆಯಿಂದ ಬೇಸಿಗೆ ತರಬೇತಿ ಶಿಬಿರ

ಗದಗ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣ ಗದಗದಲ್ಲಿ ಬೇಸಿಗೆ ತರಬೇತಿ ಶಿಬಿರವನ್ನು ಏ.5 ರಿಂದ ಮೇ 31 ರವರೆಗೆ ಆಯೋಜಿಸಲಾಗಿದೆ. ವಯೋಮಿತಿ 10 ರಿಂದ 18 ವರ್ಷದೊಳಗಿನವರಬೇಕು. ಕ್ರೀಡೆಗಳು : ಈಜು, ಬ್ಯಾಡ್ಮಿಂಟನ್, ಫುಟ್‌ಬಾಲ, ಸ್ಕೇಟಿಂಗ, ಜಿಮ್, ಕ್ರಿಕೆಟ್, ಹಾಕಿ, ಸೈಕ್ಲಿಂಗ, ಕುಸ್ತಿ, ಈಜು: ಬೆಳಗ್ಗೆ 08 ರಿಂದ 10 ರವರೆಗೆ ಸಂಜೆ 4 ರಿಂದ 6 ರವರೆಗೆ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಈಜುಕೊಳ ಮತ್ತು ನಂದೀಶ್ವರ ನಗರ ಈಜುಕೊಳ ಕಳಸಾಪುರ ರಸ್ತೆ ಗದಗದಲ್ಲಿ. ಹೆಚ್ಚಿನ ಮಾಹಿತಿಗಾಗಿ ಶಿವಾನಂದ ಈಜು ಫೋನ್ ನಂ.7338689385 ಅವರನ್ನು ಸಂಪರ್ಕಿಸಬಹುದಾಗಿದೆ.

{ ಬಸನಗೌಡ ಪಾಟೀಲ್ ಯತ್ನಾಳ್ } ಶಾಸಕ

ಯಡಿಯೂರಪ್ಪ ತನ್ನ ಮಗನ ರಕ್ಷಣೆಗೋಸ್ಕರ ಬಿಜೆಪಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ ಅಷ್ಟೇ. ತಾವು ಸಾಯುವುದಕ್ಕೂ ಮುನ್ನ ವಿಜಯೇಂದ್ರರನ್ನು ಮುಖ್ಯಮಂತ್ರಿಯಾಗಿ ನೋಡಬೇಕು. ಇನ್ನಷ್ಟು ಲೂಟಿ ಮಾಡಬೇಕು ಎನ್ನುವ ಆಸೆ ಬಿವೈವೈ ಅವರದು. ಈಗಾಗಲೇ ಮಾರಿಷಸ್, ದುಬೈನಲ್ಲಿ ಇವರ ಆಸ್ತಿ ಇದೆ.

ಧಾರವಾಡದಲ್ಲಿ 34 ಡಿಗ್ರಿ | ಬಿಸಿಲಿಗೆ ಬಳಲುತ್ತಿವೆ ಟಗರು, ಕುರಿ, ಮೇಕೆ

ಬಿಸಿಲ ತಾಪಕ್ಕೆ ಸಾಕು ಪ್ರಾಣಿ ತತ್ತರ

ವಸೀಮ ಭಾವಿಮನಿ ಧಾರವಾಡ:

ರಾಜ್ಯದಲ್ಲಿ ಬಿಸಿಲಿನ ಅಬ್ಬರ ಜೋರಾಗಿದೆ. ಮಲೆನಾಡಿನಂತಿರುವ ಧಾರವಾಡ ಜಿಲ್ಲೆಯಲ್ಲಿಯೂ ಬಿಸಿಲಿನ ತಾಪ ನೆತ್ತಿಗೆ ಏರುತ್ತಿದೆ. ಜನರು ಹೈರಾಣಾಗುವುದರ ಜತೆಗೆ, ಸಾಕುಪ್ರಾಣಿಗಳಾದ ಆಡು-ಮೇಕೆ, ಟಗರಿನ ಮರಿಗಳು ಬಿಸಿಲಿನ ಹೊಡೆತಕ್ಕೆ ತೊಂದರೆ ಅನುಭವಿಸುತ್ತಿವೆ.

ಧಾರವಾಡ ಜಿಲ್ಲೆಯಲ್ಲಿ ಈ ಬಾರಿ 34 ರಷ್ಟು ಬಿಸಿಲಿನ ತಾಪ ಇದೆ. ಜನರು ತಂಪು ಪಾನೀಯ ಮೊರೆ ಹೋದರೆ ಭೂಮಿಯಲ್ಲಿರುವ ಕುರಿಗಾಯಿಗಳ ಸಾಕು ಪ್ರಾಣಿಗಳು, ಬಿಸಿಲಿನ ಹೊಡೆತ ತಪ್ಪಿಸಿಕೊಳ್ಳಲು ಗಿಡಗಳ ಕೆಳಗೆ ಆಶ್ರಯ ಪಡೆಯುವಂತಾಗಿದೆ.

ಬಿಸಿಲಿಗೆ ಆಡಿನ ಮರಿಗಳಿಗೆ ಹಾಗೂ ಮೇಕೆ ಟಗರಿನ ಮರಿಗಳಿಗೆ ನಿರ್ಜಲೀಕರಣ ಉಂಟಾಗುತ್ತದೆ. ಅದಕ್ಕಾಗಿ ಕುರಿಗಾಯಿಗಳು ಹೆಚ್ಚು ಹೆಚ್ಚು ಸಾಕು ಪ್ರಾಣಿಗಳಿಗೆ ನೀರು ಕುಡಿಸಬೇಕು. ಕೆಲವೊಂದು ಬಾರಿ ಯಾವುದೇ ಔಷಧಿಯನ್ನು ಮುಂಜಾಗ್ರತೆ ಕ್ರಮ ವಹಿಸಿ ಕೊಡುತ್ತಾರೆ. ಇಂತಹ ಔಷಧಿಗಳು ಬೇಧಿಯನ್ನು ತಡೆಯುತ್ತದೆ. ಹಾಗೂ ಕಾಲರಾ ಉಂಟುಮಾಡುವ ಬ್ಯಾಕ್ಟೀರಿಯಾಗಳಾದ ಕೆಂಫೈಲೋ ಬ್ಯಾಕ್ಟೀರಿಯಾ ಹಾಗೂ ಇಕೋಲಿ ಬ್ಯಾಕ್ಟೀರಿಯಾವನ್ನು ತಡೆಯಬಹುದು.
-ರವಿ ಸಾಲಿಗೌಡರ, ಪಶುಸಂಗೋಪನೆ ಇಲಾಖೆ ಉಪನಿರ್ದೇಶಕ

ಬಿಸಿಲಿನ ತಾಪ ಹೆಚ್ಚಾದ ಕಾರಣ ಊರ ಹೊರಗಿನ ತೋಟದ ಮನೆಯಲ್ಲಿರುವ 4 ತಿಂಗಳ ಆಡಿನ ಮರಿಗಳು

ಆರೈಕೆಗೆ ಮನೆ ವೈದ್ಯರಾದ ಮಾಲೀಕರು

ಅತಿಯಾದ ಬಿಸಿಲಿನಿಂದ ಆಡಿನ ಮರಿಗಳು ಹಾಗೂ ಟಗರಿನ ಮರಿಗಳು, ಜ್ವರ, ಬೇಧಿಯಿಂದ ಬಳಲುತ್ತವೆ. ಅವುಗಳಿಗೆ, ತಕ್ಷಣ ಇಂಜೆಕ್ಷನ್ ಹಾಗೂ ಔಷಧ ಹಾಕುವುದರ ಮೂಲಕ ಆರೈಕೆ ಮಾಡುತ್ತಾರೆ. ಧಾರವಾಡ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಾಗಿಯೇ ಇದ್ದು, ಆಡು, ಮೇಕೆ ಹಾಗೂ ಟಗರನ್ನು ಸಾಕಿರುವವರಿಗೆ ಹೊಲಗಳಲ್ಲಿ ಸಾಕು ಪ್ರಾಣಿಗಳನ್ನು ಬಿಡುವುದು ಸ್ವಲ್ಪಮಟ್ಟಿಗೆ ತೊಂದರೆ ಆಗುತ್ತದೆ.



ಬಿಸಿಲಿನ ಹೊಡೆತಕ್ಕೆ ಮರದ ಕೆಳಗೆ ಆಶ್ರಯ ಪಡೆದಿರುವ ಆಡು- ಕುರಿ ಹಾಗೂ ಟಗರಿನ ಮರಿಗಳು

4 ತಿಂಗಳ ಒಳಗಿನ ಮರಿಗಳಿಗೆ ಆರೈಕೆ ಅತೀ ಮುಖ್ಯ

ಬಿಸಿಲಿನ ಬೇಗೆಯಿಂದ ಆಡಿನಮರಿಗಳ ಆರೋಗ್ಯದಲ್ಲಿ ಏರುಪೇರಾಗಿದೆ ಎಂದು 4 ತಿಂಗಳ ಮರಿಗಳನ್ನು ಮಾಲೀಕರು, ಮನೆಗಳಲ್ಲಿ, ಊರ ಹೊರಗಿನ ತೋಟದ ಮನೆ ಶೆಡ್‌ಗಳಲ್ಲಿ ಬಿಡುತ್ತಿದ್ದಾರೆ.

ಕಳೆದ ಬಾರಿಗಿಂತ ಈ ಬಾರಿ ಬಿಸಿಲು ಬಹಳಷ್ಟಿದೆ. ನಾವು ಹೆಚ್ಚಾಗಿ ಭೂಮಿಯಲ್ಲಿಯೇ ರೈತರ ಹೊಲದಲ್ಲಿ ಇರುತ್ತೇವೆ. ನಾವು ಸಾಕಿರುವ ಆಡು- ಟಗರು, ಮೇಕೆಗಳಿಗೆ ಬಿಸಿಲಿನ ಬೇಗೆಯಲ್ಲಿ ಬಳಲುತ್ತಿವೆ. ಮತ್ತು ಅವುಗಳ ಆರೋಗ್ಯದಲ್ಲಿ ಏರುಪೇರು ಆದರೆ, ನಾವೇ ಔಷಧಿಕೊಟ್ಟು ಆರೈಕೆ ಮಾಡುತ್ತೇವೆ.
-ಮಲ್ಲಪ್ಪ ಕಂಬಳಿ, ಗ್ರಾಮಸ್ಥ ಹಾರೋಬೆಳವಡಿ

ನರೇಗಾ ಕಾಮಗಾರಿಗಳು: ಸಿಇಒ ಭರತ್ ಪರಿಶೀಲನೆ

ಕಾಮಗಾರಿ ಸ್ಥಳಕ್ಕೆ ಜಿಪಂ ಸಿಇಒ ಭರತ್.ಎಸ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಗದಗ: ತಾಲೂಕಿನ ಲಕ್ಕುಂಡಿ ಗ್ರಾಪಂ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಸಮುದಾಯ ಕಾಮಗಾರಿ ಸ್ಥಳಕ್ಕೆ ಜಿಪಂ ಸಿಇಒ ಭರತ್.ಎಸ್ ಭೇಟಿ ನೀಡಿ ಕಾಮಗಾರಿ ಗುಣಮಟ್ಟ, ಅಳತೆ, ಯೋಜನೆ ಉದ್ದೇಶ ಕುರಿತು ಕೂಲಿಕಾರರೊಂದಿಗೆ ಸಮಾಲೋಚನೆ ನಡೆಸಿ ನಂತರ ಕಾಮಗಾರಿ ಕಡತ, ನ್ಯಾಶನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಮ್ (ಘೆಖಖಖ) ಹಾಜರಾತಿ ಪರಿಶೀಲನೆ ನಡೆಸಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಹಾಗೂ ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ನರೇಗಾ ಕೂಲಿಕಾರರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾಯಕ ಬಂಧುಗಳಿಗೆ ಹಾಗೂ ಕೂಲಿಕಾರರಿಗೆ ಪ್ರಥಮ ಚಿಕಿತ್ಸೆ ಪೆಟ್ಟಿಗೆ ವಿತರಿಸುವ ಮೂಲಕ ಚಾಲನೆ ನೀಡಿದರು. ಮನರೇಗಾ ಯೋಜನೆಯ ವಲಸೆ, ಉದ್ಯೋಗ ಖಾತ್ರಿ ದುಡಿಮೆ ಖಾತ್ರಿ ವಿಶೇಷ ಅಭಿಯಾನದಡಿ ಪ್ರಗತಿಯಲ್ಲಿದ್ದ ಸಮುದಾಯ ಕಂದಕ ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಮಾತನಾಡಿದರು. ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಯ್ಯ ಕೊರವನವರ ಮಾತನಾಡಿ, ನರೇಗಾ ಯೋಜನೆಯ ವಲಸೆ, ಉದ್ಯೋಗ ಖಾತ್ರಿ/ಉದ್ಯೋಗ ಖಾತ್ರಿ ದುಡಿಮೆ ಖಾತ್ರಿ ಎಂಬ ಶೀರ್ಷಿಕೆಯಡಿ ಏ.1 ರಿಂದ ನರೇಗಾ ಯೋಜನೆಯಡಿ ಗ್ರಾಪಂ ವ್ಯಾಪ್ತಿಯ ಪ್ರತಿಯೊಬ್ಬ ನೋಂದಾಯಿತ ಕೂಲಿಕಾರರಿಗೆ ನಿರಂತರವಾಗಿ 100 ದಿನಗಳ ಕೆಲಸ ಪಡೆಯುವ ಅವಕಾಶ ಹೊಂದಿದ್ದು ನಮೂನೆ -6 ರಲ್ಲಿ ಗ್ರಾಪಂಗೆ ಅರ್ಜಿ ಸಲ್ಲಿಸಿ ಕೆಲಸ ಪಡೆಯಬಹುದು ಎಂದರು. ತಾಂತ್ರಿಕ ಸಂಯೋಜಕ ಪ್ರವೀಣ ಸೂಡಿ, ತಾಲೂಕು ಐ.ಇ.ಸಿ ಸಂಯೋಜಕ ವಿರೇಶ, ತಾಂತ್ರಿಕ ಸಹಾಯಕ ಅಜಯ ಅಬ್ಬಿಗೇರಿ, ನರೇಗಾ ಸಿಬ್ಬಂದಿ ಹಾಜರಿದ್ದರು.

ಕರ್ನಾಟಕ ಬ್ಯಾಂಕ್‌ನಿಂದ ಮಕ್ಕಳಿಗೆ ಬಸ್ ಕೊಡುಗೆ

ಧಾರವಾಡ: ಕರ್ನಾಟಕದ ಹೆಮ್ಮೆಯ 100 ವರ್ಷ ಸಾರ್ವಜನಿಕರ ಸೇವೆಯಲ್ಲಿ ನಿರತ, ರಾಷ್ಟ್ರೀಕೃತ ಪ್ರವರ್ತಿತ ಬ್ಯಾಂಕ್ ಕರ್ನಾಟಕ ಬ್ಯಾಂಕ ತಮ್ಮ ಸಿ.ಎಸ್.ಆರ್(ಇಖ್ಖ) ಅನುದಾನ ನಿಧಿಯಡಿ 30 ಲಕ್ಷದ ಬಸ್ ದೇಣಿಗೆ ಕೊಟ್ಟಿದ್ದಾರೆ.

ಹಲವಾರು ಶಾಲೆಗಳಿಗೆ ಈ ಬಸ್ ವ್ಯವಸ್ಥೆ ತುಂಬಾ ಅನುಕೂಲಕರವಾಲಿದೆ . ಕರ್ನಾಟಕ ಬ್ಯಾಂಕ್ ಜತೆ ಒಳ್ಳೆಯ ಬಾಂಧವ್ಯ ಹೊಂದಿದ ಕಾರಣ ಸಿಎಸ್.ಆರ್ (ಇಖ್ಖ)ಅನುದಾನದಡಿ, ಮಕ್ಕಳಿಗೆ ವಿಶೇಷ ಉಡುಗೊರೆ ಈ ವಾಹನವಾಗಿದ್ದು, ಅದಕ್ಕಾಗಿ ಕರ್ನಾಟಕ ಬ್ಯಾಂಕಗೆ ಅಭಿನಂದಿಸಿದರು.
-ಈರೇಶ ಅಂಚಟಗೇರಿ, ಮಾಜಿ ಮಹಾಪೌರರು

ಕಳೆದ ಹಲವಾರು ವರ್ಷಗಳಿಂದ ಕರ್ನಾಟಕ ಬ್ಯಾಂಕನ ಅಗ್ರ ಗ್ರಾಹಕರಾದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾಕ್ಕೆ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ಬಸ್ಸನ್ನು ಉಡುಗೊರೆಯಾಗಿ ನೀಡಿದರು.



ರಾಷ್ಟ್ರೀಕೃತ ಪ್ರವರ್ತಿತ ಬ್ಯಾಂಕ್ ಕರ್ನಾಟಕ ಬ್ಯಾಂಕ ಸಿ.ಎಸ್.ಆರ್ ಅನುದಾನ ನಿಧಿಯಡಿ 30 ಲಕ್ಷದ ಬಸ್ ದೇಣಿಗೆ ನೀಡಿದರು.

ಹೊಸ ಬಸ್‌ನ್ನು ಕರ್ನಾಟಕ ಬ್ಯಾಂಕನ ವ್ಯವಸ್ಥಾಪಕ ನಿರ್ದೇಶಕರು ಸಂಸ್ಥೆ ಅಧ್ಯಕ್ಷರು ಕಾರ್ಯಾಧ್ಯಕ್ಷರಿಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮಹಾಪೌರರು ಈರೇಶ ಅಂಚಟಗೇರಿ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಆಡಳಿತ ಮಂಡಳಿ ಸತತ ಪ್ರಯತ್ನ ಹಾಗು ಕೋರಿಕೆ ಮೇರೆಗೆ ಸಂಸ್ಥೆಗೆ ಬಸ್ ಉಡುಗೊರೆಯಾಗಿ ಬರಲು ಕಾರಣವಾಗಿದೆ.

ಈ ಸಂದರ್ಭದಲ್ಲಿ ಮಾಜಿಮಹಾಪೌರರು ಸಂಸ್ಥೆ ಕಾರ್ಯಾಧ್ಯಕ್ಷರಾದ ಈರೇಶ ಅಂಚಟಗೇರಿ, ಸಭಾದ ಅಧ್ಯಕ್ಷರಾದ ರಾಘವೇಂದ್ರ ತವನಪ್ಪನವರ, ಕರ್ನಾಟಕ ಬ್ಯಾಕ ವ್ಯವಸ್ಥಾಪಕ ನಿರ್ದೇಶಕರಾದ ವಿಶ್ವನಾಥ ಎಸ್.ಆರ್, ಬ್ಯಾಂಕ್ ಅಧಿಕಾರಿಗಳು ಕಿರಣ ಕುಲಕರ್ಣಿ ಮಂಜುನಾಥ ಅವಾರಿ, ಶ್ರದ್ಧಾ ಲಿಮಯೆ, ಬಸವರಾಜ ತಾಳಿಕೋಟಿ, ಬಸವರಾಜ ವಸ್ತ್ರದ, ಅಶೋಕ ಶೆಟ್ಟರ, ಶ್ರೀಶೈಲ ಯಕ್ಕುಂಡಿಮಠ, ಉಮಾ ಚವ್ಹಾಣ, ರಾಧಾಕೃಷ್ಣ, ಹಾಗೂ ಸಂಸ್ಥೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಕಾರ್ಖಾನೆ ಕಾಮಗಾರಿ ನಿಲ್ಲಿಸಲು ಮನವಿ

ಕರ್ನಾಟಕ ರೈತ ಸೇನೆ ಮುಖಂಡರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಧಾರವಾಡ: ತಾಲೂಕಿನ ಯಾದವಾಡ- ಪುಡಕಲಕಟ್ಟಿ ಗ್ರಾಮದ ಬಳಿ ಕಾರ್ಖಾನೆ ಸ್ಥಾಪನೆ ಕಾಮಗಾರಿಯನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರೈತ ಸೇನೆ ಮುಖಂಡರು ಬುಧವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ರೈತರ ಕೃಷಿ ಜಮೀನು ಪಡೆದು ಗ್ರಾಮ ಪಂಚಾಯಿತಿ ಅನುಮತಿ ಇಲ್ಲದೇ ಕಾರ್ಖಾನೆ ನಿರ್ಮಿಸಲಾಗುತ್ತಿದೆ. ನೈಸರ್ಗಿಕವಾಗಿ ಹರಿಯುತ್ತಿದ್ದ ಹಳ್ಳದ ಮಾರ್ಗ ಬದಲಾವಣೆ ಮಾಡಲಾಗಿದೆ. ಇದಕ್ಕೆ ಅಧಿಕಾರಿಗಳು ಯಾವ ರೀತಿ ಅನುಮತಿ ನೀಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಮನವಿಯಲ್ಲಿ ತಿಳಿಸಿದರು. ಕೈಗಾರಿಕಾ ನೀತಿ, ನಿಯಮಗಳನ್ನು ಉಲ್ಲಂಘಿಸಿ ಕಾರ್ಖಾನೆ ನಿರ್ಮಾಣ ಕಾಮಗಾರಿ ಕೈಗೊಳ್ಳುತ್ತಿರುವುದು ಗೊತ್ತಾಗಿದೆ. ಸ್ಥಳೀಯ ರೈತರು ಈ ಬಗ್ಗೆ ಹೋರಾಟ ನಡೆಸಿದ್ದಾರೆ. ಹೀಗಾಗಿ ರೈತರ ತಕರಾರನ್ನು ಪರಿಗಣಿಸಿ ಕೂಡಲೇ ಕಾಮಗಾರಿ ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ ಧಾರವಾಡ ಜಿಲ್ಲೆ ಮಾತ್ರವಲ್ಲ ರಾಜ್ಯಾದ್ಯಂತ ಕಾನೂನು ಬಾಹೀರ ಬದಲಾವಣೆಗಳು ನಡೆದರೂ ರೈತರಿಗೆ ಅನುಕೂಲ ಮಾಡಿಕೊಡಬೇಕು. ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಆರಂಭಿಸಲಾಗುವುದು. ಇದಕ್ಕೆ ಜಿಲ್ಲಾ ಹಾಗೂ ತಾಲೂಕು ಆಡಳಿತಗಳೇ ಹೊಣೆಯಾಗಬೇಕಾಗಲಿದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರೈತ ಸೇನೆ ರಾಜ್ಯಾಧ್ಯಕ್ಷ ಶಂಕ್ರಪ್ಪ ಅಂಬಲಿ, ಲಕ್ಷಣ ಬಕ್ಕಾಯಿ ಇದ್ದರು.

ವಿವಿಧ ಗ್ರಾಪಂಗಳಿಗೆ ಸಿಇಒ ಭೇಟಿ

ಧಾರವಾಡ: ಕಲಘಟಗಿ ತಾಲೂಕಿನ ಧುಮ್ಮವಾಡ ಗ್ರಾಪಂಗೆ ಜಿಪಂ ಸಿಇಒ ಭುವನೇಶ ಪಾಟೀಲ ಭೇಟಿ ನೀಡಿ, ಧುಮ್ಮವಾಡ ಗ್ರಾಮದ ಕಾಲುವೆ ನಿರ್ಮಾಣ ಕಾಮಗಾರಿ ಪರಿಶೀಲಿಸಿದರು. ಸ್ಥಳದಲ್ಲಿದ್ದ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು.

ನಂತರ ಅವರು ಮಿಶ್ರಿಕೋಟಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, ಮಿಶ್ರಿಕೋಟಿ ಗ್ರಾಮದ ಕಾಲುವೆ ನಿರ್ಮಾಣ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು ಮತ್ತು ಕೂಲಿ ಕಾರ್ಮಿಕರಿಗೆ ಸಿಹಿ ಹಂಚುವುದರ ಮೂಲಕ ಆರ್ಥಿಕ ವರ್ಷವನ್ನು ಸ್ವಾಗತಿಸಿದರು.

ನಂತರ ಮಧ್ಯಾಹ್ನ, ಕಲಘಟಗಿ ತಾಲೂಕಿನ ಸಂಗಮೇಶ್ವರ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಕೂಡಲಗಿ ಗ್ರಾಮದ ಕಾಲುವೆ ನಿರ್ಮಾಣ ಕಾಮಗಾರಿಯನ್ನು ಪರಿವೀಕ್ಷಣೆ ಮಾಡಿದರು.

ವಿವಿಧ ಗ್ರಾಮಗಳಲ್ಲಿನ ಕಾಮಗಾರಿಗಳನ್ನು ಪರಿಶೀಲಿಸಿದ ನಂತರ ಜಿಪಂ ಸಿಇಒ ಭುವನೇಶ ಪಾಟೀಲ ಅವರು, ಕಲಘಟಗಿ ತಾಲೂಕಿನ ಧುಮ್ಮವಾಡ ಗ್ರಾಮ ಪಂಚಾಯಿತಿ ಸಭಾಭವನದಲ್ಲಿ ಪ್ರಗತಿ ಪರಿಶೀಲನೆ ಸಭೆ ಜರುಗಿಸಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅತೀ ಕಡಿಮೆ ಸಾಧನೆ ಮಾಡಿರುವ ಗ್ರಾಪಂ.ಗಳಾದ ದುಮ್ಮವಾಡ, ಗಳಗಿ, ಜಿ. ಬಸವನಕೊಪ್ಪ, ಕುರುವಿನಕೊಪ್ಪ, ದಾಸ್ತಿಕೊಪ್ಪ ಹಾಗೂ ಸಂಗಮೇಶ್ವರ ಗ್ರಾಮ ಪಂಚಾಯಿತಿಯ ಗ್ರಾಮ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ನರೇಗಾ ಯೋಜನೆಯಡಿ ಕಾರ್ಯನಿರ್ವಹಿಸುವ ಟಿಇಎ ಅವರಿಗೆ ಕಾಲಮೀತಿಯಲ್ಲಿ ಅನುಮೋದಿತ ಕ್ರಿಯಾಯೋಜನೆಯ ಅನುಸಾರ ಕಾಮಗಾರಿಗಳನ್ನು ಕೈಗೊಂಡು ಪೂರ್ಣಪ್ರಮಾಣದ ಗುರಿ ಸಾಧಿಸಬೇಕೆಂದು ಸೂಚಿಸಿದರು.

ಧುಮ್ಮವಾಡ ಗ್ರಾಪಂಗೆ ಜಿಪಂ ಸಿಇಒ ಭುವನೇಶ ಪಾಟೀಲ ಭೇಟಿ ನೀಡಿ, ಕಾಲುವೆ ನಿರ್ಮಾಣ ಕಾಮಗಾರಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಪಂ ಉಪಕಾರ್ಯದರ್ಶಿ ಬಿ.ಎಸ್.ಮೂಗನೂರಮಠ, ಕಲಘಟಗಿ ತಾಪಂ ಇಒ, ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ, ಹಾಗೂ ವಿವಿಧ ಗ್ರಾಪಂ ಅಧ್ಯಕ್ಷರು, ಗ್ರಾಮ ಅಭಿವೃದ್ಧಿ ಅಧಿಕಾರಿ, ನರೇಗಾ ಯೋಜನೆಯಡಿ ಕಾರ್ಯನಿರ್ವಹಿಸುವ ಟಿಇಎ, ಟಿಸಿ, ಟಿಐಇಸಿ ಹಾಗೂ ಬಿಎಫ್‌ಟಿ ಸಿಬ್ಬಂದಿ ಹಾಜರಿದ್ದರು.

ಪೊಲೀಸ್ ಅಂದರೆ ಶಿಸ್ತುಬದ್ಧ ಇಲಾಖೆ

ಗದಗ: ಪೊಲೀಸ್ ಅಂದರೆ ಶಿಸ್ತಿನ ಇಲಾಖೆ. ನಮಗೆ ಸಿಕ್ಕಿರುವ ಅವಕಾಶವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸಿದರೆ ಜನಸಾಮಾನ್ಯರಿಗೆ ನ್ಯಾಯ ದೊರಕಿಸಿಕೊಡಬಹುದು. ಗದಗ ಜಿಲ್ಲಾ ಪೊಲೀಸ್ ಅಂದರೆ ಹೆಮ್ಮೆಯ ಪೊಲೀಸ್ ಎಂದಾಗಬೇಕು. ಆ ರೀತಿಯಲ್ಲಿ ನಮ್ಮ ಕಾರ್ಯನಿರ್ವಹಣೆ ಇರಬೇಕು ಎಂದು ನಿವೃತ್ತ ಪಿಎಸ್‌ಐ ಎಚ್.ಎಚ್.ನೀಲಗುಂದ ಹೇಳಿದರು.

ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ತಮ್ಮ ಪ್ರಾಣವನ್ನೂ ಲೆಕ್ಕಿಸದೇ ಕರ್ತವ್ಯ ನಿರ್ವಹಿಸುತ್ತಾರೆ. ಅಪರಾಧ ತಡೆಗಟ್ಟಲು ಹಾಗೂ ಅಪರಾಧ ಪತ್ತೆ ಹಚ್ಚಲು ಬದ್ಧತೆಯಿಂದ ಕೆಲಸ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಇನ್ನೂ ಹೆಚ್ಚಿನ ಸವಲತ್ತುಗಳನ್ನು ಒದಗಿಸಬೇಕು. ಪೊಲೀಸರ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು.
-ಎಚ್.ಎಚ್.ನೀಲಗುಂದ, ನಿವೃತ್ತ ಪಿಎಸ್‌ಐ

ಮಲ್ಲಸಮುದ್ರದ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ, ನಿವೃತ್ತ ಪೊಲೀಸರ ಸೇವಾ ಸ್ಮರಣೆ ಹಾಗೂ ಗೌರವ ಸಮರ್ಪಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಮಾತನಾಡಿ, 1965 ರಿಂದ ಪೊಲೀಸ್ ಧ್ವಜ ದಿನಾಚರಣೆ ಆಚರಿಸಲಾಗುತ್ತಿದ್ದು, ಪ್ರಸಕ್ತ ವರ್ಷವೂ ಏ.2ರಂದು ರಾಜ್ಯದ ಎಲ್ಲ ಪೊಲೀಸ್ ಘಟಕಗಳಲ್ಲಿ ಧ್ವಜ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಉತ್ತಮ ಕಾರ್ಯನಿರ್ವಹಣೆ ತೋರಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಬಿ.ಸಂಕದ ವೇದಿಕೆಯಲ್ಲಿದ್ದರು. ಡಿವೈಎಸ್‌ಪಿ ಪ್ರಭುಗೌಡ ಕಿರೆದಳ್ಳಿ ವಂದಿಸಿದರು. ಎಂ.ಟಿ.ಭಟ್ ಕಾರ್ಯಕ್ರಮ ನಿರೂಪಿಸಿದರು.

ಸಮುದಾಯ ರಕ್ಷರ ಪ್ರಶಸ್ತಿ ಪಡೆದ ಸಾರ್ವಜನಿಕರು: ಶಾಶ್ವತ್ ಹೆಬಸೂರ, ಶಶಿ ಸಂಕಣ್ಣವರ, ಮೇಘರಾಜ ತೋಟಗಂಟಿ, ಡಾ. ಅರುಣಾ ಮಾಲಿ, ಅಭಿನಂದನ್ ಪಾಟೀಲ, ಅಶೋಕ ಹೊಳಕಣ್ಣವರ ಇದ್ದರು.

ಪೊಲೀಸ್ ಧ್ವಜ ದಿನಾಚರಣೆ, ನಿವೃತ್ತ ಪೊಲೀಸರ ಸೇವಾ ಸ್ಮರಣೆ ಹಾಗೂ ಗೌರವ ಸಮರ್ಪಣಾ ಕಾರ್ಯಕ್ರಮ ಜರುಗಿತು.

ಸರಕಾರಿ ಅಭಿಯೋಜಕರು, ಸಮುದಾಯ ರಕ್ಷಕರ ಸೇವೆ ಸ್ಮರಣೀಯ

ಗದಗ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಪ್ರಕರಣಗಳಿಗೆ ಶಿಕ್ಷೆ ಆಗುತ್ತಿದೆ. ಇದರಿಂದಾಗಿ, ತನಿಖೆ ನಡೆಸಿದ ಪೊಲೀಸ್ ಅಧಿಕಾರಿಗಳ ಶ್ರಮಕ್ಕೆ ಬೆಲೆ ಸಿಗುತ್ತಿದೆ. ಈ ನಿಟ್ಟಿನಲ್ಲಿ ಸರಕಾರಿ ಅಭಿಯೋಜಕರ ಕಾರ್ಯ ಸ್ಮರಣೀಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ತಿಳಿಸಿದರು. ಗಂಭೀರ ಪ್ರಕರಣಗಳಲ್ಲಿ ಮಾತ್ರ ಅಪರಾಧಿಗಳಿಗೆ ಮರಣ ದಂಡನೆ ಹಾಗೂ ಜೀವಾವಧಿ ಶಿಕ್ಷೆ ಆಗುತ್ತದೆ. ಸರಕಾರಿ ಅಭಿಯೋಜಕರಾದ ಸವಿತಾ ಎಂ.ಶಿಗ್ಲಿ, ಮಲ್ಲಿಕಾರ್ಜುನಗೌಡ ಎಂ.ದೊಡ್ಡಗೌಡರ, ಅಂಬರೀಷ್ ಹಿರೇಮಠ ಅವರ ಪ್ರಾಮಾಣಿಕ ಸೇವೆಯಿಂದಾಗಿ ಅನೇಕ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಇಂತಹ ಶಿಕ್ಷೆಗಳು ಪ್ರಕಟವಾಗಿದೆ ಎಂದರು.

ಸರಕಾರಿ ಜಾಗ ಅತಿಕ್ರಮಣ

ಹುಬ್ಬಳ್ಳಿ: ದೆಹಲಿಯ ಸಂಸತ್ತಿನಲ್ಲಿ ವಕ್ಫ್ ಮಸೂದೆ ಮಂಡನೆ ಮಾಡಿ ಅವತ್ತೇ ರಾತ್ರಿ ಬಿಲ್ ಪಾಸ್ ಆಗಿದ್ದು, ಸ್ವಾಗತಾರ್ಹ ಎಂದು ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿದರು. ಮಾಧ್ಯಮ ಪ್ರತಿನಿಧಿಯೊಂದಿಗೆ ಮಾತನಾಡಿದ ಅವರು, ವಕ್ಫ್‌ಬೋರ್ಡ್ ಹೆಸರಿನಲ್ಲಿ ಸರಕಾರಿ ಜಾಗ, ರೈತರ, ಮಠಮಾನ್ಯಗಳ , ದಲಿತರ ಜಾಗ, ಎಂಎಲ್ಎ , ಎಂಪಿಗಳ ಜಾಗವನ್ನು ಅತಿಕ್ರಮಣ ಮಾಡಿ ವಕ್ಫ್‌ಬೋರ್ಡ್ ಲೂಟಿ ಮಾಡುತ್ತಿತ್ತು. ಇಂತಹ ವಿರುದ್ಧ ಬಿಲ್ ಪಾಸ್ ಮಾಡಿರುವ ಕೇಂದ್ರ ಬಿಜೆಪಿ ಸರಕಾರಕ್ಕೆ ಅಭಿನಂದನೆ ಇದನ್ನು ವಿರೋಧ ಮಾಡುತ್ತಿರುವವರು ದೇಶದ್ರೋಹಿಗಳು ಬರೀ ಓಟ್ ಬ್ಯಾಂಕ್, ಅಧಿಕಾರ ಒಂದೇ ಅಲ್ಲಾ ದೇಶದ ಜನ ಇದ್ದಾರೆ ಆದರೆ ನೀವು ಲೂಟಿಕೋರರ ಪರವಾಗಿ ನಿಲ್ಲುತ್ತಾರೆ ಕನಿಷ್ಟ ಪ್ರಜ್ಞೆ ಇಲ್ಲ. ಸಂವಿಧಾನದ ಮೀರಿ ಕಾಂಗ್ರೆಸ್ ಕಾನೂನು ತಂದಿದೆ. ನೇಹಾ ಹಿರೇಮಠ ಹತ್ಯೆಯಾಗಿ ಏ.18 ಕ್ಕೆ ಒಂದು ವರ್ಷ ಆಗುತ್ತೆ ಅಂದು ಶ್ರೀರಾಮಸೇನೆ ಒಂದು ಸಾವಿರ ಮಹಿಳೆಯರಿಗೆ ತ್ರಿಶೂಲ ದಿಕ್ಷೆ ನೀಡಲಿದೆ ಮಹಿಳೆಯರು ತಮ್ಮ ಬ್ಯಾಗ್‌ನಲ್ಲಿ ಈ ತ್ರಿಶೂಲ ಇಟ್ಟುಕೊಳ್ಳಲಿ ಎಂದರು. ನೇಹಾ ಹಿರೇಮಠ ಹತ್ಯೆ ಆಗಿ ಇನ್ನೂ ಒಂದು ವರ್ಷ ಆಗಿಲ್ಲ ಈಗ ಮತ್ತೆ ಅಂತಹ ಘಟನೆ ಮರುಕಳಿಸುತ್ತಿವೆ ಇದಕ್ಕೆ ಕಾಂಗ್ರೆಸ್ ಸರಕಾರ, ಪೊಲೀಸ್ ಇಲಾಖೆ, ನ್ಯಾಯಾಲಯ ಕಾರಣ. ಇಂತಹವರನ್ನು ಎನ್‌ಕೌಂಟರ್ ಮಾಡಿ ಬಿಸಾಕಿದರೆ ಈ ರೀತಿಯ ಕೃತ್ಯ ನಡೆಯುವುದಿಲ್ಲಾ ಎಂದರು.

ದೈವಜ್ಞ ಸಮಾಜದಿಂದ ಹೋಮ ಹವನ

ಧಾರವಾಡ: ಧಾರವಾಡ ದೈವಜ್ಞ ಸಮಾಜ ಸೇವಾ ಸಂಘ ಸುವರ್ಣ ಮಹೋತ್ಸವ ಕಾರ್ಯಕ್ರಮ ಏ.5 ಮತ್ತು 6 ರಂದು ನಡೆಯಲಿದೆ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮಗಳು ದೈವಜ್ಞ ಸಮಾಜದ ಸಭಾಭವನದಲ್ಲಿ ನಡೆಯಲಿವೆ. ಅದರ ಅಂಗವಾಗಿ ಶ್ರೀಗಣೇಶ ಲಕ್ಷ ಮೋದಕ ಹವನವು ನಡೆಯಲಿದೆ ಎಂದು ಧಾರವಾಡ ದೈವಜ್ಞ ಸಮಾಜ ಸೇವಾ ಸಂಘ ಅಧ್ಯಕ್ಷ ರವಿ ಗಾಂವಕರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಏ.5 ರಂದು ಮುಂಜಾನೆ 10 ಗಂಟೆಗೆ ಎಸ್.ಡಿ.ಎಮ್ ಎಂಜಿನಿಯರಿಂಗ ಕಾಲೇಜ್ ನಿಂದ ಬೈಕ್ ಮೆರವಣಿಗೆ ಮೂಲಕ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಮಹಾಸ್ವಾಮಿಗಳು, ಶ್ರೀ ಜ್ಞಾನೇಶ್ವಲ ಪೀಠ ದೈವಜ್ಞ ಬ್ರಾಹ್ಮಣ ಮಠ ಶ್ರೀಕ್ಷೇತ್ರ ಕರ್ಕಿ ಅವರನ್ನು ಪೂರ್ಣ ಕುಂಭದಿಂದ ಸ್ವಾಗತಿಸಲಾಗುವುದು.

ಮಧ್ಯಾಹ್ನ 1.30ಕ್ಕೆ ಹವನದ ಪೂರ್ಣಾಹುತಿ ಇರುವುದು. ನಂತರ 12 ಗಂಟೆಗೆ ಶ್ರೀ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಸಭಾ ಕಾರ್ಯಕ್ರಮಗಳು ನಡೆಯಲಿವೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ರವಿ ಶ್ರೀಕಾಂತ ಗಾಂವಕರ ವಹಿಸುವರು ಎಂದರು. ಸಾಯಂಕಾಲ 6 ರಿಂದ ರಿಂದ ಮನರಂಜನೆ ಕಾರ್ಯಕ್ರಮಗಳು ನಡೆಯುವವು. ಭಾನುವಾರ 6ರಂದು ಮುಂಜಾನೆ 10.30 ಗಂಟೆಗೆ ಶ್ರೀ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳು ನಡೆಯುವವು. ರವಿ ಗಾಂವಕರ್, ಅಧ್ಯಕ್ಷರು ದೈವಜ್ಞ ಸೇವಾ ಸಂಘ ಧಾರವಾಡ ಹಾಗೂ ರಾಜ್ಯಾಧ್ಯಕ್ಷರು, ಅಖಿಲ ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘ ಅಧ್ಯಕ್ಷತೆಯನ್ನು ವಹಿಸುವರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಲ್ಲಾದ ಜೋಶಿ, ಬಸವರಾಜ ಹೊರಟ್ಟಿ, ಸಂತೋಷ ಲಾಡ್, ಅರವಿಂದ ಬೆಲ್ಲದ, ವಿನಯ ಕುಲಕರ್ಣಿ, ಪ್ರಸಾದ ಅಬ್ಬಯ್ಯ, ಮಹೇಶ ತೆಂಗಿನಕಾಯಿ, ಗಂಗಾಧರ ಭಟ್, ದೀಪಕ ಚಿಂಚೋರೆ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಈ ಎರಡೂ ದಿನಗಳಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಿದ / ಸಲ್ಲಿಸುತ್ತಿರುವ ದೈವಜ್ಞ ಬಾಂಧವರಿಗೆ ಸನ್ಮಾನಿಸಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಡಾ. ಉದಯ ಶಾಂತಾರಾಮ್ ರಾಯ್ಕರ್, ಗೌರವ ಕಾರ್ಯದರ್ಶಿ ವಸಂತ ದತ್ತಾರಾಮ್ ಅಣವೇಕರ, ಸಹ ಕಾರ್ಯದರ್ಶಿ ಸಾಯಿರಾಮ್ ಕೃಷ್ಣ ವೇರ್ಣೆಕರ, ಕೋಶಾಧ್ಯಕ್ಷ ರಾಮಚಂದ್ರ ನಾಗೇಶ ಶೇಟ, ದೈವಜ್ಞ ಮಹಿಳಾ ಮಂಡಳದ ಅಧ್ಯಕ್ಷೆ ಸುನಿತಾ.ಪಿ.ಗಾಂವಕರ ಇದ್ದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜ ಸೇವಾ ಸಂಘ ಅಧ್ಯಕ್ಷ ರವಿ ಗಾಂವಕರ ಮಾತನಾಡಿದರು.

ನಾಡಿನ ಜನತೆಗೆ ವರುಣನ ಸಿಂಚನ

ಗಜೇಂದ್ರಗಡ: ಬಿಸಿಲಿನ ಬೇಗೆಯಿಂದ ಬೇಸತ್ತಿದ್ದ ಕೋಟೆ ನಾಡಿನ ಜನತೆಗೆ ವರುಣನ ಸಿಂಚನದಿಂದ ತಂಪಿನ ವಾತಾವರಣ ನಿರ್ಮಾಣವಾಗುವುದರ ಜತೆಗೆ ಜನ ಜೀವನ ಅಸ್ತವ್ಯಸ್ತಗೊಂಡಿತು. ಕಳೆದ ಮೂರ್ನಾಲ್ಕು ತಿಂಗಳಿಂದ ಸೂರ್ಯದೇವನ ನರ್ತನದಿಂದಾಗಿ ಪಟ್ಟಣದ ಜನರು ಹೈರಾಣಾಗಿದ್ದರು. ಆದರೆ ಬುಧವಾರ ತಡರಾತ್ರಿ ಅಲ್ಲದೇ ಗುರುವಾರ ಮಧ್ಯಾಹ್ನ ಸುರಿದ ಮಳೆ ದಣಿದ ದೇಹಕ್ಕೆ ಮೇಘರಾಜನ ಸಿಂಚನ ಮುದ ನೀಡುವುದಲ್ಲದೇ, ಜನತೆ ಮಳೆಯಲ್ಲಿ ಮಿಂದೆದ್ದರು. ಕುಣಿದು ಕುಪ್ಪಳಿಸಿದ ಚಿಣ್ಣರು: ರಜೆಯ ಮೂಡ್‌ನಲ್ಲಿದ ಚಿಣ್ಣರಿಗೆ ಮಳೆರಾಯ ಆಗಮಿಸಿರುವುದು ಮತ್ತಷ್ಟು ಉಲ್ಲಾಸಕ್ಕೆ ಕಾರಣವಾಯಿತು. ಹೀಗಾಗಿ ನಾಲಬಂದ ಬಡಾವಣೆಯ ಮಕ್ಕಳು ಮಳೆಯಲ್ಲಿ ಕಣಿದು ಕುಪ್ಪಳಿ, ಕೇಕೆ ಹಾಕುತ್ತಾ, ಹುಯ್ಯೋ, ಹುಯ್ಯೊ ಮಳೆರಾಯ ಎಂದು ಜನಪದ ಹಾಡು ಹಾಡುತ್ತಾ ಸಂಭ್ರಮಿಸಿದರು. ಇನ್ನೊಂದೆಡೆ ಮದುವೆ ಸೀಸನ್ ಭರ್ಜರಿಯಾಗಿದ್ದು, ಬಟ್ಟೆ, ಬಂಗಾರ ಸೇರಿ ಮದುವೆ ಸಾಮಗ್ರಿಗಳನ್ನು ಖರೀದಿಸಲು ಪಟ್ಟಣಕ್ಕೆ ಆಗಮಿಸಿದ್ದ ಜನತೆ ಮಳೆಯಿಂದಾಗಿ ಬಿಸಿಲಿನ ಧಗೆಯಿಂದ ಕೊಂಚ ರಿಲ್ಯಾಕ್ಸ್ ಮೂಡ್‌ಗೆ ಜಾರಿದ್ದರು. ಇನ್ನೊಂದೆಡೆ ಗಬ್ಬೆದ್ದು ನಾರುತ್ತಿದ್ದ ಚರಂಡಿಯಲ್ಲಿ ಮಳೆ ನೀರು ತುಂಬಿ ಹರಿದವು.

ಸಮಾಚಾರ ಸಣ್ಣದಲ್ಲ

ಕೌಟುಂಬಿಕ ಕಲಹ: ಚಾಲಕ ಆತ್ಮಹತ್ಯೆ

ಬೆಳಗಾವಿ: ನನ್ನ ಮಗನ ಸಾವಿಗೆ ಆತನ ಪತ್ನಿ ಹಾಗೂ ಅತ್ತೆಯ ನಿರಂತರ ಕಿರುಕುಳ ಕಾರಣ. ಇದೇ ಕಾರಣಕ್ಕೆ ಬಸ್ ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬುಧವಾರ ಬೆಳಗಾವಿ ಕೆಎಸ್ಆರ್‌ಟಿಸಿ ನೌಕರ ಬಾಲಚಂದ್ರ ಶಿವಪ್ಪ ಹುಕ್ಕೋಜಿ ಆತ್ಮಹತ್ಯೆ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತರ ತಾಯಿ ಯಲ್ಲವ್ವ ಮಗನ ಸಾವಿಗೆ ಆತನ ಪತ್ನಿ ಹಾಗೂ ಅತ್ತೆ ಕಾರಣ ಎಂದು ಪ್ರಕರಣ ದಾಖಲಿಸಿದ್ದಾರೆ. ಮೃತ ನೌಕರ ಬಾಲಚಂದ್ರನಿಗೆ ಆತನ ಪತ್ನಿ ಶಿಲ್ಪಾ ಹಾಗೂ ಅತ್ತೆ ಶೇಖವ್ವ ನಿರಂತರ ಕಿರುಕುಳ ನೀಡುತ್ತಿದ್ದರು. ಅನೇಕ ವರ್ಷಗಳಿಂದ ಕೌಟುಂಬಿಕ ಕಲಹ ಏರ್ಪಟ್ಟಿತ್ತು. ಇದರಿಂದ ಮನನೊಂದು ತನ್ನ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಆತನ ಸಾವಿಗೆ ಸಾರಿಗೆ ಸಂಸ್ಥೆ ಹಿರಿಯ ಅಧಿಕಾರಿಗಳು ಕಾರಣ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

1.13 ಕೋಟಿ ರು. ಚಿನ್ನಾಭರಣ ಕಳ್ಳತನ

ದಾವಣಗೆರೆ: ನ್ಯಾಮತಿ ಬ್ಯಾಂಕ್ ದರೋಡೆ ಕೇಸ್ ಪತ್ತೆ ಹಚ್ಚಿದ್ದ ದಾವಣಗೆರೆ ಪೊಲೀಸರಿಗೆ ಅಂತಹದ್ದೇ ಮತ್ತೊಂದು ಪ್ರಕರಣ ಎದುರಾಗಿದೆ. ನಗರದ ಮಂಡಿ ಪೇಟೆಯಲ್ಲಿರುವ ಚಿನ್ನದಂಗಡಿಯಲ್ಲಿ ಕಳ್ಳಿಯರು ಕೈಚಳಕ ತೋರಿಸಿದ್ದು, ಸುಮಾರು 1.13 ಕೋಟಿ ರು. ಮೌಲ್ಯದ ಚಿನ್ನಾಭರಣವನ್ನು ಕದ್ದು ಪರಾರಿಯಾಗಿದ್ದಾರೆ. ಬುರ್ಖಾ ಧರಿಸಿ ಬಂದಿದ್ದ ಐವರು ಕಳ್ಳಿಯರು ಅಂಗಡಿಗೆ ಬೆಳ್ಳಿ ಲೋಟ ಖರೀದಿಸುವ ನೆಪದಲ್ಲಿ ಬಂದಿದ್ದರು. ಈ ವೇಳೆ, ಅಂಗಡಿಯ ಕೆಲಸದವರ ಗಮನ ಬೇರೆಡೆ ಸೆಳೆದು, 1 ಕೆಜಿ 400 ಗ್ರಾಂ ಬಂಗಾರದ ಆಭರಣಗಳಿದ್ದ ಬಾಕ್ಸ್ ಕದ್ದು ಪರಾರಿಯಾಗಿದ್ದಾರೆ. ಕಳ್ಳಿಯರ ಕೈಚಳಕ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಬಾಕ್ಸ್‌ನಲ್ಲಿ ಕಿವಿ ಓಲೆ, ಜುಮುಕಿ ಹಾಗೂ ಬೆಲೆಬಾಳುವ ಆಭರಣಗಳಿದ್ದವು. ಈ ಸಂಬಂಧ ಬಸವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ ಮನೆಗೆ ಬಿಜೆಪಿ ನಾಯಕರ ಮುತ್ತಿಗೆ

ಬಿ.ಎಸ್.ಯಡಿಯೂರಪ್ಪ ಸೇರಿ ಪ್ರಮುಖರ ವಶ | ಬೆಲೆ ಏರಿಕೆ ವಿರುದ್ಧ ಬಿಜೆಪಿ ಅಹೋರಾತ್ರಿ ಧರಣಿ

ಬೆಂಗಳೂರು: ಬೆಲೆ ಏರಿಕೆ ವಿರೋಧಿಸಿ ಪ್ರತಿಪಕ್ಷ ಬಿಜೆಪಿ ನಾಯಕರು, ಮುಖಂಡರು, ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಮಧ್ಯ ಪ್ರವೇಶಿಸಿದ ಪೊಲೀಸರು ಫ್ರೀಡಂಪಾರ್ಕ್‌ನಲ್ಲಿ ವಶಕ್ಕೆ ತೆಗೆದುಕೊಂಡ ಪ್ರಸಂಗ ಜರುಗಿತು.

ಎರಡು ದಿನಗಳಿಂದ ನಗರದ ಫ್ರೀಡಂಪಾರ್ಕ್‌ನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಹಿಳಾ ಮೋರ್ಚಾದ ಪದಾಧಿಕಾರಿಗಳು ಮತ್ತಿತರರು ಅಹೋರಾತ್ರಿ ಧರಣಿ ನಡೆಸುತ್ತಿದ್ದರು.

ಗುರುವಾರ ಯಡಿಯೂರಪ್ಪ ನೇತೃತ್ವದಲ್ಲಿ ಸಿಎಂ ಸಿದ್ದರಾಮಯ್ಯ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಮುಂದಾದರು. ರಸ್ತೆಯ ಎರಡೂ ಕಡೆ ಬ್ಯಾರಿಕೇಡ್ ಹಾಕಿ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು. ಮೊದಲು ಮಹಿಳಾ ಕಾರ್ಯಕರ್ತರು ಮುತ್ತಿಗೆ ಹಾಕಲು ಯತ್ನಿಸಿದಾಗ ಮಧ್ಯಪ್ರವೇಶ ಮಾಡಿದ ಪೊಲೀಸರು ಫ್ರೀಡಂಪಾರ್ಕ್ ಮುಂಭಾಗವೇ ಕಾರ್ಯಕರ್ತರನ್ನು ತಡೆದು ವಶಕ್ಕೆ ತೆಗೆದುಕೊಂಡರು.

> ಗ್ಯಾರಂಟಿ ಮೂಲಕ ಅಧಿಕಾರಕ್ಕೆ ಬಂದ ಸಿಎಂ ಸರಕಾರ , ಪತ್ನಿಗೆ ಸಹಾಯಧನ ನೀಡಿ, ಪತಿಯಿಂದ ಹಣ ವಸೂಲಿ ಮಾಡಲಾಗುತ್ತಿದೆ. ಕಾಂಗ್ರೆಸ್‌ಗೆ ಮತ ನೀಡಿದ ಜನರು ಪಾಪ ತೊಳೆದುಕೊಳ್ಳುವುದು ಹೇಗೆಂದು ಚಿಂತೆ ಮಾಡುತ್ತಿದ್ದಾರೆ. ಇದರ ವಿರುದ್ಧ ಬಿಜೆಪಿ ಹೋರಾಟ ಮಾಡುತ್ತಿದ್ದು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಾಗುವುದು. ವಕ್ಫ್ ಮಂಡಳಿ ರೈತರ ಜಮೀನುಗಳನ್ನು ಕಬಳಿಸುತ್ತಿತ್ತು. ಅದನ್ನು ತಡೆಯಲು ಪ್ರಧಾನಿ ಮೋದಿಯವರು ಕಾಯ್ದೆ ತಿದ್ದುಪಡಿ ತಂದಿದ್ದಾರೆ. ಆದರೆ ಇದನ್ನು ಕೂಡ ಕಾಂಗ್ರೆಸ್ ವಿರೋಧಿಸುತ್ತಿದೆ.
>
> – **ಆರ್.ಅಶೋಕ್** ಪ್ರತಿಪಕ್ಷ ನಾಯಕ

ನಗರದ ಫ್ರೀಡಂಪಾರ್ಕ್‌ನಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕರು ದಾಧಿಕಾರಿಗಳು ಮತ್ತಿತರರು ಅಹೋರಾತ್ರಿ ಧರಣಿ ನಡೆಸಿದರು. ಬೆಲೆ ಏರಿಕೆ ವಿರೋಧಿಸಿ ಪ್ರತಿಪಕ್ಷ ಬಿಜೆಪಿ ನಾಯಕರು, ಮುಖಂಡರು, ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ನಂತರ ಯಡಿಯೂರಪ್ಪ, ವಿಜಯೇಂದ್ರ, ಅಶೋಕ ಮತ್ತಿತರರು ಮುತ್ತಿಗೆ ಹಾಕಲು ಮುಂದಾಗುತ್ತಿದ್ದಂತೆ ಪೊಲೀಸರು ತಕ್ಷಣವೇ ವಶಕ್ಕೆ ಪಡೆದು ಬಸ್‌ನಲ್ಲಿ ಕರೆದೊಯ್ದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾ ನಿರತರ ನಡುವೆ ತೀವ್ರ ಮಾತಿನ ಚಕಮಕಿ ನಡೆದು, ಕೆಲ ಕಾಲ ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತು. ಬ್ಯಾರಿಕೇಡ್ ಅಳವಡಿಸಿ ಪ್ರತಿಭಟನಾ ನಿರತರನ್ನು ಪೊಲೀಸರು ತಡೆಯಲು ಯತ್ನಿಸಿದಾಗ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಬ್ಯಾರಿಕೇಡ್ ಹತ್ತಿ ಪೊಲೀಸರು ಹಾಗೂ ಸರಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಇದಕ್ಕೂ ಮೊದಲು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಬಿ.ವೈವಿಜಯೇಂದ್ರ ಅವರು ಬಿಜೆಪಿ ಹೋರಾಟ ಮುಂದುವರಿಯಲಿದೆ ಇದೇ 7ರಿಂದ ಜನಾಕ್ರೋಶ ರ‍್ಯಾಲಿ ನಡೆಸಲಿದ್ದೇವೆ ಎಂದರು.

> ರಾಜ್ಯದ ಭಂಡ ಸರಕಾರ, ಭಂಡ ಸಿಎಂ ವಿರುದ್ಧ ಬೀದಿಗಿಳಿದು ಹೋರಾಟ ಮಾಡದೇ ಬೇರೆ ದಾರಿ ಇಲ್ಲ. ಇದು ಪ್ರಾರಂಭ ಅಷ್ಟೇ. ನಾಡಿನ ಜನರ ಪರವಾಗಿ ವಿಪಕ್ಷವಾದ ನಾವು ಹೋರಾಟ ಮಾಡುವುದು ಅನಿವಾರ್ಯ. ಏ. 5 ರಂದು ಎಲ್ಲ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಹೋರಾಟ ವಿದೆ. ಏ. 7ರಂದು ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಅಲ್ಲಿಂದ ನಮ್ಮ ಹೋರಾಟ ಮುಂದಕ್ಕೆ ಸಾಗುತ್ತದೆ.
>
> – **ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ಸರಕಾರದ ತಪ್ಪು ನೀತಿಗಳ ವಿರುದ್ಧ ಹೋರಾಟ ಮಾಡುವುದು ನಮ್ಮ ಕರ್ತವ್ಯ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಹೆಣದ ಮೇಲೂ ಹಣ ಮಾಡುವ ಕಾಂಗ್ರೆಸ್

ಕಾಂಗ್ರೆಸ್‌ಗೆ ಮತ ನೀಡಿದ ಜನರು ಪಾಪ ತೊಳೆದುಕೊಳ್ಳುವುದು ಹೇಗೆಂದು ಚಿಂತೆ ಮಾಡುತ್ತಿದ್ದಾರೆ. ಸರಕಾರದ ಬೆಲೆ ಏರಿಕೆಯ ನೀತಿ ವಿರುದ್ಧ ಬಿಜೆಪಿ ಹೋರಾಟ ಮಾಡುತ್ತಿದ್ದು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ತೆರಿಗೆ ಮೂಲಕ ಕಳ್ಳತನ ಮಾಡಿದರೆ, ಡಿಸಿಎಂ ಡಿ.ಕೆ.ಶಿವಕುಮಾರ್ ಕಮಿಶನ್ ಮೂಲಕ ಕಳ್ಳತನ ಮಾಡುತ್ತಿದ್ದಾರೆ. ಸತ್ತಾಗ ಹೆಣದ ಮೇಲೆ ಹಣ ಹಾಕುವ ಪದ್ಧತಿ ಇದೆ. ಕಾಂಗ್ರೆಸ್ ಸರಕಾರ ಮರಣ ಪ್ರಮಾಣ ಪತ್ರಕ್ಕೂ ಶುಲ್ಕ ಏರಿಸಿ ಹಣ ಸಂಗ್ರಹ ಮಾಡುತ್ತಿದೆ. ಮದ್ಯದ ದರ ಏರಿಸಿ ಮದ್ಯಪ್ರಿಯರಿಂದ ಹಣ ವಸೂಲಿ ಮಾಡಲಾಗುತ್ತಿದೆ. ಶೌಚಾಲಯ ನಿರ್ವಹಣೆ ಮಾಡಲು ಕೂಡ ಸರ್ಕಾರದ ಬಳಿ ದುಡ್ಡಿಲ್ಲ. ಬೆಂಗಳೂರಿನ ಜನರಿಗೆ ಮುಂದೆ ನೀರಿನ ಶುಲ್ಕ ಏರಿಕೆಯ ಶಾಕ್ ಕೂಡ ಕಾದಿದೆ ಎಂದರು.

ಧರಣಿಯಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿಗಳ ಮನೆಯ ಬಳಿ ಹೋದಾಗ ನಮ್ಮನ್ನು ಬಂಧಿಸಬೇಕಿತ್ತು. ಮುಂಚೆಯೇ ಮುಂಜಾಗ್ರತಾ ಕ್ರಮವಾಗಿ ಬಂಧಿಸಿದ್ದು ಸರಿಯಲ್ಲ. ನಾನು ಸಿಎಂ ಆಗಿದ್ದಾಗಲೂ ಮುಖ್ಯಮಂತ್ರಿಗಳ ಮನೆಯ ಹತ್ತಿರ ಬಂದಾಗ ಅರೆಸ್ಟ್ ಮಾಡುತ್ತಿದ್ದೆವು. ಇವತ್ತು ಮುಂಜಾಗ್ರತಾ ಕ್ರಮವೆಂದು ಮುಂಚಿತವಾಗಿಯೇ ಬಂಧಿಸಿದ್ದು, ಇದು ಸರಿಯಲ್ಲ. ರಾಜ್ಯದ ಉದ್ದಗಲಕ್ಕೆ ನಮ್ಮ ಹೋರಾಟ ಮುಂದುವರಿಸಲಿದ್ದೇವೆ. ಜನವಿರೋಧಿ ಕಾರ್ಯಕ್ರಮ ಹಿಂದಕ್ಕೆ ಪಡೆಯುವವರೆಗೆ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯುತ್ತದೆ ಎಂದರು.

ವಿದ್ಯುತ್ ತಂತಿಗೆ ಶಿಕ್ಷಕಿ ಬಲಿ

ಕೊಪ್ಪಳ: ವಿದ್ಯುತ್ ಅವಘಡದಿಂದ ಶಿಕ್ಷಕಿಯೊಬ್ಬರು ಸಾವಿಗೀಡಾದ ಘಟನೆ ಗಂಗಾವತಿಯ ಜಂಗಮರ ಕಲ್ಗುಡಿಯಲ್ಲಿ ನಡೆದಿದೆ. ಮೃತ ದುರ್ದೈವಿಯನ್ನು ಹರಿತಾ (34) ಎಂದು ಗುರುತಿಸಲಾಗಿದೆ. ಗುರುವಾರ ಬೆಳಗ್ಗೆ ಶಾಲೆಗೆ ತೆರಳುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ.

ಎಲ್ಲ ನೇಮಕ ತಿಂಗಳು ಮುಂದಕ್ಕೆ

← ಮೊದಲಪುಟದಿಂದ

ಬಿಜೆಪಿಯಿಂದ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಉಚ್ಚಾಟಿಸಿರುವುದರಿಂದ ಪಂಚಮಸಾಲಿ ಸಮುದಾಯದ ಕೆಲ ಮತಗಳು ಬಿಜೆಪಿಯಿಂದ ದೂರಾಗುವ ಸಾಧ್ಯತೆಯಿದೆ. ಆದ್ದರಿಂದ ಕಲ್ಯಾಣ ಕರ್ನಾಟಕ ಭಾಗದ ಲಿಂಗಾಯತ ಸಮುದಾಯದ ಈಶ್ವರ್ ಖಂಡ್ರೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಸಿದ್ದರಾಮಯ್ಯ ಅವರು ಹೇಳಿದ್ದಾರೆ. ಇದಕ್ಕೆ ರಾಹುಲ್ ಗಾಂಧಿ ಅವರೂ ಸಕರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ ಎನ್ನಲಾಗಿದೆ. ಆದರೆ ಡಿ.ಕೆ.ಶಿವಕುಮಾರ್ ಬದಲಾವಣೆ ಮಾಡುವುದರಿಂದ ಆಗಬಹುದಾದ ಸಾಧಕ-ಬಾಧಕದ ಬಗ್ಗೆ ಮತ್ತೊಂದು ಹಂತದಲ್ಲಿ ಚರ್ಚಿಸುವ ಅಗತ್ಯವಿದೆ. ಆದ್ದರಿಂದ ಮುಂದಿನ 15ರಿಂದ 20 ದಿನಗಳಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್ ಜತೆ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ತಿಳಿಸಿದ್ದಾರೆ ಎನ್ನಲಾಗಿದೆ.

ಪರಿಷತ್ ನೇಮಕದ ಬಗ್ಗೆಯೂ ಚರ್ಚೆ: ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಸಮಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನದ ಬಗ್ಗೆಯೂ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ನಾಮನಿರ್ದೇಶನದ ಬಳಿಕ ಕಾಂಗ್ರೆಸ್‌ಗೆ ವಿಧಾನ ಪರಿಷತ್‌ನಲ್ಲಿ ಬಹುಮತ ಬರಲಿದೆ. ಆದ್ದರಿಂದ ಸಭಾಪತಿಯನ್ನು ಬದಲಾಯಿಸುವ ಅವಕಾಶವಿರುತ್ತದೆ. ಆದ್ದರಿಂದ ನಾಲ್ಕರಲ್ಲಿ ಒಂದನ್ನು ಬಿ.ಎಲ್. ಶಂಕರ್ ಅವರಿಗೆ ನೀಡುವುದು ಸೂಕ್ತ ಎನ್ನುವ ವಿವರಣೆ ನೀಡಿದ್ದಾರೆ. ಇದಕ್ಕೆ ರಾಹುಲ್ ಗಾಂಧಿ ಅವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಇದಕ್ಕೆ ಪೂರಕವಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತ್ಯೇಕ ಚರ್ಚೆ ನಡೆಸಿದ್ದು, ತಮ್ಮ ಪಟ್ಟಿಯನ್ನು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜಣ್ಣ ನಡೆಗೆ ಅಸಮಾಧಾನ

ರಾಹುಲ್ ಗಾಂಧಿ ಅವರ ಭೇಟಿಯ ವೇಳೆ ಸಿದ್ದರಾಮಯ್ಯ ಅವರು ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಈ ವೇಳೆ ಸಚಿವ ಕೆ.ಎನ್.ರಾಜಣ್ಣ ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ್ದು ಸರಿಯಲ್ಲ. ಈ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರ ಹೆಸರು ತಳಕು ಹಾಕಿಕೊಂಡಿರುವುದು ಗೊತ್ತಿದ್ದರೂ ಸದನದಲ್ಲಿ ಪ್ರಸ್ತಾಪಿಸುವ ಬದಲು ನೇರವಾಗಿ ನಿಮ್ಮ (ಸಿದ್ದರಾಮಯ್ಯ) ಬಳಿಯೇ ಪ್ರಸ್ತಾಪಿಸಬಹುದಾಗಿತ್ತು. ಇಲ್ಲವೇ ಪಕ್ಷದ ಹೈಕಮಾಂಡ್ ಗಮನಕ್ಕೆ ತರಬಹುದಾಗಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇದೆ ಅಭಿಪ್ರಾಯವನ್ನು ಕೆ.ಸಿ.ವೇಣುಗೋಪಾಲ್ ಸಹ ಹೊರಹಾಕಿದ್ದಾರೆ ಎನ್ನಲಾಗಿದೆ.

ಮೇ ಬಳಿಕ ಸಂಪುಟ ವಿಸ್ತರಣೆ: ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಪ್ರಸ್ತಾಪಿಸಿದ್ದು, ಎರಡು ವರ್ಷ ಪೂರೈಸುವ ಹೊಸ್ತಿಲಲ್ಲಿ ಇದಕ್ಕೆ ಕೈಹಾಕುವುದು ಬೇಡ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಖಾಲಿಯಿರುವ ಒಂದು ಸ್ಥಾನಕ್ಕೆ ನಾಗೇಂದ್ರ ಅವರನ್ನು ವಾಪಸು ತೆಗೆದುಕೊಂಡರೆ, ಕೆಟ್ಟ ಸಂದೇಶ ರವಾನೆಯಾಗುತ್ತದೆ. ಆದ್ದರಿಂದ ಸರಕಾರ ಎರಡು ವರ್ಷ ಪೂರೈಸಿ, ಕಾರ್ಯಕ್ರಮ ಪೂರ್ಣಗೊಂಡ ಬಳಿಕ ಈ ಕಸರತ್ತಿಗೆ ಕೈಹಾಕೋಣ ಎನ್ನುವ ಮಾತನ್ನು ಹೇಳಿದ್ದಾರೆ ಎನ್ನಲಾಗಿದೆ.

ಸಂಭ್ರಮಾಚರಣೆಯಲ್ಲಿ ರಾಗಾ ಭಾಗಿ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಎರಡು ವರ್ಷ ಪೂರೈಸುವ ಹೊಸ್ತಿಲಿನಲ್ಲಿದೆ. ಮೇ ತಿಂಗಳಲ್ಲಿ ಎರಡನೇ ವರ್ಷದ ಸಂಭ್ರಮಾಚರಣೆ ನಡೆಸಲು ಈಗಾಗಲೇ ತೀರ್ಮಾನಿಸಲಾಗಿದೆ. ಈ ಅದ್ಧೂರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಿಎಂ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿದ್ದಾರೆ. ಭೇಟಿಯ ವೇಳೆ ಅಧಿಕೃತ ಆಹ್ವಾನ ನೀಡಿದ್ದು, ಇದಕ್ಕೆ ರಾಹುಲ್ ಗಾಂಧಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮೂಲಗಳ ಪ್ರಕಾರ, ನಾಲ್ಕು ಕಂದಾಯ ವಿಭಾಗಗಳಲ್ಲಿ ಅದ್ಧೂರಿ ಸಮಾರಂಭ ಮಾಡಲು ತೀರ್ಮಾನಿಸಲಾಗಿದೆ. ಇದರಲ್ಲಿ ಯಾವುದಾದರೂ ಒಂದು ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ ಭಾಗವಹಿಸಲಿದ್ದಾರೆ ಎಂದು ತಿಳಿದುಬಂದಿದೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–3&4/ಇ–ಟೆಂಡರ್ ಪ್ರಕಟಣೆ/2025–26/09, ದಿನಾಂಕ: 02.04.2025

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1,2 ಮತ್ತು 3 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2024–25 ನೇ ಸಾಲಿನ ಲೆಕ್ಕಶೀರ್ಷಿಕೆ 4202 ಶಿಕ್ಷಣ ಇಲಾಖೆ ಅಡಿಯಲ್ಲಿ 27 (ಎಪ್ಪತ್ತೇಳು) ಕಾಮಗಾರಿಗಳಿಗೆ ಮತ್ತು 5054 ಅಪೆಂಡಿಕ್ಸ್–ಇ (ಯೋಜನೆ) ಅಡಿಯಲ್ಲಿ 1 (ಒಂದು) ಕಾಮಗಾರಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್‌ಗಳ ವಿವರ ಯಾದಗಿರಿ–4 (1–ಎಸ್.ಟಿ. ಮೀಸಲು, 2–ಸಾಮಾನ್ಯ), ಶಹಾಪೂರ–7 (1–ಕೆಟಗರಿ–1, 1–ಕೆಟಗರಿ–2(ಎ). 5–ಸಾಮಾನ್ಯ) ಮತ್ತು ಸುರಪೂರ–17 (5–ಎಸ್.ಸಿ. ಮೀಸಲು, 1–ಎಸ್.ಟಿ. ಮೀಸಲು, 3–ಕೆಟಗರಿ–2(ಎ), 8–ಸಾಮಾನ್ಯ) ಒಟ್ಟಾರೆ 28 ಕಾಮಗಾರಿಗಳು. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.14.50 ಲಕ್ಷಗಳು ಹಾಗೂ ಗರಿಷ್ಠ ರೂ:100.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: ಸಿವಿಲ್ 4ನೇ ದರ್ಜೆ ಹಾಗೂ ಮೇಲ್ಪಟ್ಟು 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 19.04.2025 (17.30 ಗಂಟೆವರೆಗೆ) 6) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 23.04.2025 (16.00 ಗಂಟೆವರೆಗೆ) 7) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 25.04.2025 (11.30 ಗಂಟೆ ನಂತರ) 8) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 28.04.2025 (11.30 ಗಂಟೆ ನಂತರ) 9) **ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 10) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ:
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/11/ಕೆ.ಎಸ್.ಎಂ.ಸಿ.&ಎ/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಐಟಿ&ಎಂಐಎಸ್ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994710

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, IT&MIS Section,
CESC, Mysuru-570017.
Website: www.cescmysore.org
E-mail ID: gmit@cescmysore.org

Company Identity Number(CIN): U40109KA2004SGC035177

ಸಂ: ಚಾವಿಸನಿನಿ/ಪ್ರ.ವ್ಯ(ಐಟಿ&ಎಮ್.ಐ.ಎಸ್)/ಉಪ್ರವ್ಯ(ಯೋ–1)/ಸಪ್ರವ್ಯ(ಯೋ–3/4)/2025–26/439
ದಿನಾಂಕ: 03.04.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್‌ಗಳನ್ನು ಆಹ್ವಾನಿಸಿದೆ.

ವಿಷಯ	ಟೆಂಡರ್ ಸಂಖ್ಯೆ	MW ನಲ್ಲಿ ಒಟ್ಟು ಫೀಡರ್–ಸೌರ ಸ್ಥಾವರ ಸಾಮರ್ಥ್ಯ
ಪಿ.ಎಮ್.ಕುಸುಮ್ ಕಾಂಪೊನೆಂಟ್ ಸಿ ಯೋಜನೆ – ಫೀಡರ್ ಮಟ್ಟದ ಸೌರೀಕರಣದ ಅಡಿಯಲ್ಲಿ 25 ವರ್ಷಗಳ ಕಾಲ RESCO ಮೋಡ್ ಮೂಲಕ ಚಾವಿಸನಿನಿ ವ್ಯಾಪ್ತಿಯಲ್ಲಿ ಉಪ–ಕೇಂದ್ರ (SS) ಮಟ್ಟದಲ್ಲಿ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣ. (**ಅಲ್ಪಾವಧಿ ಟೆಂಡರ್**)	CESC/IT &MIS/PM-KUSUM-C /2025-26/232	350
ಕಬ್ಬಳ್ಳಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ RESCO ಮಾದರಿಯಲ್ಲಿ ಸೌರ ಘಟಕ ಸ್ಥಾಪಿಸುವುದು. (**ಅಲ್ಪಾವಧಿ ಟೆಂಡರ್**)	CESC/IT&MIS/ PM-KUSUM-C/ 2025-26/233	21.50
ಬೈಲ್ಕುಪ್ಪೆ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ RESCO ಮಾದರಿಯಲ್ಲಿ ಸೌರ ಘಟಕ ಸ್ಥಾಪಿಸುವುದು. (**ಅಲ್ಪಾವಧಿ ಟೆಂಡರ್**)	CESC/IT&MIS/ PM-KUSUM-C/ 2025-26/234	23.00
ಚಾವಿಸನಿನಿ ವ್ಯಾಪ್ತಿಯಲ್ಲಿ ಎಚ್‌ಟಿ/ಎಲ್‌ಟಿ ಭೂಗತ ಕೇಬಲ್‌ನಲ್ಲಿನ ದೋಷಗಳ ದುರಸ್ತಿ/ ಸರಿಪಡಿಸುವಿಕೆಯ ಕಾಮಗಾರಿಗಳನ್ನು ಎರಡು ವರ್ಷಗಳ ಅವಧಿಗೆ ಟರ್ನ್‌ಕೀ ಆಧಾರದ ಮೇಲೆ ನಿರ್ವಹಿಸುವುದು.	CESC/Proj-4/ 2024-25/231	-
ಚಾವಿಸನಿನಿ ವ್ಯಾಪ್ತಿಯ ಮೈಸೂರು ನಗರದ ವಿ.ವಿ.ಮೊಹಲ್ಲಾ ವಿಭಾಗದ, ಕುವೆಂಪು ನಗರ, ಹೂಟಗಳ್ಳಿ ಮತ್ತು ಆರ್.ಕೆ.ನಗರ ಉಪ–ವಿಭಾಗದಲ್ಲಿ ಹಾಲಿ ಇರುವ HT/LT ಓವರ್‌ಹೆಡ್ ಲೈನ್‌ಗಳನ್ನು, HT UG ಕೇಬಲ್ ಮತ್ತು LT UG ಕೇಬಲ್/ LT AB ಕೇಬಲ್‌ಗಳಾಗಿ ಬದಲಾಯಿಸುವ ಕಾಮಗಾರಿ.(**ಅಲ್ಪಾವಧಿ ಟೆಂಡರ್**)	CESC/Proj-4/ 2025-26/235/ Call-3	–

ಸದರಿ ಕಾಮಗಾರಿ ಮತ್ತು ಟೆಂಡರ್‌ನ ವಿವರಗಳನ್ನು KPP ಪೋರ್ಟಲ್ https://kppp.karnataka.gov.in/ ನಲ್ಲಿ **ದಿನಾಂಕ: 04.04.2025** ಅಥವಾ ನಂತರ ಪಡೆಯಬಹುದಾಗಿರುತ್ತದೆ. KPP ಪೋರ್ಟಲ್ ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91–8046010000/ 8068948777 ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

DIPR-DD-MYS/020/KSMCA-009/2025-26 ಸಹಿ/– ಪ್ರಧಾನ ವ್ಯವಸ್ಥಾಪಕರು, ಐಟಿ&ಎಮ್.ಐ.ಎಸ್, ಚಾವಿಸನಿನಿ, ಮೈಸೂರು

ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ನವನಗರ ಹುಬ್ಬಳ್ಳಿ – 580025
Phone : 0836 - 2224098, 2224195, 2224301, 2222616, 2224274, 2222505.

ಸಂಖ್ಯೆ:ಹು.ಧಾ.ನ.ಪ್ರಾ/ಅವಿ/ಟೆ.ನೋ.ನಂ.18 Call2/2025–26/55 ದಿನಾಂಕ: 03–04–2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯೂಮೆಂಟ್ KW-4 ರನ್ವಯ **a) (INDENT No. 20/Call-2).** ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಲೋಕೋಪಯೋಗಿ ಇಲಾಖೆ ಲೈಸನ್ಸ್ ಹೊಂದಿದ ಅರ್ಹ ಸಿವಿಲ್ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ **(www.kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಈ ಕೆಳಗೆ ನಿಗದಿಪಡಿಸಿರುವ ದಿನಾಂಕ ಹಾಗೂ ಸಮಯದೊಳಗಾಗಿ ಭಾಗವಹಿಸಬಹುದು.

1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರದ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕ: **03–04–2025 ರ ನಂತರ** ನೋಡಬಹುದಾಗಿದೆ. 2) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **03–05–2025 ರಂದು ಸಾಯಂಕಾಲ 16.00 ಘಂಟೆವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **05–05–2025 ರಂದು ಸಾಯಂಕಾಲ 16.00 ಘಂಟೆಗೆ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **08–05–2025 ರಂದು ಸಾಯಂಕಾಲ 16.00 ಘಂಟೆಗೆ, ಆಗದಿದ್ದಲ್ಲಿ ಗೊತ್ತುಪಡಿಸಿದ ದಿನಾಂಕದಂದು ತೆರೆಯಲಾಗುವುದು.** ಎಲ್ಲ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ದಾಖಲೆ KW-4 ದಲ್ಲಿ ವಿವರಿಸಲಾಗಿದ್ದು, ಗುತ್ತಿಗೆದಾರರು ಗುತ್ತಿಗೆ ನಿಯಮಾವಳಿಗಳನ್ನು ಸಂಪೂರ್ಣವಾಗಿ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಇಚ್ಛಿಸಿದಲ್ಲಿ ಪ್ರಾಧಿಕಾರದ ಅಭಿವೃದ್ಧಿ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ಏನಾದರೂ ತಿದ್ದುಪಡಿ / ಸೇರ್ಪಡೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ

ವಾಸಾಸಂಇ/ಧಾರವಾಡ/08/ಅಡ್ವರ್ಟೋ/2025–26

ಗ್ರಾಮೀಣ ಕುಡಿಯುವ ನೀರು ಸರಬರಾಜು ಹಾಗೂ ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾ.ಕು.ನೀ&ನೈ.ಇ., ಕೊಠಡಿ ಸಂಖ್ಯೆ: ಎಸ್–11, ಮತ್ತು ಎಸ್–14, ಜಿಲ್ಲಾಡಳಿತ ಭವನ ಕೋಲಾರ–563101. ಇ.ಮೇಲ್: eerdwsd.klr@gmail.com,
ದೂರವಾಣಿ ಸಂಖ್ಯೆ: 08152–222331

ಸಂಖ್ಯೆ:ಕಾಪಾಅ/ಗ್ರಾಕುನೀ&ನೈಇ/ಕೋವಿ/04/2024–25
ದಿನಾಂಕ: 03.04.2025

ದರಪಟ್ಟಿ ಆಹ್ವಾನ ಪತ್ರ

ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೋಲಾರ ವ್ಯಾಪ್ತಿಯ ಎಲ್ಲಾ ತಾಲ್ಲೂಕಿನ ಜನವಸತಿಗಳಲ್ಲಿ ಈಗಾಗಲೇ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ಥಿಗೆ ಸಂಬಂಧಿಸಿದಂತೆ ವಿವಿದ ಸಾಮಾಗ್ರಿ/ಸಲಕರಣೆಗಳಿಗೆ ದರಪಟ್ಟಿ ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಗುತ್ತಿಗೆದಾರರು/ಸರಬರಾಜುದಾರರು ಈ ಕಛೇರಿ ಸೂಚನಾ ಫಲಕದಲ್ಲಿ ಎಲ್ಲಾ ಸಾಮಾಗ್ರಿ/ಸಲಕರಣೆಗಳ ಪಟ್ಟಿ ಲಗತ್ತಿಸಿದ್ದು ದರಪಟ್ಟಿ ಪ್ರತಿಗಳನ್ನು **ದಿನಾಂಕ: 20.04.2025** ರೊಳಗಾಗಿ "ಕಾರ್ಯಪಾಲಕ ಅಭಿಯಂತರರು" ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೋಲಾರ, ಜಿಲ್ಲಾಡಳಿತ ಭವನ, ಕೋಲಾರ, 563101, ಕೊಠಡಿ ಸಂಖ್ಯೆ: **S11**ಗೆ offline ಮುಖಾಂತರ/ Post ಮುಖೇನ ಅರ್ಜಿಗಳನ್ನು ಸಲ್ಲಿಸಲು ಕೋರಿದೆ.
(**ವಿ.ಸೂ**–ದರಪಟ್ಟಿಗಳನ್ನು ಸಾಮಾಗ್ರಿ/ಸಲಕರಣೆಗಳ ದರ ನಿಗದಿಪಡಿಸುವ ಸಂಬಂಧ ಆಹ್ವಾನಿಸಲಾಗಿದೆ.)

ಸಹಿ/–
ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:05/ಕೆಎಸ್ಎಂಸಿಎ/2025–26

ಸಿಲಿಂಡರ್ ಸ್ಫೋಟ: ಮತ್ತೊಬ್ಬ ಮಹಿಳೆ ಸಾವು

ಹಾಸನ: ಅರಕಲಗೂಡು ತಾಲೂಕಿನ ಕೊಣನೂರು ಪಟ್ಟಣದಲ್ಲಿ ತಿಥಿ ಕಾರ್ಯಕ್ಕೆ ಸಿಹಿ ತಿಂಡಿ ತಯಾರಿಸುವ ವೇಳೆ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡ ಪ್ರಕರಣದಲ್ಲಿ ಗಾಯಗೊಂಡಿದ್ದ ಮತ್ತೊಬ್ಬ ಮಹಿಳೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ ಮೃತರ ಸಂಖ್ಯೆ ಈಗ ಮೂರಕ್ಕೆ ಏರಿಕೆಯಾಗಿದೆ.

ಮೀನಾಕ್ಷಿ (50) ಮೃತ ಮಹಿಳೆ. ಈ ದುರಂತ ಮಾರ್ಚ್ 30 ರಂದು ಕೊಣನೂರು ಪಟ್ಟಣದ ಗೌಡರ ಬೀದಿಯ ಪಟೇಲ್ ರಾಮೇಗೌಡ ಎಂಬುವವರ ಮನೆಯಲ್ಲಿ ನಡೆದಿತ್ತು. ಕರಿಯಕ್ಕ ಎಂಬುವವರ ತಿಥಿ ಕಾರ್ಯದ ನಿಮಿತ್ತ ಮಹಿಳೆಯರು ತಿಂಡಿ ಬೇಯಿಸುತ್ತಿದ್ದ ವೇಳೆ ಗ್ಯಾಸ್ ಸಿಲಿಂಡರ್ ಆಕಸ್ಮಿಕವಾಗಿ ಸ್ಫೋಟಗೊಂಡಿತ್ತು. ಈ ಘಟನೆಯಲ್ಲಿ ಮೂವರು ಮಹಿಳೆಯರು ತೀವ್ರವಾಗಿ ಗಾಯಗೊಂಡಿದ್ದರು. ಗಾಯಾಳುಗಳಿಗೆ ಮೊದಲು ಕೊಣನೂರು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿತ್ತು. ನಂತರ ಅರಕಲಗೂಡು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಗಾಯಗಳ ತೀವ್ರತೆಯಿಂದಾಗಿ ಮೂವರನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ನಿನ್ನೆ (ಏಪ್ರಿಲ್ 1) ಮಂಗಳ (50) ಮತ್ತು ರಾಧಾ (60) ಎಂಬ ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದರು. ಗುರುವಾರ ಮೀನಾಕ್ಷಿ ಕೂಡ ಕೊನೆಯುಸಿರೆಳೆದಿದ್ದಾರೆ. ಈ ಘಟನೆ ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಟ್ರಂಪ್ ಕರ ಸಮರ

← ಮೊದಲಪುಟದಿಂದ

ಔಷಧೋದ್ಯಮಕ್ಕೆ ಬಿಗ್ ರಿಲೀಫ್: ಪ್ರತಿಸುಂಕದ ನೀತಿಯಿಂದ ಕೆಲವೊಂದನ್ನು ಟ್ರಂಪ್ ಹೊರಗಿಟ್ಟಿದ್ದಾರೆ, ಉಕ್ಕು, ಅಲ್ಯುಮಿನಿಯಂ ಹಾಗೂ ಆಟೋ ಮೊಬೈಲ್, ಆಟೋ ಮೊಬೈಲ್ ಬಿಡಿ ಭಾಗಗಳ ಮೇಲೆ ಈಗಾಗಲೇ ಸುಂಕ ವಿಧಿಸಿರುವುದರಿಂದ ಅವುಗಳಿಗೆ ಪರಸ್ಪರ ಸುಂಕ ಅನ್ವಯಿಸುವುದಿಲ್ಲ. ತಾಮ್ರ, ಔಷಧ, ಸೆಮಿಕಂಡಕ್ಟರ್ ಗಳಿಗೂ ಪರಸ್ಪರ ಸುಂಕ ಅನ್ವಯವಾಗುವುದಿಲ್ಲ. ಚಿನ್ನದ ಮೇಲೂ ಪ್ರತಿಸುಂಕ ವಿಧಿಸಿಲ್ಲ. ಜತೆಗೆ ಇಂಧನ ಸೇರಿ ಅಮೆರಿಕದಲ್ಲಿ ಸಿಗದ ಖನಿಜಗಳಿಗೆ ಪ್ರತಿಸುಂಕ ವಿಧಿಸುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಇದರಿಂದ ಭಾರತಕ್ಕೆ ಅನುಕೂಲವಾಗಲಿದ್ದು, ಅಮೆರಿಕಕ್ಕೆ ಭಾರತ ಅತಿ ದೊಡ್ಡ ಔಷಧ ರಫ್ತುದಾರ ಆಗಿರುವುದರಿಂದ ಇದರ ಲಾಭ ಸಿಗಲಿದೆ ಎಂದು ಹೇಳಲಾಗುತ್ತಿದೆ. ಆದರೆ, ಟ್ರಂಪ್ ನೀತಿಯಿಂದ ರುಪಾಯಿ ಮತ್ತಷ್ಟು ದುರ್ಬಲವಾಗಲಿದೆ ಎನ್ನಲಾಗಿದೆ.

ವಿವಿಧ ರಾಷ್ಟ್ರಗಳ ನಾಯಕರ ಪ್ರತಿಕ್ರಿಯೆ: ಅಮೆರಿಕದ ವ್ಯಾಪಾರ ಸ್ನೇಹಿತರು ಎನಿಸಿಕೊಂಡಿರುವ ರಾಷ್ಟ್ರಗಳೂ ಟ್ರಂಪ್ ಅವರ ತೆರಿಗೆ ಕೆಂಗಣ್ಣಿಗೆ ಗುರಿಯಾಗಿವೆ. ಅಮೆರಿಕದ ನಡೆಗೆ ವಿವಿಧ ರಾಷ್ಟ್ರಗಳ ನಾಯಕರು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಆಸ್ಟ್ರೇಲಿಯಾದ ಪ್ರಧಾನಿ ಆಂಥೋಣಿ ಅಲ್ಬನೀಸ್, 'ಈ ನ್ಯಾಯಯುತವಲ್ಲದ ನಡೆಯಿಂದಾಗಿ ಅಮೆರಿಕದ ಜನರು ದೊಡ್ಡ ಬೆಲೆಯನ್ನೇ ತೆರುತ್ತಾರೆ' ಎಂದು ಹೇಳಿದ್ದಾರೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನೇ, 'ಜಾಗತಿಕ ವ್ಯಾಪಾರ ವ್ಯವಸ್ಥೆಯನ್ನು ಬುಡಮೇಲು ಮಾಡುವ ಕಾರ್ಯವಾಗಿದೆ. ಉಕ್ಕು, ಅಲ್ಯುಮಿನಿಯಂ ಮತ್ತು ವಾಹನಗಳ ಮೇಲೆ ವಿಧಿಸಲಾದ ಸುಂಕವು ಕೆನಡಾದ ಜನರ ಮೇಲೆ ಭಾರೀ ಪರಿಣಾಮ ಬೀರಲಿದೆ. ಇದಕ್ಕೆ ಪ್ರತಿಕ್ರಿಯೆ ಮೂಲಕವೇ ಉತ್ತರ ನೀಡಲಾಗುವುದು' ಎಂದಿದ್ದಾರೆ. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಈ ವ್ಯಾಪಾರ ಯುದ್ಧದಲ್ಲಿ ಯಾರ ಹಿತವೂ ಇಲ್ಲ. ಆದರೆ ಎಲ್ಲ ರೀತಿಯ ಬದಲಾವಣೆ ಎದುರಿಸಲು ನಾವು ಸಿದ್ಧರಾಗಿದ್ದೇವೆ' ಎಂದಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಪ್ರತಿಕ್ರಿಯಿಸಿ, 'ಟ್ರಂಪ್ ಅವರೊಂದಿಗೆ ಚರ್ಚಿಸಿ ಈ ಯುದ್ಧದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಇಂಥ ಪ್ರಹಾರಗಳು ಪಶ್ಚಿಮವನ್ನು ಇನ್ನಷ್ಟು ದುರ್ಬಲಗೊಳಿಸಲಿವೆ' ಎಂದಿದ್ದಾರೆ. ಚೀನಾದ ವಾಣಿಜ್ಯ ಸಚಿವ ಪ್ರತಿಕ್ರಿಯಿಸಿ, 'ಅಮೆರಿಕವು ಕೂಡಲೇ ಈ ಸುಂಕವನ್ನು ರದ್ದುಗೊಳಿಸಬೇಕು. ಅಮೆರಿಕದ ಈ ನಡೆಯು ಜಾಗತಿಕ ಆರ್ಥಿಕ ಅಭಿವೃದ್ಧಿಗೆ ಅಪಾಯ ತಂದೊಡ್ಡಲಿದೆ. ಇದರಿಂದ ಅಂತಾರಾಷ್ಟ್ರೀಯ ಪೂರಕ ಸರಪಳಿಗೆ ಮತ್ತೊಮ್ಮೆ ಅಪಾಯ ಉಂಟು ಮಾಡಲಿದೆ' ಎಂದಿದ್ದಾರೆ.

ಷೇರುಪೇಟೆ ಕುಸಿತ

ಮುಂಬೈ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿವಿಧ ದೇಶಗಳ ಮೇಲಿನ ಪ್ರತಿ ಸುಂಕಗಳನ್ನು ಪ್ರಕಟಿಸಿದ್ದರಿಂದ ಐಟಿ ಮತ್ತು ಟೆಕ್ ಷೇರುಗಳಲ್ಲಿನ ಮಾರಾಟ ಭರಾಟೆಯಿಂದಾಗಿ ದೇಶೀಯ ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಗುರುವಾರ ಕುಸಿತ ಕಂಡವು. 30 ಷೇರುಗಳ ಬಿಎಸ್‌ಇ ಸೆನ್ಸೆಕ್ಸ್ 322.08 ಅಂಶಗಳಷ್ಟು ಕುಸಿದು 76,295ರಲ್ಲಿ ಮುಕ್ತಾಯಗೊಂಡಿತು. ದಿನದ ವಹಿವಾಟಿನ ಅವಧಿಯಲ್ಲಿ 809.89 ಅಂಶಗಳಷ್ಟು ಕುಸಿದು 75,807ರ ದಿನದ ಕನಿಷ್ಠ ಮಟ್ಟವನ್ನು ತಲುಪಿತ್ತು. ಆದರೆ, ಫಾರ್ಮಾ ಷೇರುಗಳು ಗಳಿಕೆ ಕಂಡಿದ್ದರಿಂದ ನಷ್ಟದಿಂದ ಚೇತರಿಸಿಕೊಂಡಿತು.

ತಜ್ಞರು ಹೇಳುವುದೇನು?

ಟ್ರಂಪ್ ವಿಧಿಸಿರುವ ಪ್ರತಿಸುಂಕ ನೀತಿಯು ಭಾರತದಂತಹ ಉದಯೋನ್ಮುಖ ಆರ್ಥಿಕತೆಗಳ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಇದು ಭಾರತದ ಆರ್ಥಿಕತೆ, ವ್ಯಾಪಾರ ಸಂಬಂಧಗಳು ಮತ್ತು ಕರೆನ್ಸಿ ಮಾರುಕಟ್ಟೆಗಳ ಮೇಲೆ ಅಲ್ಪಾವಧಿ ಮತ್ತು ದೀರ್ಘಾವಧಿಯ ಪರಿಣಾಮಗಳನ್ನು ಬೀರುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪ್ರಮುಖವಾಗಿ ಐಟಿ ಉದ್ಯಮದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಭಾರತ ವಿಶ್ವದ ದೊಡ್ಡ ಐಟಿ ರಫ್ತುದಾರ ಆಗಿರುವುದರಿಂದ ಟ್ರಂಪ್ ನೀತಿ ಸಹಜವಾಗಿಯೇ ಪರಿಣಾಮ ಬೀರಲಿದೆ. ಜವಳಿ ಉದ್ಯಮದ ಮೇಲೂ ಪರಿಣಾಮ ಬೀರಲಿದೆ. ಈಗಾಗಲೇ ಆಟೋ ಹಾಗೂ ಆಟೋಮೊಬೈಲ್ ಬಿಡಿ ಭಾಗಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸಿರುವುದ ರಿಂದ ಆ ಉದ್ಯಮದ ಮೇಲೂ ದೊಡ್ಡ ಪರಿಣಾಮ ಬೀರಲಿದೆ. ಆದರೆ, ಟ್ರಂಪ್ ಸುಂಕ ನೀತಿ ಬೇರೆ ದೇಶ ಗಳಿಗೆ ಹೋಲಿಸಿದರೆ ಭಾರತದ ಮೇಲೆ ಕಡಿಮೆ ಪರಿಣಾಮ ಬೀರುತ್ತದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಟ್ವೀಟೂ-ಖಾರಾ

ಆರ್.ಅಶೋಕ್, ಪ್ರತಿಪಕ್ಷ ನಾಯಕ

ಸಿಲಿಕಾನ್ ಸಿಟಿ ಬೆಂಗಳೂರನ್ನು ಗುಂಡಿಯೂರು, ಗಾರ್ಬೇಜ್ ಸಿಟಿಯನ್ನಾಗಿ ಮಾರ್ಪಡಿಸಿ, ಜಾಗತಿಕ ಮಟ್ಟದಲ್ಲಿ ಐಟಿಸಿಟಿ ಗೌರವ ಹಾಳು ಮಾಡಿದ siddaramaiah ನವರೇ, ಸ್ವಲ್ಪ ಕಣ್ಣು ತೆರೆಯಿರಿ. ಪಾರ್ಟ್ ಟೈಮ್ ಡಿಸಿಎಂ DKShivakumar ಅವರೇ, ನಿಮ್ಮ ಕನಸಿನ ಬ್ರಾ ್ಯಂಡ್ ಬೆಂಗಳೂರು, ಅಲ್ಲಲ್ಲ..! ಬ್ಯಾಡ್ ಬೆಂಗಳೂರು ದರ್ಶನವಾಗುತ್ತದೆ. ಕಳಪೆ ನಿರ್ವಹಣೆ ಕಣ್ಣಿಗೆ ರಾಚುತ್ತಿದೆ. ಮಹಾನಗರ ಮುಳುಗುತ್ತಿದೆ. ಐಫೆಇಓಬ್ಲಚಿಓಚುಚ ಸರಕಾರ ಬಂಡವಾಳ ಬಯಲಾಗುತ್ತಿದೆ. ಈಗಲಾದರೂ ಎಚ್ಚೆತ್ತುಕೊಳ್ಳಿ.

ಕರ್ನಾಟಕ ಕಾಂಗ್ರೆಸ್

ಅಶೋಕ್ ಅವರೇ ನಿಮ್ಮ ಕ್ಷೇತ್ರ ಪದ್ಮನಾಭನಗರಕ್ಕೆ ಹೋಗಿ ನೋಡಿ ಪಾಪ ನೀವು ಕ್ಷೇತ್ರಕ್ಕೆ ಹೋಗಕ್ಕೆ ಸಮಯ ಇಲ್ಲ ಅನ್ಸುತ್ತೆ.BJP4Karnataka ಕಾರ್ಯಕರ್ತರೇ ಬೋರ್‌ವೆಲ್ ಗಳ ಮುಂದೆ ನಿಂತು ಕಾಂಗ್ರೆಸ್ ಸರಕಾರ ಮಾಡಿರುವ ಯೋಜನೆ ಫೋಟೊ ಹಾಕ್ತಿದಾರೆ. ಕ್ಷೇತ್ರದಲ್ಲಿ 3000 ಗುಂಡಿ ಕಳೆದ ವಾರ ಮುಚ್ಚಲಾಗಿದೆ. ನಿಮ್ಮನ್ನು ನೋಡಿದ್ರೆ ಅಯ್ಯೋ ಅನ್ಸುತ್ತೆ.

ವಿಶ್ವವಾಣಿ ಕ್ಲಬ್ ಹೌಸ್
04.04.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 39
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ರಾಯಚೂರು**

ಸಮಸ್ಯೆಯೇನು..?

- ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕಲಮಂಗಿ ಗ್ರಾ.ಪಂ ವ್ಯಾಪ್ತಿಯ ಚಿಕ್ಕಬೇರಗಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ.
- **ಪರಿಹಾರ:** ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕಲಮಂಗಿ ಗ್ರಾ.ಪಂ ವ್ಯಾಪ್ತಿಯ ಚಿಕ್ಕಬೇರಗಿ ಗ್ರಾಮಕ್ಕೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದ್ದು, ಮುಂದಿನ ಎರಡು ದಿನಗಳಲ್ಲಿ ಈಗಾಗಲೇ ಗುರುತಿಸಲಾದ ಬೋರ್‌ವೆಲ್ ಮತ್ತು ಲಭ್ಯವಿರುವ ಸಾರ್ವಜನಿಕ ಬೋರ್‌ವೆಲ್‌ಗಳ ಮೂಲಕ ಗ್ರಾಮಕ್ಕೆ ನೀರನ್ನು ಪೂರೈಸಲು ಕ್ರಮವಹಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಮೈದಾನಕ್ಕೆ ಬೇಲಿ ಬಂಧನಕ್ಕೆ ಆಗ್ರಹ

ಶಿವಮೊಗ್ಗ: ಶಿವಮೊಗ್ಗದ ಜಿಲ್ಲಾಧಿಕಾರಿ ಕಚೇರಿ ಎದುರಿರುವ ಜಾಗವನ್ನು ಇಲ್ಲಿಯವರೆಗೆ ಈದ್ಗಾ ಮೈದಾನ ಎನ್ನುತ್ತಿದ್ದರು. ಈಗ ಅದು ಆಟದ

ಮೈದಾನ. ಈ ಜಾಗ ಕಬಳಿಸಲು ಮುಸ್ಲಿಂಮರು ಯತ್ನಿಸುತ್ತಿದ್ದಾರೆ. ಡಿಸಿ, ಎಸ್ಪಿಯವರು ಮಹಾನಗರ ಪಾಲಿಕೆ ಆಯುಕ್ತರು ಸರಿಯಾಗಿ ಹೆಜ್ಜೆ ಇಡಬೇಕು ಎಂದು ಮಾಜಿ ಡಿಸಿಎಂ ಕೆ. ಎಸ್ ಈಶ್ವರಪ್ಪ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರಾಭಿವೃದ್ಧಿ ಪ್ರಾಧಿಕಾರದ ಮ್ಯಾಪ್ ನಲ್ಲಿ ಇದು ನಮೂದಾಗಿದೆ. ಮುಸ್ಲಿಮರು ನಮಾಜ್ ಮಾಡಲು ಬಳಸುತ್ತಿದ್ದೇವೆ ಎನ್ನುತ್ತಿದ್ದಾರೆ. ಅನೇಕ ವರ್ಷಗಳಿಂದ ಹೇಗೆಗೋ ಅವರ ವಶಕ್ಕೆ ಇಟ್ಟುಕೊಂಡಿದ್ದಾರೆ. ಡಿಸಿ ಅವರು ತುರ್ತಾಗಿ ದಾಖಲೆ ಗಮನಿಸಿ ತೆರವುಗೊಳಿಸಬೇಕು. ಖಾತೆ ಇದೆ ಎಂದು ಮುಸ್ಲಿಮರು ಹೇಳುತ್ತಿದ್ದಾರೆ. ಮಹಾವೀರ ವೃತ್ತದ ಬಳಿ ಇರುವ ಜಾಗವನ್ನು ಸೇರಿಸಿಕೊಂಡು ಒತ್ತುವರಿ ಮಾಡುತ್ತಿದ್ದಾರೆ. ಬಂಡತನದಲ್ಲಿ ಈ ಜಾಗ ನಮ್ಮದು ಎಂದು ಹೇಳುತ್ತಿದ್ದಾರೆ. ಗೆಜೆಟ್ ನೋಟಿಫಿಕೇಷನ್ ನಲ್ಲಿ ಈದ್ಗಾ ಸುನ್ನಿ ಜಾಗ ಎಂದಿಲ್ಲ. ಖಾತೆ ಆಗಿದೆ ಎನ್ನುತ್ತಿರುವುದು ಕಾನೂನು ಬಾಹಿರ. ಖಾತೆಯನ್ನು ಮಾಡಿಕೊಟ್ಟಿರುದೇ ಕಾನೂನು ಬಾಹಿರವಾಗಿದೆ ಎಂದು ಹೇಳಿದರು.

ಏ.5ರಂದು ಪ್ರತಿಭಟನೆ: ಏ. 5 ರಂದು ಬೆಳಗ್ಗೆ 10-30 ಕ್ಕೆ ಬೃಹತ್ ಹೋರಾಟ ಮಾಡುತ್ತಿದ್ದೇವೆ. ಪಾಲಿಕೆ ಜಾಗವನ್ನು ಪಾಲಿಕೆ ಜಾಗವಾಗಿಯೇ ಉಳಿಸಬೇಕು. ಡಿಸಿ ಕಚೇರಿ ಮುಂದೆ ಹೋರಾಟ ಹಮ್ಮಿಕೊಂಡಿದ್ದೇವೆ. ಈಗ ಇರುವ ಖಾತೆ ಸಹ ಕಾನೂನು ಬಾಹಿರವಾಗಿದೆ. ಅಧಿಕಾರಿಗಳು ನೋಡಿಕೊಂಡು ಹೆಜ್ಜೆ ಇಡಬೇಕು ಯಾರ ಪ್ರಭಾವಕ್ಕೂ ಒಳಗಾಗಬಾರದು ಎಂದು ಮಾಜಿ ಡಿಸಿಎಂ ಕೆ. ಎಸ್ ಈಶ್ವರಪ್ಪ ಹೇಳಿದರು.

ಇ-ಕಾಮರ್ಸ್ ಸಂಸ್ಥೆಗಳಿಂದ ಶೇ.5ರಷ್ಟು ಸೆಸ್ ಸಂಗ್ರಹ। ಕೆಲ ಅಂಶಗಳನ್ನು ಸೇರಿಸುವಂತೆ ರಾಹುಲ್ ಗಾಂಧಿ ಸಲಹೆ। ಸರಕಾರದ ಕರಡು ವಿಧೇಯಕಕ್ಕೆ ರಾಹುಲ್ ಗಾಂಧಿ ಮೆಚ್ಚುಗೆ

ಗಿಗ್ ಕಾರ್ಮಿಕ ಕಲ್ಯಾಣ ಮಂಡಳಿಗೆ ರಾಹುಲ್ ಗಾಂಧಿ ಗ್ರೀನ್ ಸಿಗ್ನಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ನೀಡಿದ್ದ 'ಗ್ಯಾರಂಟಿ'ಯಂತೆ ಇದೀಗ ರಾಜ್ಯ ಸರಕಾರ ಗಿಗ್ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಸ್ಥಾಪಿಸಲು ತೀರ್ಮಾನಿಸಿದ್ದು, ಇದಕ್ಕೆ ರಾಹುಲ್ ಗಾಂಧಿ ಅವರಿಂದಲೂ 'ಗ್ರೀನ್ ಸಿಗ್ನಲ್' ದೊರೆತಿದೆ.

ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರೂ ಗಿಗ್ ಕಾರ್ಮಿಕರ ಕಲ್ಯಾಣಕ್ಕಾಗಿ ಅವರ ಪರವಾಗಿ ಧ್ವನಿ ಎತ್ತಿದ್ದರು. ಇದೇ ರೀತಿ ಈ ಹಿಂದೆ ಚುನಾವಣಾ ಪ್ರಚಾರದ ವೇಳೆಗೆ ಡೆಲಿವರಿ ಬಾಯ್‌ಗಳೊಂದಿಗೆ ಸಂವಾದ ನಡೆಸಿದ್ದು, ಡೆಲಿವರಿ ಬಾಯ್ ಜತೆಗೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸಿದ್ದ ರಾಹುಲ್ ಗಾಂಧಿ ಅವರು, ಕರ್ನಾಟಕದಲ್ಲಿ ಗಿಗ್ ಕಲ್ಯಾಣ ಮಂಡಳಿ ಸ್ಥಾಪಿಸುವುದಾಗಿ ಘೋಷಿಸಿದ್ದರು. ಆದ್ದರಿಂದ ಇದೀಗ ಕರ್ನಾಟಕದಲ್ಲಿ ಗಿಗ್ ಕಾರ್ಮಿಕ ಕಲ್ಯಾಣ ಮಂಡಳಿ ಸ್ಥಾಪಿಸುವ ಸಂಬಂಧ ಗುರುವಾರ ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿದ್ದು, ಕಲ್ಯಾಣ ಮಂಡಳಿಯಲ್ಲಿರುವ ಅಂಶಗಳು, ಇದರಿಂದ ಕಾರ್ಮಿಕರಿಗೆ ಆಗುವ ಲಾಭದ ಬಗ್ಗೆ ರಾಜ್ಯದ ಸಚಿವರುಗಳು ವಿವರಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರು ಮಾಹಿತಿ ನೀಡಿದರು. ಸಭೆಯಲ್ಲಿ ಕಲ್ಯಾಣ ಮಂಡಳಿ ಸ್ಥಾಪಿಸುವುದಕ್ಕೆ ಅಗತ್ಯತೆ ಹಾಗೂ ಸರಕಾರದ ತಯಾರಿಗೆ ರಾಹುಲ್ ಗಾಂಧಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ರಾಜ್ಯದಲ್ಲಿ ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಲು ತೆಗೆದುಕೊಂಡಿರುವ ಕ್ರಮಕ್ಕೆ ಒಪ್ಪಿಗೆ ಸೂಚಿಸಿರುವ ರಾಹುಲ್, ಕೆಲ ಸಲಹೆಗಳನ್ನು ನೀಡಿದ್ದಾರೆ. ಇದೀಗ ಈ ಸಲಹೆಗಳನ್ನು ಸೇರಿಸಿ ವಿಧೇಯಕವನ್ನು ಸಿದ್ಧಪಡಿಸಲು ತೀರ್ಮಾನಿಸಲಾಗಿದೆ. ಪ್ರಮುಖವಾಗಿ ಈ ಕಲ್ಯಾಣ ಮಂಡಳಿಯ ಮೂಲಕ ಅಮೆಜಾನ್, ಫ್ಲಿಪ್ ಕಾರ್ಟ್ ಸೇರಿದಂತೆ ಹತ್ತಾರು ಸಂಸ್ಥೆಗಳಲ್ಲಿ ಡೆಲಿವರಿ ಬಾಯ್‌ಗಳಾಗಿ ಕಾರ್ಯನಿರ್ವಹಿಸುವ ಕಾರ್ಮಿಕರ ಕಲ್ಯಾಣಕ್ಕೆ ಅಗತ್ಯ ಕ್ರಮವಹಿಸಲಿದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರು ಗಿಗ್ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಸ್ಥಾಪಿಸುವ ಬಗ್ಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಗಿಗ್ ಕಾರ್ಯಕರ್ತರು

ಇನ್ನು ಗಿಗ್ ಕಾರ್ಮಿಕರ ಕಲ್ಯಾಣಕ್ಕಾಗಿ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮೂವರು ಸಚಿವರ ನೇತೃತ್ವದಲ್ಲಿ ನಡೆದ ಸಭೆಗೆ ಆಗಮಿಸಲು ಗಿಗ್ ಕಾರ್ಮಿಕರ ವಲಯದ ಪರವಾಗಿ ಮೂವರು ಕಾರ್ಯಕರ್ತರಿಗೂ ಅವಕಾಶ ಒದಗಿಸಲಾಗಿತ್ತು. ಕರ್ನಾಟಕದ ರಕ್ಷಿತಾ ದೇವ್, ಹೈದ್ರಾಬಾದಿನ ಶೇಖ್ ಸಲಾಹುದ್ದೀನ್, ನಿಖಿಲ್ ದೇವ್ ಭಾಗವಹಿಸಿದ್ದರು.

ಸರಕಾರದ ನಡೆಗೆ ರಾಹುಲ್ ಶ್ಲಾಘನೆ

ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪಿಸಲು ಅಗತ್ಯವಿರುವ ಅನುದಾನವನ್ನು ಸಂಬಂಧಿತ ಸಂಸ್ಥೆಗಳಿಂದ ಶೇ.5ರಷ್ಟು ಸೆಸ್ ಸಂಗ್ರಹಿಸುವುದು ಹಾಗೂ ಬಾಕಿಯಿರುವ ಹಣವನ್ನು ಸರಕಾರವೇ ಭರಿಸಿ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಯೋಜನೆಗಳನ್ನು ರೂಪಿಸುವುದು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಮಗ್ರ ಅಂಶಗಳನ್ನು ಒಳಗೊಂಡ ಮಸೂದೆಯನ್ನು ಸಂಪುಟದ ಮುಂದೆ ಮಂಡಿಸಲು ತೀರ್ಮಾನಿಸಲಾಗಿದೆ. ಈಗಾಗಲೇ ಕಾರ್ಮಿಕರ ಗ್ರಾಚುಟಿ, ಸಿನಿಮಾ ಕಾರ್ಮಿಕರ ಬಿಲ್ ಸೇರಿ ಮೂರು ಪ್ರಮುಖ ಮಸೂದೆಗಳನ್ನು ತಂದಿದ್ದು ಈಗ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಕಾಯಿದೆಯ ಮೂಲಕ ರಾಜ್ಯದ ಅಸಂಘಟಿತ ಕಾರ್ಮಿಕ ವಲಯದಲ್ಲಿರುವವರಿಗೆ ರಕ್ಷಣೆಗೆ ಮುಂದಾಗಿರುವ ಸರಕಾರದ ನಡೆಯನ್ನು ರಾಹುಲ್ ಶ್ಲಾಘಿಸಿದ್ದಾರೆ.

ಕೇಂದ್ರದಲ್ಲಿ ಬಾಕಿಯಿರುವ ಯೋಜನೆಗಳಿಗೆ ಅನುದಾನ, ಅನುಮತಿ ನೀಡಲು ಮನವಿ

ನೀರಾವರಿ ಯೋಜನೆಗೆ ಒಪ್ಪಿಗೆ ನೀಡಿ

ದೆಹಲಿ/ಬೆಂಗಳೂರು: ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ಅನುಮತಿ ಹಾಗೂ ಅನುದಾನ ಬಿಡುಗಡೆ ಮಾಡುವಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಗೆ ಮನವಿ ಮಾಡಿದ್ದಾರೆ.

ಗುರುವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಿ.ಆರ್. ಪಾಟೀಲ್ ಅವರನ್ನು ಒಟ್ಟಿಗೆ ಭೇಟಿಯಾದರು. ಈ ವೇಳೆ, ಬಾಕಿಯಿರುವ ರಾಜ್ಯದ ಎಲ್ಲ ನೀರಾವರಿ ಯೋಜನೆಗಳಿಗೆ ಪ್ರಸ್ತಾವನೆಗಳಿಗೆ ಅನುಮತಿ ನೀಡುವಂತೆ ಜಲಶಕ್ತಿ ಸಚಿವಾಲಯಕ್ಕೆ ತಾವು ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಕರ್ನಾಟಕದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಹಾಗೂ ಅನುಷ್ಠಾನಗೊಳಿಸಲಾಗಿರುವ ನೀರಾವರಿ ಯೋಜನೆಗಳು ರಾಜ್ಯದ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಿಗೆ ಕಾರಣವಾಗಿವೆ. ಉತ್ಪಾದನೆಯಲ್ಲಿನ ಹೆಚ್ಚಳ, ಆಧುನಿಕ ತಂತ್ರಜ್ಞಾನದ ಸಮರ್ಪಕ ಬಳಕೆಯಿಂದ ನೀರಿನ ನಿರ್ವಹಣೆಯಲ್ಲಿ ಸುಧಾರಣೆ, ಹವಾಮಾನ ವೈಪರೀತ್ಯದ ನಿರ್ವಹಣೆ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿದೆ ಎಂದು ಸಚಿವರಿಗೆ ವಿವರಿಸಿದ್ದಾರೆ. ಈ ವೇಳೆ ಕೇಂದ್ರ ಸಚಿವ ವಿ.ಸೋಮಣ್ಣ ಅವರಿದ್ದರು.

ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆಗೆ ಮನವಿ

ಕರ್ನಾಟಕ ರಾಜ್ಯದ ನೀರಾವರಿ ಯೋಜನೆ/ವಿಷಯಗಳಿಗೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ಗಮನ ಸೆಳೆಯಬಯಸುತ್ತೇನೆ. ಕೇಂದ್ರ ಸರಕಾರದ ಅನುಮತಿಗಾಗಿ ಬಾಕಿಯಿರುವ ಕರ್ನಾಟಕದ ಮೇಕೆದಾಟು ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಅನುಷ್ಠಾನದ ಕುರಿತು ತಾವು ವೈಯಕ್ತಿಕವಾಗಿ ಗಮನ ಹರಿಸಬೇಕು ಎಂದು ಮನವಿ ಮಾಡಿದ್ದಾರೆ.

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ. ಡಿ.ಕೆ.ಶಿವಕುಮಾರ್ ಅವರು ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ಅನುಮತಿ ಹಾಗೂ ಅನುದಾನ ಬಿಡುಗಡೆ ಮಾಡುವಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು. ಕೇಂದ್ರ ಸಚಿವ ಸೋಮಣ್ಣ ಇದ್ದರು.

ರಾಯರ ಮಠಕ್ಕೆ ಆರಾಧನೆಗೆ ಅವಕಾಶ

ಗಂಗಾವತಿ: ತಾಲೂಕಿನ ಆನೆಗೊಂದಿ ಗ್ರಾಮದ ಸಮೀಪದ ತುಂಗಭದ್ರಾ ನದಿ ನಡುಗಡ್ಡೆಯ ನವ ವೃಂದಾವನದಲ್ಲಿನ ಮಧ್ವಮತದ ಪ್ರಚಾರಕ

ಕವೀಂದ್ರ ತೀರ್ಥರ ಹಾಗೂ ವಾಗೀಶ ತೀರ್ಥರ ಆರಾಧನೆಗೆ ಮೊದಲ ಒಂದೂವರೆ ದಿನಕ್ಕೆ ಪೂಜೆ ಮಾಡಲು ಅವಕಾಶ ನೀಡುವಂತೆ ಉತ್ತರಾಧಿಮಠ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ತಳ್ಳಿಹಾಕಿದೆ. ಇದರಿಂದ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠಕ್ಕೆ ಮೊದಲ ಒಂದೂವರೆ ದಿನ ಪೂಜೆ ಮಾಡಲು ಅವಕಾಶ ಸಿಕ್ಕಿದೆ.

ಕಳೆದ 2024ರ ಜುಲೈ 3ರ ಸುಪ್ರೀಂಕೋರ್ಟ್ ಆದೇಶದಂತೆ ಪದ್ಮನಾಭ ತೀರ್ಥರು, ಕವೀಂದ್ರ ತೀರ್ಥರು ಹಾಗೂ ವಾಗೀಶ ತೀರ್ಥರ ಆರಾಧನೆಯ ಮೊದಲ ಒಂದುವರೆ ದಿನ ಮಂತ್ರಾಲಯ ರಾಘವೇಂದ್ರ ಮಠಕ್ಕೆ ಅವಕಾಶ ಇದೆ. ಉಭಯ ಮಠಗಳಿಂದ ಇಲ್ಲಿನ ಯತಿಗಳ ವೃಂದಾವನಗಳಿಗೆ (ಜೀವಂತ ಸಮಾಧಿ) ತಲಾ ಮೂರು ದಿನಗಳ ಕಾಲ ಆರಾಧನೆ ನೆರವೇರಿಸುವ ಸಂಪ್ರದಾಯವಿದೆ. ಮೊದಲ ದಿನ ಪೂರ್ವಾರಾಧನೆ, ಎರಡನೇ ದಿನ ಮಧ್ಯಾರಾಧನೆ ಮತ್ತು ಮೂರನೇ ದಿನ ಉತ್ತರ ಆರಾಧನೆ ನೆರವೇರಿಸಲಾಗುತ್ತದೆ.

ಏನಿದು ವಿವಾದ?

ಆರಾಧನೆಯ ಮೊದಲ ಒಂದುವರೆ ದಿನ ಯಾವ ಮಠದಿಂದ ಪೂಜೆ ಮಾಡಬೇಕು ಎಂಬುವುದರ ಬಗ್ಗೆ ಉಭಯ ಮಠಗಳ ಮಧ್ಯೆ ದಶಕದಿಂದ ವಿವಾದ ಇದೆ. ಗಂಗಾವತಿಯ ತಾಲೂಕು, ಕೊಪ್ಪಳದ ಜಿಲ್ಲಾ ನ್ಯಾಯಾಲಯ ಹಾಗೂ ಧಾರವಾಡದ ಹೈಕೋರ್ಟ್ ನಂತರ ಇದೀಗ ವಿವಾದ ಸುಪ್ರೀಂ ಅಂಗಳದಲ್ಲಿ ಇದೆ. ಹಿಂದಿನ ಆದೇಶವನ್ನು ಪುನರ್ ಪರಿಶೀಲಿಸಿ ಆರಾಧನೆಯ ಮೊದಲ ಒಂದುವರೆ ದಿನ ಉತ್ತರಾಧಿ ಮಠಕ್ಕೆ ಅವಕಾಶ ನೀಡುವಂತೆ ಮಠದ ಪರ ವಕೀಲರು, ಮೇಲ್ಮನವಿ ಸಲಿಸಿದ್ದರು. ಈಗಲೂ ಸುಪ್ರೀಂಕೋರ್ಟ್, ಹಿಂದಿನ ಆದೇಶವನ್ನು ಎತ್ತಿ ಹಿಡಿದಿದೆ. ಮುಂದಿನ ಆದೇಶ ಏ.23ರಂದು ಪ್ರಕಟಿಸಲಿದ್ದು, ಅಲ್ಲಿವರೆಗೂ ಈ ಹಿಂದಿನ ಆದೇಶ ಜಾರಿಯಲ್ಲಿರಲಿದೆ ಎಂದು ತೀರ್ಪು ನೀಡಿದೆ ಎಂದು ತಿಳಿದು ಬಂದಿದೆ. ಏ.5 ಮತ್ತು 6 ಮತ್ತು 7 ರಂದು ಕವೀಂದ್ರ ತೀರ್ಥರ ಆರಾಧನೆ. ನಂತರ ಏ.15, 16 ಮತ್ತು 17ರಂದು ವಾಗೀಶ ತೀರ್ಥರ ಆರಾಧನೆ ನಡೆಯಲಿದೆ.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಭೀಕರ ಅಪಘಾತ

ಅಪಘಾತ: ನಾಲ್ವರು ದುರ್ಮರಣ

ಮಂಡ್ಯ: ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಕಾರಿಗೆ ಐರಾವತ ಬಸ್ ಡಿಕ್ಕಿಯಾದ ಪರಿಣಾಮ ನಾಲ್ವರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಭೀಕರ ಅಪಘಾತ ಮಂಡ್ಯ ತಾಲೂಕು ತೂಬಿನಕೆರೆ ಎಕ್ಸಿಟ್ ಬಳಿ ನಡೆದಿದೆ.

ಕಾರು ಮೈಸೂರು ಕಡೆಗೆ ಹೊರಟಿತ್ತು. ಈ ವೇಳೆ ಎಕ್ಸ್‌ಪ್ರೆಸ್‌ವೇನಿಂದ ಎಕ್ಸಿಟ್ ಆಗುವಾಗ ಕಾರು ಚಾಲಕನಿಗೆ ಗೊಂದಲ ಉಂಟಾಗಿದ್ದು, ಮತ್ತೆ ಕಾರನ್ನು ಎಕ್ಸ್‌ಪ್ರೆಸ್ ವೇಗೆ ತಿರುಗಿಸಿದ್ದಾನೆ. ಇದೇ ವೇಳೆ ಹಿಂದಿನಿಂದ ಕೆಎಸ್ ಆರ್‌ಟಿಸಿ ಐರಾವತ ಬಸ್ ಬಂದಿದ್ದು, ಎದುರಿಗೆ ಬಂದ ಕಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಅಪಘಾತದಲ್ಲಿ ಇಬ್ಬರು ಮಹಿಳೆಯರು ಸೇರಿ ನಾಲ್ವರು ಸಾವನ್ನಪ್ಪಿದ್ದಾರೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಮೃತರನ್ನು ಬೆಂಗಳೂರಿನ ಜೆಪಿ ನಗರದವರೆಂದು ಗುರುತಿಸಲಾಗಿದೆ, 52 ವರ್ಷದ ಸತ್ಯಾನಂದ ರಾಜೇ ಅರಸ್, ಪತ್ನಿ ನಿಶ್ಚಿತಾ, ಚಂದ್ರು ಮತ್ತು ಸುವೇದಿನಿ ರಾಣಿ ಎಂದು ಗುರುತಿಸಲಾಗಿದೆ, ಸ್ಥಳಕ್ಕೆ ದಕ್ಷಿಣ ವಲಯ ಐಜಿ ಬೋರಲಿಂಗಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಹೆಂಡತಿ, ಮಕ್ಕಳನ್ನು ಕೊಂದು ಆತ್ಮಹತ್ಯೆ

ಕಲಬುರಗಿ: ಕೌಟುಂಬಿಕ ಕಲಹ ಹಿನ್ನೆಲೆ ಪತ್ನಿ ಹಾಗೂ ತನ್ನಿಬ್ಬರು ಮಕ್ಕಳನ್ನು ಕೊಂದು ವ್ಯಕ್ತಿಯೊಬ್ಬ ತಾನು ಆತ್ಮಹತ್ಯೆಗೆ ಮಾಡಿಕೊಂಡ ಹೃದಯವಿದ್ರಾವಕ ಘಟನೆ ನಗರದ ಗಾಬರೆ ಲೇಔಟ್ ನ ಅಪಾರ್ಟ್‌ಮೆಂಟ್ ವೊಂದರಲ್ಲಿ ನಡೆದಿದೆ.

ಜೆಸ್ಕಾಂ ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂತೋಷ್ ಕೊರಳಿ (45) ಆತ್ಮಹತ್ಯೆಗೆ ಶರಣಾದ ವ್ಯಕ್ತಿಯಾಗಿದ್ದು, ಆತ್ಮಹತ್ಯೆಗೂ ಮುನ್ನ, ತನ್ನ ಪತ್ನಿ ಶೃತಿ (35) ಹಾಗೂ ಇಬ್ಬರು ಮಕ್ಕಳಾದ ಮುನಿಶ್(09) ಮೂರು ತಿಂಗಳ ಹಸುಗೂಸು ಅನಿಶ್ ನನ್ನು ಹತ್ಯೆಗೈದಿದ್ದಾನೆ. ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ದುರ್ಘಟನೆ ನಡೆದಿದ್ದು, ಘಟನಾ ಸ್ಥಳಕ್ಕೆ ಪೊಲೀಸ್ ಆಯುಕ್ತ ಡಾ.ಶರಣಪ್ಪ ಭೇಟಿ ಪರಿಶೀಲನೆ ನಡೆಸಿದರು. ಕಳೆದ ಏಳು ವರ್ಷದಿಂದ ಎರಡೂ ಕುಟುಂಬಗಳ ನಡುವೆ ಯಾವುದೇ ಸಂಪರ್ಕ ಇರಲಿಲ್ಲ. ಮೃತ ಸಂತೋಷ ಬುಧವಾರ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದಂತೆ ಮತ್ತೆ ಗಲಾಟೆ ಶುರುವಾಗಿ ಈ ಘಟನೆ ನಡೆದಿದೆ. ಮೇಲ್ನೋಟಕ್ಕೆ ಇದೊಂದು ಕೌಟುಂಬಿಕ ಕಲಹಕ್ಕೆ ಎನ್ನುವುದು ಗೊತ್ತಾಗಿದೆ ಎಂದು ಘಟನಾ ಸ್ಥಳದಲ್ಲಿ ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಮಾಹಿತಿ ನೀಡಿದರು.

ಸ್ಥಳಕ್ಕೆ ಆಗಮಿಸಿದ ಕೆಬಿಜೆಎನ್‌ಎಲ್ ಅಧಿಕಾರಿಗಳ ವಿರುದ್ಧ ಆಕ್ರೋಶ

ಉಪಕಾಲುವೆ ಗೇಟ್ ತೆಗೆದು ನೀರು ಹರಿಸಿದ ರೈತರು

ಕೆಂಭಾವಿ: ಭತ್ತ ಬೆಳೆದ ಹೊಲಗಳಿಗೆ ನೀರು ಬಿಡಿ ಎಂದು ಅನೇಕ ಬಾರಿ ಪ್ರತಿಭಟನೆ ಮಾಡಿ ಅಂಗಲಾಚಿದರೂ ನೀರು ಬಿಡದ ಸರಕಾರದ ವಿರುದ್ಧ ತೊಡೆತಟ್ಟಿ ಸ್ವಯಂ ಉಪ ಕಾಲುವೆಯ ಗೇಟ್ ತೆಗೆದು ನೀರು ಬಿಟ್ಟುಕೊಂಡ ಘಟನೆ ಪಟ್ಟಣದ ಸಮೀಪ ಮುದನೂರ ಗ್ರಾಮದ ನಾರಾಯಣಪುರ ಎಡದಂಡೆ ಕಾಲುವೆ ಬಳಿ ನಡೆದಿದೆ.

ನಾರಾಯಣಪುರ ಎಡದಂಡೆ ಕಾಲುವೆ ಉಪ ಕಾಲುವೆಯ ಗೇಟ್ ನಂ.ಡಿ-11 ಹಾಗೂ 10 'ಎ' ಗೇಟ್‌ನ್ನು ಸ್ವಯಂ ರೈತರೇ ತೆಗೆದು ತಮ್ಮ ಹೊಲಗಳಿಗೆ ನೀರು ಹರಿಸಿಕೊಂಡಿದ್ದಾರೆ. ಗುರುವಾರ ಬೆಳಗ್ಗೆ ಈ ಸುದ್ದಿ ತಿಳಿಯುತ್ತಿದ್ದಂತೆ ಕೆಬಿಜೆಎನ್‌ಎಲ್ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಗೇಟ್ ಬಂದ್ ಮಾಡಲು ಪ್ರಯತ್ನಿಸಿದಾಗ ರೈತರು ಅದಕ್ಕೆ ಪ್ರತಿರೋಧ ತೋರಿದರು. ಗೇಟ್ ಬಂದ್ ಮಾಡದಂತೆ ಅಧಿಕಾರಿಗಳನ್ನು ತಡೆದರು.

ಸುದ್ದಿ ಎಲ್ಲೆಡೆ ಕಾಡ್ಗಿಚ್ಚಿನಂತೆ ಹರಡುತ್ತಿದ್ದಂತೆ ಮುದನೂರ ಗ್ರಾಮ ಸೇರಿದಂತೆ ಈ ಭಾಗದ ರೈತರು ಹಾಗೂ ಮಹಿಳೆಯರು ಕಾಲುವೆಯ ಪಕ್ಕದಲ್ಲೆ ಟೆಂಟ್ ಹೊಡೆದು ಧರಣಿಗೆ ಕುಳಿತರು. ಕೆಬಿಜೆಎನ್‌ಎಲ್ ಇಇ ರವಿಕುಮಾರ ಧರಣಿಗೆ ಕೂತ ರೈತರನ್ನು ಮನವೊಲಿಸಲು ಪ್ರಯತ್ನಿಸಿದರೂ ಫಲಿಸಲಿಲ್ಲ.

ಓರ್ವ ಡಿಎಸ್‌ಪಿ, 4 ಜನ ಸಿಪಿಐ, 6 ಪಿಎಸ್‌ಐ ಹಾಗೂ ಸುಮಾರು 50 ಕ್ಕೂ ಪೊಲೀಸ್ ಸಿಬ್ಬಂದಿಯೊಂದಿಗೆ ಸ್ಥಳದಲ್ಲಿ ಬಂದೋಬಸ್ತ್ ಒದಗಿಸಲಾಗಿತ್ತು.

ಪ್ರಾಣ ಹೋದರೂ ನೀರು ಹರಿಸುತ್ತೇವೆ: ಈ ಸಂದರ್ಭದಲ್ಲಿ ಮಾತನಾಡಿದ ಅನೇಕ ರೈತರು, ಪಕ್ಕದ ಬಿಜಾಪುರ ಜಿಲ್ಲೆಯ ಸಿಂದಗಿ, ಇಂಡಿ ಹಾಗೂ ಕಲಬುರಗಿಯ ಜೇವರ್ಗಿ ತಾಲೂಕುಗಳಿಗೆ ಯಾವುದೇ ತೊಂದರೆಯಾಗದಂತೆ ಮುಖ್ಯಕಾಲುವೆಗೆ ನೀರು ಹರಿಸಲಾಗುತ್ತಿದೆ. ಆದರೆ ಉಪ ಕಾಲುವೆಗಳಿಗೆ ನೀರು ಹರಿಸಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಸದ್ಯ ಬೆಳೆಗಳಿಗೆ ನೀರು ಬಿಡದಿದ್ದರೆ ನಾವು ಪ್ರಾಣ ಬಿಡಬೇಕಾದ ಪರಿಸ್ಥಿತಿ ಬಂದೊದಗಿದೆ. ಬೆಳೆಗಳಿಗೆ ಲಕ್ಷಗಟ್ಟಲೆ ಸಾಲ ಮಾಡಲಾಗಿದೆ. ಬೆಳೆ ಕೈಗೆ ಬರದಿದ್ದರೆ ಆತ್ಮಹತ್ಯೆ ಒಂದೆ ದಾರಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾವು ಯಾವದೇ ಕಾರಣಕ್ಕೂ ಉಪ ಕಾಲುವೆಯ ಗೇಟ್ ಬಂದ್ ಮಾಡಲು ಬಿಡುವುದಿಲ್ಲ, ನಮ್ಮ ಪ್ರಾಣ ಹೋದರೂ ನಮ್ಮ ಹೊಲಗಳಿಗೆ ನೀರು ಹರಿಸುತ್ತೇವೆ ಎಂದು ತಿಳಿಸಿದರು.

ಕೆಂಭಾವಿ ಸಮೀಪ ಮುದನೂರ ಗ್ರಾಮದ ನಾರಾಯಣಪುರ ಎಡದಂಡೆ ಕಾಲುವೆಯ ಗೇಟ್ ನಂ. ಡಿ-11 ರ ಹತ್ತಿರ ಧರಣಿ ಕುಳಿತಿರುವ ಮುದನೂರ ಗ್ರಾಮದ ರೈತರು ಹಾಗೂ ಮಹಿಳೆಯರು.

ರಾಜಣ್ಣ ಧ್ವನಿ ಅಡಗಿಸಲು ಯಾರಿಂದಲೂ ಸಾಧ್ಯವಿಲ್ಲ: ರಾಜೇಂದ್ರ

ಹತ್ಯೆ ಸಂಚಿಗೆ ಕಾರಣ ಗೊತ್ತಿಲ್ಲ

ಮೈಸೂರು: ಸಚಿವ ರಾಜಣ್ಣ ಅವರ ಧ್ವನಿ ಅಡಗಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಎಂಎಲ್‌ಸಿ ರಾಜೇಂದ್ರ ಪ್ರತಿಕ್ರಿಯೆ ನೀಡಿದ್ದಾರೆ.

ಹನಿಟ್ರ್ಯಾಪ್ ಗೆ ಯತ್ನ ಮತ್ತು ಹತ್ಯೆಗೆ

ಸುಪಾರಿ ಪ್ರಕರಣ ಸಂಬಂಧ ಮೈಸೂರಿನಲ್ಲಿ ಮಾತನಾಡಿದ ಅವರು, ನಮ್ಮನ್ನು ಟ್ರ್ಯಾಪ್ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಹತ್ಯೆ ಮಾಡಲು ಕೂಡ ಸಂಚು ನಡೆದಿದೆ. ನಾವು ಈಗಾಗಲೇ ದೂರು ಕೊಟ್ಟಿದ್ದೇವೆ ಯಾರು ಯಾಕೆ ಈ ರೀತಿ ಟಾರ್ಗೆಟ್ ಮಾಡಿದರು ಗೊತ್ತಿಲ್ಲ. ನಾವೇನು ರಿಯಲ್ ಎಸ್ಟೇಟ್ ಮಾಡಲ್ಲ. ಮೊದಲು ವಿಷಯ ತಿಳಿದಾಗ ತಮಾಷೆ ಅನ್ನಿಸುತ್ತೆ. ಆಮೇಲೆ ಯಾವಾಗ ಹನಿ ಟ್ರ್ಯಾಪ್ ಯತ್ನ ಆಯಿತೋ ನಾನೇ ಗಂಭೀರವಾಗಿ ತೆಗೆದುಕೊಂಡೆ. ನಮ್ಮ ತಂದೆ ಅವರು ಕೂಡ ಈ ವಿಚಾರವನ್ನು ಗಂಭೀರವಾಗಿ ಆಗಿ ತೆಗೆದುಕೊಂಡರು. ಈಗ ಆಡಿಯೊ ಅನುಸರಿಸಿ ಕೆಲವರನ್ನು ಅರೆಸ್ಟ್ ಮಾಡಿ ತನಿಖೆ ಮಾಡುತ್ತಿದ್ದಾರೆ. ಸಿಐಡಿ ತನಿಖೆಯಿಂದ ಎಲ್ಲಾ ಹೊರ ಬರಲಿದೆ. ಇದು ರಾಜಕೀಯ ಪಿತೂರಿನಾ ರಾಜಕಾರಣನಾ..? ವೈಯಕ್ತಿಕ ದ್ವೇಷನಾ ಗೊತ್ತಾಗತ್ತೆ ಎಂದು ಹೇಳಿದರು.

ಬುಧವಾರ ಐಜಿ ಅವರಿಗೆ ಮನವಿ ಮಾಡಲು ಹೋಗಿದ್ದೆ. ಅವರು ದೆಹಲಿಗೆ ಹೋಗಿದ್ದರು. ಹೀಗಾಗಿ ಸಿಗಲಿಲ್ಲ. ಹೆಚ್ಚಿನ ಭದ್ರತೆ ಬಗ್ಗೆ ಲೆಟರ್ ಕೊಟ್ಟಿದ್ದೇನೆ. ಮುಂದೆ ಏನು ಮಾಡುತ್ತಾರೆ. ತನಿಖೆಯಿಂದ ಈ ಸಂಚಿನ ಸತ್ಯ ತಿಳಿಯಲಿದೆ ಎಂದರು.

ಮಹಾನಾಯಕ ಯಾರು ಗೊತ್ತಿಲ್ಲ

ಪ್ರಕರಣದ ಹಿಂದೆ ಯಾರಿದ್ದಾರೆ ಗೊತ್ತಿಲ್ಲ. ನಾನಾಗಲಿ ನನ್ನ ತಂದೆ ಆಗಲಿ ಯಾರ ಹೆಸರನ್ನೂ ಹೇಳಿಲ್ಲ. ಆ ಪಕ್ಷ ಈ ಪಕ್ಷ ಯಾರಿದ್ದಾರೆ ಗೊತ್ತಿಲ್ಲ . ಈ ಪಿತೂರಿಯಿಂದ ಯಾರೇ ಇದ್ದರೂ ಒಳ್ಳೆದಾಗಲ್ಲ. ಮಹಾನಾಯಕ ಯಾರು ಗೊತ್ತಿಲ್ಲ. ಮಹಾನಾಯಕ ಅಂತ ಮೀಡಿಯಾ ಅವರೇ ಹೆಸರು ಕೊಟ್ಟಿರೋದು. ನೀವೇ ಯಾರು ಅಂತ ಹೇಳಿ. ರಮೇಶ್ ಜಾರಕಿಹೊಳಿ ಮಹಾನಾಯಕ ಯಾರು ಅಂತ ಹೆಸರು ಹೇಳಿಲ್ಲ ಎಂದು ಎಂಎಲ್‌ಸಿ ರಾಜೇಂದ್ರ ತಿಳಿಸಿದರು.

ಅತ್ಯಾಚಾರಕ್ಕೆ ಯತ್ನ: ಬಂಧನ

ಹರಪನಹಳ್ಳಿ: ತಾಲೂಕಿನ ಉಚ್ಚಂಗಿದುರ್ಗ ಜಾತ್ರೆಗೆ ಬಂದಿದ್ದ

ಮಹಿಳೆ ತನ್ನ ಇಬ್ಬರು ಮಕ್ಕಳ ಜತೆಗೆ ಮಂಗಳವಾರ ರಾತ್ರಿ ಮನೆಗೆ ಖಾಸಗಿ ಬಸ್ನಲ್ಲಿ ಮರಳುತ್ತಿದ್ದ ವೇಳೆ ಅತ್ಯಾಚಾರಕ್ಕೆ ಯತ್ನ ನಡೆದಿದೆ. ಈ ಸಂಬಂಧ ಮೂವರು ಆರೋಪಿಗಳನ್ನು ಅರಸೀಕೆರೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೊಟ್ಟೂರು ತಾಲೂಕು ಅಲಬೂರಿನ ಚಾಲಕ ಪ್ರಕಾಶ ಮಡಿವಾಳ, ಡಗ್ಗಿ ಬಸಾಪುರ ಗ್ರಾಮದ ರಾಜಶೇಖರ ಮತ್ತು ಅರಸೀಕೆರೆಯ ಬಾರಿಕರ ಸುರೇಶ್ ಬಂಧಿತ ಆರೋಪಿಗಳು.

ದಾವಣಗೆರೆ ಜಿಲ್ಲೆಯ ಸಂತ್ರಸ್ತ ಮಹಿಳೆ ಮಂಜುನಾಥ' ಹೆಸರಿನ ಖಾಸಗಿ ಬಸ್‌ನಲ್ಲಿ ತೆರಳುತ್ತಿದ್ದರು. ಆರೋಪಿ ಚಾಲಕ ಚೆನ್ನಾಪುರ ಗ್ರಾಮದ ರಸ್ತೆಯಲ್ಲಿ ಬಸ್ ನಿಲ್ಲಿಸಿ ಆಕೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ. ರಾಜಶೇಖರ ಮತ್ತು ಸುರೇಶ ಸಹಕರಿಸಿದರು. ಮಹಿಳೆ ಹಾಗೂ ಮಕ್ಕಳು ಚೀರಾಡುವುದನ್ನು ಕೇಳಿಸಿಕೊಂಡ ಬೈಕ್ ಸವಾರರು ಬಸ್ ಒಳಗೆ ಪ್ರವೇಶಿಸಿದಾಗ, ಮಹಿಳೆ ಸ್ಥಿತಿ ಕಂಡು ಮಾಹಿತಿ ನೀಡಿದರು. ಅದರಂತೆ ಬಸ್ ಜಪ್ತಿ ಮಾಡಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಕ್ಫ್ ಬಗ್ಗೆ ಮಾತನಾಡಲಾರೆ

ಧಾರವಾಡ: ವಕ್ಫ್ ಕಾಯಿದೆ ತಿದ್ದುಪಡಿ ವಿಚಾರವಾಗಿ ಪಕ್ಷದ ಹಿರಿಯರು ಮಾತನಾಡಿದ್ದಾರೆ. ಖರ್ಗೆ, ರಾಹುಲ್ ಗಾಂಧಿ ಮಾತನಾಡಿದ್ದಾರೆ. ಹೀಗಾಗಿ, ಆ ಬಗ್ಗೆ ನಾನು ಮಾತನಾಡಲಾರೆ ಎಂದು ಸಚಿವೆ ಲಕ್ಷ್ಮೀ

ಹೆಬ್ಬಾಳ್ಕರ್ ಪ್ರತಿಕ್ರಿಯಿಸಿದ್ದಾರೆ.

ಯತ್ನಾಳ್ ಉಚ್ಚಾಟನೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಅವರು ಭಾಗಿಯಾಗಿದ್ದರು. ಉಚ್ಚಾಟನೆ ಅವರ ಪಕ್ಷದ ವಿಚಾರ. ಆ ಬಗ್ಗೆ ನಾವು ಏನೂ ಹೇಳುವುದಿಲ್ಲ. ಯತ್ನಾಳ್ ಅವರು ನಮ್ಮ ಪಕ್ಷದ ವಿರುದ್ಧ ಮಾತನಾಡಿದಾಗಲೂ ನಾವು ಖಂಡಿಸಿದ್ದೇವೆ. ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಮಾತ್ರ ಅವರು ನಮಗೆ ಬಾಂಧವರು ಎಂದರು.

ಸಚಿವ ಸಂಪುಟ ವಿಸ್ತರಣೆ ವಿಚಾರದ ಬಗ್ಗೆ ಮಾತನಾಡಿ, ಸಿಎಂ ಸಚಿವ ಸಂಪುಟ ವಿಸ್ತರಣೆ ಇಲ್ಲ ಅಂದಿದ್ದಾರೆ. ಜಿ.ಪಂ ತಾ.ಪಂ ಚುನಾವಣೆ ಇದೆ. ಹೀಗಾಗಿ, ವಿಸ್ತರಣೆ ಆಗೋದಿಲ್ಲ ಅನಿಸುತ್ತದೆ. ಆದರೆ, ಹೈಕಮಾಂಡ್ ನಿರ್ಧಾರ ಏನು ತೆಗೆದುಕೊಳ್ಳುತ್ತದೆ ಗೊತ್ತಿಲ್ಲ ಎಂದು ಹೇಳಿದರು.

ಆ ತೆರಿಗೆ ಹಣ ತರಲು ಬಿಜೆಪಿಗೆ ಹೇಳಿ. ಬೇರೆ ರಾಜ್ಯಗಳಿಗೆ ಹೋಲಿಸಿದಲ್ಲಿ ನಮ್ಮಲ್ಲಿ ಹಾಲಿನ ದರ ಕಡಿಮೆ ಇದೆ. ಬೆಲೆ ಏರಿಕೆ ನಾನು ಸಮರ್ಥನೆ ಮಾಡುತ್ತಿಲ್ಲ. ಆರೋಪವೂ ಮಾಡುತ್ತಿಲ್ಲ. ಬೆಲೆ ಏರಿಕೆಗಳ ಬಗ್ಗೆ ಚರ್ಚೆ ಆಗಬೇಕಿದೆ ಎಂದು ಹೇಳಿದರು.

ಕರ್ನಾಟಕಕ್ಕೆ ಕೇಂದ್ರ, ಬಿಜೆಪಿ ಸರಕಾರ ಅನ್ಯಾಯ

ಬೆಲೆ ಏರಿಕೆ ಸಲುವಾಗಿ ಬಿಜೆಪಿ ಹೋರಾಟ ವಿಚಾರಕ್ಕೆ ಮಾತನಾಡಿ, ಕಳೆದ ನಾಲ್ಕು ವರ್ಷ ಬಿಜೆಪಿ ಸರಕಾರದಲ್ಲಿ ಬೆಲೆ ಏರಿಕೆ ಆಗಿಲ್ವಾ? ಹಾಲು, ಪೆಟ್ರೋಲ್, ಡೀಸೆಲ್, ದಿನಸಿ ದರ ಏರಿಕೆ ಆಗಲೇ ಇಲ್ಲವಾ?. ಬಿಜೆಪಿ ಪ್ರತಿಭಟನೆ ಡಂಬಾಚಾರದ ನಾಟಕ ಪ್ರದರ್ಶನ. ಮೊದಲು ಕರ್ನಾಟಕಕ್ಕೆ ಬರಬೇಕಿರೋ ತೆರಿಗೆ ಹಣ ತಂದು ಕೊಡಲು ಹೇಳಿ. ಕರ್ನಾಟಕಕ್ಕೆ ಕೇಂದ್ರ, ಬಿಜೆಪಿ ಸರಕಾರ ಅನ್ಯಾಯ ಮಾಡುತ್ತಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಮಹಿಳೆಯರಿಗೆ ಪ್ರಮೋದ್ ಮುತಾಲಿಕ್ ಸಲಹೆ

ಬ್ಯಾಗ್‌ನಲ್ಲಿ ತ್ರಿಶೂಲ ಇಟ್ಕೊಳ್ಳಿ

ಹುಬ್ಬಳ್ಳಿ: ಮಹಿಳೆಯರು ಬ್ಯಾಗ್‌ನಲ್ಲಿ ತ್ರಿಶೂಲ ಇಟ್ಟುಕೊಳ್ಳಿ. ಅತ್ಯಾಚಾರಿಗಳು, ಕೊಲೆಗಡುಕರು,



ಲವ್ ಜಿಹಾದ್ ಮಾಡುವವರಿಗೆ ತ್ರಿಶೂಲ ದಿಂದ ಚುಚ್ಚಿ ಎಂದು ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಪ್ರಚೋದನ ಕಾರಿ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನೇಹಾ ಹಿರೇಮಠ ಹತ್ಯೆಯಾಗಿ ಏ.18 ಕ್ಕೆ ಒಂದು ವರ್ಷ ಆಗುತ್ತೆ. ಅಂದು ಶ್ರೀರಾಮಸೇನೆ ಒಂದು ಸಾವಿರ ಮಹಿಳೆಯರಿಗೆ ತ್ರಿಶೂಲ ದೀಕ್ಷೆ ನೀಡಲಿದೆ. ಮಹಿಳೆಯರು ತಮ್ಮ ಬ್ಯಾಗ್‌ನಲ್ಲಿ ಈ ತ್ರಿಶೂಲ ಇಟ್ಟುಕೊಳ್ಳಲಿ. ಇಂತಹವರು ಯಾರಾದ್ರು ಬಂದ್ರೆ ಚುಚ್ಚಿ. ಅತ್ಯಾಚಾರಿಗಳು, ಕೊಲೆಗಡುಕರು, ಲವ್ ಜಿಹಾದ್ ಮಾಡುವವರಿಗೆ ಚುಚ್ಚಿ. ಕಾಂಗ್ರೆಸ್ ಮಹಿಳೆಯರ ರಕ್ಷಣೆ ಮಾಡಲ್ಲ. ಕಾಂಗ್ರೆಸ್ ಇರೋದು ಮುಸ್ಲಿಮರ ರಕ್ಷಣೆಗಾಗಿ, ಅವರ ವೋಟ್‌ಗಾಗಿ ಜೊಲ್ಲು ಸುರಿಸುತ್ತಾರೆ ಎಂದು ಮುತಾಲಿಕ್ ವಾಗ್ದಾಳಿ ನಡೆಸಿದ್ದಾರೆ.

ಅನ್ಯಕೋಮಿನ ಯುವಕನ ಟಾರ್ಚರ್‌ನಿಂದ ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಗೆ ದಾಖಲಾಗಿರುವ ಯುವತಿಯನ್ನು ಮುತಾಲಿಕ್ ಭೇಟಿಯಾದರು. ಯುವತಿ ಆರೋಗ್ಯದ ಬಗ್ಗೆ ವಿಚಾರಿಸಿ ಕುಟುಂಬಸ್ಥರಿಗೆ ಧೈರ್ಯ ತುಂಬಿದರು.

ಕಳೆದ ಎರಡು ದಿನಗಳ ಹಿಂದೆ ಅನ್ಯಕೋಮಿನ ಯುವಕ ಸಿರಾಜ್ ಯುವತಿಗೆ ಟಾರ್ಚರ್ ನೀಡುತ್ತಿದ್ದ. ಧಾರವಾಡ ಜಿಲ್ಲೆಯ ಕುಂದಗೋಳ ನಿವಾಸಿ ಯುವತಿಗೆ ಟಾರ್ಚರ್ ನೀಡಿದ್ದ. ಖಾಸಗಿ ಫೋಟೊ ಇಟ್ಕೊಂಡು ಬ್ಲ್ಯಾಕ್ ಮೇಲ್ ಮಾಡಿದ್ದ. ಇದರಿಂದ ಮನನೊಂದು ಯುವತಿ ಆತ್ಮಹತ್ಯೆಗೆ ಯತ್ನಸಿದ್ದಳು. ಆಕೆಯನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣ ಸಂಬಂಧ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಆಗ ಯುವರಾಜ, ಈಗ ಎ.ರಾಜಾ!

ಸನಾತನಿಗಳನ್ನು ಮತ್ತು ಸನಾತನ ಧರ್ಮವನ್ನು ಕಾಲಾನುಕಾಲಕ್ಕೆ ಹೀಗಳೆಯದಿದ್ದರೆ ಕೆಲವರಿಗೆ ತಿಂದ ಅನ್ನ ಅರಗುವುದಿಲ್ಲ, ಕಣ್ಣಿಗೆ ನಿದ್ರೆ ಹತ್ತುವುದಿಲ್ಲ ಎನಿಸುತ್ತದೆ. ಈ ಮಾತಿಗೆ ಇತ್ತೀಚಿನ ಎರಡು ಉದಾಹರಣೆಗಳು- ತಮಿಳುನಾಡಿನ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಮತ್ತು ಕೇಂದ್ರದ ಮಾಜಿ ಸಚಿವ, ಹಾಲಿ ಸಂಸದ ಮತ್ತು ಡಿಎಂಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಎ.ರಾಜಾ. ತಮಿಳುನಾಡಿನ 'ಯುವರಾಜ'ರೆಂದೇ ಅವರಿವರಿಂದ ಕರೆಸಿಕೊಳ್ಳುವ ಉದಯನಿಧಿಯವರು 2023ರ ಸೆಪ್ಟೆಂಬರ್‌ನಲ್ಲಿ ಸಮಾವೇಶವೊಂದರಲ್ಲಿ ಮಾತನಾಡುತ್ತಾ, ''ಸನಾತನ ಧರ್ಮವು ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ವಿರುದ್ಧವಾಗಿದ್ದು, ಅದನ್ನು ನಿರ್ಮೂಲನೆ ಮಾಡಬೇಕು'' ಎಂಬ ಆಣಿಮುತ್ತನ್ನು ಉದುರಿಸಿದ್ದರ ಜತೆಗೆ ಸನಾತನ ಧರ್ಮವನ್ನು ಕರೋನಾ, ಮಲೇರಿಯಾ ಮತ್ತು ಡೆಂಘೀ ಕಾಯಿಲೆಗಳಿಗೂ ಹೋಲಿಸಿದ್ದರು. ಈ ಮಾತಿನ ಮುಂದುವರಿದ ಭಾಗವೋ ಎಂಬಂತೆ ಎ.ರಾಜಾ ಅವರು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮೊನ್ನೆ ಮಾತನಾಡುತ್ತಾ, ''ಹಿಂದೂ ಧರ್ಮದ ಸಂಕೇತಗಳು, ಚಿಹ್ನೆಗಳನ್ನು ಧರಿಸಬೇಡಿ. ತಿಲಕ-ಕೇಸರಿಗಳನ್ನು ತ್ಯಜಿಸಿ, ಸಂಘಿಗಳಿಗಿಂತ ಭಿನ್ನವಾಗಿರಿ'' ಎಂದು ಕರೆನೀಡಿದ್ದಾರೆ. ಪಕ್ಷದ ನಾಯಕರು ಭಾಗವಹಿಸುವ ಯಾವುದೇ ಕಾರ್ಯಕ್ರಮದಲ್ಲೂ ಕಾರ್ಯಕರ್ತರು ಹೀಗೇ ನಡೆದುಕೊಳ್ಳಬೇಕು ಎಂಬುದು ರಾಜಾ ಅವರು ಹೊರಡಿಸಿರುವ ಫರ್ಮಾನು! ಈ ಯುವರಾಜರು ಮತ್ತು ರಾಜರ ಮಾತುಗಳನ್ನು ಕೇಳುತ್ತಿದ್ದರೆ, ಇದು ಅಸಹಿಷ್ಣುತೆಯ ಪರಮಾವಧಿಯೋ ಅಥವಾ ಅವಿವೇಕದ ಬಹಿರಂಗ ಪ್ರದರ್ಶನವೋ? ಎಂಬ ಪ್ರಶ್ನೆ ಮೂಡುವುದರಲ್ಲಿ ಅಚ್ಚರಿಯಿಲ್ಲ. ಕಾರಣ, ಒಂದು ವಯೋಮಾನವನ್ನು ದಾಟಿದ ನಂತರ ವ್ಯಕ್ತಿಗಳು, ಅದರಲ್ಲೂ ನಿರ್ದಿಷ್ಟವಾಗಿ ಸಾರ್ವಜನಿಕ ಜೀವನದಲ್ಲಿ ಇರುವಂಥವರು/ಆಯಕಟ್ಟಿನ ಜಾಗಗಳನ್ನು ಅಲಂಕರಿಸಿರುವವರು ತಮ್ಮ ಮಾತು ಹಾಗೂ ಕೃತಿಗಳಲ್ಲಿ ಪ್ರಬುದ್ಧರಾಗುತ್ತಾ ಹೋಗಬೇಕಾಗುತ್ತದೆ. ಆದರೆ ಮೇಲಿನ ಎರಡು ನಿದರ್ಶನಗಳಲ್ಲಿ ಕಾಣಬರುವುದು ವ್ಯತಿರಿಕ್ತ ಬೆಳವಣಿಗೆ. ಸನಾತನ ಧರ್ಮವು ಜನಿಸಿದ ಭೂಮಿಯಲ್ಲೇ ಅದರ ಕುರಿತು ಹೀಗೆ ವಿಷ ಕಾರುವ ವರ್ತನೆಯನ್ನು 'ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ' ಯತ್ನ ಎನ್ನದೆ ವಿಧಿಯಿಲ್ಲ...

ಸೊಂಪಾದಕೀಯ

ಬೈಕ್‌ಗೆ ಬ್ರೇಕ್

ಮಹಾನಗರಗಳಲ್ಲಿ ಕೆಲಸ ಮಾಡುವ ಜನ ಹೆಚ್ಚಾಗಿ ಸಾರ್ವಜನಿಕ ಸಾರಿಗೆಯನ್ನು ನಂಬಿರುತ್ತಾರೆ. ಅವುಗಳಲ್ಲಿ ಬಸ್, ಟ್ರೈನ್ ಸಂಚಾರ ಕಾಮನ್. ಆದರೆ ಇವುಗಳನ್ನು ನಂಬಿಕೊಂಡರೆ ಸಮಯಕ್ಕೆ ಸರಿಯಾಗಿ ಆಫೀಸು/ಮನೆ ತಲುಪುವ ಗ್ಯಾರಂಟಿ ಇಲ್ಲದೇ ಇರುವುದರಿಂದ ಕೆಲವರು ಆಟೋ/ಟ್ಯಾಕ್ಸಿಗಳ ಮೊರೆಹೋಗುತ್ತಾರೆ. ಹಾಗಾಗಿ ಈ ಆಟೋ, ಟ್ಯಾಕ್ಸಿಗಳ ಆಟಾಟೋಪ ಹೆಚ್ಚಾಗಿರುವುದು ಎಲ್ಲರಿಗೂ ಗೊತ್ತು. ಇದನ್ನು ಬಿಟ್ಟರೆ ಈಗ ಬೈಕ್ ಟ್ಯಾಕ್ಸಿಗಳ ಮೇಲೂ ಜನ ಅವಲಂಬಿತರಾಗಿದ್ದಾರೆ. ಆದರೆ ಆಟೋ ಮತ್ತು ಕ್ಯಾಬ್ ಡ್ರೈವರ್‌ಗಳ ಕಣ್ಣು ಈಗ ಬೈಕ್ ಟ್ಯಾಕ್ಸಿ ಮೇಲೆ ಬಿದ್ದಿದೆ. ಜನ ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಬೈಕಿನಲ್ಲಿ ಹೋದರೆ ತಮ್ಮ ಗತಿ ಏನು ಅನ್ನುವಂತೆ ಈಗ ಎಲ್ಲೆಂದರಲ್ಲಿ ಬೈಕ್ ಟ್ಯಾಕ್ಸಿ ಓಡಿಸುವವರ ಮೇಲೆ ಆಟೋ ಮತ್ತು ಕ್ಯಾಬ್ ಡ್ರೈವರ್‌ಗಳು ಹಲ್ಲೆ ಮಾಡುವ ಘಟನೆಗಳು ನಡೆದಿದೆ ಮತ್ತು ಈ ಬೈಕ್ ಟ್ಯಾಕ್ಸಿ ಸೇವೆಯ ಮೇಲೆ ದೂರು ಕೂಡ ಕೊಟ್ಟಾಗಿದೆ. ಅದರ ಪರಿಣಾಮವಾಗಿ ಈಗ ಕೋರ್ಟು ಬೈಕ್ ಟ್ಯಾಕ್ಸಿಗಳಿಗೆ ಕಡಿವಾಣ ಹಾಕುತ್ತಿದೆ. ಸದ್ಯದ ಆದೇಶದ ಪ್ರಕಾರ ಇನ್ನು ಆರು ವಾರಗಳಲ್ಲಿ ಬೈಕ್ ಟ್ಯಾಕ್ಸಿ ನಿಲ್ಲಿಸುವಂತೆ ಸೂಚನೆ ನೀಡಲಾಗಿದೆ. ಓಲಾ, ಊಬರ್, ರ್‍ಯಾಪಿಡೋ ಮುಂತಾದ ಕಂಪನಿಗಳು ನಡೆಸುತ್ತಿರುವ ಬೈಕ್ ಟ್ಯಾಕ್ಸಿ ಈಗ ಸ್ಥಗಿತಗೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಗಿದೆ. ಇತ್ತೀಚಿಗೆ ಬೆಂಗಳೂರಿನಂಥ ಮಹಾನಗರಗಳಲ್ಲಿ ಬೈಕ್ ಟ್ಯಾಕ್ಸಿ ಓಡಿಸುವ ಸವಾರರ ಮೇಲೆ ಹಲ್ಲೆ ನಡೆದ ಘಟನೆಗಳು ಕೂಡ ನಡೆದಿವೆ. ಒಟ್ಟಿನಲ್ಲಿ ತಮ್ಮ ರೆಗ್ಯುಲರ್ ಕೆಲಸ ಮಾಡಿಕೊಂಡು ಉಳಿದ ಸಮಯದಲ್ಲಿ ತಮ್ಮದೇ ಹಾದಿಯಲ್ಲಿ ಬರುವ ಪ್ರಯಾಣಿಕರನ್ನು ಕೂಡಿಸಿಕೊಂಡು ಬೈಕ್ ಓಡಿಸಿಕೊಂಡು ಅಷ್ಟೋ ಇಷ್ಟೋ ಸಂಪಾದನೆ ಮಾಡುತ್ತಿದ್ದ ಬೈಕ್ ಸವಾರರು ಈಗ ತಮ್ಮ ವ್ಯವಹಾರವನ್ನು ನಿಲ್ಲಿಸಬೇಕಾದ ಅಗತ್ಯ ಎದುರಾಗಿದೆ. ಬೈಕ್ ಟ್ಯಾಕ್ಸಿಗೆ ಬ್ರೇಕ್ ಹಾಕುವ ಈ ನಿರ್ಧಾರ ಎಷ್ಟು ಸಮಂಜಸ ಎಂಬ ಪ್ರಶ್ನೆ ಈಗ ಎಲ್ಲರದ್ದು. ಆಟೋ, ಕ್ಯಾಬ್‌ನವರು ಮನಸ್ಸಿಗೆ ಬಂದಂತೆ ರೇಟು ನಿಗದಿಪಡಿಸಿ ಪ್ರಯಾಣಿಕರನ್ನು ಸುಲಿಗೆ ಮಾಡುವುದನ್ನು ತಕ್ಕಮಟ್ಟಿಗೆ ತಪ್ಪಿಸುತ್ತಿದ್ದ ಬೈಕ್ ಟ್ಯಾಕ್ಸಿಗಳ ಮೇಲಿನ ಈ ಕಠಿಣ ನಿರ್ಧಾರ ಪ್ರಯಾಣಿಕರಿಗೂ ಬರೆ ಹಾಕಿದಂತಾಗಿದೆ ಎಂಬುದು ಮಾತ್ರ ಸತ್ಯ.

ಸಂಪಾದಕರ ಸದ್ಯಶೋಧನೆ

ಇನ್ನಷ್ಟು ಅಚ್ಚರಿಯ ಸಂಗತಿಗಳು

ಜಪಾನಿನ ಕೆಲವು ಸಂಗತಿಗಳು ಅನ್ಯದೇಶಿಗರಿಗೆ ವಿಚಿತ್ರವಾಗಿ, ವಿಲಕ್ಷಣವಾಗಿ ಕಂಡರೆ ಆಶ್ಚರ್ಯವೇನಿಲ್ಲ. ಅಂಥ ಒಂದು ದೃಶ್ಯ ಹೀಗಿದೆ ನೋಡಿ- ಜನದಟ್ಟಣೆ (ಪೀಕ್ ಅವರ್) ಸಮಯದಲ್ಲಿ ರೈಲ್ವೆ ಪ್ಲಾಟ್‌ಫಾರ್ಮ್‌ಗಳು ಪ್ರಯಾಣಿಕರಿಂದ ತುಂಬಿ ತುಳುಕುತ್ತವೆ. ವಿಶ್ವದಲ್ಲೇ ಹೆಚ್ಚು ಜನನಿಬಿಡತೆ ಹೊಂದಿರುವ ಟೋಕಿಯೋ ನಗರದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಮಂದಿ ಸಾರ್ವಜನಿಕ ಸಾರಿಗೆಯನ್ನು ಬಳಸುತ್ತಾರೆ. ಅಲ್ಲಿನ ರೈಲುಗಳು ಯಾವತ್ತೂ ಸಾಮರ್ಥ್ಯಕ್ಕಿಂತ ಹೆಚ್ಚು ಭರ್ತಿಯಾಗಿ ಚಲಿಸುತ್ತವೆ. ಕೆಲವು ಸಲ ರೈಲಿನಲ್ಲಿ ಅದೆಷ್ಟು ಜನ ತುಂಬಿರುತ್ತಾರೆಂದರೆ ರೈಲಿನ ಬಾಗಿಲನ್ನು ಹಾಕಲು ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿ ಪ್ರತಿ ಬೋಗಿಯ ಪಕ್ಕದಲ್ಲಿ ಪ್ರಯಾಣಿಕರನ್ನು ಬೋಗಿಯೊಳಗೆ ತಳ್ಳಲೆಂದೇ ಒಬ್ಬ ವ್ಯಕ್ತಿಯನ್ನು ನೇಮಿಸಿರುತ್ತಾರೆ. ಆ ವ್ಯಕ್ತಿ ಅದೆಷ್ಟು ಬಲವಾಗಿ ತಳ್ಳುತ್ತಾನೆಂದರೆ ಒಂದೇ ತೆಕ್ಕೆಗೆ 10-15 ಮಂದಿ ಬೋಗಿಯೊಳಗೆ ತೂರಿಕೊಂಡುಬಿಡುತ್ತಾರೆ. ಹತ್ತಿಯನ್ನು ಚೀಲದಲ್ಲಿ ಹಾಕಿ ಗಿಡಿಯುವಂತೆ ಜನರನ್ನೂ ಬೋಗಿಯೊಳಗೆ ಹಾಕಿ ತಳ್ಳುತ್ತಾನೆ. ಆತನಿಗೆ ಜನರನ್ನು ಬೋಗಿಯೊಳಗೆ ತಳ್ಳುವುದೇ ಕೆಲಸ. ರೈಲುಗಳ ಸಂಚಾರವನ್ನು ಹೆಚ್ಚಿಸುವ ಬದಲು, ಜಪಾನ್ ರೈಲ್ವೆ ಇಲಾಖೆ ಪ್ರಯಾಣಿಕರನ್ನು ತಳ್ಳಲು ಜನರನ್ನು ನೇಮಿಸಿಕೊಂಡಿರುವುದು ವಿಚಿತ್ರವಾದ ಸತ್ಯ. ಸಾಮಾನ್ಯವಾಗಿ, ಯಾವುದೇ ದೇಶದಲ್ಲಿ ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ಒಂಟಿಯಾಗಿ ಊಟ ಮಾಡುತ್ತಾರೆ. ಆದರೆ ಜಪಾನಿನಲ್ಲಿ ಜನ ರೆಸ್ಟೋರೆಂಟುಗಳಲ್ಲಿ ಒಂಟಿಯಾಗಿ ಊಟ ಮಾಡುವುದು ಸಾಮಾನ್ಯ. ಅಲ್ಲಿನ ಎಷ್ಟೋ ರೆಸ್ಟೋರೆಂಟುಗಳಲ್ಲಿ ಒಬ್ಬರಿಗೆ ಮಾತ್ರ ಕುಳಿತು ಆಹಾರ ಸೇವಿಸಲು ಅನುವು ಮಾಡಿಕೊಡುವ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಅಂಥ ರೆಸ್ಟೋರೆಂಟುಗಳಿಗೆ ಜನ ಫ್ಯಾಮಿಲಿಯನ್ನು ಕರೆದುಕೊಂಡು ಬರುವುದಿಲ್ಲ. ಜಪಾನಿ ಸಂಸ್ಕೃತಿಯ ಬಗ್ಗೆ ಅಚ್ಚರಿ ಮೂಡಿಸಿದ ಇನ್ನೊಂದು ಸಂಗತಿಯೆಂದರೆ, ಪ್ರತಿಯೊಬ್ಬರೂ ಹುಟ್ಟುವಾಗಲೇ ಒಂದು ವರ್ಷ ದೊಡ್ಡವರಾಗಿರುತ್ತಾರೆ. ಇದನ್ನು ಅವರು ಕಜೋಡೋಶಿ ಎಂದು ಕರೆಯುತ್ತಾರೆ; ಇದರರ್ಥ 'ಎಣಿಸಿದ ವರ್ಷಗಳು'. ಹುಟ್ಟಿದ ಮರುದಿನ ಮಗುವಿನ ವಯಸ್ಸು ಎಷ್ಟು ಎಂದು ಕೇಳಿದರೆ, ಒಂದು ವರ್ಷ ಎಂದು ಹೇಳುತ್ತಾರೆ. ಜಪಾನಿನಲ್ಲಿ ಅಧಿಕ ತೂಕದ ಸುಮೋ ಕುಸ್ತಿಪಟುಗಳಿದ್ದರೂ, ಇತರರು ದಪ್ಪಗಿರುವುದನ್ನು ಅವರು ಸಹಿಸುವುದಿಲ್ಲ. 2008ರಲ್ಲಿ, ದೇಶದಲ್ಲಿನ ಬೊಜ್ಜು ಪ್ರಮಾಣ ಮತ್ತು ಇತರ ಚಯಾಪಚಯ ಅಸ್ವಸ್ಥತೆಗಳನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ 'ಮೆಟಾಬೊ ನಿಯಮ' ಎಂಬ ಕಾನೂನನ್ನು ಅಂಗೀಕರಿಸಲಾಯಿತು. 40ರಿಂದ 74 ವರ್ಷ ವಯಸ್ಸಿನ ಜನರು ತಮ್ಮ ಸೊಂಟದ ಗಾತ್ರವನ್ನು ವರ್ಷವರ್ಷವೂ ಅಳೆಯುತ್ತಾರೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ, ಅಧಿಕ ತೂಕಕ್ಕೆ ಯಾವುದೇ ಕಾನೂನು ಶಿಕ್ಷೆಯಿಲ್ಲ. ಆದರೆ ಉತ್ತಮ ಫಿಟ್ನೆಸ್ ಹೊಂದಿರುವುದನ್ನು ಶ್ರೇಷ್ಠತೆ ಎಂದು ಭಾವಿಸುತ್ತಾರೆ. ಪೌಷ್ಟಿಕ ಆಹಾರ ಮತ್ತು ವ್ಯಾಯಾಮದ ಕುರಿತು ಜಪಾನಿಯರು ಕಾಲಕಾಲಕ್ಕೆ ವೃತ್ತಿಪರರಿಂದ ಸಲಹೆ ಪಡೆಯುವುದು ಸಹ ಸಾಮಾನ್ಯ. ಜಪಾನಿನಲ್ಲಿ ಇಂದಿಗೂ 'ಚಕ್ರವರ್ತಿ ವ್ಯವಸ್ಥೆ' ಚಾಲ್ತಿಯಲ್ಲಿದೆ. ಚಕ್ರವರ್ತಿಯು ವಿಶ್ವದ ಅತ್ಯಂತ ಹಳೆಯ ನಿರಂತರ ರಾಜಮನೆತನವಾಗಿದೆ. ಇತ್ತೀಚಿನ ಚಕ್ರವರ್ತಿಯಾದ ನರುಹಿತೊ 2019ರಲ್ಲಿ ಅಧಿಕಾರಕ್ಕೆ ಬಂದರು. ಚಕ್ರವರ್ತಿ ರಾಷ್ಟ್ರದ ಪ್ರಮುಖರಾ ಗಿದ್ದರೂ, ಅವರಿಗೆ ರಾಜಕೀಯ ಅಧಿಕಾರವಿಲ್ಲ. ನೀವು ಜಪಾನಿನ ಕೆಲವು ಮನೆಗಳಿಗೆ ಹೋದರೆ ಆಘಾತವಾದೀತು. ಕಾರಣ ನೀವು ಆ ಮನೆಗಳಿಗೆ ಹೋದಾಗ ಅಲ್ಲಿ ಏನನ್ನೂ ಕಾಣಲು ಸಾಧ್ಯವಿಲ್ಲ. ಕೆಲವು ಮನೆಗಳಲ್ಲಿ ಕುರ್ಚಿ, ಸೋಫಾ, ಟೀಪಾಯ್, ಮಂಚ. ಟಿವಿ, ಫ್ರಿಜ್, ವಾಷಿಂಗ್ ಮಷೀನ್ ಮುಂತಾದ ಯಾವ ವಸ್ತು, ಪೀಠೋಪಕರಣಗಳನ್ನು ಕಾಣಲು ಸಾಧ್ಯವಿಲ್ಲ. ಜಪಾನಿಗಳ ಪೈಕಿ ಅನೇಕರು ಮಿತ ವಸ್ತು (ಮಿನಿಮಲಿಸ್ಟ್) ಬಳಸುವವರು. ಜಪಾನಿಯರ ಮನೆ ಮತ್ತು ಆಂತರಿಕ ವಿನ್ಯಾಸದಲ್ಲಿ ಮಿನಿಮಲಿಸ್ಟ್ ತತ್ವವನ್ನು ಅನುಸರಿಸಲಾಗುತ್ತದೆ. ಕಡಿಮೆ ವಸ್ತುಗಳನ್ನು ಬಳಸಿಕೊಂಡು ಹೆಚ್ಚಿನ ಶಾಂತಿಯನ್ನು ಒದಗಿಸುವ ವಿಧಾನವನ್ನು ಜಪಾನಿಯರು ಇಷ್ಟಪಡುತ್ತಾರೆ.

ಗಡ್ಡಕಿಂತ ವಾಸಿ ಕಣೋ ಬ್ಲೇಡಿನ ದಾಸ್ಯ!

ಜಗತ್ತಿನ ಗಂಡಸರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು- ಗಡ್ಡ ಬಿಡುವವರು ಮತ್ತು ಗಡ್ಡ ಬೋಳಿಸುವವರು. ಅಂತೆಯೇ ಹೆಂಗಸರನ್ನು ಕೂಡ ಎರಡು ವಿಭಾಗವಾಗಿಸಬಹುದು- ಗಡ್ಡವನ್ನು ಒಪ್ಪುವವರು ಮತ್ತು ಗಡ್ಡವನ್ನು ಸಹಿಸದವರು. ಇಬ್ಬರಲ್ಲೂ ಎರಡನೇ ಗುಂಪಿನವರದ್ದೇ ಬಹುಮತ !

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

Beards: Because a lion without a mane is just a big cat. ''ಗಂಡಸಾದವನು ಗಡ್ಡ ಬೇಡಬೇಕು- ಏಕೆಂದರೆ ಕೇಸರವಿಲ್ಲದ ಕೇಸರಿ- ಗಡ್ಡವಿಲ್ಲದ ಸಿಂಹ ದೊಡ್ಡ ಬೆಕ್ಕಿಗೆ ಸಮಾನ''- ಹೀಗೊಂದು ಮಾತು ಅಮೆರಿಕದ ಗಂಡು ಸಂತತಿಯಲ್ಲಿ ಅತ್ಯಂತ ಪ್ರಚಲಿತವಿದೆ. ಹಾಗೆ ನೋಡಿದರೆ, ಅಮೆರಿಕದಲ್ಲಿ ಗಡ್ಡ ಮತ್ತು ಮೀಸೆ ಬಿಡುವವರ ಪ್ರಮಾಣ ಕಡಿಮೆ. ಹೆಚ್ಚಿನವರದು ಕ್ಲೀನ್ ಶೇವ್. ಅದರಲ್ಲೂ ಗಡ್ಡ ತೆಗೆದು ಮೀಸೆಯಷ್ಟೇ ಬಿಡುವವರಂತೂ ಇಲ್ಲವೇ ಇಲ್ಲ ಎಂದರೂ ಸರಿ. ಸಾವಿರಕ್ಕೆ ಒಬ್ಬರು ಇಬ್ಬರು. ಒಂದಿಡೀ ದಿನ ಇಲ್ಲಿನ ನಗರದ ಬೀದಿಗಳಲ್ಲಿ ಸುತ್ತಿದರೆ ಅಪರೂಪಕ್ಕೆ ಎಲ್ಲೋ ಒಂದಿಬ್ಬರು ಮೀಸೆ ಮಾತ್ರ ಬಿಟ್ಟವರು ಕಾಣಸಿಗಬಹುದು. ಅಂಥವರು ಗುಂಪಿನಲ್ಲಿ ವಿಚಿತ್ರವಾಗಿ ಕಂಡು ಗಮನ ಸೆಳೆಯುತ್ತಾರೆ.

ಓದುಗರಾದ ರಾಜು ಹಗ್ಗದ ಅವರು ಈಗೊಂದು ತಿಂಗಳ ಹಿಂದೆ ಹೀಗೊಂದು ಇ-ಮೇಲ್ ಕಳುಹಿಸಿದ್ದರು. ''ಸರ್, ನಿಮ್ಮ ಲೇಖನಗಳನ್ನು ತಪ್ಪದೆ ಪ್ರತಿ ವಾರ ಓದುವ ಓದುಗ ನಾನು. ನನ್ನದೊಂದು ವಿನಂತಿಯಿದೆ. ನಾನು ಇತ್ತೀಚೆಗೆ ಮೊಟ್ಟ ಮೊದಲಬಾರಿ ಗಡ್ಡ ಬಿಟ್ಟಿದ್ದೇನೆ. ಆದರೆ ನನ್ನ ಹೆಂಡತಿ ದಿನಬೆಳಗಾದರೆ 'ಗಡ್ಡ ನಿಮಗೆ ಸರಿ ಕಾಣುವುದಿಲ್ಲ, ತೆಗೆಯಿರಿ' ಎನ್ನುತ್ತಾಳೆ. ಮನೆಯಲ್ಲಿ, ಕುಟುಂಬದಲ್ಲಿ ಎಲ್ಲಿಲ್ಲದ ವಿರೋಧ. ದಯವಿಟ್ಟು ಗಡ್ಡದ ಬಗ್ಗೆ ಲೇಖನವೊಂದನ್ನು ಬರೆಯಿರಿ ಸರ್. ಆ ಲೇಖನವನ್ನು ಅವಳ ಮುಂದಿಟ್ಟಾದರೂ ನನ್ನ ಗಡ್ಡವನ್ನು ಉಳಿಸಿಕೊಳ್ಳುತ್ತೇನೆ. ಉಳಿಸಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ''. ಆಗೀಗ ಓದುಗರಿಂದ ಇಂಥದ್ದೊಂದು ವಿಷಯದ ಮೇಲೆ ಬರೆಯಿರಿ ಎಂಬ ತಾಕೀತು ಬರುವುದು ಸಾಮಾನ್ಯ. ಆದರೆ ಇದು ಕೇವಲ ಅಂಥ ಕೋರಿಕೆ ಅಲ್ಲ. ಓದುಗರೊಬ್ಬರ ಗಡ್ಡದ ಅಳಿವು ಉಳಿವಿನ ಪ್ರಶ್ನೆ. ಸುಮ್ಮನೆ ಏನೋ ಒಂದು ಸಬೂಬು ಕೊಟ್ಟುಬಿಡುವಂತೆಯೂ ಇಲ್ಲ. ಆದರೆ ಈ ವಿಷಯದ ಮೇಲೆ ಅಧಿಕೃತವಾಗಿ ಬರೆಯುವುದು ಹೇಗೆ? ಯಾವುದೇ ವಿಷಯವಿರಲಿ, ಸಾಧ್ಯವಾದಲ್ಲಿ ಅದನ್ನು ಅನುಭವಿಸಿಯೇ ಬರೆಯಬೇಕು. ಆದರೆ ಖುದ್ದು ನನಗೇ ಗಡ್ಡ ಬಿಟ್ಟು ಗೊತ್ತಿಲ್ಲ. ಅಂತೂ ರಾಜು ಅವರ ಬಳಿ 'ಸ್ವಲ್ಪ ಸಮಯ ಕೊಡಿ' ಎಂದು ನನ್ನ ಗಡ್ಡ ಬೆಳೆಸುವ ಕಾರ್ಯಕ್ರಮಕ್ಕೆ ವಿಧ್ಯುಕ್ತವಾಗಿ ತಯಾರಾದೆ.

ಜಗತ್ತಿನ ಗಂಡಸರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಗಡ್ಡ ಬಿಡುವವರು ಮತ್ತು ಗಡ್ಡ ಬೋಳಿಸುವವರು. ಅಂತೆಯೇ ಹೆಂಗಸರನ್ನು ಕೂಡ ಎರಡು ವಿಭಾಗವಾಗಿಸಬಹುದು. ಗಡ್ಡವನ್ನು ಒಪ್ಪುವವರು ಮತ್ತು ಗಡ್ಡವನ್ನು ಸಹಿಸದವರು. ಗಂಡಸರಲ್ಲಿ ಮತ್ತು ಹೆಂಗಸರಲ್ಲಿ ಇಬ್ಬರಲ್ಲೂ ಎರಡನೇ ಗುಂಪಿನವರದ್ದೇ ಬಹುಮತ. ಗಡ್ಡ ಬಿಡುವ ಗಂಡ, ಅದನ್ನು ಸಹಿಸುವ ಹೆಂಡತಿ ಬಹಳ ಅಪರೂಪದ ಜಾತಕದ ಹೊಂದಾಣಿಕೆ ಅದು. ಸದಾ ಗಡ್ಡ ತೆಗೆಯುವವರಿಗೆ ಅಪರೂಪಕ್ಕೆ ಗಡ್ಡ ಬೆಳೆಸುವುದು ಸುಲಭದ ಕೆಲಸವೇ ಅಲ್ಲ. ನೂರೆಂಟು ಸವಾಲುಗಳು. ಕ್ಲೀನ್ ಶೇವ್ ಮಾಡುವವರು ಗಡ್ಡ ಬಿಡಬೇಕು ಎಂದು ನಿರ್ಧರಿಸಿದಲ್ಲಿ, ಈ ಒಂದಿಷ್ಟು ಹಂತವನ್ನು ದಾಟಬೇಕಾಗುತ್ತದೆ. ಗಡ್ಡ ಸ್ವಲ್ಪ ಬೆಳೆಯಿತೆಂದುಕೊಳ್ಳಿ- ಕಾಲು ಇಂಚಿನಷ್ಟಾಗುವಾಗ ನಮ್ಮ ಇಷ್ಟೇತರರಿಗೆ ಈ ಹಂತದಲ್ಲಿ ಮುಖ ತೋರಿಸುವಂತಿಲ್ಲ. ಅಲ್ಪ ಸ್ವಲ್ಪ ಗಡ್ಡ ಬಿಟ್ಟು ಯಾವುದಾದರೂ ಕಾರ್ಯಕ್ರಮಕ್ಕೆ ಹೋದರೆ 'ಆರೋಗ್ಯ ಸರಿ ಇಲ್ಲವೇ?' ಎಂದು ಕಂಡವರೆಲ್ಲ ಪ್ರಶ್ನಿಸುತ್ತಾರೆ. ಸಾಮಾನ್ಯವಾಗಿ ಹೀಗೆ ಕೇಳುವವರಲ್ಲಿ ಗಂಡಸರೇ ಜಾಸ್ತಿ. ಅವರೂ ಪ್ರಶ್ನೆಯನ್ನು- ಗಡ್ಡವನ್ನು ಒಪ್ಪದ ಅವರವರ ಹೆಂಡತಿಯ ಮುಂದೆಯೇ ಕೇಳುವುದು. ಆಗೆಲ್ಲ ಕಾರ್ಯಕ್ರಮ ಮುಗಿಸಿ ಮನೆಗೆ ಹೋಗುವ ದಾರಿಯಲ್ಲೇ ಗಡ್ಡ ತೆಗೆಯಬೇಕಾದ ಸ್ಥಿತಿ ನಿರ್ಮಾಣವಾಗಿರುತ್ತದೆ. ಇಷ್ಟಾಗಿಯೂ, ಸಮಾಜದ ಎಲ್ಲ ಸಂಕೋಲೆಗಳನ್ನು ಮೀರಿ ಗಡ್ಡವನ್ನು ಇನ್ನಷ್ಟು ಬೆಳೆಸಲು ಮುಂದಾದರೆ ಮುಖದಲ್ಲಿ ಎಲ್ಲಿಲ್ಲದ ತುರಿಕೆ ಇತ್ಯಾದಿ. ರಾತ್ರಿ ಮಲಗಿ ಬೆಳಗೆದ್ದರೆ ಕರೆಂಟ್ ಶಾಕ್ ಹೊಡೆದ ಬೆಕ್ಕಿನ ಮುಖದಂತಾಗಿರುತ್ತದೆ. ಗಡ್ಡ ಸ್ವಲ್ಪ ಉದ್ದ ಬೆಳೆದಿದ್ದರೆ ಬೆಳಗ್ಗೆ ಎದ್ದು ಕನ್ನಡಿ ನೋಡಿಕೊಳ್ಳುವಾಗ 'ಹುಚ್ಚ ವೆಂಕಟ್' ಎದುರಿಗೆ ನಿಂತಿರುವಂತೆ ಕಾಣಿಸುತ್ತದೆ. ಸ್ನಾನ ಮಾಡದೆ ತಲೆ ಬಾಚಿ ಎಲ್ಲಿಗೆ ಬೇಕಾದರೂ ಹೊರಡಬಹುದು, ಆದರೆ ಗಡ್ಡ ಬಿಟ್ಟರೆಂದರೆ ಅದರ ರೋಮಾಂಚನವನ್ನು ಸರಿಮಾಡಿಕೊಳ್ಳಲಿಕ್ಕೆ ಸ್ನಾನವೇ ಮಾಡಬೇಕು. ಹೊಸತಾಗಿ ಗಡ್ಡ ಬಿಡಲು ಮುಂದಾದವರಿಗೆ ಮನೆಯಲ್ಲಿ, ಸಮಾಜದಲ್ಲಿ ಹೀಗೆ ಎಲ್ಲರಿಂದಲೂ ಒತ್ತಡ. ಹಾಗಾಗಿ ಗಡ್ಡ ಬೆಳೆಸುವ, ಗಡ್ಡದ ಬಗ್ಗೆ ಬರೆಯುವ ಮುನ್ನದ ಸ್ವಾನುಭವದ ಯೋಜನೆಯನ್ನು ನಾನಂತೂ ಕೌಟುಂಬಿಕ ಒತ್ತಡಗಳಿಂದಾಗಿ ಅರ್ಧಕ್ಕೇ ಕೈಬಿಡಬೇಕಾಯಿತು. ಆದರೆ ರಾಜು ಹಗ್ಗದ ಅವರು ಗಡ್ಡದ ಜವಾಬ್ದಾರಿ ನನಗೆ ವಹಿಸಿದ್ದರಿಂದ ಒಂದು ನಿರಂತರ ಮಾನಸಿಕ ಒತ್ತಡವಂತೂ ಇತ್ತು. ಈಗೊಂದು ವಾರದ ಹಿಂದೆ ರಾಜು ಕಾದು, ಸುಸ್ತಾಗಿ ಹತಾಶೆಯಿಂದ ಇನ್ನೊಂದು ಇಮೇಲ್ ಕಳುಹಿಸಿದರು. ''ಸರ್, ಕೊನೆಗೂ ನೀವು ಗಡ್ಡದ ಬಗ್ಗೆ ಬರೆಯಲೇ ಇಲ್ಲ, ಇವತ್ತು ನನ್ನ ಗಡ್ಡಕ್ಕೆ ಬೆಂಕಿ ಬಿತ್ತು'' ಎಂದರು. ಪ್ರತ್ಯುತ್ತರವಾಗಿ ''ರಾಜು ನಿಮ್ಮ ಗಡ್ಡ ಉಳಿಸಲು ಮುಂದಾಗಿದ್ದರೆ ನನ್ನ ತಲೆಯೇ ಹೋಗುತ್ತಿತ್ತು. ಗಡ್ಡ ಹೋದರೆ ಹೋಗಲಿ, ಬಿಟ್ಟರೆ ಮತ್ತೆ ಬರುತ್ತದೆ. ತಲೆ ಹಾಗಲ್ಲವಲ್ಲ!'' ಎಂದು ಸುಮ್ಮನಾದೆ.

ಒಂದು ಗಂಭೀರ ಪ್ರಶ್ನೆ. ಏಕೆ ಗಂಡಸರಿಗೆ ಗಡ್ಡ ಬರುತ್ತದೆ? ವೈಜ್ಞಾನಿಕವಾಗಿ ಎಕ್ಸ್-ವೈ ಕ್ರೋಮೋಸೋಮ್ ಇತ್ಯಾದಿ ಕಾರಣ ಕೊಟ್ಟು ವಿವರಿಸಬಹುದು. ಅಸಲಿ ಪ್ರಶ್ನೆ ಅದಲ್ಲ. ಪ್ರಶ್ನೆ- ಗಂಡಸಿರಿಗಷ್ಟೇ ಗಡ್ಡ ಏಕೆ ಬರುತ್ತದೆ? ಅದಕ್ಕೊಂದು ಅಡ್ಡನಾಡಿ ವಾದವಿದೆ. ''ಮನುಷ್ಯ 'ಮಂಗನಿಂದ ಮಾನವ' ಆದದ್ದಲ್ಲವೇ. ಹೆಣ್ಣು ಗಂಡಿಗಿಂತ ಹೆಚ್ಚಿನ ವಿಕಸನ ಹೊಂದಿರುವುದರಿಂದ ಹೆಣ್ಣಿಗೆ ಗಡ್ಡವಿಲ್ಲ, ಪರೋಕ್ಷವಾಗಿ ಗಂಡು ಇನ್ನೂ ಮಂಗನಿಗೆ ಸಮೀಪ'' ಎಂದು! ಈ ಕಥೆಯನ್ನು ಶೇ.50ರಷ್ಟು ಮಂದಿ (ಹೆಂಗಸರು) ಒಪ್ಪಲೂಬಹುದು. ಸಾಮಾನ್ಯವಾಗಿ ಯಾವುದೇ ದೇಹ ರಚನೆಯ ವಿಷಯ ಬಂದಾಗ ವಿಕಾಸವಾದದಲ್ಲಿ ಅದಕ್ಕೊಂದಿಷ್ಟು ಸಮಜಾಯಿಷಿ ಸಿಗುತ್ತದೆ. ಗಡ್ಡ ಗಂಡಸರಿಗೆ ಬರುತ್ತದೆ ಎಂದರೆ ಅದಕ್ಕೆ ಏನೋ ಒಂದು ಕಾರಣವಂತೂ ಇರಬೇಕಾಯ್ತು. ಚಳಿಗೋ, ಚರ್ಮದ ರಕ್ಷಣೆಗೂ ಏನೋ ಒಂದು ಕಾರಣಕ್ಕೆ ಎನ್ನಬಹುದು. ಆದರೆ ಹೆಣ್ಣು ಕೂಡ ಅದೇ ವಿಕಸನದ ಭಾಗವಾಗಿ ಜತೆಯಲ್ಲಿ ಬೆಳೆದವಳು. ವಾತಾವರಣ, ರಕ್ಷಣೆ ಹೀಗೆ ಯಾವುದೇ ಕಾರಣವಿರಬಹುದು. ಆದರೆ ಗಂಡಸರಲ್ಲಿ ಗಡ್ಡ ಇನ್ನೂ ಉಳಿದುಕೊಂಡಿದೆ ಎಂದರೆ ಅದರಿಂದ ಏನೋ ಒಂದು ಉಪಯೋಗ ಇದೆಯೆಂದಾಯಿತಲ್ಲ! ಉಪಯುಕ್ತ ಎಂದಾದರೆ ಹೆಂಗಸರಿಗೂ ಇರಬೇಕಿತ್ತಲ್ಲ? ಹೆಣ್ಣಿಗೇಕೆ ಈ ಅನ್ಯಾಯ? ಗಂಡು ನವಿಲಿಗೆ ಬಣ್ಣದ ಗರಿ, ಸಿಂಹಕ್ಕೆ ಕೇಸರ, ಹುಂಜಕ್ಕೆ ರೆಕ್ಕೆ ತುರಾಯಿ- ಯಾವುದೇ ಪ್ರಾಣಿಯನ್ನು, ಹಕ್ಕಿಗಳನ್ನು ತೆಗೆದುಕೊಳ್ಳಿ. ಅಲ್ಲಿ ಗಂಡೇ ಚಂದ. ಬಹುತೇಕ ಪ್ರಾಣಿಗಳ ಗಂಡಿನ ರೂಪ ರಚನೆ ಆಕರ್ಷಣೆಗೆಂದೇ ಒಂದಿಷ್ಟು ಮಾರ್ಪಡಾಗಿರುತ್ತದೆ. ಅವೆಲ್ಲವುದಕ್ಕೂ ಬೇರಿನ್ನೇನೂ ಕಾರಣವಿಲ್ಲ. ಗಂಡಿನ ಗಡ್ಡದ ಕೂದಲಿಗೂ ಅದೇ ಕಾರಣ ಆರೋಪಿಸಲಾಗುತ್ತದೆ. ಅದು ಗಂಡಸ್ತನದ ಸಂಕೇತ ಎಂದು!

ಇತಿಹಾಸದುದ್ದಕ್ಕೂ ಗಡ್ಡಕ್ಕೊಂದು ವಿಶೇಷ ಮಾನ-ಮರ್ಯಾದೆ ಇದ್ದಂತಿದೆ. ಮೆಸಪಟೋಮಿಯಾದ ಕಲ್ಲಿನ ಚಿತ್ರಗಳನ್ನು ನೋಡಿದರೆ ಅಲ್ಲಿ ವಿಶೇಷ ವ್ಯಕ್ತಿಗಳನ್ನು ಚಿತ್ರಿಸಿದಲ್ಲೆಲ್ಲ ಅವರಿಗೆ ಗಡ್ಡ ಇರುವುದು ಕಾಣಿಸುತ್ತದೆ. ಅದರಲ್ಲೂ ಮೆಸಪಟೋಮಿಯಾದ ರಾಜನ ಚಿತ್ರವೆಂದರೆ ಅವನ ಗಡ್ಡಕ್ಕೆ ನೂರೆಂಟು ಮಣಿಗಳ ಶೃಂಗಾರ, ಬೇರೆಯದೇ ಆಕಾರ. ಮೆಸಪಟೋಮಿಯಾದ ಕಾಮಧೇನುವಿನಂಥ ಆಕೃತಿಗೂ ಗಡ್ಡವಿದೆ. ಇನ್ನು ಈಜಿಪ್ಟ್‌ನ ಇತಿಹಾಸದತ್ತ ನೋಡಿದರೆ ಅವರದ್ದು ವಿಚಿತ್ರ. ಆ ರಾಜರುಗಳಿಗೆ ಗಡ್ಡವಿಲ್ಲ, ಆದರೆ ಈಜಿಪ್ಟ್ ರಾಜರು ಗಡ್ಡದಾಕೃತಿಯನ್ನು ಹೋಲುವ ಆಭರಣವನ್ನು ಧರಿಸುತ್ತಿದ್ದರು. ಅಷ್ಟೇ ಅಲ್ಲ, ಈಜಿಪ್ಟ್‌ನ ರಾಣಿಯರೂ ಈ ಗಡ್ಡದ ಆಭರಣವನ್ನು ಮುಖಕ್ಕೆ ಧರಿಸುತ್ತಿದ್ದರು. ಮೆಸಪಟೋಮಿಯಾ ಇಲ್ಲೆಲ್ಲ ಗಡ್ಡವು ಹುದ್ದೆ, ಸ್ಥಾನಮಾನ ಇವುಗಳ ಗುರುತಾದರೆ ಈಜಿಪ್ಟ್‌ನಲ್ಲಿ ಗಡ್ಡ ಬೋಳಿಸಿಕೊಳ್ಳುವ ರೂಢಿ ಬಂದರೂ ಗಡ್ಡಕ್ಕೊಂದು ವಿಶೇಷ ಸ್ಥಾನಮಾನ ಉಳಿದುಕೊಂಡದ್ದನ್ನು ಗ್ರಹಿಸಬಹುದು.

ಮೊದಲಿಂದಲೂ ಗಡ್ಡ ಎಂದರೆ ಒಂದೋ ಅದು ಶಕ್ತಿ, ಸಾಮರ್ಥ್ಯದ ಲಕ್ಷಣವಾಗಿತ್ತು. ಇಲ್ಲವೇ ಬುದ್ಧಿ ಸಾಮರ್ಥ್ಯದ ಲಕ್ಷಣವಾಗಿತ್ತು. ಅರಿಸ್ಟಾಟಲ್, ಪ್ಲೇಟೋ, ಸಾಕ್ರೆಟಿಸ್, ಭೀಷ್ಮ, ವಿದುರ ಹೀಗೆ ಬಹುತೇಕರಿಗೆ ಗಡ್ಡವಿರುವುದನ್ನು ಕಾಣಬಹುದು. ದೂರ್ವಾಸ, ರಾವಣ, ಪರಶುರಾಮ, ಹನುಮಂತ, ಅಷ್ಟೇ ಏಕೆ, ಸೃಷ್ಟಿಕರ್ತ ಬ್ರಹ್ಮನಿಗೂ ಗಡ್ಡವಿದೆಯಲ್ಲ!! ಹಾಗಾದರೆ ಅವರಿಗ್ಯಾರಿಗೂ ಕ್ಷೌರಿಕರೇ ಇರಲಿಲ್ಲವೇ? ಹಾಗಂತ ವಿಷ್ಣುವಿಗೆ, ಇಂದ್ರನಿಗೆ ಗಡ್ಡವಿಲ್ಲ. ಇವರೆಲ್ಲರಲ್ಲಿ ಯಾರಿಗೆ ಅಸಲಿಗೂ ಗಡ್ಡವಿತ್ತೋ, ಇಲ್ಲವೋ ಗೊತ್ತಿಲ್ಲ. ಆದರೆ ಲೆಕ್ಕಕ್ಕೆ ಸಿಗುವ ಇತಿಹಾಸದುದ್ದಕ್ಕೂ ಗಂಡಿನ ಗಡ್ಡವೆಂದರೆ ಅದು ಬುದ್ಧಿವಂತಿಕೆ, ಜ್ಞಾನ, ಶಕ್ತಿ, ಸಾಮರ್ಥ್ಯ ಇತ್ಯಾದಿಗಳ ದ್ಯೋತಕವಾಗಿ ಪ್ರದರ್ಶನಗೊಳ್ಳುವುದನ್ನು ಕಾಣಬಹುದು. ಗುರುಗೋವಿಂದ ಸಿಂಗ್, ಮಹಾರಾಣ ಪ್ರತಾಪ್, ಚಂದ್ರಗುಪ್ತ ಮೌರ್ಯ, ಅಶೋಕ, ಪೃಥ್ವಿರಾಜ್ ಚೌಹಾಣ್, ಹಕ್ಕ-ಬುಕ್ಕ, ಬಾಜಿರಾವ್ ಇವರಲ್ಲೆಲ್ಲ ಗಡ್ಡವೆಂದರೆ ಕ್ಷಾತ್ರ ಗುಣ ರೂಪಕಗಳು. ಗಡ್ಡವಿಲ್ಲದ ಶಿವಾಜಿಯನ್ನು, ಗಡ್ಡ ತೆಗೆದ ಮೋದಿಯನ್ನು, ಸದ್ಗುರು ಜಗ್ಗಿ ವಾಸುದೇವರನ್ನು ಕಲ್ಪಿಸಿಕೊಳ್ಳಲಿಕ್ಕಾಗುವುದಿಲ್ಲ. ತನ್ನನ್ನು ತಾನೇ ಗ್ರೇಟ್ ಎಂದು ಕರೆದುಕೊಂಡ 'ಅಲೆಕ್ಸಾಂಡರ್ ದ ಗ್ರೇಟ್' ಯುದ್ಧಕ್ಕೆಂದು ಹೊರಟಾಗ ತನ್ನ ಇಡೀ ಸೈನ್ಯಕ್ಕೆ ಗಡ್ಡ ತೆಗೆಯುವಂತೆ ಆದೇಶಿಸಿದ್ದನಂತೆ. ಗಡ್ಡವಿದ್ದರೆ ಯುದ್ಧದಲ್ಲಿ ಹೊಡೆದಾಡುವಾಗ ಎದುರಾಳಿಗಳು ಗಡ್ಡ ಹಿಡಿದು ಥಳಿಸಬಹುದು ಎಂಬ ಕಾರಣ. ಅದೇನೇ ಇರಲಿ, ಅಲೆಕ್ಸಾಂಡರ್‌ನಿಂದ ಹೊಸತೊಂದು ಟ್ರೆಂಡ್, ಪ್ರವೃತ್ತಿ ಎಲ್ಲೆಡೆ ಹರಡಿತು ಎನ್ನಲಾಗುತ್ತದೆ. ಇಂದಿಗೂ ಪ್ರಪಂಚದ ಬಹುತೇಕ ಸೇನೆಗಳಲ್ಲಿ ಗಡ್ಡ ಬೆಳೆಸುವಂತಿಲ್ಲ. ಗಡ್ಡವೆಂದರೆ ಸೈನ್ಯದಲ್ಲಿ ಬೇಶಿಸ್ತು. ಭಾರತೀಯ ಸೇನೆಯಲ್ಲಿ ಕೂಡ ಬೇಕಾಬಿಟ್ಟಿ ಗಡ್ಡ ಬೆಳೆಸುವಂತಿಲ್ಲ. ಸಿಖ್ಖರಿಗೆ ಮಾತ್ರ ಈ ವಿಷಯದಲ್ಲಿ ಪೂರ್ಣ ವಿನಾಯತಿ. ಅದು ಬಿಟ್ಟು ಇನ್ಯಾವುದೇ ಧರ್ಮದವರು ಗಡ್ಡ ಬೆಳೆಸಬೇಕೆಂದರೆ ಅದಕ್ಕೆ ಮೇಲಧಿಕಾರಿಗಳ ಮುಂಚಿತ ಅನುಮತಿ ಪಡೆದಿರಬೇಕು. ಶಬರಿಮಲೆಗೆ ಹೋಗಲು ಇತ್ಯಾದಿ ಸರಿಯಾದ ಧಾರ್ಮಿಕ ಕಾರಣ ಇರಬೇಕು. ಆ ಅನುಮತಿ ಕೂಡ ನಿಗದಿತ ಅವಧಿಗೆ ಮಾತ್ರ. ಅದಾದಮೇಲೆ ಗಡ್ಡ ತೆಗೆಯಲೇಬೇಕು. ಧೈರ್ಯ, ಸಾಮರ್ಥ್ಯ, ಶೌರ್ಯ ಇತ್ಯಾದಿಗಳ ದ್ಯೋತಕ ಗಡ್ಡವೆಂದಾದರೆ ಅವುಗಳನ್ನೇ ಮೈಮನಗಳಲ್ಲಿ ತುಂಬಿಕೊಂಡ ಸೈನಿಕರಿಗೆ ಗಡ್ಡ ಬೆಳೆಸುವ ಅನುಮತಿಯಿಲ್ಲ.

ಈ ಗಡ್ಡ ಬೆಳೆಸುವ ಟ್ರೆಂಡ್- ಬೆಲ್ ಬಾಟಂ ಪ್ಯಾಂಟಿನಂತೆ, ಉಳಿದೆಲ್ಲಾ ಫ್ಯಾಷನ್‌ಗಳಂತೆ ಆಗಾಗ ಮರುಜೀವ ಪಡೆಯುತ್ತಲೇ ಬಂದಿದೆ. 'ಕೆಜಿಎಫ್' ಚಿತ್ರದ ಯಶ್, 'ಕಾಂತಾರ'ದ ರಿಷಭ್ ಶೆಟ್ಟಿ ಹೀಗೆ ಇತ್ತೀಚಿನ ಚಲನಚಿತ್ರದ ಹೀರೋಗಳು ಗಡ್ಡದ ಪ್ರವೃತ್ತಿಗೆ ಮರುಜೀವ ಕೊಟ್ಟಿದ್ದು ಸುಳ್ಳಲ್ಲ. ಇವರಿಗೆ ಜತೆಯಾಗುವಂತಿದೆ ಭಾರತೀಯ ಕ್ರಿಕೆಟ್ ತಂಡ. ಇವತ್ತಿನ ಭಾರತೀಯ ತಂಡವನ್ನು ನೋಡಿದರೆ ಅಲ್ಲಿ ಬಹುತೇಕ ಎಲ್ಲರೂ ಗಡ್ಡ ಬಿಟ್ಟ ಆಟಗಾರರೇ- ಬಿಸಿಸಿಐನಲ್ಲಿ ಗಡ್ಡಬಿಟ್ಟರಷ್ಟೇ ಆಯ್ಕೆ ಎಂಬ ಅಲಿಖಿತ ನಿಯಮವಿದ್ದಂತೆ. ಫಜೀತಿಯೆಂದರೆ ಎಲ್ಲರೂ ಗಡ್ಡ ಬಿಟ್ಟವರೇ ಆಗಿರುವುದರಿಂದ ಬ್ಯಾಟಿಂಗ್ ಮಾಡುವಾಗ ಶಿರಸ್ತ್ರಾಣದೊಳಗೆ ಎಲ್ಲರೂ ಒಂದೇ ರೀತಿ ಕಾಣಿಸುತ್ತಾರೆ. ಕೆಲವೊಮ್ಮೆ, ಇಂಥ ಇಬ್ಬರು ಬ್ಯಾಟಿಂಗ್ ಮಾಡುವಾಗ ಔಟಾದವರು ಯಾರು ಎಂಬುದು ಆ ಕ್ಷಣಕ್ಕೆ ಗೊಂದಲವಾಗುತ್ತದೆ.

ಅಮೆರಿಕ, ಯುರೋಪ್, ಪಾಶ್ಚಿಮಾತ್ಯ ದೇಶಗಳಲ್ಲಿ ತೀರಾ ಇತ್ತೀಚಿನವರೆಗೂ ಕ್ಲೀನ್ ಶೇವ್ ಎಂದರೆ ಅದು ಶಿಸ್ತು ಎಂಬ ಭಾವನೆ ಇತ್ತು. ಆ ಭಾವನೆಯನ್ನೇ ಬ್ರಿಟಿಷರು, ಮತ್ತಿತರ ಲೂಟಿಕೋರರು ತಮ್ಮ ಆಳ್ವಿಕೆಯಲ್ಲೆಲ್ಲ ಜಾರಿಯಾಗುವಂತೆ ನೋಡಿಕೊಂಡಿದ್ದರು. ಅದು ಹಾಗೆಯೇ ಮುಂದುವರಿದುಕೊಂಡು ಬಂತು. ಇದನ್ನು ತಿರಸ್ಕರಿಸಿದ್ದು ಹಿಪ್ಪಿ ಸಂಸ್ಕೃತಿ. ತೀರಾ ಈಗೊಂದು ಐದಾರು ವರ್ಷದವರೆಗೂ ಯಾವುದೇ ದೊಡ್ಡ ಮೀಟಿಂಗ್‌ಗೆ ಹೋಗುವಾಗ ಕ್ಲೀನ್ ಶೇವ್ ಮಾಡಿಯೇ ಹೋಗಬೇಕೆಂಬ ಅಲಿಖಿತ ಕಾನೂನು ಕಾರ್ಪೊರೇಟ್ ಜಗತ್ತಿನಲ್ಲಿ ಇತ್ತು. ಆದರೆ ಕರೋನಾ ತರುವಾಯ ಇದೆಲ್ಲ ಬದಲಾಗಿದೆ. ಕರೋನಾ ಮತ್ತು ಗಡ್ಡದ ಟ್ರೆಂಡ್ ವಾಪಸ್ ಬರಲು ಒಂದಕ್ಕೊಂದು ಸಂಬಂಧವಿದೆಯೋ ಗೊತ್ತಿಲ್ಲ, ಆದರೆ ಸಾಂಕ್ರಾಮಿಕ ಸಮಯದಲ್ಲಿ ಜಿಲೆಟ್ ಕಂಪನಿಯ ಬ್ಲೇಡ್ ಮಾರಾಟ ಕೂಡ ಗಣನೀಯವಾಗಿ ಇಳಿದದ್ದನ್ನು ನೆನಪಿಸಿಕೊಳ್ಳಬಹುದು.

ಗಡ್ಡ ಬೆಳೆಸುವುದು ಸುಲಭ- ತೆಗೆಯದಿದ್ದರೆ ಅದರಷ್ಟಕ್ಕೆ ಅದೇ ಬೆಳೆದುಕೊಳ್ಳುತ್ತದೆ. ಒಂದು ವೇಳೆ ತುರಿಕೆ, ಸ್ವಚ್ಛತೆ, ಹೆಂಡತಿಯ ಒತ್ತಡ ಇತ್ಯಾದಿಯನ್ನು ಮೀರಿಯೂ ಗಡ್ಡವನ್ನು ಬೆಳೆಸಲು ಮುಂದಾದರೆ ಅದರ ನಿರ್ವಹಣೆ ಸುಲಭವಲ್ಲ. ಆದರೆ ಇಂದು ಗಡ್ಡದ ಕೂದಲು ಹೊಳೆಯುವಂತೆ ಮಾಡುವ ಜೆಲ್‌ಗಳು ಬಂದಿವೆ. ಅಷ್ಟೇ ಅಲ್ಲ, ಗಡ್ಡಕ್ಕೆಂದೇ ವಿಶೇಷ ಶ್ಯಾಂಪೂ, ಕಂಡೀಶನರ್, ಬಾಚಣಿಕೆ, ಕತ್ತರಿ, ಬಣ್ಣ ಇತ್ಯಾದಿ ಮಾರುಕಟ್ಟೆಯಲ್ಲಿ ಲಭ್ಯವಿವೆ. ಅಮೆರಿಕದಲ್ಲಂತೂ ತಲೆಕೂದಲು ಕತ್ತರಿಸುವುದಕ್ಕಿಂತ ಗಡ್ಡ ಟ್ರಿಮ್ ಮಾಡುವುದು ತುಟ್ಟಿ. ಗಡ್ಡದ ಸ್ಟೈಲ್ ಏನಾದರೂ ಬದಲಿಸಬೇಕೆಂದರೆ ತಲೆಕೂದಲು ಕತ್ತರಿಸಿದ ನಾಲ್ಕರಷ್ಟು ತೆರಬೇಕು. ಈಗೀಗ ಅಲ್ಲಲ್ಲಿ ಗಡ್ಡದ ಕೂದಲಿಗೆ ಜಡೆ ಮಾಡಿಸುವ, ಮಣಿಗಳಿಂದ ಅಲಂಕೃತಗೊಳಿಸುವ ಪ್ರವೃತ್ತಿ ಕೂಡ ಮುನ್ನೆಲೆಗೆ ಬರುತ್ತಿದೆ.

ಗಡ್ಡ ಬಿಡುವುದು ಎಂದರೆ ಶೇವಿಂಗ್‌ಗೆ ಬೇಕಾಗುವ ಹಣದ ಉಳಿತಾಯ ಎಂದು ಕೆಲವರು ಅಂದುಕೊಳ್ಳುತ್ತಾರೆ. ಆದರೆ ಶಿಸ್ತಾಗಿ ಗಡ್ಡ ಬಿಡಬೇಕೆಂದರೆ ಅದರ ಆರೈಕೆಗೂ ಸಾಕಷ್ಟು ಖರ್ಚಿದೆ. ಚಳಿ ಪ್ರದೇಶದಲ್ಲಿ ಗಡ್ಡ ತೆಗೆಯುವುದೆಂದರೆ ಅದೊಂದು ಯಮಯಾತನೆ, ಹಿಂಸೆ. ಚಳಿ ಇರುವಲ್ಲಿ ಸಹಜವಾಗಿ ಆರ್ದ್ರತೆ ತೀರಾ ಕಡಿಮೆ. ವಿಶೇಷವಾಗಿ ಗಲ್ಲದ ಸುತ್ತ ಗಡ್ಡ ತೆಗೆಯುವಾಗ ಬೆಂಕಿಯಂಥ ಉರಿಯ ಅನುಭವಾಗುತ್ತದೆ. ಹಾಗಾಗಿ ಗಡ್ಡ ತೆಗೆದಾಕ್ಷಣ ಆಫ್ಟರ್ ಶೇವ್ ಲೋಷನ್, ಒಂದಿಷ್ಟು ತೈಲೌಷಧಿಯನ್ನು ತಕ್ಷಣಕ್ಕೆ ಮುಖಕ್ಕೆ ಮೆತ್ತಿಕೊಳ್ಳಬೇಕಾಗುತ್ತದೆ. ಸ್ನಾನಕ್ಕಿಂತ ಮೊದಲು ಶೇವಿಂಗ್ ಮಾಡಿಕೊಂಡರೆ ಈ ಉರಿ ಇನ್ನಷ್ಟು ಜಾಸ್ತಿ. ಹಾಗಾಗಿ ಸ್ನಾನ ಮಾಡುವಾಗ- ಮುಖದ ಚರ್ಮ ನೀರಿನಿಂದ ನೆನೆದಿರುವುದರಿಂದ ಆನಂತರ ಗಡ್ಡ ಮಾಡಿಕೊಳ್ಳುವುದು ಉತ್ತಮ.

ಗಡ್ಡ ಬಿಡಬೇಕೋ, ಬೇಡವೋ ಎಂಬುದು ವೈಯಕ್ತಿಕ ವಿಷಯ. ಗಡ್ಡದ ವಿಷಯ ಏನೆಂದರೆ, ಇದನ್ನು ತೆಗೆಯುವವರಿಗೆ ಗಡ್ಡ ಇರುವುದೇ ತೆಗೆಯಲಿಕ್ಕೆ. ತೆಗೆಯದವರಿಗೆ ಗಡ್ಡ ಬರುವುದೇ ಬಿಡುವುದಕ್ಕೆ. ಇಬ್ಬರಿಗೂ ಒಂದೊಂದು ಸಕಾರಣವಿದೆ. ಆದರೆ ಗಡ್ಡ ಬಿಡುವ ನಿರ್ಧಾರ ಮಾಡಿದಲ್ಲಿ ಅದನ್ನು ಶಿಸ್ತಿನಿಂದ ನಿರ್ವಹಿಸುವ ಜವಾಬ್ದಾರಿಯೂ ಗಡ್ಡಧಾರಿಯದ್ದೇ ಆಗಿರುತ್ತದೆ. ಗಡ್ಡವನ್ನು ವಿರಾಟ್ ಕೊಹ್ಲಿಯಂತೆಯೂ ಬಿಡಬಹುದು, ಇಲ್ಲವೇ ಹುಚ್ಚ ವೆಂಕಟ್‌ನಂತೆಯೂ ಬಿಟ್ಟುಕೊಳ್ಳಬಹುದು. ಅದೂ ವೈಯಕ್ತಿಕವೇ. ಅದ್ಯಾವ ಉಸಾಬರಿಯೂ ಬೇಡವೆನಿಸಿದರೆ, ''ಗಡ್ಡದ ವಿಷ್ಯಾ, ಬ್ಯಾಡವೋ ಶಿಷ್ಯಾ, ಗಡ್ಡಕಿಂತ ವಾಸಿ ಕಣೋ ಬ್ಲೇಡಿನ ದಾಸ್ಯ'' ಎಂದು ಗುನುಗುತ್ತ ಶೇವ್ ಮಾಡಿಕೊಳ್ಳುವುದೇ ಉತ್ತಮ.

ಅಮೆರಿಕ ಬೀಸಿದ ದೊಣ್ಣೆಯಿಂದ ಭಾರತ ತಪ್ಪಿಸಿಕೊಂಡಿತೇ?

ಟ್ರಂಪ್ ಟಾರಿಫ್ ಬಾಂಬ್ ಬಿದ್ದ ಬಳಿಕ, ಅದರ ಸಾಧಕ-ಬಾಧಕಗಳ ಬಗ್ಗೆ ಚರ್ಚೆಯಾಗುತ್ತಿದೆ. ಹಾಗಾದರೆ, ಅಮೆರಿಕ ಬೀಸಿದ ದೊಣ್ಣೆಯಿಂದ ಭಾರತ ತಪ್ಪಿಸಿಕೊಂಡಿತೇ? ಅಥವಾ ಈ ತೆರಿಗೆ ದೊಣ್ಣೆಯ ಏಟಿಗೆ ಸ್ವತಃ ಅಮೆರಿಕನ್ನರೇ ಪೆಟ್ಟು ತಿನ್ನುವರೇ? ಇದು 'ಲಿಬರೇಶನ್ ಡೇ' ಆಗಲಿದೆಯೇ, 'ರಿಸೆಶನ್ ಡೇ' ಆಗಲಿದೆಯೇ ಎಂಬ ಟೀಕಾಸ್ತ್ರಗಳು ಸಿಡಿದಿವೆ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಡೊನಾಲ್ಡ್ ಟ್ರಂಪ್ ಯಾವ ಸಂದರ್ಭದಲ್ಲೂ ಹಾಸ್ಯಪ್ರಜ್ಞೆಯನ್ನು ಮರೆಯುವುದಿಲ್ಲ. ಅಮೆರಿಕದ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಐತಿಹಾಸಿಕ ತೆರಿಗೆ ಬದಲಾವಣೆಯ ಮುಹೂರ್ತವನ್ನು ಪ್ರಕಟಿಸುವಾಗ, ''ನಾನು ಏಪ್ರಿಲ್ 1ಕ್ಕೇ ಹೊಸ ತೆರಿಗೆಗಳ ಜಾರಿಗೆ ಬಯಸಿದ್ದೆ. ಆದರೆ 'ಮೂರ್ಖರ ದಿನ'ದ ಜೋಕ್ ಆಗಿರಬಹುದು ಎಂದು ಜನ ಭಾವಿಸಬಹುದು. ಹೀಗಾಗಿ ಒಂದು ದಿನ ನಷ್ಟವಾಗುತ್ತಿದ್ದರೂ, ಏಪ್ರಿಲ್ 2ನ್ನು ಆಯ್ಕೆ ಮಾಡಿದ್ದೇನೆ'' ಎಂದು ಚಟಾಕಿ ಹಾರಿಸಿದ್ದರು.

ಹೀಗಿದ್ದರೂ, ಟ್ರಂಪ್ ಟಾರಿಫ್ ಬಾಂಬ್ ಬಿದ್ದ ಬಳಿಕ, ಅದರ ಸಾಧಕ-ಬಾಧಕಗಳ ಬಗ್ಗೆ ಚರ್ಚೆಯಾಗುತ್ತಿದೆ. ಹಾಗಾದರೆ, ಅಮೆರಿಕ ಬೀಸಿದ ದೊಣ್ಣೆಯಿಂದ ಭಾರತ ತಪ್ಪಿಸಿಕೊಂಡಿತೇ? ಅಥವಾ ಈ ತೆರಿಗೆ ದೊಣ್ಣೆಯ ಏಟಿಗೆ ಸ್ವತಃ ಅಮೆರಿಕನ್ನರೇ ಪೆಟ್ಟು ತಿನ್ನುವರೇ? ಇದು 'ಲಿಬರೇಶನ್ ಡೇ' ಆಗಲಿದೆಯೇ, 'ರಿಸೆಶನ್ ಡೇ' ಆಗಲಿದೆಯೇ ಎಂಬ ಟೀಕಾಸ್ತ್ರಗಳು ಸಿಡಿದಿವೆ. ಜತೆಗೆ ಜಾಗತೀಕರಣ ಯುಗ ಮುಗಿಯಿತೇ? ಡಾಲರ್ ಪ್ರಾಬಲ್ಯ ಕುಸಿಯಲಿದೆಯೇ? ವಿಶ್ವ ಸಮುದಾಯದಲ್ಲಿ ಮುಂದೆ ಅಮೆರಿಕ ಏಕಾಂಗಿಯಾಗಲಿದೆಯೇ? ಬೆಲೆ ಏರಿಕೆಯ ಹೊಡೆತಕ್ಕೆ ಅಮೆರಿಕನ್ನರು ತತ್ತರಿಸಿ ಹೋಗಲಿದ್ದಾರೆಯೇ? ಅಥವಾ ಟ್ರಂಪ್ ಹೇಳಿರುವಂತೆ, ಅಮೆರಿಕದ ಬೊಕ್ಕಸಕ್ಕೆ ಟ್ರಿಲಿಯನ್‌ಗಟ್ಟಲೆ ಡಾಲರ್ ಹಣವು ಆಮದು ತೆರಿಗೆಯ ರೂಪದಲ್ಲಿ ಹರಿದುಬರಲಿದೆಯೇ? ಕಾಲವೇ ಇದಕ್ಕೆ ಉತ್ತರಿಸಲಿದೆ.

ಇನ್ನು ಮುಂದೆ ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ವಸ್ತುಗಳ ಮೇಲೆ ಶೇ.26ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ವ್ಯಾಪಾರದ ಸಮತೋಲನ ಕಾಯ್ದುಕೊಳ್ಳಲು ಇದು ಅನಿವಾರ್ಯ ಎಂದಿದ್ದಾರೆ ಟ್ರಂಪ್. ಆದರೆ ಇದರಿಂದ ಔಷಧ, ಇಲೆಕ್ಟ್ರಾನಿಕ್ಸ್ ಮತ್ತು ಜವಳಿ ಕ್ಷೇತ್ರಗಳಲ್ಲಿ ಭಾರತ ತನ್ನ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸಿಕೊಳ್ಳಲು ಹಾದಿ ಸುಗಮವಾಗಲಿದೆ ಎನ್ನುತ್ತಾರೆ ತಜ್ಞರು. ಅಮೆರಿಕಕ್ಕೆ ರಫ್ತಾಗುವ ವಸ್ತುಗಳಿಗೆ ಕನಿಷ್ಠ ಶೇ.10ರಷ್ಟು ತೆರಿಗೆಯನ್ನು ಯಾವ ದೇಶವಾದರೂ ಕೊಡಬೇಕಾಗುತ್ತದೆ. ಭಾರತದ ವಿರುದ್ಧದ ಶೇ.26ರ ತೆರಿಗೆಯು ಉನ್ನತ ಮಟ್ಟದ್ದಾಗಿದ್ದರೂ, ಅಮೆರಿಕದ ಜತೆಗೆ ವಾಣಿಜ್ಯ ಸಂಘರ್ಷದ ಬದಲಿಗೆ, ಮತ್ತಷ್ಟು ಮಾತುಕತೆಯ ಮೂಲಕ ವಿವಾದವನ್ನು ಬಗೆಹರಿಸಬಹುದು. ಸ್ಟಾಕ್ ಮಾರ್ಕೆಟ್ ಮೇಲೆ ಈಗ ಒಂದಷ್ಟು ನಕಾರಾತ್ಮಕ ಪ್ರಭಾವವಾದರೂ, ವರ್ಷದ ದ್ವಿತೀಯಾರ್ಧದಲ್ಲಿ ಚೇತರಿಸಿಕೊಳ್ಳಬಹುದು ಎಂದಿದೆ ಪ್ರೈವೇಟ್ ವೆಲ್ತ್ ಮ್ಯಾನೇಜ್ಮೆಂಟ್ ಸಂಸ್ಥೆ ಬರ್ನ್‌ಸ್ಟೀನ್ ವರದಿ. ವಾಣಿಜ್ಯ ಮಂಡಳಿ ಪಿಎಚ್‌ಡಿಸಿಸಿಐ ಪ್ರಕಾರ ಟ್ರಂಪ್ ಟಾರಿಫ್‌ನಿಂದ ಭಾರತದ ಜಿಡಿಪಿಗೆ ತಾತ್ಕಾಲಿಕವಾಗಿ ಶೇ.0.1ರಷ್ಟು ಮಾತ್ರ ನಷ್ಟವಾಗಬಹುದು. ಅದನ್ನು ಕೂಡ ಭವಿಷ್ಯದಲ್ಲಿ ಭರಿಸಿಕೊಳ್ಳಬಹುದು. ಇದಕ್ಕೆ ಕಾರಣ ಭಾರತದ ಆತ್ಮನಿರ್ಭರ, ಮೇಕ್ ಇನ್ ಇಂಡಿಯಾ, ಉತ್ಪಾದನೆ ಆಧರಿತ ಇನ್ಸೆಂಟಿವ್ ಯೋಜನೆಗಳು (PLI) ಎಂದಿದ್ದಾರೆ ಮಂಡಳಿಯ ಅಧ್ಯಕ್ಷ ಹೇಮಂತ್ ಜೈನ್. ಮೊದಲಿನಿಂದಲೂ ಭಾರತವು ತನ್ನದೇ ವಿಶಾಲ ಮಾರುಕಟ್ಟೆಯನ್ನು ಹೊಂದಿರುವುದರಿಂದ ತೊಂದರೆ ಆಗದು ಎಂದಿವೆ ಅಸೋಚೆಮ್, ಮೋರ್ಗಾನ್ ಸ್ಟ್ಯಾನ್ಲಿ ಇತ್ಯಾದಿ ಸಂಸ್ಥೆಗಳು.

ಅಮೆರಿಕದ ವಸ್ತುಗಳಿಗೆ ಭಾರಿ ತೆರಿಗೆ ವಿಧಿಸುತ್ತಿರುವ ದೇಶಗಳ ವಿರುದ್ಧ ನಾವು ಕೂಡ ಅಷ್ಟೇ ತೆರಿಗೆ ವಿಧಿಸುತ್ತೇವೆ. ಆಗ ವ್ಯಾಪಾರದಲ್ಲಿ ಸಮತೋಲನ ಸಾಧ್ಯವಾಗುತ್ತದೆ. ಅಮೆರಿಕಕ್ಕೂ ಹಣದ ಹೊಳೆ ಹರಿದುಬರಲಿದೆ ಎಂಬುದು ಟ್ರಂಪ್ ವಾದ. ಏಷ್ಯಾ ಮತ್ತು ಯುರೋಪಿನ ಹಲವು ದೇಶಗಳ ವಿರುದ್ಧ 'ರೆಸಿಪ್ರೋಕಲ್ ಟಾರಿಫ್' ಅನ್ನು ಟ್ರಂಪ್ ಘೋಷಿಸಿದ್ದಾರೆ. ಚೀನಾ ವಿರುದ್ಧ ಶೇ.34ರಷ್ಟು ತೆರಿಗೆ ಹೇರಲಾಗಿದೆ. ವಿಯೆಟ್ನಾಂಗೆ ಶೇ.32, ಥಾಯ್ಲೆಂಡ್‌ಗೆ ಶೇ.36, ಬಾಂಗ್ಲಾದೇಶಕ್ಕೆ ಶೇ.37ರಷ್ಟು ತೆರಿಗೆ ವಿಧಿಸಲಾಗಿದೆ. ಈ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತಕ್ಕೆ ಕಡಿಮೆಯಾಗಿದ್ದು, ಜಾಗತಿಕ ವ್ಯಾಪಾರ ಮತ್ತು ಉತ್ಪಾದನಾ ಕ್ಷೇತ್ರದಲ್ಲಿ ತನ್ನ ಸ್ಥಾನವನ್ನು ಗಟ್ಟಿಗೊಳಿಸಲು ಅವಕಾಶ ಸಿಕ್ಕಿದೆ.

ಭಾರತವು ಅಮೆರಿಕಕ್ಕೆ ರಫ್ತು ಮಾಡುವ ಉಕ್ಕು, ಅಲ್ಯುಮಿನಿಯಂ ಮತ್ತು ಆಟೊಮೊಬೈಲ್ ಸಂಬಂಧಿತ ಸರಕುಗಳ ಮೇಲೆ ಶೇ. 25ರಷ್ಟು ತೆರಿಗೆ ಬೀಳಲಿದೆ. ಆದರೆ ಔಷಧ, ಸೆಮಿಕಂಡಕ್ಟರ್, ಇಂಧನ ವಲಯದ ಉತ್ಪನ್ನಗಳ ರಫ್ತಿನ ಮೇಲೆ ಈ ತೆರಿಗೆ ಇರುವುದಿಲ್ಲ. ಇದು ಭಾರತಕ್ಕೆ ಅನುಕೂಲಕರವಾಗಲಿದೆ. ಒಂದು ವೇಳೆ ಔಷಧದ ರಫ್ತಿಗೂ ಸುಂಕ ಹೇರಿದ್ದರೆ ಹೆಚ್ಚಿನ ನಷ್ಟವಾಗುತ್ತಿತ್ತು. ಉಕ್ಕು ಮತ್ತು ಅಲ್ಯುಮಿನಿಯಂ ಅನ್ನು ಅಮೆರಿಕ ಖರೀದಿಸದಿದ್ದರೂ, ಭಾರತವು ಪರ್ಯಾಯ ಮಾರುಕಟ್ಟೆಯನ್ನೂ ಕಂಡುಕೊಳ್ಳಬಹುದು. ಚೀನಾದ ಹಲವು ವಸ್ತುಗಳಿಗೆ ಅಮೆರಿಕ ಪ್ರವೇಶಕ್ಕೆ ಮುನ್ನ ಶೇ.50ಕ್ಕೂ ಹೆಚ್ಚು ತೆರಿಗೆ ಬೀಳುವುದರಿಂದ, ಭಾರತದ ವಸ್ತುಗಳಿಗೆ ಬೇಡಿಕೆ ಸೃಷ್ಟಿಯಾಗಬಹುದು ಅಥವಾ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಅಮೆರಿಕದ ಮೈತ್ರಿಕೂಟದಲ್ಲಿರುವ ಐರೋಪ್ಯ ಒಕ್ಕೂಟ (ಶೇ.20), ಜಪಾನ್‌ಗೆ (ಶೇ.24) ಹೋಲಿಸಿದರೆ ಭಾರತಕ್ಕೆ ಹಾಕಿರುವುದು ಸ್ವಲ್ಪ ಜಾಸ್ತಿ ಎನ್ನಿಸಬಹುದು. ಆದರೆ ಚೀನಾಕ್ಕೆ ಹಾಕಿರುವ 54 ಪರ್ಸೆಂಟ್‌ಗೆ ಹೋಲಿಸಿದರೆ ಭಾರತಕ್ಕೆ ಕಡಿಮೆ. ಬ್ರಿಟನ್ ಮತ್ತು ಸ್ವಿಜರ್ಲೆಂಡ್‌ಗೆ ಕಡಿಮೆ ತೆರಿಗೆ ವಿಧಿಸಿದ್ದರೂ, ಭಾರತದ ರಫ್ತು ಸಾಮರ್ಥ್ಯದ ಎದುರು ಸ್ಪರ್ಧಿಸಲು ಅವುಗಳಿಗೆ ಅಸಾಧ್ಯ. ಏಷ್ಯಾದ ಇಕಾನಮಿಗಳ ಪೈಕಿ ಮಲೇಷ್ಯಾ ಮಾತ್ರ (ಶೇ.24) ಭಾರತದ ಜತೆಗೆ ಕೆಲ ಕ್ಷೇತ್ರಗಳಲ್ಲಿ ಸ್ಪರ್ಧಿಸಬಲ್ಲದು. ಹೀಗಿದ್ದರೂ, ಟ್ರಂಪ್ ಟಾರಿಫ್‌ನಿಂದ ಉಂಟಾಗಬಲ್ಲ ಪ್ರತಿಕೂಲ ಪರಿಣಾಮಗಳನ್ನೂ ಭಾರತ ಕಡೆಗಣಿಸುವಂತಿಲ್ಲ. ಮುಖ್ಯವಾಗಿ ಜವಳಿ, ಎಂಜಿನಿಯರಿಂಗ್ ಸರಕು, ಇಲೆಕ್ಟ್ರಾನಿಕ್ಸ್, ಜ್ಯುವೆಲ್ಲರಿಗಳ ರಫ್ತಿನಲ್ಲಿ ವಿನಾಯಿತಿ ಪಡೆಯುವ ನಿಟ್ಟಿನಲ್ಲಿ ಟ್ರಂಪ್ ಸರಕಾರದ ಜತೆಗೆ ಮಾತುಕತೆ ಅಗತ್ಯ.

ಭಾರತಕ್ಕೆ ಸಿಕ್ಕಿರುವ ದೊಡ್ಡ ರಿಲೀಫ್ ಎಂದರೆ, ಔಷಧಗಳ ರಫ್ತಿಗೆ ಟಾರಿಫ್‌ನಿಂದ ವಿನಾಯಿತಿ ಕೊಟ್ಟಿರುವುದು. ಏಕೆಂದರೆ ಭಾರತದಿಂದ ಅಮೆರಿಕಕ್ಕೆ ಹೆಚ್ಚು ರಫ್ತಾಗುವ ವಸ್ತುಗಳಲ್ಲಿ ಔಷಧಗಳೂ ಇವೆ. ಆರ್ಥಿಕ ತಜ್ಞ ಅಶೋಕ್ ಗುಲಾಟಿಯವರ ಪ್ರಕಾರ, ಭಾರತದ ಕೃಷಿ ಉತ್ಪನ್ನಗಳ ರಫ್ತಿಗೆ ಕೂಡ ಶೇ.26ರ ತೆರಿಗೆಯಿಂದ ಅಂಥ ಸಮಸ್ಯೆ ಆಗದು. ಏಷ್ಯಾದ ಇತರ ದೇಶಗಳಿಗೆ ಹೋಲಿಸಿದರೆ ಭಾರತಕ್ಕೆ ಅನುಕೂಲವೇ ಆಗಲಿದೆ. ಸೀಫುಡ್ ಮತ್ತು ಅಕ್ಕಿಯ ರಫ್ತಿನ ಮೇಲೆ ಸ್ವಲ್ಪ ಪ್ರತಿಕೂಲ ಪರಿಣಾಮವಾಗಬಹುದು. ಉಳಿದಂತೆ ತೊಂದರೆ ಇಲ್ಲ. ಚೀನಾ, ವಿಯೆಟ್ನಾಂಗೆ ಹೋಲಿಸಿದರೆ ಭಾರತಕ್ಕೆ ವಿಧಿಸಿರುವ ತೆರಿಗೆ ಕಡಿಮೆಯಾಗಿರುವುದರಿಂದ ಇಲೆಕ್ಟ್ರಾನಿಕ್ಸ್ ಉದ್ದಿಮೆಗೂ ಅಂಥ ಹೊಡೆತ ಬೀಳದು ಎಂದಿದೆ ಇಂಡಿಯಾ ಸೆಲ್ಯುಲರ್ ಆ್ಯಂಡ್ ಇಲೆಕ್ಟ್ರಾನಿಕ್ಸ್ ಅಸೋಸಿಯೇಶನ್. ಮೋದಿಯವರ ನೇತೃತ್ವದಲ್ಲಿ ಭಾರತೀಯ ರಾಜತಾಂತ್ರಿಕರು ಮತ್ತು ಅಧಿಕಾರಿಗಳ ನಿಯೋಗ ನಡೆಸಿದ ಮಾತುಕತೆಗಳು ಫಲ ನೀಡಿವೆ ಎಂದು ಐಸಿಇಎ ತಿಳಿಸಿದೆ.

ಜವಳಿ ರಫ್ತಿನಲ್ಲೂ ಭಾರತಕ್ಕೆ ಲಾಭವಾಗಲಿದೆ. ಏಕೆಂದರೆ ಟ್ರಂಪ್, ಪ್ರಮುಖ ಜವಳಿ ರಫ್ತು ರಾಷ್ಟ್ರಗಳಾದ ವಿಯೆಟ್ನಾಂ, ಬಾಂಗ್ಲಾ, ಕಾಂಬೋಡಿಯಾ, ಪಾಕಿಸ್ತಾನ, ಚೀನಾಕ್ಕೆ ಭಾರತಕ್ಕಿಂತಲೂ ಹೆಚ್ಚು ತೆರಿಗೆ ವಿಧಿಸಿರುವುದರಿಂದ ಭಾರತದ ಉಡುಪುಗಳು ಅಮೆರಿಕನ್ನರಿಗೆ ಅಗ್ಗದಲ್ಲಿ ಸಿಗಲಿವೆ. ಆದ್ದರಿಂದ ಇದು ಕೂಡ ಭಾರತದ ಪರವಾಗಿದೆ. ಅಮೆರಿಕವು ಭಾರತದ ಅಲ್ಯುಮಿನಿಯಂ ಮತ್ತು ಉಕ್ಕಿನ ಉತ್ಪನ್ನಗಳ ಆಮದಿಗೆ ತೆರಿಗೆಯನ್ನು ಕಳೆದ ತಿಂಗಳೇ ವಿಧಿಸಿತ್ತು. ಹೊಸತಾಗಿ ಅದರ ಮೇಲೆ ಟ್ಯಾಕ್ಸ್ ಸಾಧ್ಯತೆ ಇಲ್ಲ. ಹಾಗಾದರೆ ಟ್ರಂಪ್ ಟಾರಿಫ್ ಐಟಿ ಕಂಪನಿಗಳ ಮೇಲೆ ಪ್ರಭಾವ ಬೀರುವುದೇ? ಏಕೆಂದರೆ ಭಾರತದ ಐಟಿ ರಫ್ತಿನಲ್ಲಿ ಶೇ.70ರಷ್ಟು ಅಮೆರಿಕದ್ದಾಗಿದೆ. ಆದರೆ ಅದಕ್ಕೂ ಆತಂಕ ಅನಗತ್ಯ. ಏಕೆಂದರೆ ಟ್ರಂಪ್ ಟಾರಿಫ್‌ಗಳು ಸರಕುಗಳ ರಫ್ತಿಗೆ ಸಂಬಂಧಿಸಿವೆ, ಸೇವಾ ವಲಯದ ರಫ್ತಿಗೆ ಬರುವುದಿಲ್ಲ. ಹೀಗಾಗಿ ಭಾರತದ ಐಟಿ ಸೇವೆಗಳ ರಫ್ತಿಗೆ ಯಾವುದೇ ತೊಡಕಾಗುವುದಿಲ್ಲ. 2024ರಲ್ಲಿ ಭಾರತವು 205 ಶತಕೋಟಿ ಡಾಲರ್ ಮೌಲ್ಯದ ಐಟಿ ಸೇವಾ ರಫ್ತು ದಾಖಲಿಸಿತ್ತು. ಕೃತಕ ಬುದ್ಧಿಮತ್ತೆ, ಸೈಬರ್ ಸೆಕ್ಯುರಿಟಿ, ಎಂಟರ್‌ಪ್ರೈಸ್ ಟೆಕ್ ಸಲ್ಯೂಷನ್ಸ್ ವಿಷಯಗಳಿಗೆ ಸಂಬಂಧಿಸಿ ಭಾರತ ಮುಂಚೂಣಿಯಲ್ಲಿದೆ, ಅಮೆರಿಕದಿಂದ ಭಾರಿ ಬೇಡಿಕೆಯೂ ಇದೆ.

ಹಾಗಾದರೆ ನಿಜವಾದ ಆತಂಕವೇನು? ಮೊದಲನೆಯದಾಗಿ ಟ್ರಂಪ್ ನೀತಿ ಅವರಿಗೇ ಮುಳುವಾದರೆ ಅದರ ಪರಿಣಾಮವನ್ನು ಕಾದುನೋಡಬೇಕು. ಅಮೆರಿಕದಲ್ಲಿ ಹಣದುಬ್ಬರದ ಹೆಚ್ಚಳ, ಆರ್ಥಿಕ ಹಿಂಜರಿತ ಸಂಭವಿಸಿದರೆ ಅದರ ಪರಿಣಾಮ ಭಾರತದ ಐಟಿ ವಲಯವನ್ನೂ ಕಾಡುವ ಸಾಧ್ಯತೆಯಿದೆ. ಟ್ರಂಪ್ ಅವರೇನೋ ಅಮೆರಿಕ ಮೂಲದ ಕಂಪನಿಗಳು ತವರಿಗೆ ಮರಳಬೇಕು ಎಂದು ಬಯಸುತ್ತಿದ್ದಾರೆ. ವಿದೇಶಗಳಲ್ಲಿ ಉತ್ಪಾದನಾ ಘಟಕ ಸ್ಥಾಪಿಸುವ ಬದಲಿಗೆ ಅಮೆರಿಕದಲ್ಲೇ ಮಾಡಬೇಕು ಎಂಬುದು ಅವರ ಒತ್ತಾಯ. ಆದರೆ ಅದು ಸುಲಭವಲ್ಲ. ಜಾಗತೀಕರಣದ ಪ್ರಯೋಜನದ ರುಚಿಯನ್ನು ಜಗತ್ತು ಈಗಾಗಲೇ ಕಂಡಿದೆ. ಮುಖ್ಯವಾಗಿ ಅಮೆರಿಕದ ಬಲಾಢ್ಯ ತಂತ್ರಜ್ಞಾನ ಕಂಪನಿಗಳು ಜಾಗತೀಕರಣದ ಲಾಭವನ್ನು ಗಳಿಸಿ ಬೆಳೆದಿವೆ.

ಹೀಗಾಗಿಯೇ ಅರ್ಥಶಾಸ್ತ್ರಜ್ಞ ಸ್ವಾಮಿನಾಥನ್ ಅಯ್ಯರ್ ಅವರು, ''ಇದು ಲಿಬರೇಶನ್ ಡೇ ಅಲ್ಲ, ರಿಸೆಶನ್ ಡೇ'' ಎಂದು ಟೀಕಿಸಿದ್ದಾರೆ. ಟ್ರಂಪ್ ಟಾರಿಫ್ 1930ರ ಅಮೆರಿಕದ ಅನಾಹುತಕಾರಿ ರಕ್ಷಣಾತ್ಮಕ ನೀತಿಗಳಿಗೆ (Protectionist) ಸಮವಾಗಿದ್ದು ಸಪ್ಲೈ ಚೈನ್‌ಗಳನ್ನು ಹಳಿತಪ್ಪಿಸಲಿದೆ, ಜಾಗತಿಕ ಆರ್ಥಿಕ ಬೆಳವಣಿಗೆಗೆ ಧಕ್ಕೆ ತರಲಿದೆ ಎಂದು ಎಚ್ಚರಿಸಿದ್ದಾರೆ. 1930ರ ರಕ್ಷಣಾತ್ಮಕ ನೀತಿಗಳ ಪರಿಣಾಮ ಜಗತ್ತು ಮಹಾ ಆರ್ಥಿಕ ಹಿಂಜರಿತಕ್ಕೆ ಸಿಲುಕಿತ್ತು. ಆಗ ಅಮೆರಿಕವು ತನ್ನ ರೈತರು ಮತ್ತು ಉದ್ಯಮಿಗಳ ಹಿತಾಸಕ್ತಿಯ ಹೆಸರಿನಲ್ಲಿ ಆಮದು ತೆರಿಗೆಗಳನ್ನು ಶೇ.20ರಷ್ಟು ಹೆಚ್ಚಿಸಿತ್ತು. ಆದರೆ ಇದರ ಪರಿಣಾಮ ಜಾಗತಿಕ ವ್ಯಾಪಾರಗಳು ಹಳಿ ತಪ್ಪಿ ಮಹಾ ಆರ್ಥಿಕ ಹಿಂಜರಿತ ಸಂಭವಿಸಿತು. ಇಂಥ ಅನಾಹುತ ಆಗದಿರಲಿ ಎಂದು ಹಾರೈಸುವುದಷ್ಟೇ ಈಗ ಉಳಿದಿರುವುದು.

ಇದುವರೆಗೆ ಜಗತ್ತು ಅಮೆರಿಕವನ್ನು 'ದೊಡ್ಡಣ್ಣ' ಎನ್ನುತ್ತಿತ್ತು. ಆದರೆ ಈಗ ಟ್ರಂಪ್ ಹೇಳುತ್ತಿರುವುದೇನು? ''ಅಮೆರಿಕದ ಸುವರ್ಣ ಯುಗ ಇನ್ನು ಆರಂಭವಾಗಲಿದೆ, ಆಮದು ತೆರಿಗೆ ಸಂಗ್ರಹಿಸಿ ಅಮೆರಿಕನ್ನರ ತೆರಿಗೆ ಹೊರೆ ಇಳಿಸುತ್ತೇನೆ, ಅಮೆರಿಕವನ್ನು ಮತ್ತೆ ಸಂಪದ್ಭರಿತವಾಗಿಸುತ್ತೇನೆ. MAKE AMERICA WEALTHY AGAIN'' ಎಂದು ಟ್ರಂಪ್ ಘೋಷಿಸಿದ್ದಾರೆ! ಇದೆಂಥ ವಿಚಿತ್ರವಲ್ಲವೇ? ವಿಶ್ವದ ಅತಿ ದೊಡ್ಡ ಆರ್ಥಿಕತೆಯಾಗಿ, ಜಗತ್ತಿನ ಶೇ.25ರಷ್ಟು ಇಂಧನವನ್ನು ಬಳಸುತ್ತಿರುವ ಅಮೆರಿಕಕ್ಕೆ ಸಂಪತ್ತಿನ ದಾಹ ಇನ್ನೂ ನೀಗಿಲ್ಲವೇ, ತೃಪ್ತಿಯಾಗಿಲ್ಲವೇ?

ಭಟ್ಟರ್ ಸ್ಕಾಚ್

- **ರಾಘಣ್ಣ, ಮೈಸೂರು**
ಭಟ್ರೇ, ತವರಿನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ಸೋತು ಹೋಯಿತಲ್ಲ?
– **ಹೂಂ.. ಗೆದ್ದಿದ್ದರೆ ಹಾಲುಂಡ ತವರು.. ಸೋತಿದ್ದರಿಂದ ಸೋಲುಂಡ ತವರು!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನೆಮ್ಮದಿಗಿಂತ ದುಬಾರಿಯಾಗಿರುವುದು ಯಾವುದು?
– **ಮನಸ್ಸಿನ ಶಾಂತಿ!**

- **ಗೋವಿಂದೇಗೌಡ, ಮಂಡ್ಯ**
ಭಟ್ರೇ, ವಿಪಕ್ಷ ನಾಯಕ ಅಶೋಕ್ ಬಿಜೆಪಿಯ ಆಶಾಕಿರಣ ಅಂತ ಹೇಳ್ತಾರಲ್ಲ?
– **ಹಾಗೆ ಹೇಳಿದವನನ್ನು ಒಮ್ಮೆ ಕಣ್ತುಂಬಾ ನೋಡಬೇಕು ಅನಿಸ್ತಾ ಇದೆ, ಪ್ಲೀಸ್ ಕಣೋ!**

- **ರಜತ್ ಕಾಮತ್, ಹುಬ್ಬಳ್ಳಿ**
ಭಟ್ರೇ, ಜೀವನದಲ್ಲಿ ನಾನು ವಿಜಯ ಸಂಕೇಶ್ವರ್ ಆಗಬೇಕು ಅಂದ್ರೆ ಏನು ಮಾಡಬೇಕು?
– **ಒಂದು ಪತ್ರಿಕೆ ಶುರು ಮಾಡಬೇಕು ಮತ್ತು ವಿಶ್ವೇಶ್ವರ ಭಟ್ಟರನ್ನು ಸಂಪಾದಕರನ್ನಾಗಿ ನೇಮಿಸಬೇಕು!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಯಾವಾಗಲೂ ನಗುನಗುತ್ತಾ ಇರಬೇಕೆಂದರೆ ಏನು ಮಾಡ್ಬೇಕು?
– **ಹೋಗಿ ಹೋಗಿ ಸಾಧು ಕೋಕಿಲಾ ಮನೆ ಪಕ್ಕ ಮನೆ ಮಾಡಿಬಿಟ್ಟೀಯಾ?!**

- **ವಾಗೀಶ, ಬೆಂಗಳೂರು**
ಭಟ್ರೇ, ಕೆಲವರು ನಿಂತಿದ್ದರೂ ಕಾಲು ನೋಯುವುದಿಲ್ಲವಾ?
– **ಮಾಜಿ ಉಪಮುಖ್ಯಮಂತ್ರಿ ಅಶ್ವಥ್‌ನಾರಾಯಣ ಕೇಳಿದ್ರೆ ಅಂಥವರು ಪೈಲ್ಸ್ ಪೇಶಂಟ್ ಅಂದಾರು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ದೇವಾಲಯಕ್ಕೂ, ಗ್ರಂಥಾಲಯಕ್ಕೂ ಏನು ವ್ಯತ್ಯಾಸ?
– **ಮೊದಲನೆಯದರಲ್ಲಿ ಚಪ್ಪಲಿ ಹೊರಕ್ಕೆ, ಎರಡನೆಯದರಲ್ಲಿ ಮಸ್ತಕ ಒಳಕ್ಕೆ!**

- **ಕಾಂತೇಶ, (ಇಮೇಲ್ ಮೂಲಕ)**
ಭಟ್ರೇ, ಬಾಯಿಗೆ ಬಂದಂತೆ ಮಾತಾಡುವವರನ್ನು ಏನು ಮಾಡಬೇಕು?
– **ಬಿಜೆಪಿಯಲ್ಲಿ ಅಂಥವರನ್ನು ಉಚ್ಚಾಟನೆ ಮಾಡ್ತಾರಪ್ಪ!**

- **ರಶ್ಮಿ ಬಿ.ವಿ., ಚಿಕ್ಕನಾಯಕನಹಳ್ಳಿ**
ಭಟ್ರೇ, ರಾತ್ರಿ ಹನ್ನೊಂದಕ್ಕೆ ನಿದ್ದೆ ಬರಬೇಕೆಂದರೆ ಏನು ಮಾಡಬೇಕು?
– **ಹನ್ನೊಂದಕ್ಕೆ ಹತ್ತು ನಿಮಿಷಗಳಿರುವಾಗ ದೇವನೂರರ ಕೃತಿಯನ್ನು ಕೈಗೆತ್ತಿಕೊಳ್ಳಬೇಕು!**

- **ಕಾಣಿಯೂರು ಜಯರಾಮ ಆಚಾರ್, ಕೆಂಗೇರಿ**
ಭಟ್ರೇ, ನಿಮಗಿಂತ ರನ್ಯಾ ರಾವ್ ವಾಸಿ ಅಂತ ಸ್ನೇಹಿತರು ಹೇಳ್ತಾರಲ್ಲ?
– **ಸರಿ ಇದೆ, ಆಕೆ ನನಗಿಂತ ಹೆಚ್ಚು ಸಲ ದುಬೈ ಟ್ರಿಪ್ ಮಾಡಿದ್ದಾಳೆ!**

ಹಣ್ಣುಗಳ ಮೆರವಣಿಗೆಗೆ ಬೇಸಗೆಯೇ ಬರಬೇಕೆ?

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಕೆಲವು ದಶಕಗಳ ಹಿಂದೆ, ನಮ್ಮ ರಾಜ್ಯದ ಬಯಲು ಸೀಮೆಯಲ್ಲೂ ಸುರಗಿ, ಬಕುಳ ಮೊದಲಾದ ಮರಗಳಿದ್ದವು, ಅವುಗಳ ಹೂವುಗಳು ಜನರ ಮನ ತಣಿಸುತ್ತಿದ್ದವು. ಅದೇಕೆ ಇಲ್ಲಿ ಪ್ರಸ್ತಾಪವಾಯಿತೆಂದರೆ, ಆ ಮರಗಳು ಮಲೆನಾಡಿನಲ್ಲಿ ಮಾತ್ರ ಕಾಣಸಿಗುವಂಥವು ಎಂಬ ಅನಿಸಿಕೆ ಈಗ ವ್ಯಾಪಕವಾಗಿದೆ. ಬಹುಶಃ, ಬಯಲು ಸೀಮೆಯಲ್ಲಿ ನಿರಂತರವಾಗಿ ನಡೆದ ಮರಗಳ ಹನನದಿಂದಾಗಿ, ಅಲ್ಲಿನ ಹಳ್ಳಿಗಳಲ್ಲಿ ಅವಶ್ಯವಾಗಿ ಇರುತ್ತಿದ್ದ ತೋಪುಗಳು, ಗೋಮಾಳಗಳು ನಾಶಗೊಂಡು, ಅಲ್ಲಿನ ಪಾರಂಪರಿಕ ಸಸ್ಯವೈವಿಧ್ಯ ನಿರ್ನಾಮವಾಗಿದೆ. ಸುಮಾರು ಆರು ದಶಕಗಳ ಹಿಂದೆ, ಚನ್ನರಾಯಪಟ್ಟಣ ತಾಲೂಕಿನಲ್ಲಿ ಸುರಗಿ ಮರ ಇದ್ದುದರ ಪ್ರಸ್ತಾಪಗಳಿವೆ.

ಸುರಗಿ ಹೂವಿನ ನೆನಪೇಕೆ ಆಯಿತೆಂದರೆ, ನಮ್ಮ ಹಳ್ಳಿಯಲ್ಲಿ ಸುಗಂಧಭರಿತ ಸುರಗಿ ಹೂವುಗಳನ್ನು ಕಾಣಬೇಕೆಂದರೆ, ಬೇಸಗೆಯೇ ಬರಬೇಕು! ಬೇಸಗೆಯ ಬಿಸಿಲಿನ ದಿನಗಳಲ್ಲೇ ಸುರಗಿ, ಬಕುಳ ಮೊದಲಾದ ಹೂವುಗಳು, ಹಲಸು, ಮಾವು, ಮುರಿನ, ಪನ್ನೇರಳೆ, ಚೇಂಪಿ (ಕಾಡುಸಂಪಿಗೆ), ಬುಕ್ಕ, ಬೆಳಮಾರು ಮೊದಲಾದ ಹಣ್ಣುಗಳು ಅವತರಿಸುತ್ತವೆ ಮತ್ತು ಇದು, ನಮಗೆಲ್ಲಾ, ಅಂದರೆ ಮಕ್ಕಳಿಗೆ, ಒಂದು ಸೋಜಿಗ ಎನಿಸುತ್ತಿತ್ತು. ಪರೀಕ್ಷೆ ಮುಗಿದು, ಶಾಲೆಗೆ ರಜಾ ಬಂದ ಕೂಡಲೆ, ನಮ್ಮ ಮನೆ ಸುತ್ತಲಿನ ಹಾಡಿ, ಹಕ್ಕಲು, ಬ್ಯಾಣ, ಗುಡ್ಡೆ ಮತ್ತು ತೋಡಿನ ಅಂಚುಗಳಲ್ಲಿರುವ ಮರಗಿಡಗಳಲ್ಲಿ, ಹಣ್ಣುಗಳು ಮತ್ತು ಹೂವುಗಳ ಮೆರವಣಿಗೆಯನ್ನು ಕಾಣುವ ಅವಕಾಶ, ಒಂದು ರೀತಿಯ ಅದೃಷ್ಟವೂ ಎನ್ನಿ, ದೊರಕುತ್ತಿತ್ತು ಮತ್ತು ಅದನ್ನೇ ಯೋಚಿಸುತ್ತಾ, ನಮ್ಮ ಶಾಲಾ ರಜಾದಿನಗಳಿಗೆ ಸರಿಯಾಗಿ, ಈ ರೀತಿ ಪ್ರಕೃತಿ ಅರಳುತ್ತದೆ ಎಂದು ವಿಸ್ಮಯಪಡುತ್ತಿದ್ದೆವು. ಬೇಸಗೆ, ಬಿಸಿಲು, ತಂಗಾಳಿ, ಮೋಡಗಳು, ಮಳೆ, ಹೂವು, ಹಣ್ಣು, ಗಿಡ, ಮರ, ಬಳ್ಳಿ, ತೋಡಿನ ನೀರು, ಅದರಲ್ಲಿನ ಮೀನು ಇವೆಲ್ಲವೂ ಪರಿಸರದ ಒಂದು ಸಮತೋಲಿತ ಸ್ಥಿತಿಯೂ ಹೌದು ಮತ್ತು ಅವೆಲ್ಲವೂ ಇಕಾಲಜಿಯ ಸರಪಣಿಯ ಭಾಗಗಳಾಗಿ ರೂಪುಗೊಂಡಿವೆ ಎಂದು ಇಂದು ತಜ್ಞರು ಗುರುತಿಸಿ, ವಿವರಿಸಿ ಹೇಳಿದ್ದರೂ, ನಮಗೆ ಅಂಥ ತಿಳಿವಳಿಕೆ ಆಗ ಎಲ್ಲಿತ್ತು?

ಸುರಗಿಯ ವಿಚಾರಕ್ಕೆ ಬಂದರೆ, ನಮ್ಮ ಮನೆಯಿಂದ ಕೆಲವೇ ನೂರು ಅಡಿಗಳ ದೂರದಲ್ಲಿ, ಗದ್ದೆ ಬೈಲಿಗೆ ಅಂಟಿಕೊಂಡಿದ್ದ ತುಸು ಎತ್ತರದ ಹಕ್ಕಲಿನಂಥ ಜಾಗದಲ್ಲಿ, ಇತರ ಮರಗಿಡಗಳ ನಡುವೆ, ಎರಡು ಸುರಗಿ ಮರಗಳಿದ್ದವು. ಆ ಜಾಗಕ್ಕೆ ಗರಡಿ ಜಡ್ಡು ಎಂಬ ಹೆಸರೂ ಇದೆ; ಸುಮಾರು 400 ವರ್ಷಗಳ ಹಿಂದೆ, ಅಲ್ಲೇ ಅರ್ಧ ಕಿ.ಮೀ. ದೂರದಲ್ಲಿ ಪುಟ್ಟ ಅರಮನೆ ಕಟ್ಟಿಕೊಂಡು ಪಾಳೆಪಟ್ಟು ನಡೆಸುತ್ತಿದ್ದ ಮುದ್ದಳ ಎಂಬ ರಾಜನ ಕಾಲದಲ್ಲಿ ರೂಪುಗೊಂಡಿದ್ದಿರಬಹುದಾದ ಗರಡಿ ಅದು. ಇಂದು ಗಿಡಮರಗಳ ನಡುವೆ ಮರೆಯಾಗಿದೆ; ನಮ್ಮ ಹಳ್ಳಿಯ ಕೆಲವು ಕುಟುಂಬಗಳು ವರ್ಷಕ್ಕೊಂದೆರಡು ಬಾರಿ ಅಲ್ಲಿರುವ ಪುಟ್ಟ ಗುಡಿಸಲಿನಲ್ಲಿ ದೀಪ ಹಚ್ಚಿ, ಹಿರಿಯ ವೀರರನ್ನು ನಮಸ್ಕರಿಸುವ ಮಟ್ಟಿಗೆ ಮಾತ್ರ ಅದರ ಚಟುವಟಿಕೆ ಸೀಮಿತಗೊಂಡಿದೆ. ಆ ಗರಡಿಯ ಪಕ್ಕದಲ್ಲೇ ಎರಡು ಮಧ್ಯಮ ಗಾತ್ರದ ಸುರಗಿ ಮರಗಳಿದ್ದವು. ಅವುಗಳಲ್ಲಿ ಬಿಡುವ ಹೂವಿನ ಸುವಾಸನೆ ಅದೆಷ್ಟು ಗಾಢ ಎಂದರೆ, ಹತ್ತಿಪ್ಪತ್ತು ದೂರದಲ್ಲಿದ್ದ ಒಂದು ಕಾಲ್ದಾರಿಯಲ್ಲಿ ಸಾಗುವವರಿಗೆಲ್ಲರಿಗೂ, 'ನೋಡಿ ಇಲ್ಲಿ, ನಾನು ಸುರಗಿ ಮರ, ನನ್ನ ಮೈತುಂಬಾ ಹೂವುಗಳನ್ನು ಬಿಟ್ಟುಕೊಂಡಿದ್ದೇನೆ' ಎಂದು ಹೇಳುವಷ್ಟು.

ಆ ಎರಡು ಸುರಗಿ ಮರಗಳಲ್ಲಿ ಹೂವು ಬಿಡುವುದು ಮಾರ್ಚ್ ಕೊನೆ ಮತ್ತು ಎಪ್ರಿಲ್‌ನ ದಿನಗಳಲ್ಲಿ; ಪರೀಕ್ಷೆಗೆ ಓದಲು ನಮಗೆ ರಜಾ ಕೊಟ್ಟಾಗ, ಆ ಮರಗಳಲ್ಲಿ ಸುಗಂಧಭರಿತ ಹೂವುಗಳು; ಬೆಳಗೆದ್ದು ಸುರಗಿ ಮರಕ್ಕೆ ಹೋಗಿ ಮೊಗ್ಗುಗಳನ್ನು ಕೀಳುವುದು ಶಾಲಾ ವಿದ್ಯಾರ್ಥಿಗಳ ಕೆಲಸ. ಆ ನಂತರ, ಪರೀಕ್ಷೆಗೆ ಓದಿನ ತಯಾರಿ. ಮೊಗ್ಗುಗಳನ್ನು ಕಿತ್ತು ತಂದು, ದಾರಕ್ಕೆ ಪೋಣಿಸುವಷ್ಟರಲ್ಲಿ, ಅವು ನಿಧಾನವಾಗಿ ಅರಳುತ್ತವೆ; ಅದೇ ದಿನ ಮುಡಿದರೆ ಗಾಢ ಸುವಾಸನೆ. ಆ ಹೂಮಾಲೆಯನ್ನು ನಾಲ್ಕೆಂಟು ದಿನ ಬಿಸಿಲಿನಲ್ಲಿ ಒಣಗಿಸಿ, ಜೋಪಾನವಾಗಿಟ್ಟುಕೊಂಡರೆ, ಮುಂದಿನ ನಾಲ್ಕಾರು ತಿಂಗಳುಗಳ ಕಾಲ ಅದನ್ನು ಬಳಸಬಹುದು! ಏಕೆಂದರೆ, ಒಣಗಿಸಿಟ್ಟರೂ ಪರಿಮಳ ಸೂಸುವ ಹೂವು ಸುರಗಿ. ಸುರಗಿ ಹೂವಿನ ವಿಚಾರ ಬರೆಯುತ್ತಾ ಹೋದರೆ, ಒಂದು ಪುಟ್ಟ ಪುಸ್ತಕವನ್ನೇ ಬರೆಯಬಹುದೇನೋ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ನಮ್ಮ ಹಳ್ಳಿಯ ವಿವಿಧ ಸಮುದಾಯಗಳಲ್ಲಿ ಆ ಹೂವಿಗೆ ಅಷ್ಟೊಂದು ಪ್ರಾಮುಖ್ಯವಿದೆ.

ಬೇಸಗೆಯಲ್ಲಿ ಅರಳುವ ನಾನಾ ಹೂವುಗಳು ನಮ್ಮ ಹಳ್ಳಿಯ ಒಂದು ಪುಟ್ಟ ವಿಸ್ಮಯ ಎನಿಸಿದರೆ, ಅದೇ ಸಮಯದಲ್ಲಿ ಮಾಗುವ ವಿವಿಧ ಹಣ್ಣುಗಳು ಕೇವಲ ಅಚ್ಚರಿ ಅಷ್ಟೇ ಅಲ್ಲ, ಮಕ್ಕಳ ಹೊಟ್ಟೆಯನ್ನೂ ತುಂಬಿಸುವಂಥವುಗಳು! ನಮ್ಮ ಹಳ್ಳಿಯಲ್ಲಿ ಬೇಸಗೆಯ ಹಣ್ಣುಗಳು ಎಂದಾಕ್ಷಣ, ಪ್ರಧಾನವಾಗಿ ಕಾಣಿಸಿಕೊಳ್ಳುವುದು ಮಾವಿನ ಹಣ್ಣುಗಳು. ಇಂದು ನಗರ-ಪಟ್ಟಣವಾಸಿಗಳಾಗಿರುವವರಿಗೆ 'ಮಾವಿನ ಹಣ್ಣು' ಎಂದಾಕ್ಷಣ ಕಣ್ಣ ಮುಂದೆ ಬರುವುದು ಮಲ್ಲಿಕಾ, ರಸಪೂರಿ, ಆಪೂಸು ಮೊದಲಾದ ಕಸಿ ಹಣ್ಣುಗಳು. ಆದರೆ ನಮ್ಮ ಹಳ್ಳಿಯ ಮಾವಿನ ಹಣ್ಣು ಎಂದರೆ, ಮುಖ್ಯವಾಗಿ 'ಕಾಟು ಮಾವಿನ ಹಣ್ಣು'. ಮನೆಯ ಸುತ್ತ ಇರುವ ಖಾಲಿ ಜಾಗಗಳಲ್ಲಿ, ತೋಡಿನ ಅಂಚಿನಲ್ಲಿ, ತುಸು ದೂರದ ಹಾಡಿ ಹಕ್ಕಲುಗಳಲ್ಲಿ ಬೃಹದಾಕಾರವಾಗಿ ಬೆಳೆಯುವ ಕಾಟು ಮಾವಿನ ಮರಗಳ ವಿವಿಧ ತಳಿಗಳ ಹಣ್ಣುಗಳೇ ಬೇಸಗೆಯಲ್ಲಿ ಮಕ್ಕಳ ಬಾಯಿಗೆ ರುಚಿಕರ ಆಹಾರ!

ಕಾಟು ಮಾವಿನ ಹಣ್ಣಿನ ಮರಗಳ ವೈವಿಧ್ಯದ ಕುರಿತೂ ಹೇಳಲೇಬೇಕು. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಅಕ್ಷರಶಃ ಸಾವಿರಾರು ತಳಿಯ ಕಾಟು ಮಾವಿನ ಮರಗಳಿವೆ! ಹಿಂದೆ ಇನ್ನೂ ಹೆಚ್ಚಿನ ತಳಿಗಳಿದ್ದಿರಬೇಕು. ಅವುಗಳಲ್ಲಿ ಕೆಲವು ಬೃಹದಾಕಾರದವು; ಇನ್ನು ಕೆಲವು ಮಧ್ಯಮ ಗಾತ್ರದ ಮರಗಳು. ಹಕ್ಕಿಗಳೋ, ಅಳಿಲೋ ಅಥವಾ ಯಾರೋ ಮನುಷ್ಯರೋ ಎಂದೋ ತಿಂದು ಎಲ್ಲೆಲ್ಲೋ ಎಸೆದ ಹಣ್ಣಿನ ಗೊರಟು, ತನ್ನಷ್ಟಕ್ಕೆ ತಾನೇ ಹುಟ್ಟಿ, ಮಳೆ ನೀರಿನ ಆಶ್ರಯದಲ್ಲಿ ಬೆಳೆಯುವ ಈ ಕಾಟು ಮಾವಿನ ಮರದಲ್ಲಿ, ವೈವಿಧ್ಯಮಯ ರುಚಿಯ ಹಣ್ಣುಗಳಾಗುವುದು ಒಂದು ಸೋಜಿಗ. ನಗರವಾಸಿಗಳ ತಿಳಿವಳಿಕೆಗೆ ಹೇಳುವುದಾದರೆ, ಅಪ್ಪೆ ಮಿಡಿ, ಜೀರಿಗೆ ಮಿಡಿ ಮೊದಲಾದವು ಸಹ ಇಂಥದ್ದೇ ಅಪರೂಪದ ತಳಿಗಳ ಮಾವಿನ ಮರಗಳಲ್ಲಿ ಬಿಡುವಂಥವು.

ನಮ್ಮ ಹಳ್ಳಿಯ ಸುತ್ತಮುತ್ತ ಹಲವು ಕಾಟು ಮಾವಿನ ಮರಗಳಿವೆ. ಒಂದೊಂದು ಮರದ ಹಣ್ಣು ಒಂದೊಂದು ರುಚಿ. ಇನ್ನೂ ಕೆಲವು ಕಿ.ಮೀ. ಆಚೀಚೆ ನೋಡಿದರೆ, ನಮ್ಮ ಬಂಧುಗಳ ಮನೆಯ ಸುತ್ತಾ, ಹೆಚ್ಚು ರುಚಿ ಮತ್ತು ಪರಿಮಳ ಇರುವ ಹಣ್ಣುಗಳನ್ನು ನೀಡುವ ಮಾವಿನ ಮರಗಳಿದ್ದವು. ನಮ್ಮ ಮನೆಯಿಂದ ಸುಮಾರು ಆರು ಕಿ.ಮೀ. ದೂರದಲ್ಲಿ ಅಬ್ಲಿಕಟ್ಟೆ ಎಂಬ ಪುಟ್ಟ ಹಳ್ಳಿ ಇದೆ. ಅಲ್ಲಿನ ನಮ್ಮ ಬಂಧುಗಳ ಮನೆಯ ಸುತ್ತಲೂ ಹತ್ತಾರು ಅಂಥ ಮರಗಳಿದ್ದವು; ಅವರ ಹಳೆಯ ಮನೆಯ ಮೇಲೆ ವಿಶಾಲವಾಗಿ ರೆಂಬೆಗಳನ್ನು ಚಾಚಿಕೊಂಡಿದ್ದ 2-3 ಮರಗಳಿದ್ದವು! ಅಂದಿನ ಜನರ ಪ್ರವೃತ್ತಿಯೇ ಹಾಗೆ, ಮನೆಯ ಮೇಲೆ ಚಾಚಿಕೊಂಡಿದ್ದ ಹಲಸು, ಮಾವಿನ ಮರಗಳನ್ನು ಹಾಗೆಯೇ ಇಟ್ಟುಕೊಳ್ಳುತ್ತಿದ್ದರೇ ಹೊರತು, ಮನೆಗೆ ಅಪಾಯವೆಂದೋ, ಮನೆಯ ಚಂದಕ್ಕೆ ಕುಂದು ಬಂದೀತು ಎಂದೋ ಕಡಿದುಹಾಕುತ್ತಿರಲಿಲ್ಲ. ಆ ಮನೆಯ ಸುತ್ತಲಿದ್ದ ಕಾಟು ಮಾವಿನ ಮರಗಳ ಒಂದೊಂದು ತಳಿಯೂ ಅದ್ಭುತ ಎನ್ನಬಹುದಾದ ರುಚಿಯ ಹಣ್ಣುಗಳನ್ನು ನೀಡುತ್ತಿದ್ದವು. ಕೆಲವು ಹಣ್ಣುಗಳು ಇಂದಿನ ಆಧುನಿಕ ತಳಿಗಳಾದ ಮಲ್ಲಿಕಾ, ರಸಪೂರಿ ಮೊದಲಾದ ರುಚಿಯನ್ನೇ ಹೊಂದಿದ್ದವು; ಆದರೆ, ಆ ಎಲ್ಲಾ ಕಾಟು ಮಾವಿನ ಮರಗಳಲ್ಲಿ ಬಿಡುವ ಹಣ್ಣುಗಳ ಗಾತ್ರ ಮಾತ್ರ ಚಿಕ್ಕದು, ಸಾಮಾನ್ಯವಾಗಿ ಮುಷ್ಟಿ ಗಾತ್ರದವು. ಎಪ್ರಿಲ್-ಮೇ ಸಮಯದಲ್ಲಿ ಅಪರೂಪಕ್ಕೆ ಬೀಸುವ ಬಿರುಸಾದ ಗಾಳಿಯ

ಸಮಯದಲ್ಲಿ, ಆ ಕಾಟು ಮಾವಿನ ಮರಗಳ ಅಡಿ ಅಕ್ಷರಶಃ ನೂರಾರು ಹಣ್ಣುಗಳು ಬೀಳುತ್ತವೆ! ಅವನ್ನು ಆರಿಸುವುದುಂಟು; ಎಲ್ಲವನ್ನೂ ತಿನ್ನಲು ಎಲ್ಲಿ ಸಾಧ್ಯ? ಆದ್ದರಿಂದ, ಅದರ ರಸವನ್ನು ತೆಗೆದು, ಗೆರಸಿಯಲ್ಲಿ ಹರವಿ, ಚೆನ್ನಾಗಿ ನಾಲ್ಕೆಂಟು ದಿನ ಒಣಗಿಸಿ, 'ಹಣ್ಣುಚೆಟ್' ಮಾಡಿಟ್ಟುಕೊಂಡು, ಒಣ ಎಲೆಗಳಲ್ಲಿ ಭದ್ರವಾಗಿ ಕಟ್ಟಿಟ್ಟು, ಮಳೆಗಾಲದಲ್ಲಿ ಚಟ್ಟಿ, ಗೊಜ್ಜು, ಪಾಯಸ ಮಾಡಲು ಉಪಯೋಗಿಸುತ್ತಿದ್ದರು. ಕಾಟು ಮಾವಿನ ಹಣ್ಣಿನ ರಸದಿಂದ ಈ 'ಹಣ್ಣುಚೆಟ್' ಎಂಬುದನ್ನು ತಯಾರಿಸುವ ಪದ್ಧತಿ ಈಚಿನ ದಶಕಗಳಲ್ಲಿ ಬಹುಪಾಲು ನಿಂತೇಹೋಗಿದೆ. ಆಧುನಿಕ ಜೀವನ ಪದ್ಧತಿಗೆ ಒಗ್ಗಿಕೊಳ್ಳುತ್ತಿರುವ ಗ್ರಾಮೀಣರ ದಿನಚರಿಯಲ್ಲಿ, ತಾಳ್ಮೆಯಿಂದ, ಹಲವು ದಿನಗಳ ಕಾಲ ರಸ ತೆಗೆದು ಒಣಗಿಸಿ, ಕಾಪಿಡಬೇಕಾದಂತೆ ಹಣ್ಣುಚೆಟ್‌ನಂಥ ರಕಂಗಳಿಗೆ ಜಾಗವಿಲ್ಲ!

ನಮ್ಮ ಹಳ್ಳಿಯಲ್ಲಿ ಬೇಸಗೆಯ ದಿನಗಳಲ್ಲಿ ಅಗತ್ಯವಾಗಿ ಕಾಣಸಿಗುವ ಇನ್ನೊಂದು ಹಣ್ಣೆಂದರೆ ಗೋಯ್ ಹಣ್ಣು (ಗೋಡಂಬಿ ಮರದ ಹಣ್ಣು.) ಗೋವಾದಿಂದ ಬಂದ ಮರ ಆದ್ದರಿಂದ, ಗೋಯ್ ಹಣ್ಣು ಎಂಬ ಹೆಸರು; ನಮ್ಮ ರಾಜ್ಯದ ಕರಾವಳಿಯುದ್ದಕ್ಕೂ ಬೆಳೆದುಕೊಂಡಿದೆ. ಗೋಡಂಬಿ ಬೀಜ ಪಡೆಯಲೆಂದು ಬೆಳೆಸುವ ಈ ಮರದಲ್ಲಿ, ಬೀಜದ ಜತೆ ದೊರಕುವ ಹಣ್ಣಿಗೆ ಅಷ್ಟೊಂದು ಮೌಲ್ಯವಿಲ್ಲ. ಬಣ್ಣ ಬಣ್ಣದ ಆ ಹಣ್ಣುಗಳು, ರಸಭರಿತವಾಗಿರುವುದಾದರೂ, ರುಚಿಯಲ್ಲಿ ಮಧ್ಯಮ. ತುಸು ಒಗರು, ತುಸು ಸಿಹಿ ಇರುವ ಆ ಹಣ್ಣಿನ ರಸವು ಮಕ್ಕಳಿಗೆ ಇಷ್ಟ ಎನಿಸಿದರೂ, ಕೆಲವರಿಗೆ ಅಷ್ಟಕ್ಕಷ್ಟೆ. ಜತೆಗೆ, ಗೋಯ್ ಹಣ್ಣನ್ನು ತಿಂದರೆ, ಗಂಟಲಿನಲ್ಲಿ ಕೆಲವು ಬಾರಿ ಸಣ್ಣ ಕೆರೆತ ಉಂಟಾದೀತು. ಅವುಗಳಲ್ಲೂ ಬೇರೆ ಬೇರೆ ಗಾತ್ರ, ಬಣ್ಣದ ಹಣ್ಣು ನೀಡುವ ತಳಿಗಳಿವೆ. ನಮ್ಮ ಮನೆಯ ಬಳಿ ಇದ್ದ ಒಂದು ಗೋಯ್ ಮರದಲ್ಲಿ, ಪ್ರತಿ ವರ್ಷ, ನೂರಾರು ಹಣ್ಣುಗಳು, ಬೀಜಗಳು ಬಿಡುತ್ತವೆ; ಆ ಹಣ್ಣು ಗಾತ್ರದಲ್ಲಿ ಚಿಕ್ಕದಾದರೂ, ರುಚಿಕರ ಮತ್ತು ಹಣ್ಣಿನ ರಸವನ್ನು ಚೀಪಿ ಸೇವಿಸಿದ ನಂತರ, ಗಂಟಲು ಕೆರೆತ ಅಷ್ಟೊಂದು ಕಾಣದು. ಆದರೆ, ಏನಿದ್ದರೂ ನಾಲ್ಕಾರು ಗೋಯ್ ಹಣ್ಣನ್ನು ತಿನ್ನಬಹುದಷ್ಟೆ; ಜಾಸ್ತಿ ತಿಂದರೆ, ಅದೆಷ್ಟೇ ರುಚಿಕರ ಎನಿಸಿದರೂ, ಗಂಟಲು ಕೆರೆತ, ಕೆಲವರಿಗೆ ಗಂಟಲು ನೋವು ಖಚಿತ. ಗೋಡಂಬಿ ಬೀಜವನ್ನು ಆರಿಸಿದ ನಂತರ ಉಳಿವ ಗೋಯ್ ಹಣ್ಣನ್ನು ಕೋಣ, ಎಮ್ಮೆ, ದನ ಕರುಗಳಿಗೆ ತಿನ್ನಲು ಕೊಡುವುದುಂಟು. ಗೋವಾ ರಾಜ್ಯದಲ್ಲಿ ಅದನ್ನು ಬಳಸಿ ಫೆನ್ನಿ ಎಂಬ ಮದ್ಯಸಾರವನ್ನು ತಯಾರಿಸುವ ಪದ್ಧತಿ ಇದ್ದರೂ, ನಮ್ಮ ರಾಜ್ಯದಲ್ಲಿ ಈ ವಾಣಿಜ್ಯಕ ಚಟುವಟಿಕೆ ವ್ಯಾಪಕವಾಗಿ ಬೆಳೆದಿಲ್ಲ.

ಗೋಡಂಬಿ ಬೀಜ ಆರಿಸಿದ ನಂತರ, ರಾಶಿ ರಾಶಿ ಗೋಯ್ ಹಣ್ಣುಗಳನ್ನು ನಮ್ಮವರು ಎಸೆಯುತ್ತಾರೆ; ಅದನ್ನು ನೋಡಿದ ಕೆಲವು ಹಿರಿಯರು, ಲೊಚಗುಟ್ಟುತ್ತಾ, 'ಒಳ್ಳೆ ಹಣ್ಣು ಮಾರಾಯರೆ, ಅದನ್ನು ಭಟ್ಟಿ ಇಳಿಸಿದರೆ ಒಳ್ಳೆಯ ಪಾನೀಯ!' ಎಂದು ನಾಲಗೆ ಚಪ್ಪರಿಸುವುದುಂಟು. ಆರೇಳು ದಶಕಗಳ ಹಿಂದಿನ ತನಕ, ಗೋಯ್ ಹಣ್ಣನ್ನು ಕೊಳೆ ಹಾಕಿ, ಅದನ್ನು ಮಡಕೆಯಲ್ಲೇ ಭಟ್ಟಿ ಇಳಿಸಿ ಮದ್ಯಸಾರ ತಯಾರಿಸುತ್ತಿದ್ದ ಪದ್ಧತಿ ನಮ್ಮ ಹಳ್ಳಿಯಲ್ಲಿತ್ತು; ಆದರೆ, ಮದ್ಯಸಾರವನ್ನು ತಯಾರಿಸುವುದು ತನ್ನ ಹಕ್ಕು, ಅದರಿಂದ ದೊರಕುವ ಆದಾಯ ಪೂರ್ತಿ ತನಗೇ ಸೇರಬೇಕು ಎಂಬ ಸರಕಾರದ ನಿಲುವಿನಿಂದಾಗಿ, ಹಳ್ಳಿಯ ಜನರು ಈ ರೀತಿ ಸ್ಥಳೀಯವಾಗಿ ದೊರಕುವ ವಸ್ತುಗಳಿಂದ, ಸ್ವಂತ ಉಪಯೋಗಕ್ಕೆ ತಯಾರಿಸುವ ಮದ್ಯಸಾರವು ಕಾನೂನು ಬಾಹಿರ ಎಂದು ಪರಿಗಣಿತವಾಗಿದ್ದರಿಂದ, ನಮ್ಮ ಹಳ್ಳಿಯಲ್ಲಿ ಗೋಯ್ ಹಣ್ಣಿನಿಂದ ಮದ್ಯಸಾರ ತಯಾರಿಸುವ, ರಹಸ್ಯ ಎಂದೂ ಕರೆಯಬಹುದಾದ ಈ ಚಟುವಟಿಕೆಗೆ ಪೂರ್ಣವಿರಾಮ ಬಿದ್ದಿದೆ.

ಬೇಸಗೆಯ ಬಿರುಬಿಸಿಲಿನ ಸಮಯದಲ್ಲೇ ನಮ್ಮೂರಿನ ಹಕ್ಕಲುಗಳಲ್ಲಿ ದೊರಕುವ ಇನ್ನೊಂದು ವರ್ಣಭರಿತ ಹಣ್ಣು ಎಂದರೆ ಮುರಿನ ಹಣ್ಣು (ಪುನರ್ಪುಳಿ.) ಅದರ ಒಳಗಿನ ಮೆದುವಾದ ತಿರುಳನ್ನು ತಿನ್ನಬಹುದು; ಅದರ ಹಣ್ಣಿನ ಸಿಪ್ಪೆಯನ್ನು ಚೆನ್ನಾಗಿ ಒಣಗಿಸಿಟ್ಟುಕೊಂಡರೆ, ಮಳೆಗಾಲದಲ್ಲಿ ತಿಳಿಸಾರು ಮಾಡಬಹುದು! ಬಿಸಿಲಿನ ದಿನಗಳಲ್ಲಿ, ಆ ಹಣ್ಣುಗಳನ್ನು ಬುಟ್ಟಿಗಟ್ಟಲೆ ತಂದು, ಹಣ್ಣಿನ ಸಿಪ್ಪೆಯನ್ನು ಪ್ರತ್ಯೇಕಿಸಿ ಒಣಗಿಸಿ ಇಡುವುದು, ನಮ್ಮೂರಿನ ಹಲವರ ಬೇಸಗೆಯ ಮುಖ್ಯ ಚಟುವಟಿಕೆಗಳಲ್ಲಿ ಒಂದಾಗಿತ್ತು. ಕೋಕಂ ಎಂದು ವಾಣಿಜ್ಯಕವಾಗಿ ಎಲ್ಲಾ ಕಡೆ ಪರಿಚಯಗೊಂಡಿರುವ ಮುರಿನ ಹಣ್ಣು, ಇಂದು ಆರೋಗ್ಯ ಕಾಪಾಡುವ ವಸ್ತುವಾಗಿಯೂ ಪ್ರಚಾರಪಡೆದಿರುವುದು ಮಾತ್ರ ವಿಶೇಷವೆಂದೇ ಹೇಳಬಹುದು.

ಇಂದು, ಬೇಸಗೆಯ ಸೆಕೆಯು ನಮಗೆಲ್ಲಾ ಹಿಂಸೆ ನೀಡುವಂಥದ್ದು ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಅದೇ ಬೇಸಗೆಯಲ್ಲಿ ನಮ್ಮೂರಿನ ಶಾಲಾ ಮಕ್ಕಳು ತಿನ್ನುತ್ತಿದ್ದ ಹಣ್ಣಿನ ವೈವಿಧ್ಯ, ಕಾಣುತ್ತಿದ್ದ ಹೂವುಗಳ ಸಿರಿವಂತಿಕೆಗೆ ಸಾಟಿ ಇರಲಿಲ್ಲ! (ಜಡ್ಡು = ಹುಲ್ಲು ಬೆಳೆದ ಜಾಗ, ಬ್ಯಾಣ = ಬೋಳಾದ ವಿಶಾಲ ಮೈದಾನ, ಗೆರಸಿ =ಮೊರ).

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ತವರಿನಲ್ಲಿ ಆರ್‌ಸಿಬಿಗೆ ಸೋಲಿನ ಕಹಿ: ಸುದ್ದಿ**
– 'ಸೋಲುಂಡ ತವರು'!

- **ಹಿಂದೂ ಧರ್ಮದ ಸಂಕೇತಗಳು, ಚಿಹ್ನೆಗಳನ್ನು ಧರಿಸಬೇಡಿ ಎಂದು ಪಕ್ಷದ ಕಾರ್ಯಕರ್ತರಿಗೆ ಕರೆನೀಡಿದ ಡಿಎಂಕೆ ಪ್ರಧಾನ ಕಾರ್ಯದರ್ಶಿ ಎ.ರಾಜಾ: ಸುದ್ದಿ**
– 'ಕೇಡುಗಾಲದಲ್ಲಿ ನರಿ ಮೊಟ್ಟೆ ಇಡ್ತಂತೆ' ಅನ್ನೋ ಗಾದೆಮಾತು ಅದ್ಯಾಕೋ ನೆನಪಾಯ್ತು ಕಣ್ರೀ!

- **'ಪೆನ್‌ಡ್ರೈವ್' ಸಿನಿಮಾಗೆ ಸೆನ್ಸಾರ್ ಅಸ್ತು: ಸುದ್ದಿ**
– ಅದೇನೋ ಸರಿ ಅನ್ನಿ! ಆದರೆ ಅದಕ್ಕೆ ದಕ್ಕಿರೋದು 'ಯು/ಎ' ಪ್ರಮಾಣಪತ್ರ ಎಂದು ಗೊತ್ತಾದ ಮೇಲೆ, 'ವಯಸ್ಕರಿಗೆ ಮಾತ್ರ' ವೈಶಿಷ್ಟ್ಯದ 'ಎ' ಪ್ರಮಾಣಪತ್ರದ ನಿರೀಕ್ಷೆಯಲ್ಲಿದ್ದ ರಸಿಕರಿಗೆ ಶಾನೆ ಬೇಸರವಾಗಿದೆಯಂತೆ!

- **ಪೂಂಚ್ ಗಡಿರೇಖೆ ದಾಟಿದ ಪಾಕಿಸ್ತಾನಕ್ಕೆ ತಕ್ಕ ಪ್ರತ್ಯುತ್ತರ ನೀಡಿದ ಭಾರತ: ಸುದ್ದಿ**
– 'ಹದ್ದು ಮೀರುವುದು', 'ಎಲ್ಲೆ ಮೀರುವುದು', 'ಗಡಿರೇಖೆ ದಾಟುವುದು', 'ಗಡಿಭಾಗದಲ್ಲಿ ಅಕ್ರಮ ನುಸುಳುವಿಕೆ' ಇವೆಲ್ಲ 'ಪಾಕಿಸ್ತಾನ' ಎಂಬ ಹೆಸರಿಗೆ ಇರುವ 'ಪರ್ಯಾಯ ಪರಿಭಾಷೆ'ಗಳೇ ಆಗಿ ಅದ್ಯಾವುದೋ ಕಾಲವಾಯಿತು, ಅಲ್ಲವೇ?!

- **ನಿಧಿ ಆಸೆಗಾಗಿ ದೇವರ ಕಲ್ಲು ಅಗೆದ ಕಳ್ಳರು: ಸುದ್ದಿ**
– ಆ 'ನಿಧಿ'ಯ ಬದಲಿಗೆ 'ಪರಮನಿಧಿ'ಯಾದ ದೇವರನ್ನೇ ನೆಚ್ಚಿದ್ದರೆ, ಅದನ್ನೂ ಮೀರಿಸುವಂಥದ್ದನ್ನೇ ಕೊಡ್ತಿದ್ದ!!

- **ಬೆಲೆ ಏರಿಕೆ ವಿರೋಧಿಸಿ ರಾಜ್ಯ ಬಿಜೆಪಿಯಿಂದ ಅಹೋರಾತ್ರಿ ಧರಣಿ: ಸುದ್ದಿ**
– 'ಹಾಗೆ ನೋಡಿದರೆ, ಜನರೂ ಹೀಗೆ ಬೆಲೆ ಏರಿಕೆ ವಿರೋಧಿಸಿ ಧರಣಿ ನಡೆಸೋದಾದ್ರೆ 365 ದಿನಗಳೂ ಸಾಕಾಗಲ್ಲ' ಅಂತ ಬಡ ಬೋರೇಗೌಡರು ಹೆಗಲ ಮೇಲಿನ ಟವೆಲ್ ಕೊಡವಿದರಂತೆ!

- **ತವರು ಕ್ರೀಡಾಂಗಣವಾದ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ಗುಜರಾತ್ ಟೈಟನ್ಸ್ ತಂಡದೆದುರು ಸೋತ ಆರ್‌ಸಿಬಿ: ಸುದ್ದಿ**
– ಅಷ್ಟಕ್ಕೂ ಆರ್‌ಸಿಬಿ ಸೋತಿದ್ದರಲ್ಲಿ ಒಂದು ಉದಾತ್ತ ಉದ್ದೇಶವಿದೆ. ನಮ್ಮ ನೆಲಕ್ಕೆ ಬಂದಿರೋ 'ಗುಜರಾತ್ ಟೈಟನ್ಸ್' ತಂಡದವರು ನಮ್ಮ ಅತಿಥಿಗಳಲ್ಲವೇ? ಅತಿಥಿಗಳು ದೇವರ ಸಮಾನವಾದ್ದರಿಂದ, ಅವರಿಗೆ ಯಥೋಚಿತ ಸತ್ಕಾರ ಮಾಡಬೇಕು ಅಂತಲೇ ಆರ್‌ಸಿಬಿಯವರು ಸೋತಿದ್ದು!

- **ಭಾರತದಲ್ಲಿ 205 ಮಂದಿ ಶತಕೋಟ್ಯಧಿಪತಿಗಳು: ಸುದ್ದಿ**
– ''ಅವರ ಹತ್ರ ಅಷ್ಟೊಂದು 'ಕಾಸು' ಇದ್ರೆ, ನಮಗೆ ಬಂದ ಭಾಗ್ಯವೇನು? ಮದುವೆಯಾಗಿ 30 ವರ್ಷವಾದ್ರೂ, ನಮ್ ಯೋಗ್ಯತೆಗೆ ಒಂದು 'ಕಾಸಿನ ಸರ' ಮಾಡಿಸಿಕೊಳ್ಳೋಕೆ ಆಗ್ಲಿಲ್ಲ'' ಅಂತ ಮಂಗಳಮ್ಮನವರು ಮುಸುಮುಸು ಅತ್ತರಂತೆ!!

- **ಯತ್ನಾಳ್ ಹಿಂದೂ ಹುಲಿ ಅಲ್ಲ, ನಕಲಿ ಹಿಂದೂ. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಹೊಸ ಪಕ್ಷ ಕಟ್ಟಿ ಗೆದ್ದು ಬಂದರೆ, 'ಹಿಂದೂ ಹುಲಿ'ಗೆ ನಾವೇ ಸನ್ಮಾನ ಮಾಡುತ್ತೇವೆ: ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವಾಗ್ದಾಳಿ**
– ಭಲೇ ಭಲೇ! ಈ 'ಬಯಲಾಟ'ಕ್ಕೆ 'ಹೊನ್ನಾಳಿ ಹೋರಿ ಮತ್ತು ಹಿಂದೂ ಹುಲಿಯ ಕಾಳಗ' ಎಂಬ ಶೀರ್ಷಿಕೆ ಇಡಲು ಭಾಗವತರು ರೆಡಿಯಾಗುತ್ತಿದ್ದಾರಂತೆ!!

ಸೀಮೆ ಮೀರದಿರಲಿ ಸೀಮಾಸುಂಕ ಸಮರ

ಕಟ್ಟೆ ಪಂಚಾಯ್ತಿ
ತಿಮ್ಮಣ್ಣ ಭಾಗ್ವತ್
vveditoped@gmail.com

If war is what the US wants, be it a tariff war, a trade war or any other type of war, we're ready to fight till the end''- ಇದು ಅಮೆರಿಕದ 'ಸುಂಕ ಸಮರ'ದ ಬೆದರಿಕೆಗೆ ಜಗ್ಗದ ಚೀನಾದ ಪ್ರತ್ಯುತ್ತರ. 'ಅಮೆರಿಕ ಫಸ್ಟ್' ಎಂಬ ತಮ್ಮ ಚುನಾವಣಾ ಪ್ರಚಾರದ ಘೋಷವಾಕ್ಯಕ್ಕೆ ತಮ್ಮ ಎರಡನೇ ಅಧಿಕಾರಾವಧಿಯ ಮೊದಲ ದಿನದಿಂದಲೇ ಚಾಲನೆ ನೀಡುವ ಅತ್ಯುತ್ಸಾಹ ತೋರಿಸಿದ ಟ್ರಂಪ್, ಅನೇಕ ಆಡಳಿತಾತ್ಮಕ ಆದೇಶಗಳಿಗೆ ಮುದ್ರೆಯೊತ್ತಿದರು. ಈಗ 'ಪರಸ್ಪರ ಸುಂಕ' (reciprocal tariff)ಎಂಬ ಸಮರ್ಥನೆಯೊಂದಿಗೆ ವಿವಿಧ ದೇಶಗಳ ಸರಕುಗಳಿಗೆ ಹೆಚ್ಚಿನ ಆಮದು ಸುಂಕವನ್ನು ಜಾರಿಗೊಳಿಸಲು ಅವರು ಮುಂದಾಗಿದ್ದಾರೆ. ''ಕಡಿಮೆ ಆಮದು ಸುಂಕ ವಿಧಿಸಿ ಇತರ ದೇಶಗಳಿಗೆ ಲಾಭ ಮಾಡಿಕೊಡುವ ಬದಲು, ಹೆಚ್ಚಿನ ಸುಂಕ ವಿಧಿಸಿ ತನ್ನ ತೆರಿಗೆದಾರರಿಗೆ ಲಾಭ ಸಿಗುವಂತೆ ಮಾಡುತ್ತೇನೆ'' ಎಂದು ನೇರವಾಗಿ ಹೇಳಿದ್ದಾರೆ ಟ್ರಂಪ್. ನಾಯಕನೊಬ್ಬ ತನ್ನ ದೇಶದ ಒಳಿತಿಗಾಗಿ ಮಾಡುತ್ತಿರುವ ಪ್ರಾಮಾಣಿಕ ಪ್ರಯತ್ನ ಅಥವಾ ದೇಶಪ್ರೇಮದ ಪ್ರತೀಕವಿದು ಎಂದುಕೊಂಡರೆ ಅದು ಪೂರ್ತಿ ಸುಳ್ಳಲ್ಲ. ಆದರೆ ಟ್ರಂಪ್‌ರ ಈ ನೀತಿಯು, ದೇಶಗಳ ನಡುವಿನ 'ಸೀಮಾಸುಂಕ ಸಮರ' (Tariff war) ಅಥವಾ 'ವ್ಯಾಪಾರಿ ಸಮರ'ಕ್ಕೆ ನಾಂದಿಹಾಡಬಹುದು ಎಂಬ ಆತಂಕ ಕಾಡುತ್ತಿದೆ.

ಏನಿದು ಸೀಮಾಸುಂಕ ಸಮರ?

ಯಾವುದೇ ದೇಶ ತನ್ನ ಆಮದಿನ ಮೇಲೆ (ಕೆಲವು ಸಲ ರಫ್ತಿನ ಮೇಲೆ ಕೂಡ) ವಿಧಿಸುವ ಸುಂಕವನ್ನು 'ಸೀಮಾಸುಂಕ' (Customs Duty) ಎನ್ನಲಾಗುತ್ತದೆ. ಇದು ಎರಡು ದೇಶಗಳ ನಡುವಿನ ಆರ್ಥಿಕ ಸಂಘರ್ಷ. ಜನಾಂಗೀಯ, ಭೌಗೋಳಿಕ ಅಥವಾ ರಾಜಕೀಯ ಭಿನ್ನಾಭಿಪ್ರಾಯದ ಕಾರಣಕ್ಕೆ, ತನಗೆ 'ಕಂಡರಾಗದ' ದೇಶದ ಸರಕುಗಳ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸುವ ಮೂಲಕ ಆ ದೇಶಕ್ಕೆ ಹಾನಿ ಉಂಟುಮಾಡಲಾಗುತ್ತದೆ. ಇದಕ್ಕೆ ಪ್ರತೀಕಾರವಾಗಿ ಆ ದೇಶ ಕೂಡ ಸುಂಕದ ದರವನ್ನು ಹೆಚ್ಚಿಸುತ್ತದೆ. ಬಲಾಢ್ಯ ದೇಶವೊಂದು ತನ್ನ ಹಿತಾಸಕ್ತಿಗೋಸ್ಕರ ಅಥವಾ ನಿಲುವು/ವರ್ತನೆಯನ್ನು ಬದಲಿಸಿಕೊಳ್ಳುವಂತೆ ಮತ್ತೊಂದು ದೇಶದ ಮೇಲೆ ಒತ್ತಡ ಹೇರುವ ಸಲುವಾಗಿ ಇಂಥ ಕ್ರಮಕ್ಕೆ ಮುಂದಾಗಬಹುದು. ಹಾಗಂತ ಸುಂಕ ಹೆಚ್ಚಳದ ಎಲ್ಲಾ ನಿದರ್ಶನಗಳೂ ಸಮರವಾಗಬೇಕಿಲ್ಲ; ಅದು ಆಯಾ ದೇಶದ ಆರ್ಥಿಕ ನೀತಿಯ ಸಾಮಾನ್ಯ ಅಂಶವಾಗಿರಬಹುದು.

ಅಮೆರಿಕ ಎಬ್ಬಿಸಿದ ಗದ್ದಲವೇನು?

ಆಮದುಗಳ ಮೇಲೆ ಅಮೆರಿಕ ವಿಧಿಸುವ ಸೀಮಾಸುಂಕದ ದರವು, ಇತರ ಅನೇಕ ದೇಶಗಳ ದರಕ್ಕೆ ಹೋಲಿಸಿದರೆ ಅತಿಕಡಿಮೆ. ಈ ಪರಿಸ್ಥಿತಿಯ ಲಾಭ ಪಡೆದು ಕೆನಡಾ, ಮೆಕ್ಸಿಕೋ, ಚೀನಾದಂಥ ಅನೇಕ ರಾಷ್ಟ್ರಗಳು ತಮ್ಮ ದೇಶದ ಸರಕುಗಳನ್ನು ಅಮೆರಿಕಕ್ಕೆ ರಫ್ತು ಮಾಡುವ ಮೂಲಕ ತಮ್ಮ ವ್ಯಾಪಾರಿ ಲಾಭವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಇದಕ್ಕಿಂತ ಹೆಚ್ಚಾಗಿ ಅಂಥ ದೇಶಗಳು ಅಮೆರಿಕದ ಸರಕುಗಳಿಗೆ ಹೆಚ್ಚಿನ ಆಮದು ಸುಂಕ ವಿಧಿಸುತ್ತವೆ ಎನ್ನಲಾಗಿದೆ. 'ಅಮೆರಿಕದ ತೆರಿಗೆದಾರರ ಹಣದಲ್ಲಿ ಇತರ ದೇಶಗಳು ಲಾಭ ಮಾಡಿಕೊಳ್ಳುತ್ತಿವೆ' ಎಂಬುದು 'ಪಕ್ಕಾ ಮಾರವಾಡಿ' ಟ್ರಂಪ್‌ರವರ ಅಭಿಪ್ರಾಯ!

2024ರ ಚುನಾವಣಾ ಪ್ರಚಾರದಲ್ಲಿ, 'ಅಕ್ರಮ ವಲಸೆ' ಮತ್ತು 'ಪರಸ್ಪರ ತೆರಿಗೆ' (Reciprocal Tarriff) ಡೊನಾಲ್ಡ್ ಟ್ರಂಪ್‌ರ ಮುಖ್ಯ ವಿಷಯಗಳಾಗಿದ್ದವು. ಮುಖ್ಯವಾಗಿ ಮೆಕ್ಸಿಕೋ ಮತ್ತು ಕೆನಡಾ ದೇಶಗಳಿಂದ ಅಮೆರಿಕಕ್ಕೆ ಅಕ್ರಮ ವಲಸೆ, 'ಫೆಂಟಾನಿಲ್'ನಂಥ ಡ್ರಗ್‌ಗಳ ಅಕ್ರಮ ಸಾಗಣೆ ಮತ್ತು ಆ ದೇಶಗಳು ಇಂಥ ಅಕ್ರಮಗಳನ್ನು ನಿಯಂತ್ರಿಸುವ ಬದಲು ಸಕ್ರಿಯ ಪ್ರೋತ್ಸಾಹ ನೀಡುತ್ತಿವೆ ಎಂಬ ವರದಿ ಇವೆಲ್ಲವೂ ಟ್ರಂಪ್‌ರ ಕೆಂಗಣ್ಣಿಗೆ ಕಾರಣವಾಗಿದ್ದವು. ಈ ಹಿಂದಿನ 'ಉತ್ತರ ಅಟ್ಲಾಂಟಿಕ್ ಮುಕ್ತ ವ್ಯಾಪಾರ ಒಪ್ಪಂದ'ದ (NAFTA) ಬದಲಿಗೆ 2020ರಲ್ಲಿ ಸಹಿಹಾಕಿದ 'ಅಮೆರಿಕ-ಮೆಕ್ಸಿಕೋ-ಕೆನಡಾ ಒಪ್ಪಂದ'ದ (USMCA) ಅಡಿಯಲ್ಲಿ ಅಮೆರಿಕಕ್ಕೆ ಕೆನಡಾ ಮತ್ತು ಮೆಕ್ಸಿಕೋದಿಂದ ಅಗಾಧ ಪ್ರಮಾಣದ ಸರಕು ರಫ್ತಾಗುತ್ತಿದೆ. ತಮ್ಮ ರಫ್ತುಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸುವ ನಿರ್ಧಾರಕ್ಕೆ ಪ್ರತೀಕಾರದ ಕ್ರಮವಾಗಿ ಈ ಎರಡೂ ರಾಷ್ಟ್ರಗಳು ಹೆಚ್ಚುವರಿ ಸುಂಕವನ್ನು ಪ್ರಕಟಿಸಿವೆ. USMCAಯನ್ನು ಮುಂದುವರಿಸುವ ಸಾಧ್ಯತೆ ಕಂಡುಬರುತ್ತಿದೆಯಾದರೂ, ಈ ಕುರಿತು ಟ್ರಂಪ್ ಆಡಳಿತ ಕಠಿಣ ನಿಲುವು ತಳೆದಿದೆ. ಕೆನಡಾ ವಿಷಯದಲ್ಲಂತೂ ಟ್ರಂಪ್ ಕೊಂಚ ಭಿನ್ನ ನಿಲುವು ತಳೆದಿದ್ದಾರೆ, ಅದು ಅಮೆರಿಕದ 51ನೇ ರಾಜ್ಯವಾಗಬೇಕೆಂದು ಅವರು ಆರಂಭದಿಂದಲೂ ಹೇಳುತ್ತಿದ್ದಾರೆ. ಇನ್ನು ಚೀನಾ ದೇಶದ ವಿರುದ್ಧದ 'ಪೇಟೆಂಟ್ ಹಕ್ಕುಗಳ ಚೌರ್ಯ' ಮತ್ತು 'ಅಕ್ರಮ ವ್ಯಾಪಾರ ಪದ್ಧತಿ' ಆರೋಪಗಳ ಹಿನ್ನೆಲೆಯಲ್ಲಿ ಹೆಚ್ಚುವರಿ ಸುಂಕ ವಿಧಿಸಲು ಟ್ರಂಪ್ ಮುಂದಾಗಿದ್ದಾರೆ. ಈ ನಿರ್ಧಾರವನ್ನು ವಿರೋಧಿಸಿದ ಚೀನಾ ಪ್ರತೀಕಾರದ ಕ್ರಮಗಳಿಗೆ ಮುಂದಾಗಿದ್ದು, ವ್ಯಾಪಾರ ಸಮರ ಸೇರಿದಂತೆ ಎಲ್ಲ ತೆರನಾದ ಸಂಘರ್ಷಗಳಿಗೂ ಸಿದ್ಧವೆಂಬ ಸ್ಪಷ್ಟ ಸಂದೇಶವನ್ನು ಅದು ನೀಡಿದೆ.

ಸುಂಕ ಸಮರದ ಪರಿಣಾಮವೇನು?

GATT ಬದಲಿಗೆ ಅಸ್ತಿತ್ವಕ್ಕೆ ಬಂದ WTOದ 'ಮುಕ್ತ ವ್ಯಾಪಾರ ಒಪ್ಪಂದ'ದ (FTA) ಷರತ್ತುಗಳಿಗೊಳಪಟ್ಟು, ವಿದೇಶಿ ವ್ಯಾಪಾರಗಳ ಮೇಲೆ ಸುಂಕ ವಿಧಿಸಲು ರಾಷ್ಟ್ರಗಳು ಸ್ವತಂತ್ರವಾಗಿವೆ. ಹಾಗೆ ಹೆಚ್ಚಿನ ಸುಂಕ ವಿಧಿಸುವ ಮೂಲಕ ಬಿಲಿಯನ್‌ಗಟ್ಟಲೆ ಸುಂಕದ ಆದಾಯವನ್ನು ಗಳಿಸಬಹುದು. ಆದರೆ ಇದು ಅಷ್ಟು ಸರಳ ವಿಷಯವಲ್ಲ. ಯಾವುದೇ ಸರಕಿನ ಮೇಲೆ ಆಮದು ಸುಂಕದ ಹೆಚ್ಚಳವಾದರೆ, ಆಮದು ಮಾಡಿಕೊಳ್ಳುವ ದೇಶದಲ್ಲಿ ಅದರ ಬೆಲೆ ಹೆಚ್ಚಾಗುತ್ತದೆ. ಅದು ಹೆಚ್ಚಿನ ಹಣದುಬ್ಬರಕ್ಕೆ ಕಾರಣವಾಗಬಹುದು ಅಥವಾ ಕಚ್ಚಾವಸ್ತುಗಳ ಬೆಲೆಯೇರಿಕೆ ಆಗುವ ಮೂಲಕ ಕೈಗಾರಿಕಾ ಅಭಿವೃದ್ಧಿ ಕುಂಠಿತವಾಗಬಹುದು. ಇದು ಉದ್ಯೋಗ ಕಡಿತ ಮತ್ತು ನಿರುದ್ಯೋಗ ಸಮಸ್ಯೆಗೆ ಕಾರಣವಾಗಬಹುದು. ಕಂಪನಿಗಳು ಕಡಿಮೆ ದರದಲ್ಲಿ ಕಚ್ಚಾವಸ್ತು ಸಿಗುವ ದೇಶಕ್ಕೆ ತಮ್ಮ ಉತ್ಪಾದನಾ ಘಟಕಗಳನ್ನು ಸ್ಥಳಾಂತರಿಸಬಹುದು ಅಥವಾ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಬಹುದು. 1930ರ ಆರ್ಥಿಕ ಕುಸಿತದ ವೇಳೆ Smoot-Hawley Tarriff Act 1930ರ ಮೂಲಕ ತಾನು ಅಳವಡಿಸಿಕೊಂಡ ರಕ್ಷಣಾತ್ಮಕ ಆರ್ಥಿಕ ನೀತಿಯಿಂದಾಗಿ ಅಮೆರಿಕ ಅತಿಯಾದ ಆರ್ಥಿಕ ಹಿಂಜರಿತವನ್ನು ಅನುಭವಿಸಿತು. ನಂತರ ಅಧ್ಯಕ್ಷರಾದ ರೂಸ್‌ವೆಲ್ಟ್ ಪರಸ್ಪರ ಸುಂಕದ ಒಪ್ಪಂದಗಳನ್ನು ಮಾಡಿಕೊಂಡ ಪರಿಣಾಮ ಸೀಮಾಸುಂಕವನ್ನು ಗಣನೀಯವಾಗಿ ಕಡಿಮೆ ಮಾಡಲಾಯಿತು.

2018ರ ಟ್ರಂಪ್ ಆಡಳಿತದಲ್ಲಿ ಚೀನಾದ ಆಮದುಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದರಿಂದ ಅಮೆರಿಕದ ಸೋಯಾಬೀನ್ ಆಮದನ್ನು ಚೀನಾ ನಿಲ್ಲಿಸಿತು. ಪರಿಣಾಮವಾಗಿ, ಅಗಾಧ ಪ್ರಮಾಣದ ಸೋಯಾಬೀನ್ ರಫ್ತಾಗದೇ ಉಳಿದು ಅಮೆರಿಕದ ರೈತರಿಗೆ ಉಂಟಾದ ಹಾನಿಯನ್ನು ತಡೆಯಲು ಸರಕಾರವು ಪರಿಹಾರವನ್ನು ಕೊಡಬೇಕಾಗಿ ಬಂತು. ಮತ್ತೊಂದೆಡೆ, ಅಮೆರಿಕದ ಬದಲು ಬ್ರೆಜಿಲ್‌ನಿಂದ ಹೆಚ್ಚಿನ ದರದಲ್ಲಿ ಸೋಯಾಬೀನ್ ಖರೀದಿ ಮಾಡಬೇಕಾಗಿ ಬಂದು ಚೀನಾ ಕೂಡ ಹಾನಿ ಅನುಭವಿಸಿತು. ಹೀಗಾಗಿ, ಸುಂಕ ಸಮರ ಯಾವಾಗಲೂ ಪರಸ್ಪರ ವಿನಾಶಕಾರಿ. ಆದ್ದರಿಂದ ಟ್ರಂಪ್ ಎಬ್ಬಿಸಿರುವ ಗದ್ದಲ ಅತಿರೇಕಕ್ಕೆ ಹೋಗದಂತೆ ಕಾಳಜಿ ವಹಿಸುವುದು ಅಗತ್ಯ.

ಭಾರತಕ್ಕೇನು ಪರಿಣಾಮ?

ಸ್ಟೀಲ್ ಮತ್ತು ಅಲ್ಯುಮೀನಿಯಂನಂಥ ಕೆಲವು ಸರಕುಗಳ ವಿಷಯದಲ್ಲಿ ಪಾರಸ್ಪರಿಕ ಸುಂಕದಿಂದ ಭಾರತಕ್ಕೆ ಲಾಭವೆಂದೇ ಪರಿಗಣಿಸಲಾಗುತ್ತಿದೆ. ಆದರೆ ಜನರಿಕ್ ಔಷಧ ಮತ್ತು ಕೃಷಿ ಉತ್ಪನ್ನಗಳ ವಿಷಯದಲ್ಲಿ ನಿಜವಾದ ಆತಂಕವಿದೆ. ಆದರೆ ಜೆನೆರಿಕ್ ಔಷಧ ಮತ್ತು ಕೃಷಿ ಉತ್ಪನ್ನಗಳ ವಿಷಯದಲ್ಲಿ ನಿಜವಾದ ಆತಂಕವಿದೆ. ಭಾರತದ ರೈತರ ಮತ್ತು ಕೈಗಾರಿಕೆಗಳ ಹಿತಕಾಯಲು ಸರಕಾರ ಬದ್ಧವಾಗಿದೆ. ಬದಲಾದ ಸನ್ನಿವೇಶದಲ್ಲಿ ಅಮೆರಿಕ ಮತ್ತು ಚೀನಾದ ನಡುವೆ ಇರುವ ಪ್ರತಿಕೂಲ ಪರಿಸ್ಥಿತಿಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುವುದು ಭಾರತದ ರಾಜತಾಂತ್ರಿಕ ಸಾಮರ್ಥ್ಯಕ್ಕೆ ದೊಡ್ಡ ಸವಾಲು. ಅದು ಸಾಧ್ಯವಾದರೆ ಭಾರತಕ್ಕೆ ಸುಂಕಸಮರದಿಂದ ಲಾಭವೇ ಆಗಬಹುದು. ಆದರೆ ಇದು ಬಲಾಢ್ಯರ ನಡುವಿನ ವ್ಯವಹಾರ. ಭಾರತ ಒಂದು ಹೆಜ್ಜೆಯಿಟ್ಟರೆ, ಚೀನಾ ಯಾವುದೇ ಗದ್ದಲವಿಲ್ಲದೆ ಕೈಗಾರಿಕಾ ಚದುರಂಗದಲ್ಲಿ 3 ನಡೆ ಮುಂದಿದೆ. ಬಾಂಗ್ಲಾ, ಪಾಕಿಸ್ತಾನ, ಶ್ರೀಲಂಕಾದಂಥ ರಾಷ್ಟ್ರಗಳಂತೂ ಈಗಾಗಲೇ ಚೀನಾದ ನಿಯಂತ್ರಣದಲ್ಲಿವೆ. ಇತರ ರಾಷ್ಟ್ರಗಳು ಚೀನಾದ ತೆಕ್ಕೆಗೆ ಹೋದರೆ ಅಂತಾರಾಷ್ಟ್ರೀಯ ವ್ಯಾಪಾರದ ನಕ್ಷೆಯಲ್ಲಿ ಗಣನೀಯ ಬದಲಾವಣೆ ಆಗಬಹುದು. ಕೈಗಾರಿಕಾ ಕಚ್ಚಾವಸ್ತುಗಳಂಥ ಸರಕುಗಳ ಆಮದು ವಿಷಯದಲ್ಲಿ ಚೀನಾದ ಮೇಲಿನ ಭಾರತದ ಅವಲಂಬನೆ ಅತಿಯಾಗಿದೆ. ಸುಂಕ ಸಮರದ ಹಿನ್ನೆಲೆಯಲ್ಲಿ ಉಂಟಾದ ತಲ್ಲಣದಿಂದ ಭಾರತದ ಷೇರುಪೇಟೆಯಲ್ಲಿ ಒಂದೇ ದಿನ 180 ಬಿಲಿಯನ್ ಡಾಲರ್‌ನಷ್ಟು ನಷ್ಟವಾಗಿದೆ. ತಲ್ಲಣ ಇನ್ನೂ ಮುಂದುವರಿದಿದೆ. ವಿವಿಧ ದೇಶಗಳು ಜಾರಿ ಮಾಡಿದ ಪ್ರತೀಕಾರ ಕ್ರಮಗಳು ಮತ್ತು ರಾಜತಾಂತ್ರಿಕ ನಡೆಗಳಿಂದಾಗಿ ಏಪ್ರಿಲ್ 2ರಿಂದ ಅನ್ವಯವಾದ ಪಾರಸ್ಪರಿಕ ಸುಂಕದ ವಿಷಯದಲ್ಲಿ ಅಮೆರಿಕ ಸ್ವಲ್ಪ ಮೆತ್ತಗಾಗುವ ಲಕ್ಷಣಗಳು ಕಂಡುಬರುತ್ತಿವೆ.

ಬಲಾಢ್ಯರ ಜತೆಗಿನ ವ್ಯವಹಾರ ತುಂಬಾ ಸೂಕ್ಷ್ಮ ವಿಷಯ- ನಿಂತರೂ ತಪ್ಪು, ಕುಳಿತರೂ ತಪ್ಪು ಎಂಬಂತೆ. ಉದಾಹರಣೆಗೆ, ಟ್ರಂಪ್‌ರೊಂದಿಗಿನ ಮಾತುಕತೆ ವೇಳೆ ಉದ್ವೇಗದಲ್ಲಿ ಬಾಯ್ತಪ್ಪಿ ಗೊಣಗಿದ ಒಂದು ಮಾತಿನಿಂದಾಗಿ ಉಕ್ರೇನ್ ರಾಷ್ಟ್ರಪತಿ ಹೊರಹೋಗಬೇಕಾಯಿತು. ಮಾತುಕತೆಗೆ ಬರುವಾಗ ಅವರು ಸೂಟ್ ಧರಿಸದಿದ್ದುದು ಕೂಡ ಚರ್ಚೆಗೆ ಗ್ರಾಸವಾಯಿತು. ಸುಂಕ ಹೆಚ್ಚಳದ ಪ್ರತೀಕಾರದ ವಿಷಯದಲ್ಲಿ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೋ ಬಿರುಸಿನ ಮಾತನಾಡಿದರೆ, ಮೆಕ್ಸಿಕೋದ ಅಧ್ಯಕ್ಷೆ ಕ್ಲಾಡಿಯಾ ಶಿನ್‌ಬಾಮ್ ಜಾಣತನದಿಂದ ವ್ಯವಹರಿಸಿ ಟ್ರಂಪ್‌ರ ಮೆಚ್ಚುಗೆಗೆ ಪಾತ್ರರಾದರು. ಅವರ ವಿನಯ ಮತ್ತು ಕ್ಷಿಪ್ರ ಕ್ರಮಗಳಿಂದಾಗಿ 'ಮೊಗ್ಯಾಂಬೋ ಖುಷ್ ಹುವಾ'! ಸುಂಕದ ಹೆಚ್ಚಳವನ್ನು ಹೊಸ ಆರ್ಥಿಕ ವರ್ಷಕ್ಕೆ ಮುಂದೂಡಲಾಯಿತು.

ಫಲಪ್ರದವಾಗಿದೆ ಎನ್ನಲಾದ ಮಾತುಕತೆಯ ಬಳಿಕವೂ ಟ್ರಂಪ್ ಮೋದಿಯವರನ್ನು Tough Negotiator ಎಂದಿರುವುದು ಹೊಗಳಿಕೆಯಾಗಿರಲಿಕ್ಕಿಲ್ಲ. ಮೋದಿಯವರ ಭೇಟಿಯ ನಂತರ ಭಾರತದ ವಿದೇಶಾಂಗ ಮತ್ತು ವಾಣಿಜ್ಯ ಖಾತೆ ಸಚಿವರುಗಳು ಅಮೆರಿಕದ ಜತೆಗೆ ಮಾತುಕತೆ ನಡೆಸಿ ನಿರಂತರ ಸಂಪರ್ಕದಲ್ಲಿದ್ದಾರೆ. ಹೆಚ್ಚಿನ ಸುಂಕದ ಅಸಮಾಧಾನ ತಗ್ಗಿಸಲು ಕೆಲವು ವಸ್ತುಗಳ ಮೇಲಿನ ಸುಂಕ ಕಡಿತದ ಪ್ರಸ್ತಾಪವನ್ನು ಮುಂದಿಡಲಾಗಿದೆ. 'ಅಮೆರಿಕ ಫಸ್ಟ್' ಎನ್ನುವ ಟ್ರಂಪ್‌ರ ಮೇಲೆ 'ಶ್ರೇಷ್ಠ ಭಾರತ್' ಎನ್ನುತ್ತ ಬಂದಿರುವ ಮೋದಿಯವರ ಮೋಡಿ ಎಷ್ಟು ಪರಿಣಾಮ ಬೀರುತ್ತದೆ ಎಂಬುದನ್ನು ಕಾದು ನೋಡಬೇಕು. ಮೋದಿಯವರ ಭೇಟಿಯ ವೇಳೆ ಅವರ ಕುರ್ಚಿಯನ್ನು ಸರಿಪಡಿಸಿದ ಟ್ರಂಪ್ ನಿಜಕ್ಕೂ ಮೋದಿಯ ಅಂದರೆ ಭಾರತದ ಮಿತ್ರರೇ? ಎಂಬುದು ಮಿಲಿಯನ್ ಅಲ್ಲ ಟ್ರಿಲಿಯನ್ ಡಾಲರ್ ಪ್ರಶ್ನೆ!

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಸುದ್ದಿಯನ್ನು ಮೀರಿಸಿದ ಸದ್ದು!

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಚರ್ಚಾವಿಷಯಕ್ಕೆ ಸಂಬಂಧಿಸಿದ ಮಾತುಕತೆಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಕೆಲ ದಿನಗಳ ಹಿಂದೆ ಸಭೆ ಕರೆದಿದ್ದು, ಅದು ಸಾಕಷ್ಟು ಸುದ್ದಿ ಮಾಡಿದ್ದು ನಿಮಗೆ ಗೊತ್ತಿರುವ ಸಂಗತಿಯೇ. ಆದರೆ ಇದನ್ನು ಮೀರಿಸುವ ರೀತಿಯಲ್ಲಿ ಮತ್ತೊಂದು ಸುದ್ದಿಯು ಚೆನ್ನೈನ ರಾಜಕೀಯ ವಲಯದಲ್ಲಿ ಸದ್ದು ಮಾಡಿತು ಎನ್ನಬೇಕು. ಅದು ರಾಜ್ಯದ ಇಬ್ಬರು 'ವಿಐಪಿ'ಗಳು ನೀಡಿದ ದೆಹಲಿ ಭೇಟಿಗೆ ಸಂಬಂಧಿಸಿದ್ದು ಎಂಬುದು ಗಮನಾರ್ಹ. ಈ ಪೈಕಿ ಮೊದಲಿನದು, ಸ್ಟಾಲಿನ್ ಅವರ ಅಳಿಯ ವಿ.ಶಬರೀಶನ್ ಅವರ ಭೇಟಿ. ಕೆಲವೊಂದು ಮೂಲಗಳ ಪ್ರಕಾರ, 'ಒಂದು ವಿಶೇಷ ಭೋಜನಕೂಟದ ಸಭೆ'ಗೆಂದು ಶಬರೀಶನ್ ಅವರು ದೆಹಲಿಗೆ ತೆರಳಿದ್ದರು. ಅಲ್ಲಿರುವಾಗ ಅವರು ಡಿಎಂಕೆಯ ಸಂಸದರನ್ನು ಭೇಟಿಮಾಡಿದರು ಹಾಗೂ ಅವರ ಜತೆಗಿನ ಶಬರೀಶನ್ ಅವರ ಫೋಟೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದವು; ಆದರೆ ಸದರಿ 'ಭೋಜನಕೂಟ'ದ ಬಗ್ಗೆ ಯಾವ ಸುದ್ದಿಯೂ ಇನ್ನೂ ಹೊರಬಿದ್ದಿಲ್ಲ ಎನ್ನಿ!

ಇನ್ನು ಎರಡನೇ ಸುದ್ದಿಯು, 'ಉದ್ಯೋಗಕ್ಕಾಗಿ ನಗದು' ಹಗರಣದಲ್ಲಿ ಪ್ರಸ್ತುತ ಜಾಮೀನಿನ ಮೇಲಿರುವ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಖಾತೆ ಸಚಿವ ವಿ.ಸೆಂದಿಲ್ ಬಾಲಾಜಿ ಅವರು ದೆಹಲಿಗೆ ನೀಡಿದ ಕಿರುಭೇಟಿಯ ಕುರಿತದ್ದು. ಲಭ್ಯ ಮಾಹಿತಿಗಳ ಪ್ರಕಾರ, ಅವರ ಜಾಮೀನನ್ನು ರದ್ದುಗೊಳಿಸುವಂತೆ ಕೋರಿ ಜಾರಿ ನಿರ್ದೇಶನಾಲಯವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ನಂತರ, ಹಿರಿಯ ವಕೀಲ ಮುಕುಲ್ ರೋಹಟ್ಗಿ ಅವರನ್ನು ಭೇಟಿ ಮಾಡಿ ಒಂದಿಷ್ಟು ದಾಖಲೆಗಳಿಗೆ ಸಹಿಹಾಕಲೆಂದು ಬಾಲಾಜಿಯವರು ದೆಹಲಿಗೆ ತೆರಳಿದ್ದರಂತೆ. ಅಲ್ಲಿ ಅವರು 'ಗಲಗಲ' ಅಂತ ಗೆಲುವಾಗಿದ್ದುದನ್ನು ಕಂಡು, 'ವಕೀಲ ರೋಹಟ್ಗಿ ಅವರ ಜತೆಗಿನ ಮಾತುಕತೆಯು ಬಾಲಾಜಿಯವರಲ್ಲಿ ಒಂದಷ್ಟು ವಿಶ್ವಾಸವನ್ನು ತುಂಬಿದೆ ಎನಿಸುತ್ತದೆ' ಎಂದು ಚೆನ್ನೈನ ರಾಜಕೀಯ ಪಡಸಾಲೆಗಳಲ್ಲಿ ಗುಸುಗುಸು ಹಬ್ಬಿರುವುದು ಸುಳ್ಳಲ್ಲ!

ಒಟ್ನಲ್ಲಿ ನೀವೇನೇ ಹೇಳಿ, ನಮ್ ರಾಜಕಾರಣಿಗಳ ಲೈಫ್‌ಸ್ಟೈಲೇ ಭಾರಿ ಗಮ್ಮತ್ತಿನದು ಕಣ್ರೀ!

ನಾರಾಯಣ ನಾರಾಯಣ!

ಮತ್ತೊಬ್ಬರ ಕೊಲೆಗೆ ಅವರಿವರು ಸಂಚು ಹೂಡಿದ್ದು ಬಯಲಾದಾಗ, '.... ಕೊಲೆಗೆ ಇವರು ಸುಪಾರಿ ನೀಡಿದರು' ಎಂಬ ಶೀರ್ಷಿಕೆಯಡಿ ಪತ್ರಿಕೆಯಲ್ಲಿ ಕ್ರೈಮ್ ಸುದ್ದಿ ಪ್ರಕಟವಾಗೋದು ಕಾಮನ್ನು. ಆದರೆ ಹೀಗೆ ಬರೀ 'ಸುಪಾರಿ'ಯನ್ನು ಮಾತ್ರ ನೀಡಿದರೆ, ವಿಳ್ಳೇದೆಲೆಯನ್ನು ಕೊಡೋರು ಯಾರು? ಅದು ಮೈಸೂರು ಎಲೆಯೇ ಅಥವಾ ಅಂಬಾಡಿ ಎಲೆಯೇ? ಅದಕ್ಕೆ ಹದವಾಗಿ ಸುಣ್ಣ ಹಚ್ಚೋರು ಯಾರು? ಎಂಬುದು ಕಲಹಪ್ರಿಯ ನಾರದರನ್ನು ಏಕಪ್ರಕಾರವಾಗಿ ಕಾಡುವ ಪ್ರಶ್ನೆಗಳು. ನಿಮಗೇನಾದ್ರೂ ಇದರ ಉತ್ತರ ಗೊತ್ತುಂಟಾ ಮಾರಾಯ್ರೇ?!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ಸಮಾಚಾರ ಸಣ್ಣದಲ್ಲ

ಮಣಿಪುರ ರಾಷ್ಟ್ರಪತಿ ಆಡಳಿತ ಅಂಗೀಕಾರ

ದೆಹಲಿ: ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿದ ನಿರ್ಣಯವನ್ನು ಲೋಕಸಭೆಯಲ್ಲಿ ಗುರುವಾರ ಬೆಳಗ್ಗೆ ಅಂಗೀಕರಿಸಲಾಯಿತು. ಎಲ್ಲಾ ಸಂಸದರು ಪಕ್ಷಾತೀತವಾಗಿ ಈ ನಿರ್ಣಯವನ್ನು ಬೆಂಬಲಿಸಿದರು. ಆದರೆ ಮಣಿಪುರದಲ್ಲಿನ ಪರಿಸ್ಥಿತಿಗೆ ಕೇಂದ್ರ ಸರಕಾರವೇ ಕಾರಣ ಎಂದು ಪ್ರತಿಪಕ್ಷ ಸದಸ್ಯರು ಟೀಕಿಸಿದರು. ಪ್ರಕ್ಷುಬ್ಧ ಈಶಾನ್ಯ ರಾಜ್ಯದಲ್ಲಿ ಸಹಜ ಸ್ಥಿತಿ ಮರುಸ್ಥಾಪನೆಗೆ ಕೇಂದ್ರ ಸರಕಾರ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ, 4 ತಿಂಗಳಲ್ಲಿ ಮಣಿಪುರದಲ್ಲಿ ಯಾವುದೇ ಹಿಂಸಾಚಾರ ನಡೆದಿಲ್ಲ. ಶಾಂತಿ ಸ್ಥಾಪಿಸಲು ಮೈತ್ತೈ ಮತ್ತು ಕುಕಿ ಸಮುದಾಯಗಳೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. 2023ರ ಮೇ3ರಂದು ಆರಂಭಗೊಂಡ ಹಿಂಸಾಚಾರದಲ್ಲಿ ಈವರೆಗೆ 260 ಜನರು ಸಾವಿಗೀಡಾಗಿದ್ದಾರೆ.

2507 ಕೆಜಿ ಡ್ರಗ್ಸ್ ನೌಕಾಪಡೆ ವಶಕ್ಕೆ

ಮುಂಬೈ: ಭಾರತೀಯ ನೌಕಾಪಡೆಯ ಪಶ್ಚಿಮ ಕಮಾಂಡ್‌ನ ವಿಶೇಷ ಕರಾವಳಿ ಕಾವಲು ಪಡೆ 'ಐಎನ್‌ಎಸ್ ತಾರ್ಕಶ್' ಹಿಂದೂ ಮಹಾಸಾಗರದಲ್ಲಿ 2507 ಕೆಜಿ ಮಾದಕದ್ರವ್ಯ ವಶಪಡಿಸಿಕೊಂಡಿದೆ. ಮಾ.31ರಂದು ಹಿಂದೂ ಮಹಾಸಾಗರದಲ್ಲಿ ಗಸ್ತು ನಡೆಸಿದ್ದಾಗ ಭಾರತೀಯ ನೌಕಾಪಡೆಯ ಗುಪ್ತಚರ ವಿಮಾನ 'ಪಿ8ಐ' ನಿಂದ ಮಹತ್ವದ ಸಂದೇಶ ಬಂದಿದ್ದು, ಅದನ್ನು ಆಧರಿಸಿ ಪಶ್ಚಿಮ ಕರಾವಳಿಯಲ್ಲಿ ಕಾರ್ಯಾಚರಣೆ ನಡೆಸಿ 121 ಕೆಜಿ ಹೆರಾಯಿನ್, 2386 ಕೆಜಿ ಹಶಿಶ್ ವಶಪಡಿಸಿಕೊಳ್ಳಲಾಗಿದೆ ಎಂದು ಐಎನ್‌ಎಸ್ ತಾರ್ಕಶ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಸ್ಸೆನ್ನೆಲ್ ಲೋಪ: ಕೇಂದ್ರಕ್ಕೆ ಭಾರಿ ನಷ್ಟ

ದೆಹಲಿ: ಸರ್ಕಾರಿ ಸ್ವಾಮ್ಯದ ದೂರಸಂಪರ್ಕ ಸಂಸ್ಥೆ ಭಾರತೀಯ ಸಂಚಾರ್ ನಿಗಮ್ ಲಿ.(ಬಿಎಸ್‌ಎನ್‌ಎಲ್)ನ ಪ್ರಮಾದಿಂದಾಗಿ ಕೇಂದ್ರ ಸರಕಾರಕ್ಕೆ ಬರಬೇಕಿದ್ದ 1,757 ಕೋಟಿ ರು. ಶುಲ್ಕದ ಆದಾಯ ತಪ್ಪಿಹೋಗಿದೆ ಎಂದು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೇಖಪಾಲರ(ಸಿಎಜಿ) ವರದಿ ಹೇಳಿದೆ. ಒಪ್ಪಂದದ ಪ್ರಕಾರ 2014ರ ಮೇನಿಂದ 2024ರ ಮೇವರೆಗೆ(10 ವರ್ಷ) ರಿಲಯನ್ಸ್ ಜಿಯೊ ಕಂಪನಿಗೆ 'ಸ್ಥಿರ ಮೂಲಸೌಕರ್ಯಗಳ ಹಂಚಿಕೆ'ಗಾಗಿ(ಟವರ್‌ಗಳು, ಕೇಬಲ್ ಸಂಪರ್ಕ) ಶುಲ್ಕವನ್ನು ಬಿಎಸ್‌ಎನ್‌ಎಲ್ ವಿಧಿಸದೇ ಹೋಗಿದ್ದರಿಂದ ಸರಕಾರಕ್ಕೆ ಬರಬೇಕಿದ್ದ 1,757.56 ಕೋಟಿ ರು. ತಪ್ಪಿಹೋಗಿದೆ ಸಿಎಜಿ ವರದಿ ವಿವರಿಸಿದೆ.

22 ಲಕ್ಷ ನುರಿತ ಚಾಲಕರ ಕೊರತೆ

ದೆಹಲಿ: ವಿಶ್ವಬ್ಯಾಂಕ್ ವರದಿಯ ಪ್ರಕಾರ ಭಾರತ 22 ಲಕ್ಷ ನುರಿತ ಚಾಲಕರ ಕೊರತೆ ಎದುರಿಸುತ್ತಿದೆ ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಲೋಕಸಭೆಗೆ ಗುರುವಾರ ತಿಳಿಸಿದ್ದಾರೆ. ಪ್ರತಿ ವರ್ಷ ದೇಶದಲ್ಲಿ 1.8 ಲಕ್ಷ ಜನ ರಸ್ತೆ ಅಪಘಾತಗಳಲ್ಲಿ ಸಾವಿಗೀಡಾಗುತ್ತಿದ್ದಾರೆ. ಚಾಲಕರಿಗೆ ಸೂಕ್ತ ತರಬೇತಿ ಸೌಲಭ್ಯಗಳ ಕೊರತೆಯಾಗಿರುವುದೇ ಹೆಚ್ಚಿನ ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದು ಪ್ರಶ್ನೋತ್ತರ ಅವಧಿಯಲ್ಲಿ ಗಮನ ಸೆಳೆದಿದ್ದಾರೆ. ದೇಶದಲ್ಲಿ ಸೂಕ್ತ ಚಾಲನಾ ತರಬೇತಿ ಸೌಲಭ್ಯಗಳ ಕೊರತೆಯಿದೆ. ಹಾಗಾಗಿ ಚಾಲಕರಿಗೆ ತರಬೇತಿ ನೀಡುವ ಸಂಸ್ಥೆಗಳನ್ನು ಸ್ಥಾಪಿಸಲೆಂದೇ ಕೇಂದ್ರ ಸರಕಾರ 4,500 ಕೋಟಿ ರು.ಗಳ ಯೋಜನೆ ಆರಂಭಿಸಿದೆ. ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಂತಹ 1,600 ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹಂತ ಹಂತವಾಗಿ ದೇಶಾದ್ಯಂತ ಚಾಲನಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಿದೆ. ಇದರಿಂದ 60 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಗಡ್ಕರಿ ಹೇಳಿದರು.

ದೇಶದಲ್ಲಿ ದಿಢೀರ್ ಹವಾಮಾನ ಬದಲು

ದೆಹಲಿ: ದೇಶಾದ್ಯಂತ ಹವಾಮಾನದಲ್ಲಿ ದಿಢೀರ್ ಬದಲಾವಣೆ ಆಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಖ್ಯವಾಗಿ ಚಂಡಮಾರುತದ ಪರಿಚಲನೆ ಕರಾವಳಿ ಭಾಗದ ಹಲವು ರಾಜ್ಯಗಳಲ್ಲಿ ತಾಪಮಾನ ಇಳಿಕೆ ಮತ್ತು ಮಳೆಗೆ ಕಾರಣವಾಗಲಿದೆ ಎಂದು ಹೇಳಿದೆ. ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಭಾಗದಲ್ಲಿ ಮಳೆಯಾಗಲಿದೆ. ಜತೆಗೆ, ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ. ದಕ್ಷಿಣ ಮತ್ತು ಮಧ್ಯ ಕರ್ನಾಟಕದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ತಿಳಿಸಿದೆ. ಏಪ್ರಿಲ್‌ನಿಂದ ಜೂನ್‌ವರೆಗೆ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಾಗಿರಲಿದೆ.

{ ಉದ್ಧವ್ ಠಾಕ್ರೆ } ಶಿವಸೇನೆ(ಯುಬಿಟಿ)

ಬಿಜೆಪಿಗೆ ಧೈರ್ಯವಿದ್ದರೆ ಪಕ್ಷದ ಧ್ವಜದಿಂದ ಹಸಿರು ಬಣ್ಣ ತೆಗೆಯಲಿ. ಮುಸ್ಲಿಮರನ್ನು ಕೇಸರಿ ಪಕ್ಷ ಇಷ್ಟಪಡದಿದ್ದರೆ ತನ್ನ ಪಕ್ಷದ ಧ್ವಜದಲ್ಲೇಕೆ ಹಸಿರು ಬಣ್ಣ ಹಾಕಿಕೊಂಡಿದೆ. ವಕ್ಫ್ ತಿದ್ದುಪಡಿ ವಿಧೇಯಕ ವಿಚಾರದಲ್ಲಿ ಬಿಜೆಪಿಯದು ಮೋಸದ ನಿಲುವು. ವಕ್ಫ್‌ನಿಂದ ಭೂಮಿ ಕಿತ್ತು ಉದ್ಯಮಿಮಿತ್ರರಿಗೆ ನೀಡುವ ಹುನ್ನಾರವಾಗಿದೆ. ಇದನ್ನು ನಮ್ಮ ಪಕ್ಷ ವಿರೋಧಿಸುತ್ತದೆ.

ಭಾರತದ ಸರಕುಗಳಿಗೆ ಶೇ.26ರಷ್ಟು ಪ್ರತಿಸುಂಕ ವಿಧಿಸಿದ ಅಮೆರಿಕ | ಕೈಗಾರಿಕೋದ್ಯಮಿಗಳು, ರಫ್ತುದಾರರ ಜತೆ ಚರ್ಚೆ

ಭಾರತದ ಮೇಲಿನ ಪರಿಣಾಮ ಕೂಲಂಕಷ ಪರಿಶೀಲನೆ: ಕೇಂದ್ರ



ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರಕಾರ, ಭಾರತದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇ.26ರಷ್ಟು ಪ್ರತಿಸುಂಕ ಘೋಷಿಸಿದೆ. ಈ ಪ್ರತಿಸುಂಕ ಹೇರಿಕೆಯ ಪರಿಣಾಮಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಲಾಗುತ್ತಿದೆ ಎಂದು ಭಾರತ ಸರಕಾರ ಗುರುವಾರ ಹೇಳಿದೆ.

ಭಾರತದ ಸರಕುಗಳ ಆಮದು ವಹಿವಾಟು ಮೇಲೆ ಅಮೆರಿಕ ಸರಕಾರ ಹೆಚ್ಚುವರಿಯಾಗಿ ಶೇ.26ರಷ್ಟು ಪ್ರತಿ ಸುಂಕವನ್ನು ವಿಧಿಸಿದೆ. ಔಷಧ, ಸೆಮಿಕಂಡಕ್ಟರ್(ಅರೆವಾಹಕ)ಗಳು ಮತ್ತು ಇಂಧನ ಮೂಲದ ವಿವಿಧ ಉತ್ಪನ್ನಗಳು ಸೇರಿದಂತೆ ಕೆಲ ಸರಕುಗಳಿಗೆ ಪ್ರತಿಸುಂಕದಿಂದ ವಿನಾಯಿತಿ ನೀಡಲಾಗಿದೆ.

ಅಮೆರಿಕ ಸರಕಾರ ಭಾರತದ ಉತ್ಪನ್ನಗಳ ಮೇಲೆ ಶೇ.26ರಷ್ಟು ಪ್ರತಿಸುಂಕ ವಿಧಿಸಿರುವ ಬಗ್ಗೆ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ದೇಶದ ಕೈಗಾರಿಕೆಗಳು, ರಫ್ತುದಾರರು ಸೇರಿದಂತೆ ಎಲ್ಲಾ ಪಾಲುದಾರರ ಜತೆ ಚರ್ಚಿಸಿ ಪ್ರತಿಕ್ರಿಯೆಯನ್ನು ಪಡೆಯಲಿದೆ. ಸುಂಕ ಪರಿಣಾಮಗಳನ್ನು ಕೂಲಂಕ ಷವಾಗಿ ಪರಿಶೀಲಿಸಲಿದೆ ಎಂದು ಸರಕಾರ ತಿಳಿಸಿದೆ. ಅಮೆರಿಕ ವಿದೇಶ ವ್ಯಾಪಾರ ನೀತಿಯಲ್ಲಿನ ಈ ಹೊಸ ಬದಲಾವಣೆಯಿಂದ ಸೃಷ್ಟಿಯಾಗಬಹುದಾದ ಬಿಕ್ಕಟ್ಟು ಹಾಗೂ ಹೊಸ ಅವಕಾಶಗಳನ್ನು ಅಧ್ಯಯನ ಮಾಡಲಾಗುತ್ತಿದೆ ಎಂದು ಕೇಂದ್ರದ ವಾಣಿಜ್ಯ- ಕೈಗಾರಿಕಾ ಸಚಿವಾಲಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಬುಧವಾರ ಸಂಜೆ (ಭಾರತದ ಸಮಯ ಗುರುವಾರ ಮುಂಜಾನೆ) ಅಮೆರಿಕ ಶ್ವೇತಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಡೊನಾಲ್ಡ್ ಟ್ರಂಪ್ ಅವರು, ಎಲ್ಲಾ ವ್ಯಾಪಾರ ಪಾಲುದಾರ ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ.10ರಿಂದ ಶೇ.50 ರವರೆಗೂ ಪ್ರತಿಸುಂಕವನ್ನು ವಿಧಿಸಿದ್ದು, ಅದರ ಕಾರ್ಯಕಾರಿ ಆದೇಶವನ್ನು ಹೊರಡಿಸಿದ್ದಾರೆ. ಶೇ.10ರ ಮೂಲ ಸುಂಕ ಕ್ರಮ ನಾಳೆಯಿಂದಲೇ(ಏ.5) ಜಾರಿಗೆ ಬರಲಿದೆ. ಉಳಿದಂತೆ ದೇಶಾವಾರು ವಹಿವಾಟು, ನಿರ್ದಿಷ್ಟ ಸರಕುಗಳ ಮೇಲೆ ಹೆಚ್ಚುವರಿಯಾಗಿ ವಿಧಿಸಲಾಗಿರುವ ಪ್ರತಿಸುಂಕ ಏ.9ರಿಂದ ಜಾರಿಗೆ ಬರಲಿದೆ.

ಸಂಬಂಧ ವೃದ್ಧಿಗೆ ಬದ್ಧ

ಅಮೆರಿಕದೊಂದಿಗಿನ ಸಮಗ್ರ ಜಾಗತಿಕ ವಿಸ್ತಾರದ ಕಾರ್ಯತಂತ್ರದ ಪಾಲುದಾರಿಕೆಯನ್ನು ಭಾರತ ಗೌರವಿಸುತ್ತದೆ. ಭಾರತ-ಅಮೆರಿಕದ ವ್ಯಾಪಾರ ವಹಿವಾಟು ಸಂಬಂಧ ಪರಸ್ಪರ ಸಮೃದ್ಧಿಗೆ ಆಧಾರಸ್ತಂಭವಾಗಿರಲಿದೆ. ಅದನ್ನು ಉಳಿಸಿಕೊಳ್ಳಲು, ಭಾರತ -ಅಮೆರಿಕ ರಕ್ಷಣಾ ಕ್ಷೇತ್ರದ ಪಾಲುದಾರಿಕೆ, ಯುದ್ಧೋಪಕರಣಗಳ ತಯಾರಿಕೆ-ಖರೀದಿ, ವಾಣಿಜ್ಯ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವೇಗವರ್ಧಿತ ಅವಕಾಶಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಬದ್ಧತೆ ತೋರಲಿದೆಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಗುರುವಾರ ಹೇಳಿದೆ.

ಏಷ್ಯಾ ದೇಶಗಳಿಗೆ ಟ್ರಂಪ್ ಸುಂಕ: ಭಾರತಕ್ಕೆ ಹೊಸ ಅವಕಾಶಗಳ ಸೃಷ್ಟಿ

ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರಕಾರ ಏಷ್ಯಾ ಖಂಡದ ದೇಶಗಳ ಸರಕುಗಳ ಮೇಲೆ ಪ್ರತಿಸುಂಕ ವಿಧಿಸಿರುವುದು ಭಾರತದ ಕೈಗಾರಿಕೋದ್ಯಮಗಳಿಗೆ ಪ್ರಯೋಜನಕಾರಿಯಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಉದಾಹರಣೆಗೆ, ಬಾಂಗ್ಲಾದೇಶ ಮತ್ತು ಥಾಯ್ಲೆಂಡ್‌ಗೆ ಶೇ.37 ಹಾಗೂ ವಿಯೆಟ್ನಾಂ ಮೇಲೆ ಶೇ.46ರಷ್ಟು ಪ್ರತಿಸುಂಕ ವಿಧಿಸಿರುವುದರಿಂದ ಆ ದೇಶಗಳು ರಫ್ತು ಮಾಡುವ ಸರಕುಗಳು ಅಮೆರಿಕದಲ್ಲಿ ಬಹಳ ದುಬಾರಿ ಆಗಲಿವೆ. ಆಗ ಅದೇ ಸರಕುಗಳನ್ನು ಭಾರತ ಅಮೆರಿಕದಲ್ಲಿ ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು ಅವಕಾಶವಾಗಲಿದೆ. ಇದರಿಂದ ಅಮೆರಿಕಕ್ಕೆ ಭಾರತದ ರಫ್ತು ವಹಿವಾಟು ಹೆಚ್ಚಲಿದೆ ಎಂದು ವಿಶ್ಲೇಷಿಸಲಾಗಿದೆ.

ಚೀನಾಗೆ ಹೊರೆ

ಅದರಲ್ಲೂ ಚೀನಾದ ಸರಕುಗಳ ಮೇಲೆ ಟ್ರಂಪ್ ಸರಕಾರ ಶೇ.34ರಷ್ಟು ಮತ್ತು ಥೈವಾನ್ ದೇಶದ ಉತ್ಪನ್ನಗಳ ಆಮದು ಮೇಲೆ ಶೇ.32ರಷ್ಟು ಪ್ರತಿ ಸುಂಕ ವಿಧಿಸಿರುವುದು

ಭಾರತದ ಸೆಮಿಕಂಡಕ್ಟರ್ ಸೇರಿದಂತೆ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಉದ್ಯಮ ಕ್ಷೇತ್ರಕ್ಕೆ ಅನುಕೂಲ ಮಾಡಿಕೊಡಲಿದೆ. ಆದರೆ, ಭಾರತದ ರಫ್ತು ವಹಿವಾಟು ಕ್ಷೇತ್ರದ ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕಿದೆ ಎಂದು ವಿದೇಶಿ ವಹಿವಾಟು ತಜ್ಞ ಅಜಯ್ ಶ್ರೀವಾಸ್ತವ ವಿಶ್ಲೇಷಣೆ ಮಾಡಿದ್ದಾರೆ.

ಸಿದ್ಧ ಉಡುಪು-ಮತ್ಸ್ಯೋದ್ಯಮ

ಬಾಂಗ್ಲಾದೇಶ ಮತ್ತು ವಿಯೆಟ್ನಾಂ ಹಾಗೂ ಥಾಯ್ಲೆಂಡ್‌ನಿಂದ ಸಿದ್ಧ ಉಡುಪು ಮತ್ತು ಜವಳಿ ಉತ್ಪನ್ನಗಳು

ಅಮೆರಿಕಕ್ಕೆ ರಫ್ತಾಗುತ್ತಿವೆ. ಅಲ್ಲದೇ ಈ ಮೂರೂ ದೇಶಗಳ ಮತ್ಸ್ಯೋದ್ಯಮ, ಸಾಗರ ಉತ್ಪನ್ನಗಳ ರಫ್ತು ಕ್ಷೇತ್ರದ ಮೇಲೆಯೂ ನಕಾರಾತ್ಮಕ ಪರಿಣಾಮವಾಗಲಿದೆ. ಈ ವಿಭಾಗಗಳಲ್ಲಿ ಏ.9ರ ನಂತರದ ದಿನಗಳಲ್ಲಿ ಭಾರತದ ಸಿದ್ಧ ಉಡುಪು ತಯಾರಿಕಾ ಕ್ಷೇತ್ರ ಹೆಚ್ಚು ಅವಕಾಶಗಳನ್ನು ಕಂಡುಕೊಳ್ಳಲು ಸಾಧ್ಯವಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಬೋಯಿಂಗ್‌ಗೆ ಬಿಡಿಭಾಗ

ಅಮೆರಿಕದ ಹೆಸರಾಂತ ವೈಮಾನಿಕ ಕಂಪನಿ ಬೋಯಿಂಗ್ ತಾನು ತಯಾರಿಸುವ ವಿಮಾನಗಳಿಗೆ ಭಾರತದಿಂದ ವಾರ್ಷಿಕ 120 ಕೋಟಿ

ಡಾಲರ್ ಮೌಲ್ಯದ ಬಿಡಿಭಾಗಗಳನ್ನು ತರಿಸಿಕೊಳ್ಳುತ್ತದೆ. ಭಾರತದ ಸಣ್ಣ-ಮಧ್ಯಮ ಗಾತ್ರದ 320 ಕೈಗಾರಿಕೆಗಳು ಬೋಯಿಂಗ್‌ಗೆ ಬೇಕಾದ ಬಿಡಿಭಾಗಗಳನ್ನು ತಯಾರಿಸಿ ಕೊಡುತ್ತವೆ. ಈಗ ಅಮೆರಿಕ ಭಾರತದ ಮೇಲೆ ಶೇ.26ರ ಪ್ರತಿಸುಂಕ ವಿಧಿಸಿರುವುದರಿಂದ 320 ಕೈಗಾರಿಕೆಗಳ ವಹಿವಾಟಿನ ಮೇಲೆ ಪರಿಣಾಮ ವಾಗಲಿದೆ ಎಂದು ಹೇಳಲಾಗಿದೆ.

ಅಮೆರಿಕ ವಿಧಿಸಿರುವ ಪ್ರತಿಸುಂಕ ಭಾರತವಷ್ಟೇ ಅಲ್ಲದೇ, ಹಲವು ದೇಶಗಳ ಮೇಲೆ ಪರಿಣಾಮ ಬೀರಲಿದೆ. ಇದನ್ನು ಭಾರತದ ಕೈಗಾರಿಕೋದ್ಯಮ ಪ್ರಗತಿಗೆ, ರಫ್ತು ವೃದ್ಧಿಗೆ ಸಿಕ್ಕಿರುವ ಒಂದು ಉತ್ತಮ ಅವಕಾಶವೆಂದುಕೊಳ್ಳಬೇಕು. ಉತ್ಪನ್ನಗಳ ಗುಣಮಟ್ಟ ವೃದ್ಧಿ, ರಫ್ತು ಸಾಮರ್ಥ್ಯ ಹೆಚ್ಚಳದ ಮೂಲಕ ಹೆಚ್ಚಿನ ಪ್ರಯೋಜನವನ್ನು ಪಡೆದುಕೊಳ್ಳಬೇಕಿದೆ.

-ಸಂಜಯ್ ನಾಯರ್ 'ಅಸೊಚಾಂ' ಅಧ್ಯಕ್ಷ

ಅಮೆರಿಕಕ್ಕೆ ಭಾರತ ರಫ್ತು

ಭಾರತದಿಂದ ಅಮೆರಿಕಕ್ಕೆ ಹೆಚ್ಚು ರಫ್ತಾಗುವುದು ಎಲೆಕ್ಟ್ರಾನಿಕ್ ಯಂತ್ರೋಪಕರಣಗಳು, ಮೊಬೈಲ್ ಫೋನ್, ಸೆಮಿಕಂಡಕ್ಟರ್ ಉತ್ಪನ್ನಗಳು, ಹವಳ- ಮುತ್ತು, ವಜ್ರಗಳು ಸೇರಿದಂತೆ ಆಭರಣಗಳು, ಔಷಧ ಪದಾರ್ಥಗಳು,

ಪೆಟ್ರೊ ಕೆಮಿಕಲ್ ಉತ್ಪನ್ನಗಳು ಪ್ರಮುಖವಾಗಿವೆ. ಕಾರ್ಗೊ ಹಡಗುಗಳಲ್ಲಿ ಭಾರತ ನಡೆಸುವ ರಫ್ತು ವಹಿವಾಟಿನಲ್ಲಿ ಶೇ.18ರಷ್ಟು ಅಮೆರಿಕಕ್ಕೆ ತಲುಪುವುದಾಗಿದೆ. ಭಾರತದಲ್ಲಿ ಆಪಲ್ ಕಂಪನಿಯ ಐಫೋನ್ ಜೋಡಣಾ ಘಟಕ ಸ್ಥಾಪನೆಯಾದ ಬಳಿಕವಂತೂ ಅಮೆರಿಕಕ್ಕೆ ಭಾರತದಿಂದ ಸ್ಮಾರ್ಟ್‌ಫೋನ್ ರಫ್ತು ವಹಿವಾಟಿನಲ್ಲಿ ಗಣನೀಯ ಹೆಚ್ಚಳವಾಗಿದೆ. ಅಮೆರಿಕ ಆಭರಣಗಳನ್ನು ಆಮದು ಮಾಡಿಕೊಳ್ಳುವ ಒಟ್ಟು ಪ್ರಮಾಣದಲ್ಲಿ ಭಾರತದ ಕೊಡುಗೆ ಶೇ.30ರಷ್ಟಿದೆ. ಅಮೆರಿಕದಿಂದ ಭಾರತದ ರಫ್ತಾಗುವ ಸರಕುಗಳಲ್ಲಿ ಹವಳ-ಮುತ್ತು-ವಜ್ರಗಳ ಪಾಲು ಶೇ.13ರಷ್ಟಿದೆ.

ಕಲಂ 40ರ ಜನವಿರೋಧಿ ನಡೆಯನ್ನು ಬಿಚ್ಚಿಟ್ಟ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ

ವಕ್ಫ್ ಕಾಯಿದೆ ಕಲಂ 40 ರದ್ದು: ತೇಜಸ್ವಿ ಪ್ರಶಂಸೆ

ದೆಹಲಿ: ವಕ್ಫ್ ಕಾಯಿದೆಯ ಸೆಕ್ಷನ್ 40 ಅಕ್ಷರಶಃ ಅರಣ್ಯ ನ್ಯಾಯದಂತಹ ಜನವಿರೋಧಿ ಕಠೋರ ನಿಯಮವಾಗಿದೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಲೋಕಸಭೆಯಲ್ಲಿ ಹೇಳಿದ್ದಾರೆ.

ಕಲಂ 40 ವಕ್ಫ್ ಮಂಡಳಿಗೆ ಅದೆಂತಹ ಅಮಿತ ಅಧಿಕಾರ ನೀಡಿತ್ತು ಎಂದರೆ, ದೇಶದಲ್ಲಿನ ಯಾವುದೇ ಆಸ್ತಿ, ಜಾಗವನ್ನಾದರೂ ಮಂಡಳಿ ತನ್ನದು ಎಂದು ಘೋಷಿಸಿಕೊಳ್ಳಬಹುದಾಗಿತ್ತು. ಆ ಜಾಗದ ಮೇಲೆ ತನ್ನ ಮಾಲೀಕತ್ವ ಇದೆ ಎಂದು ಸಾಬೀತುಪಡಿಸಬೇಕಾದ ಅಗತ್ಯವೇ ವಕ್ಫ್ ಮಂಡಳಿಗೆ ಇರಲಿಲ್ಲ. ತನ್ನದೆಂದು ದೃಢೀಕರಿಸಲೂ ಯಾವ ದಾಖಲೆ ಪತ್ರ, ಸಾಕ್ಷ್ಯ ಮಂಡಳಿಗೆ ಬೇಕಿರಲಿಲ್ಲ. ಅಂತಹ ಅಮಿತ ಅವಕಾಶವನ್ನು ಕಲಂ 40 ವಕ್ಫ್ ಮಂಡಳಿಗೆ ಕೊಟ್ಟಿತ್ತು ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ಸದನಕ್ಕೆ ತಿಳಿಸಿದರು.

ವಕ್ಫ್ ಕಾಯಿದೆಯಲ್ಲಿನ ನಿಯಮಗಳಲ್ಲಿನ ದೋಷಗಳನ್ನು ಸದನಕ್ಕೆ ಎತ್ತಿತೋರಿದ ಸೂರ್ಯ, ಮುಖ್ಯವಾಗಿ ಸೆಕ್ಷನ್ 40ರ ಪ್ರಮಾದಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಸೆಕ್ಷನ್ 40 ಆಧರಿಸಿ ವಕ್ಫ್ ಮಂಡಳಿ ಯಾವುದಾದರೂ ಆಸ್ತಿ, ಜಾಗ ಮಂಡಳಿಗೆ ಸೇರಿದ್ದು ಎಂದು ಘೋಷಿಸಿದರೆ ಅದನ್ನು ಯಾರೂ, ಯಾವ ನ್ಯಾಯಾಲಯದಲ್ಲೂ ಪ್ರಶ್ನೆ ಮಾಡಲು ಸಾಧ್ಯವಿರಲಿಲ್ಲ. ಮಂಡಳಿಯೇ ನ್ಯಾಯಾಲಯ, ಅದುವೇ ನ್ಯಾಯವಾದಿ, ಅದುವೇ ಅರ್ಜಿದಾರ ಎಲ್ಲವೂ ಆಗಿಬಿಟ್ಟಿತ್ತು ಎಂದು ಸೂರ್ಯ ವಿವರಿಸಿದರು. ಇದೊಂದು ಹಾಲಿವುಡ್‌ನ 'ಫ್ರಾಂಕಿನ್‌ಸ್ಟೇನ್' ಸಿನಿಮಾದಲ್ಲಿನ ರಾಕ್ಷಸನಂತೆ ಇದ್ದ ನಿಯಮ ಎಂದು ಸೆಕ್ಷನ್ 40ರ ಕಠೋರತೆಯನ್ನು ಉದಾಹರಣೆ ಸಮೇತ ವಿವರಿಸಿದರು. ಇಂತಹ ಅನಿಯಂತ್ರಿತ ಕಾನೂನು ಶಕ್ತಿಯನ್ನು ವಕ್ಫ್ ಮಂಡಳಿಗೆ ದಯಪಾಲಿಸಿದ್ದು ಕಾಂಗ್ರೆಸ್ ಪಕ್ಷ ಎಂದು ಬೊಟ್ಟು ಮಾಡಿದರು.

ನಮ್ಮ ಸರಕಾರ ಈಗ ವಕ್ಫ್ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಜನವಿರೋಧಿ ಡ್ರಕೋನಿಯನ್ (ಕಠೋರ) ಕಾಯಿದೆಯನ್ನು ರದ್ದುಗೊಳಿಸಿದೆ ಎಂದೂ ಸೂರ್ಯ ಹೆಮ್ಮೆಯಿಂದ ಹೇಳಿದರು.

ವಕ್ಫ್‌ನಿಂದ ಕರ್ನಾಟಕ ಬಡ ರೈತರ ಆತ್ಮಹತ್ಯೆ

ಕರ್ನಾಟಕದ ಲಿಂಗಾಯತ-ವೀರಶೈವ ಪರಂಪರೆಯಲ್ಲಿ ಮಹತ್ವದ್ದಾದ ಶ್ರೀ ಬಸವಣ್ಣನವರ ಅನುಭವ ಮಂಟಪವನ್ನೂ ವಕ್ಫ್ ಮಂಡಳಿ ತನ್ನ ಆಸ್ತಿ ಎಂದು ಘೋಷಿಸಿದೆ. ವಿಜಯಪುರ ಜಿಲ್ಲೆಯಲ್ಲೇ ಕೃಷಿಕರ 15 ಸಾವಿರ ಎಕರೆ ಭೂಮಿಯನ್ನು ವಕ್ಫ್ ಮಂಡಳಿ ತನ್ನದೆಂದು ಘೋಷಿಸಿದೆ. ಈ ನೆಲವನ್ನು ಬಡ ರೈತ ಕುಟುಂಬಗಳು ನೂರಾರು ವರ್ಷಗಳಿಂದ, ಹಲವು ತಲೆಮಾರುಗಳಿಂದ ಉಳುತ್ತಾ, ಬೆಳೆ ತೆಗೆಯುತ್ತಾ ಬಂದಿವೆ. ಅಂತಹ ನೆಲವನ್ನೇ ವಕ್ಫ್ ಮಂಡಳಿ ನುಂಗಿಹಾಕಿದೆ. ಇಂತಹ ಪ್ರಸಂಗ ಕರ್ನಾಟಕದ ಹಲವು ಜಿಲ್ಲೆಗಳಲ್ಲಾಗಿದೆ. ವಕ್ಫ್‌ನ ಇಂಥ ಲೂಟಿಯ ಪರಿಣಾಮವಾಗಿ ಕರ್ನಾಟಕದಲ್ಲಿ ನೂರಾರು ಬಡ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2013ರಲ್ಲಿ ವಕ್ಫ್ ಕಾಯಿದೆಗೆ ಕಾಂಗ್ರೆಸ್ ನೇತೃತ್ವದ 'ಯುಪಿಎ' ಸರಕಾರ ತಿದ್ದುಪಡಿ ತಂದು ಹೆಚ್ಚಿನ ಶಕ್ತಿ ನೀಡಿದ ಬಳಿಕ ಈ ಭೂಕಬಳಿಕೆ ನಡೆಯಲಾರಂಭಿಸಿತು ಎಂದು ಸಂಸದ ತೇಜಸ್ವಿ ಸೂರ್ಯ ಸದನಕ್ಕೆ ವಿವರಿಸಿದರು.

ಸಂಸದೀಯ ಸಭೆ: ಸೋನಿಯಾ ವಾಗ್ದಾಳಿ

ವಕ್ಫ್ ತಿದ್ದುಪಡಿ ಸಂವಿಧಾನ ಮೇಲಿನ 'ಲಜ್ಜೆಗೆಟ್ಟ ದಾಳಿ'

ದೆಹಲಿ: ವಕ್ಫ್ ತಿದ್ದುಪಡಿ ವಿಧೇಯಕ ಸಂವಿಧಾನದ ಮೇಲಿನ ಲಜ್ಜೆಗೆಟ್ಟ ದಾಳಿಯಾಗಿದೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಟೀಕಿಸಿದ್ದಾರೆ.

ದೆಹಲಿಯ ಸಂವಿಧಾನ ಸದನದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಸೋನಿಯಾ, ಇದು ಸಮಾಜವನ್ನು ಧ್ರುವೀಕರಣ ಸ್ಥಿತಿಯಲ್ಲಿ ಶಾಶ್ವತವಾಗಿಸುವ ಬಿಜೆಪಿ ಕಾರ್ಯತಂತ್ರದ ಭಾಗವಾಗಿದೆ. 'ಒಂದು ರಾಷ್ಟ್ರ-ಒಂದು ಚುನಾವಣೆ' ವಿಧೇಯಕ ಕೂಡಾ ಸಂವಿಧಾನವನ್ನು ಬುಡಮೇಲು ಮಾಡುವ ಮತ್ತೊಂದು ತಂತ್ರವಾಗಿದೆ. ಕಾಂಗ್ರೆಸ್ ಇದನ್ನೆಲ್ಲಾ ಬಲವಾಗಿ ವಿರೋಧಿಸುತ್ತದೆ ಎಂದಿದ್ದಾರೆ. ಸಂವಿಧಾನ ಕಾಗದದ ಮೇಲಷ್ಟೇ ಇದೆ. ಸಂವಿಧಾನವನ್ನು ಹಾಳುಗೆಡಹುವುದು ಮೋದಿ ಸರಕಾರದ ಉದ್ದೇಶವಾಗಿದೆ. ಈ ಸರಕಾರ ದೇಶವನ್ನು ಪ್ರಪಾತಕ್ಕೆ ಬೀಳಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಸಂಸತ್ತಿನ ಎರಡೂ ಸದನಗಳಲ್ಲಿ ಪ್ರತಿಪಕ್ಷ ನಾಯಕರಿಗೇ ಮಾತನಾಡಲು ಅವಕಾಶವಿಲ್ಲ. ಕಾಂಗ್ರೆಸ್ ಸಮಸ್ಯೆಗಳನ್ನು ಎತ್ತಿತೋರಿಸಲು ಅವಕಾಶವಾಗದಂತೆ ಆಡಳಿತ ಪಕ್ಷ ಸದನದಲ್ಲಿ ಆಗಾಗ್ಗೆ ಗೊಂದಲ ಸೃಷ್ಟಿಸುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಲೋಕಸಭೆ-ರಾಜ್ಯಸಭೆಯಲ್ಲಿನ ಕಾಂಗ್ರೆಸ್ ಸಂಸದರೆಲ್ಲರೂ ಸಭೆಯಲ್ಲಿದ್ದರು.



ಜೈನ್, ಸಿಖ್, ಕ್ರೈಸ್ತರಿಗೆ ಮಂಡಳಿ ಇಲ್ಲ

ಮುಸ್ಲಿಂ ಸಮುದಾಯಕ್ಕಷ್ಟೇ ಇಂತಹ ಬಲಿಷ್ಠ ಮಂಡಳಿ ಇದೆ. ಅದೇ ಅಲ್ಪಸಂಖ್ಯಾತ ಸಮುದಾಯದಲ್ಲಿರುವ ಕ್ರೈಸ್ತ, ಜೈನ, ಸಿಖ್ ಧರ್ಮೀಯರಿಗೆ ಇಂತಹ ಅನುಕೂಲವಿಲ್ಲ. ಹಿಂದೂಗಳಿಗಂತೂ ಅಂತಹ ಅವಕಾಶವನ್ನೇ ನೀಡಲಾಗಿಲ್ಲ ಎಂದು ತೇಜಸ್ವಿ ಸೂರ್ಯ ಹೇಳಿದಾಗ, ಎಐಎಂಐಎಂ ಪಕ್ಷದ ಸಂಸದ ಅಸಾದುದ್ದೀನ್ ಒವೈಸಿ ಮಧ್ಯಪ್ರವೇಶಿಸಿದರು. ಬೇರೆ ಧರ್ಮದವರಿಗೂ ಇಂತಹುದೇ ಮಂಡಳಿ ಇವೆ ಎಂದರು. ಅದಕ್ಕೆ, 'ಒವೈಸಿ ಸಾಬ್ ಆಪ್ ಗಲತ್ ಬೋಲ್‌ರಹೇ ಹೈ'(ಒವೈಸಿ ಅವರೇ ನೀವು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದೀರಿ) ಎಂದು ಸೂರ್ಯ ತಿರುಗೇಟು ನೀಡಿದರು.

ವಕ್ಫ್ ವಿಧೇಯಕ ಅಂಗೀಕಾರ ಪ್ರಶ್ನಿಸಿ ಡಿಎಂಕೆ ಸುಪ್ರೀಂಗೆ

ಚೆನ್ನೈ: ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ವಿಧೇಯಕ ಅಂಗೀಕಾರ ಆಗಿರುವುದು ಸರಿಯಲ್ಲ. ತಿದ್ದುಪಡಿ ವಿರುದ್ಧ ನಮ್ಮ ಪಕ್ಷ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಿದೆ ಎಂದು ತಮಿಳುನಾಡು ಸಿಎಂ, ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಗುರುವಾರ ಹೇಳಿದ್ದಾರೆ.

ವಕ್ಫ್ ತಿದ್ದುಪಡಿ ವಿಧೇಯಕ ವಿರೋಧಿಸಿ ಕಪ್ಪು ಬ್ಯಾಡ್ಜ್ ಧರಿಸಿ ವಿಧಾನಸಭೆಗೆ ಬಂದ ಸಿಎಂ ಸ್ಟಾಲಿನ್, ದೇಶದಲ್ಲಿನ ಹೆಚ್ಚಿನ ರಾಜಕೀಯ ಪಕ್ಷಗಳ ವಿರೋಧವಿದ್ದರೂ ತಿದ್ದುಪಡಿ ವಿಧೇಯಕ ಅಂಗೀಕರಿಸಿರುವುದು ಸಂವಿಧಾನ ಮೇಲಿನ ದಾಳಿ, ಧಾರ್ಮಿಕ ಸಾಮರಸ್ಯ ಕದಡುವ ಕೃತ್ಯ. ಅದನ್ನು ಎತ್ತಿ ತೋರಿಸಲೆಂದೇ ವಿಧಾನಸಭೆ ಕಲಾಪದಲ್ಲಿ ಕಪ್ಪು ಬ್ಯಾಡ್ಜ್ ಧರಿಸಿ ಭಾಗವಹಿಸುತ್ತಿದ್ದೇವೆ ಎಂದು ಸದನಕ್ಕೆ ತಿಳಿಸಿದರು. ವಕ್ಫ್ ಮಂಡಳಿಯ ಸ್ವಾಯತ್ತತೆ ನಾಶಪಡಿಸುವ ಮತ್ತು ಮುಸ್ಲಿಂ ಸಮುದಾಯಕ್ಕೆ ಬೆದರಿಕೆ ಹಾಕುವ ಕೇಂದ್ರ ಸರಕಾರದ ಈ ವಿಧೇಯಕದ ವಿರುದ್ಧ ತಮಿಳುನಾಡು ಹೋರಾಡಲಿದೆ ಎಂದು ಸ್ಟಾಲಿನ್ ಹೇಳಿದಾಗ ಡಿಎಂಕೆ ಸದಸ್ಯರು ಮೇಜುಕುಟ್ಟಿ ಬೆಂಬಲ ವ್ಯಕ್ತಪಡಿಸಿದರು. ವಿಧೇಯಕದ ವಿರುದ್ಧ 232 ಸಂಸದರು ಮತ ಚಲಾಯಿಸಿದ್ದಾರೆ. ವಿರೋಧ ವ್ಯಕ್ತಪಡಿಸುವವರ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ. ವಿಧೇಯಕ ಪೂರ್ಣ ಹಿಂಪಡೆಯಬೇಕು ಎಂಬುದೇ ನಮ್ಮ ಆಗ್ರಹವಾಗಿದೆ. ಕಾನೂನು ಕ್ರಮಗಳ ಮೂಲಕ ರಾಜ್ಯ ಹೋರಾಡಲಿದೆ ಎಂದರು.

ಅರಣ್ಯ ಕಬಳಿಕೆ ಆರೋಪ: ಸಚಿವರಿಗೆ ಖರ್ಗೆ ಸವಾಲು

ದೆಹಲಿ: ಸದನದಲ್ಲಿ ನನ್ನ ವಿರುದ್ಧ ಮಾಡಿದ ಆರೋಪ ಆಧಾರ ರಹಿತ. 'ಅರಣ್ಯ ಭೂಮಿ ಕಬಳಿಕೆ' ಆರೋಪ ಸಾಬೀತುಪಡಿಸಿದರೆ ರಾಜೀನಾಮೆ ನೀಡುವೆ ಎಂದು ರಾಜ್ಯಸಭೆಯಲ್ಲಿನ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರಿಗೆ ಸವಾಲೆಸೆದರು.

ಗುರುವಾರ ಶೂನ್ಯವೇಳೆ ವಿಷಯ ಪ್ರಸ್ತಾಪಿಸಿದ ಖರ್ಗೆ, ವಕ್ಫ್ ವಿಧೇಯಕ ಚರ್ಚೆ ವೇಳೆ ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ ಮತ್ತು ಅನುರಾಗ್ ಠಾಕೂರ್ ನನ್ನ ವಿರುದ್ಧ ಭೂಕಬಳಿಕೆ ಆರೋಪ ಮಾಡಿದ್ದಾರೆ. ಅದು ಮಾನನಷ್ಟ ಹೇಳಿಕೆ ಎಂದು ಸಿಟ್ಟಾದರು. ಒಂದೊಮ್ಮೆ ಆರೋಪ ಸಾಬೀತಾದರೆ ನಾನು ರಾಜೀನಾಮೆ ನೀಡುವೆ, ಸಾಬೀತಾಗದೇ ಇದ್ದರೆ ಅವರಿಬ್ಬರೂ ರಾಜೀನಾಮೆ ನೀಡಿ, ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು. ಲೋಕಸಭೆಯಲ್ಲಿ ಬುಧವಾರ ವಕ್ಫ್ ತಿದ್ದುಪಡಿ ವಿಧೇಯಕದ ಚರ್ಚೆ ನಡೆದಿದ್ದಾಗ ಸಚಿವ ಅನುರಾಗ್ ಠಾಕೂರ್, ಅವರು ಕಾಂಗ್ರೆಸ್‌ನದು ತುಷ್ಟೀಕರಣ ರಾಜಕಾರಣ ಎಂದು ವಾಗ್ದಾಳಿ ನಡೆಸಿದ್ದರು. ಅಲ್ಲದೆ, ಖರ್ಗೆ ಅರಣ್ಯ ಭೂಮಿ ಕಬಳಿಸಿದ್ದಾರೆ ಎಂದೂ ಆರೋಪಿಸಿದ್ದರು.

ಮಮತಾ ಸರಕಾರಕ್ಕೆ ಮುಖಭಂಗ

ಪ.ಬಂ. 25,000 ಶಿಕ್ಷಕರ ನೇಮಕ ರದ್ದು: ಸುಪ್ರೀಂ

ಕೋಲ್ಕತ್ತ: ಶಿಕ್ಷಕರ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಪ್ರಕರಣದಲ್ಲಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, 25,000ಕ್ಕೂ ಅಧಿಕ ಶಿಕ್ಷಕರು ಮತ್ತು ಇತರ ಸಿಬ್ಬಂದಿಗಳ ನೇಮಕವನ್ನು ರದ್ದುಗೊಳಿಸಿ ಗುರುವಾರ ತೀರ್ಪು ಪ್ರಕಟಿಸಿದೆ. ಇದು ಪಶ್ಚಿಮ ಬಂಗಾಳದಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರಕಾರದ ಪಾಲಿಗೆ ಭಾರೀ ಪೆಟ್ಟು ನೀಡಿದೆ.

ಸರಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಶಿಕ್ಷಕರು ಮತ್ತು ಬೋಧಕೇತರರು ಸೇರಿದಂತೆ ಒಟ್ಟು 25,753 ಸಿಬ್ಬಂದಿಗಳ ನೇಮಕದ ಶಾಲಾ ಸೇವಾ ಆಯೋಗದ(ಎಸ್‌ಎಸ್‌ಸಿ) ಪ್ರಕ್ರಿಯೆಯನ್ನು ಕೋಲ್ಕತ್ತ ಹೈಕೋರ್ಟ್ ರದ್ದುಗೊಳಿಸಿತ್ತು. ಆ ಆದೇಶವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಇದೀಗ ಸುಪ್ರೀಂ ಕೋರ್ಟ್ ನಲ್ಲೂ ದೀದಿ ಸರ್ಕಾರಕ್ಕೆ ಹಿನ್ನಡೆಯಾಗಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾ.ಪಿ.ವಿ.ಸಂಜಯ್ ಕುಮಾರ್ ಅವರ ಪೀಠ, ಪಶ್ಚಿಮ ಬಂಗಾಳ ಶಾಲಾ ಸೇವಾ ಆಯೋಗದಿಂದ ನಡೆದ 25,753 ಸಿಬ್ಬಂದಿ ನೇಮಕ ಪ್ರಕ್ರಿಯೆಯಲ್ಲಿ ಅಕ್ರಮವಾಗಿದೆ ಎಂದು ಹೇಳಿ ನೇಮಕ ಪ್ರಕ್ರಿಯೆಯನ್ನೇ ರದ್ದುಗೊಳಿಸಿದೆ.

4715 ಗಾಯಾಳು, 341 ಜನ ಕಾಣೆ | ಬ್ಯಾಂಕಾಕ್‌ನಲ್ಲಿ 22 ಸಾವು, 72 ಮಂದಿ ನಾಪತ್ತೆ

ಭೂಕಂಪ: 3085ಕ್ಕೇರಿದ ಮ್ಯಾನ್ಮಾರ್ ಸಾವಿನ ಸಂಖ್ಯೆ

ನೈಪೈದಾ: ಸೇನಾಡಳಿತದ ದೇಶ ಮ್ಯಾನ್ಮಾರ್‌ನಲ್ಲಿ ಭೂಕಂಪ ಸಂಭವಿಸಿ ವಾರವೇ ಕಳೆದಿದೆ. ರಕ್ಷಣಾ ಕಾರ್ಯಾಚರಣೆ ಸಮರೋಪಾದಿ ಸಾಗಿದ್ದು, ಅವಶೇಷಗಳನ್ನು ತೆರವುಗೊಳಿಸುತ್ತಾ ಹೋದಂತೆಲ್ಲಾ ಮೃತದೇಹಗಳು ಕಾಣಿಸಿಕೊಳ್ಳುತ್ತಲೇ ಇವೆ.

ಮಾ.28ರ ಬೆಳಗ್ಗೆ ಸಂಭವಿಸಿದ 7.7 ಮತ್ತು 6.4ರಷ್ಟು ತೀವ್ರತೆಯ ಕಂಪನ ಮತ್ತು ನಂತರದಲ್ಲಿನ ಸರಣಿ ಭೂಕಂಪಗಳಿಂದಾಗಿ ಕುಸಿದ ಕಟ್ಟಡಗಳಡಿ ಸಿಲುಕಿ ಸಾವಿಗೀಡಾದವರ ಸಂಖ್ಯೆ ಏ.3ರ(ಗುರುವಾರ) ಮಧ್ಯಾಹ್ನದ ವೇಳೆಗೆ 3085ಕ್ಕೆ ತಲುಪಿದೆ. ಭೂಕಂಪದಲ್ಲಿ ಗಾಯಗೊಂಡವರ ಸಂಖ್ಯೆ 4,715ಕ್ಕೆ ಮುಟ್ಟಿದೆ. ಅಲ್ಲದೇ ಭೂಕಂಪದ ಬಳಿಕ 341 ಮಂದಿ ನಾಪತ್ತೆಯಾಗಿದ್ದು, ಶೋಧ ಮತ್ತು ರಕ್ಷಣಾ ಕಾರ್ಯ ಮುಂದುವರಿದಿದೆ ಎಂದು ಪರಿಹಾರ ಮತ್ತು ರಕ್ಷಣಾ ಕಾರ್ಯದಲ್ಲಿ ನಿರತರಾಗಿರುವ ಮ್ಯಾನ್ಮಾರ್ ಅಧಿಕಾರಿಗಳು ಗುರುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮ್ಯಾನ್ಮಾರ್ ಎರಡನೇ ದೊಡ್ಡ ನಗರ ಮಾಂಡಲೇನಲ್ಲಿ ಭೂಕಂಪದ ಕೇಂದ್ರ ಬಿಂದುವಿತ್ತು. ಈ ಭೂಕಂಪನದ ತೀವ್ರತೆಯ ಪರಿಣಾಮವಾಗಿ 800 ಕಿಮೀ ದೂರದ ಥಾಯ್ಲೆಂಡ್‌ನಲ್ಲಿಯೂ ಭಾರೀ ಹಾನಿ ಯಾಗಿದೆ. ಬ್ಯಾಂಕಾಕ್ ನಗರದಲ್ಲಿ ನಿರ್ಮಾಣ ಹಂತದಲ್ಲಿದ್ದ ಸರಕಾರದ 30 ಮಹಡಿಗಳ ಕಟ್ಟಡ ಉರುಳಿದ್ದರಿಂದ ಹೆಚ್ಚಿನ ಸಾವಾಗಿದೆ. ಬ್ಯಾಂಕಾಕ್‌ನಲ್ಲಿ ಭೂಕಂಪದಿಂದ ಸಾವಿಗೀಡಾದವರ ಸಂಖ್ಯೆ 22ಕ್ಕೆ ಮುಟ್ಟಿದೆ. 35 ಮಂದಿ ಗಾಯಗೊಂಡಿದ್ದಾರೆ. ಅಲ್ಲದೇ, ನಾಪತ್ತೆಯಾದವರ ಸಂಖ್ಯೆಯೂ 72ಕ್ಕೇರಿದೆ. ನಗರದ ವಿವಿಧೆಡೆ ನೂರಾರು ಕಟ್ಟಡಗಳು ನೆಲಕ್ಕುರುಳಿವೆ, ರಸ್ತೆಗಳು ಬಿರುಕು ಬಿಟ್ಟಿವೆ ಎಂದು ಥಾಯ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಭಾರತದ ಎನ್‌ಡಿಆರ್‌ಎಫ್ ತಂಡ 'ಆಪರೇಷನ್ ಬ್ರಹ್ಮ' ಹೆಸರಲ್ಲಿ ಮ್ಯಾನ್ಮಾರ್‌ನಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿರುವುದು.

ವಿಶ್ವಸಂಸ್ಥೆ ನೆರವು

ಮ್ಯಾನ್ಮಾರ್‌ನ 6 ವಲಯಗಳು ಭೂಕಂಪದಿಂದ ಹಾನಿಗೊಳಗಾಗಿವೆ. 2.80 ಕೋಟಿ ಜನರು ಭೂಕಂಪದ ಪರಿಣಾಮದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಗಾಗಿ 1.20 ಕೋಟಿ ಡಾಲರ್‌ಗಳಷ್ಟು ಮೊತ್ತವನ್ನು ಭೂಕಂಪ ಸಂತ್ರಸ್ತ ಮ್ಯಾನ್ಮಾರ್ ಜನರಿಗೆ ಆಹಾರ, ಕುಡಿಯುವ ನೀರು, ತಾತ್ಕಾಲಿಕ ವಸತಿ-ಶೌಚಾಲಯ ಒದಗಿಸಲು ತೆಗೆದಿರಿಸಲಾಗಿದೆ. ಅಲ್ಲದೇ, ಇದೇ ಹಣವನ್ನು ಭೂಕಂಪದಿಂದ ಮಾನಸಿಕವಾಗಿ ಆಘಾತಕ್ಕೆ ಒಳಗಾಗಿರುವ ಜನರ ಮನಸ್ಥಿತಿ ಸುಧಾರಣೆ, ಚಿಕಿತ್ಸೆಗೂ ಬಳಸಲಾಗುವುದು ಎಂದು ವಿಶ್ವಸಂಸ್ಥೆ ಬುಧವಾರ ತಿಳಿಸಿದೆ.

ರಾಜ್ಯಸಭೆಗೆ ವಿಪ್ ಇಲ್ಲ | ಮತ ಸಂಸದರ ಆತ್ಮಸಾಕ್ಷಿಗೆ ಬಿಟ್ಟಿದ್ದು

ವಕ್ಫ್: ನಿಲುವು ಬದಲಿಸಿದ ಬಿಜೆಡಿ

ದೆಹಲಿ: ವಕ್ಫ್ ತಿದ್ದುಪಡಿ ವಿಧೇಯಕ -2025ರ ವಿಚಾರದಲ್ಲಿ ಬಿಜು ಜನತಾ ದಳ(ಬಿಜೆಡಿ) ನಿಲುವಿನಲ್ಲಿ ದಿಢೀರ್ ಬದಲಾವಣೆಯಾಗಿದೆ.

ಲೋಕಸಭೆಯಲ್ಲಿ ವಿಧೇಯಕ ಮಂಡಿಸುವ ಮುನ್ನ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಬಿಜೆಡಿ, ರಾಜ್ಯಸಭೆಯಲ್ಲಿ ತನ್ನ ಸಂಸದರಿಗೆ ಮತ ಚಲಾವಣೆ ವಿಚಾರದಲ್ಲಿ ವಿಪ್ ನೀಡದಿರಲು ನಿರ್ಧರಿಸಿದೆ. ಸಂಸದರು ಅವರ ಆತ್ಮಸಾಕ್ಷಿಗೆ ಅನುಸಾರವಾಗಿ ಮತ ಚಲಾಯಿಸಲಿ ಎಂದು ಮುಕ್ತ ಅವಕಾಶ ನೀಡಿದೆ. ಹಿರಿಯ ಬಿಜೆಡಿ ನಾಯಕ, ರಾಜ್ಯಸಭಾ ಸದಸ್ಯ ಸಸ್ಮಿತ್ ಪಾತ್ರ ಅವರು 'ಎಕ್ಸ್' ಖಾತೆಯಲ್ಲಿ ಗುರುವಾರ ಈ ನಿರ್ಧಾರ ಪ್ರಕಟಿಸಿದ್ದಾರೆ.

ಬಿಜು ಜನತಾದಳ ಸದಾ ಜಾತ್ಯತೀತ ಮತ್ತು ಒಳಗೊಳ್ಳುವಿಕೆ ತತ್ವಗಳನ್ನು ಎತ್ತಿ ಹಿಡಿದಿದೆ. ಎಲ್ಲಾ ಸಮುದಾಯಗಳ ಹಕ್ಕುಗಳನ್ನು ಗೌರವಿಸುತ್ತದೆ. ವಕ್ಫ್ ತಿದ್ದುಪಡಿ ವಿದೇಯಕ ವಿಚಾರದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ವಿವಿಧ ವರ್ಗಗಳು ವ್ಯಕ್ತಪಡಿಸಿದ ವೈವಿಧ್ಯಮಯ ಭಾವನೆಗಳನ್ನು ಆಳವಾಗಿ ಗೌರವಿಸುತ್ತೇವೆ ಎಂದು ಪಾತ್ರ 'ಎಕ್ಸ್'ನಲ್ಲಿ ಬರೆದಿದ್ದಾರೆ.

ವಕ್ಫ್ ವಿಧೇಯಕಕ್ಕೆ ಮತ ಹಾಕುವ ವಿಚಾರದಲ್ಲಿ ಪ್ರತಿಪಕ್ಷಗಳೊಂದಿಗೆ ಈವರೆಗೆ ಇದ್ದ ಪಕ್ಷವೊಂದು

ಇದೀಗ ತನ್ನ ನಿರ್ಧಾರದಿಂದ ಹಿಂದೆ ಸರಿದಿರುವುದು ಗಮನಾರ್ಹ.

ರಾಜ್ಯಸಭೆಯಲ್ಲಿ ಬಿಜು ಜನತಾ ದಳದ 7 ಸದಸ್ಯರಿದ್ದಾರೆ. ಪಕ್ಷ ವಿಪ್ ಜಾರಿ ಮಾಡದೇ ಇರುವುದರಿಂದ ಹಾಗೂ ಮನಸಾಕ್ಷಿಗೆ ತಕ್ಕಂತೆ ಅವರು ಮತ ಚಲಾಯಿಸಬಹುದು ಎಂದಿರುವುದರಿಂದ ಇವರಲ್ಲಿ ಎಷ್ಟು ಮಂದಿ ವಕ್ಫ್ ತಿದ್ದುಪಡಿ ವಿಧೇಯಕ ಪರವಾಗಿ, ಎಷ್ಟು ಮಂದಿ ವಿರುದ್ಧವಾಗಿ ಮತ ಚಲಾಯಿಸಲಿದ್ದಾರೆ ಎಂಬ ಕುತೂಹಲ ಮೂಡಿದೆ. ಬಿಜೆಪಿ ಮೂಲಗಳ ಪ್ರಕಾರ, ಬಿಜೆಡಿಯ ಏಳೂ ಸಂಸದರೂ ವಿಧೇಯಕದ ಪರವಾಗಿಯೇ ಮತ ಚಲಾಯಿಸಲಿದ್ದಾರೆ.

ಸಮಾಚಾರ ಸಣ್ಣದಲ್ಲ

ಬೆಂಕಿಗೆ ಆಹುತಿಯಾದ ಮೇವಿನ ಬಣವಿಗಳು

ಮುದಗಲ್: ಆಕಸ್ಮಿಕ ಬೆಂಕಿ ತಗುಲಿ ಎರಡು ಮೇವಿನ ಬಣವಿಗಳು ಬೆಂಕಿಗೆ ಆಹುತಿಯಾದ ಘಟನೆ ಸಮೀಪದ ಜನತಾಪೂರ ಗ್ರಾಮದಲ್ಲಿ ನಡೆದಿದೆ. ಜನತಾಪೂರು ಗ್ರಾಮದ ರೈತ ಅಮರೇಗೌಡ ಎನ್ನುವರು ಜಾನುವಾರುಗಳಿಗೆ ಒಂದು ವರ್ಷ ಆಗುವಷ್ಟು ಸಂಗ್ರಹಣೆ ಮಾಡಿದ ಎರಡು ಬಣವಿಗಳಿಗೆ ಬೆಂಕಿ ತಗುಲಿದ ಪರಿಣಾಮ ಸುಮಾರು 2ಲಕ್ಷ ರೂ ಮೊತ್ತದ ಮೇವಿನ ಬಣವಿಗಳು ಸುಟ್ಟಿವೆ ಸ್ಥಳಕ್ಕೆ ಅಗ್ನಿ ಶಾಮಕ ದಳದವರಿಂದ ಬೆಂಕಿ ನಂದಿಸುವಲ್ಲಿಮುಂದುದಾಗಿದ್ದಾರೆ ಆದರೆ ಯಾವುದೆ ಪ್ರಯೋಜನವಾಗಿಲ್ಲ ಈ ಕೂಡಲೆ ಈ ರೈತನಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ತೆರಿಗೆ ಪಾವತಿಯಲ್ಲಿ ರಿಯಾಯತಿ: ನರಸರೆಡ್ಡಿ



ಮುದಗಲ್: ಆಸ್ತಿಯ ಮಾಲೀಕರು ಎಪ್ರಿಲ್ ತಿಂಗಳನಲ್ಲಿ ತೆರಿಗೆ ಪಾವತಿಸಿದಲ್ಲಿ ಶೇ 5% ರಷ್ಟು ರಿಯಾಯತಿ ಪಡೆಯಬಹುದಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ ಹೇಳಿದರು. ಪತ್ರಿಕೆ ಜೊತೆ ಮಾತನಾಡಿದ ಅವರು, ಪುರಸಭೆ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಹಾಗೂ ಆಸ್ತಿ ಮಾಲಿಕರು 2025-26 ನೇ ಸಾಲಿನ ಆಸ್ತಿ ತೆರಿಗೆ ಉದ್ದಿಮೆ ಪರವಾರಿಗೆ ದಾರರು ನೀರಿನ ಕರ ಹಾಗೂ ವಾಣಿಜ್ಯ ಮಳಿಗೆಗಳ ಬಾಡಿಗೆ ಇನ್ನಿತರ ತೆರಿಗೆಗಳ ಪಾವತಿಸಿ ಶೇ 5% ರಷ್ಟು ರಿಯಾಯತಿ ಪಡೆದುಕೊಂಡು ಇದರ ಸದುಪಯೋಗ ಪಡಿಸಿಕೊಂಡು ಪುರಸಭೆ ಅಭಿವೃದ್ಧಿ ಹಾಗೂ ಕಾರ್ಯಗಳಿಗೆ ಸಹಕರಿಸಬೇಕೆಂದು ಸಾರ್ವಜನಿಕರಿಗೆ ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ ಕರೆ ನೀಡಿದರು.

ನೂತನ ಗ್ರಾಪಂ ಕಟ್ಟಡ ಕಾಮಗಾರಿಗೆ ಚಾಲನೆ

ಮುದಗಲ್: ಪಟ್ಟಣ ಸಮೀಪದ ಖೈರವಾಡಗಿ ಗ್ರಾಮ ಪಂಚಾಯತಿ ಕಾರ್ಯಾಲಯದ ನೂತನ ಕಟ್ಟಡ ಕಾಮಗಾರಿಗೆ ಅಧ್ಯಕ್ಷೆ ಮಂಜುಳಾ ದೇವಪ್ಪ ರಾಠೋಡ ಭೂಮಿ ಪೂಜೆ ನೆರವೇರಿಸುವ ಮೂಲಕ ಗುರುವಾರ ಚಾಲನೆ ನೀಡಿದರು. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 20 ಲಕ್ಷ ರೂಗಳ ಮೊತ್ತದ ನೂತನ ಗ್ರಾಮ ಪಂಚಾಯತಿಯ ಕಟ್ಟಡ ನಿರ್ಮಾಣ ಮತ್ತು 10 ಲಕ್ಷ ರೂಗಳ ಮೊತ್ತದಲ್ಲಿ ಸಂಜೀವಿನಿ ಶೆಡ್ ನಿರ್ಮಾಣದ ಕಾಮಗಾರಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರಾಮಪ್ಪ, ಬಿಜೆಪಿ ಮುಖಂಡ ವೆಂಕಟೇಶ ನಾಯಕ, ಸದಸ್ಯರಾದ ಗೋಪಾಲ ನಾಯ್ಕ್, ತಿಪ್ಪಣ್ಣ ನಾಯ್ಕ್, ಹೊಳೆಯಪ್ಪ ಚಲುವಾದಿ, ಸಂಗಪ್ಪ, ಶರಣಬಸವ ಮುರಾಳ, ಭೀಮಣ್ಣ ಭಜಂತ್ರಿ, ಜೈ ಹರ್ಷವರ್ಧನ, ಗ್ರಾ, ಪಂ ಸಿಬ್ಬಂದಿ ದೇವಪ್ಪ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ವಸಂತ ಕವಿಗೋಷ್ಠಿ ಆಯೋಜನೆ

ರಾಯಚೂರು: ಕರ್ನಾಟಕ ಸಂಘ ಹಾಗೂ ಹೊಸಮನಿ ಪ್ರಕಾಶನ ವತಿಯಿಂದ ನಗರದ ಕರ್ನಾಟಕ ಸಂಘದಲ್ಲಿ ಏ.05 ರಂದು ವಸಂತ ಕಾವ್ಯ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಕಾರ್ಯದರ್ಶಿ ಶ್ರೀನಿವಾಸ ಗಟ್ಟು ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕವಿ ಗೋಷ್ಠಿಯಲ್ಲಿ ರಾಯಚೂರು ನಗರ ಸೇರಿದಂತೆ ವಿವಿಧ ಭಾಗಗಳಿಂದ 39 ಕ್ಕೂ ಹೆಚ್ಚಿನ ಕವಿಗಳು ಭಾಗವಹಿಸಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ನಿವೃತ್ತ ಪ್ರಾಚಾರ್ಯ ವೆಂಕಟರಾವ್ ಕುಲಕರ್ಣಿ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪತ್ರಕರ್ತ ಅರವಿಂದ ಕುಲಕರ್ಣಿ, ಕವಿ ವೇಣು ಜಾಲಿಬೆಂಚಿ, ಸುರಭಿ ಸಾಂಸ್ಕೃತಿಕ ಬಳಗದ ಕಾರ್ಯದರ್ಶಿ ಜಿ.ಬಸವರಾಜ, ಕನ್ನಡ ಮಿತ್ರಕೂಟ ಅಧ್ಯಕ್ಷ ಅಶೋಕ ಕುಮಾರ ಜೈನ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕವಿಗೋಷ್ಠಿಯ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಚಾರ್ಯ ಡಾ.ರಾಜಶ್ರೀ ಕಲ್ಲೂರಕಲ್ ವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಟಿಯಲ್ಲಿ ಸಂಘದ ಅಧ್ಯಕ್ಷ ಕೆ.ಶಾಂತಪ್ಪ, ಖಜಾಂಚಿ ಹನುಮಂತಪ್ಪ, ಕಾರ್ಯದರ್ಶಿ ಮುರುಳಿಧರ ಕುಲಕರ್ಣಿ, ಹೊಸಮನಿ ಪ್ರಕಾಶನದ ಅಧ್ಯಕ್ಷ ಬಶೀರ ಅಹ್ಮದ್ ಹೊಸಮನಿ ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

{ಡಿ.ಕೆ.ಶಿವಕುಮಾರ್} ಉಪಮುಖ್ಯಮಂತ್ರಿ
ಈ ಹಿಂದೆ ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿತ್ತು. ಈಗ ಟೋಲ್ ದರ ಏಕೆ ಹೆಚ್ಚಳವಾಗಿದೆ. ಇದರ ಬಗ್ಗೆ ಬಿಜೆಪಿಯವರು ಏತಕ್ಕಾಗಿ ಪ್ರತಿಭಟನೆ ಮಾಡುತ್ತಿಲ್ಲ. ನಾವು ಹಾಲಿನ ದರ ಹೆಚ್ಚಳ ಮಾಡಿರುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ.

ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಸರಕಾರಿ ಕಚೇರಿ ಸಮಯ ಬದಲಾವಣೆ| ಬೆಳಗ್ಗೆ 8 ರಿಂದ 1.30ರವರೆಗೆ

ಮೊದಲ ದಿನವೇ ನಿಗದಿತ ಸಮಯಕ್ಕೆ ಬಾರದ ಅಧಿಕಾರಿಗಳು

ಶರಣಬಸವ ಹುಲಿಹೈದರ

ಕೊಪ್ಪಳ: ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ! ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತ್ಯಂತ ಜನಜನಿತವಾಗಿರುವ ಈ ಗಾದೆ ಸದ್ಯ ಕೊಪ್ಪಳ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಎಲ್ಲ ಅಧಿಕಾರಿಗಳಿಗೆ ಹೇಳಿ ಬರೆಯಿಸಿದಂತೆ ಇದೆ.

> ಸರಕಾರದ ಆದೇಶದಂತೆ ಎಲ್ಲ ಅಧಿಕಾರಿಗಳು ಕಡ್ಡಾಯವಾಗಿ ಬೆಳಗ್ಗೆ 8 ಗಂಟೆಗೆ ಕಚೇರಿಗೆ ಹಾಜರಾಗಬೇಕು ಎಂದು ಕಟ್ಟುನಿಟ್ಟಾಗಿ ಸೂಚನೆ ನೀಡಲಾಗುವುದು. ಜನರಿಗೆ ತೊಂದರೆ ಆಗದಂತೆ ಅಧಿಕಾರಿಗಳು ಕೆಲಸ ಮಾಡಬೇಕು ಎಂದು ಎಲ್ಲ ಸಿಬ್ಬಂದಿ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು.
>
> -ರಾಹುಲ್ ರತ್ನಂ ಪಾಂಡೆ, ಜಿಪಂ ಸಿಇಒ, ಕೊಪ್ಪಳ

ಹೌದು, ಭಾರಿ ಪ್ರಮಾಣದಲ್ಲಿ ಬಿಸಿಲು ದಾಖಲಾಗುವ ಕಾರಣಕ್ಕೆ ಸಾರ್ವಜನಿಕರು ಮತ್ತು ನೌಕರರಿಗೆ ಅನುಕೂಲ ಮಾಡಲು ಬೆಳಗಾವಿ ಜಿಲ್ಲೆಯ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲ್ಯಾಣ ಕರ್ನಾಟಕ ವ್ಯಾಪ್ತಿಯ 7 ಜಿಲ್ಲೆಯ ಸರಕಾರಿ ಕಚೇರಿಯ ಸಮಯ ಬದಲಾವಣೆ ಮಾಡಿ ಸರಕಾರ ಆದೇಶಿಸಿದೆ. ಈ 9 ಜಿಲ್ಲೆಯಲ್ಲಿ ಮಾ.3 ರಿಂದ ಏಪ್ರಿಲ್ 30ರ ವರೆಗೆ ಶಾಲೆ-ಕಾಲೇಜು ಸೇರಿ ಎಲ್ಲ ಸರಕಾರಿ ಕಚೇರಿಗಳು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30ರ ವರೆಗೆ ಕೆಲಸ ನಿರ್ವಹಿಸಬೇಕಿದೆ. ಈ ಹಿನ್ನೆಲೆಯಲ್ಲಿ ನೂತನ ಆದೇಶ ಜಾರಿಯಾದ ಮೊದಲ ದಿನ ವಿಶ್ವವಾಣಿ ನಡೆಸಿದ ರಿಯಾಲಿಟಿ ಚೆಕ್‌ನಲ್ಲಿ ಸ್ವತಃ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಸೇರಿ ಬಹುತೇಕ ಜಿಲ್ಲಾ ಮಟ್ಟದ ಅಧಿಕಾರಿಗಳು ಬೆಳಗ್ಗೆ 8ಕ್ಕೆ ಕಚೇರಿಗೆ ಬಂದಿಲ್ಲ.



ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿ ಮುಂದೆ ಡಿ ಗ್ರೂಪ್ ನೌಕರರು ಮಾತ್ರ ನಿಂತಿರುವುದು.

ಡಿಸಿ, ಜಿಪಂ ಸಿಇಒ, ಉಪ ವಿಭಾಗಾಧಿಕಾರಿ ಸೇರಿ ಬಹುತೇಕ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿಗಳು ಕೊಪ್ಪಳದ ಜಿಲ್ಲಾಡಳಿತ ಭವನದಲ್ಲೇ ಇವೆ. ಈ ಹಿನ್ನೆಲೆ ವಿಶ್ವವಾಣಿ ಗುರುವಾರ ಬೆಳಗ್ಗೆ 8ಕ್ಕೆ ಜಿಲ್ಲಾಡಳಿತ ಭವನದಲ್ಲಿನ ಎಲ್ಲ ಕಚೇರಿ ರಿಯಾಲಿಟಿ ಚೆಕ್ ಮಾಡಿದಾಗ, ಕೊಪ್ಪಳ ಜಿಪಂ ಸಿಇಒ ನಲಿನ್ ಅತುಲ್ ಮಾತ್ರ ನಿಗದಿತ ಸಮಯದಲ್ಲಿ ಕಚೇರಿಗೆ ಬಂದಿದ್ದು ಕಂಡು ಬಂತು. ಉಳಿದಂತೆ ಡಿಸಿ, ಎಡಿಸಿ, ಎಸಿ, ಅಬಕಾರಿ ಇಲಾಖೆ ಸೇರಿ ಎಲ್ಲ ಕಚೇರಿಯಲ್ಲಿ ಬೆಳಗ್ಗೆ 8ಕ್ಕೆ ಕಚೇರಿಗೆ ಬಂದಿಲ್ಲ. ಖಾಲಿ ಖಾಲಿ ಕುರ್ಚಿಗಳೇ ಜನರನ್ನು ಸ್ವಾಗತಿಸಿದವು. ಇದು ಕೇವಲ ಒಂದು ದಿನಕ್ಕೆ ಮಾತ್ರ ಮುಗಿಯುವುದಿಲ್ಲ. ಬದಲಾಗಿ 2 ತಿಂಗಳು ಜನರಿಗೆ ಸಮಸ್ಯೆ ತಪ್ಪಿದ್ದಲ್ಲ ಎಂಬ ಆರೋಪ ಕೇಳಿ ಬಂದಿವೆ.

ಜನರಿಂದ ಆಕ್ಷೇಪ: ಬೇಸಿಗೆ ವೇಳೆ ಉತ್ತರ ಕರ್ನಾಟಕದ ಕೆಲ ಜಿಲ್ಲೆಯಲ್ಲಿ ಬಿಸಿಲಿನ ತಾಪ ಹೆಚ್ಚಿರುತ್ತೆ. ಮಧ್ಯಾಹ್ನದ ಸಮಯದಲ್ಲಿ ಮನೆ ಬಿಟ್ಟು ಹೊರಗೆ ಹೋಗುವುದು ಕಷ್ಟ. ಹೀಗಾಗಿ ಜನರ ಅನುಕೂಲಕ್ಕೆ ಸರಕಾರಿ ಕಚೇರಿಗಳ ಸಮಯ ಬದಲಾವಣೆ ಮಾಡಿ, ಸರಕಾರ ಆದೇಶ ಮಾಡಿದೆ. ಜನರ ಅನುಕೂಲಕ್ಕೆ ಮಾಡಿರುವ ಆದೇಶ ಸರಕಾರಿ ನೌಕರಿಗೆ ಜಾಕ್ ಪಾಟ್ ಹೊಡೆದಂತಾಗಿದೆ. ಎಲ್ಲ ನೌಕರರು ಎಂದಿನಂತೆ ಬೆಳಗ್ಗೆ 10 ಗಂಟೆ ನಂತರವೇ ಕಚೇರಿ ಕಡೆಗೆ ಬಂದಿದ್ದು ಕಂಡು ಬಂತು. ಕೆಲ ಕಚೇರಿಗಳು ಡಿ ಗ್ರೂಪ್ ನೌಕರರನ್ನ ಕಳಿಸಿ ಓಪನ್ ಮಾಡಿಸಿದ್ದು ಕಂಡು ಬಂತು. ಸರಕಾರ ಜನರ ಅನುಕೂಲಕ್ಕೆ ಮಾಡಿದ ಆದೇಶವನ್ನು ನೌಕರರ ದುರುಪಯೋಗ ಮಾಡಿಕೊಳ್ಳುವುದು ಕಂಡು ಬಂತು.

ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿನ ಕಚೇರಿ ಖಾಲಿ ಖಾಲಿ ಆಗಿರುವುದು.

ಜನರಿಗೆ ಅನಾನುಕೂಲವೇ ಹೆಚ್ಚು:

ಬಿಸಿಲು ಹೆಚ್ಚುವ ಕಾರಣಕ್ಕೆ ಈ ಭಾಗದಲ್ಲಿ 2 ತಿಂಗಳು ಸಮಯ ಬದಲಾವಣೆ ಮಾಡುವುದು ಮೊದಲಿಂದಲೂ ಇದೆ. ಆದರೆ, ಕಳೆದ ಎರಡು ವರ್ಷ ಈ ಆದೇಶ ಮಾಡುವುದನ್ನು ಸರಕಾರ ಕೈಬಿಟ್ಟಿತ್ತು. ಈ ವರ್ಷ ಮತ್ತೆ ಸರಕಾರಿ ಕಚೇರಿ ಸಮಯ ಬದಲಾವಣೆ ಮಾಡಿ ಆದೇಶ ಮಾಡಲಾಗಿದೆ. ಈ ಹಿಂದೆಯೂ ಬಹುತೇಕ ಅಧಿಕಾರಿಗಳು ಎಂದಿನಂತೆ ಬೆಳಗ್ಗೆ 10ಕ್ಕೆ ಕಚೇರಿಗೆ ಬಂದಿದ್ದೇ ಹೆಚ್ಚು. ಇನ್ನು ಜಿಲ್ಲೆಯ ಗಡಿ ಭಾಗ ಮತ್ತು ಗ್ರಾಮೀಣ ಭಾಗದಿಂದ ಜಿಲ್ಲಾ ಕೇಂದ್ರಕ್ಕೆ ಬರುವ ಜನರಿಗೆ ಸರಕಾರದ ಈ ಆದೇಶ ಹೆಚ್ಚು ತೊಂದರೆ ಮಾಡಲಿದೆ. ಬಸ್ ಹಿಡಿದು ಜಿಲ್ಲಾ ಕೇಂದ್ರಕ್ಕೆ ಬರುವಷ್ಟರಲ್ಲೇ 11 ರಿಂದ 12 ಗಂಟೆ ಆಗಲಿದೆ. ಅಷ್ಟರಲ್ಲೇ ನೌಕರರು ಮನೆಗೆ ಹೊರಡುವ ಮೂಡ್ ನಲ್ಲಿ ಇರುತ್ತಾರೆ. ಇದರಿಂದ ಜನರಿಗೆ ಸಮಸ್ಯೆ ಆಗುವುದೇ ಹೆಚ್ಚು ಎಂಬ ಮಾತು ಕೇಳಿ ಬಂದಿವೆ.

ವಾಟ್ಸಾಪ್ ಗ್ರೂಪ್‌ನಲ್ಲಿ ಶಿಕ್ಷಕರ ರಂಪಾಟ

ಸರಕಾರದ ಆದೇಶ ಉಲ್ಲೇಖಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತೊಂದು ಆದೇಶ ಮಾಡಿ, ಮಾ.3 ರಿಂದ ಬೆಳಗ್ಗೆ 8ರಿಂದ ಕಚೇರಿಗೆ ಬರುವಂತೆ ತಮ್ಮ ನೌಕರರಿಗೆ ತಿಳಿಸಬೇಕು. ಕೊಪ್ಪಳ ಡಿಡಿಪಿಐ ಆದೇಶ ಮಾಡುವುದು ಒಂದಷ್ಟು ತಡವಾಗಿದ್ದಕ್ಕೆ ಶಿಕ್ಷಕರ ವಾಟ್ಸಾಪ್ ಗ್ರೂಪ್ ನಲ್ಲಿ ರಂಪಾಟವೇ ನಡೆದು ಹೋಗಿದೆ. ಶಿಕ್ಷಕರು ಕೆಲ ಪದಾಧಿಕಾರಿಗಳು ಡಿಡಿಪಿಐಗೆ ಕರೆ ಮಾಡಿದ್ದಲ್ಲೇ, ತಮಗೆ ಏನೋ ಅನ್ಯಾಯ ಆಗಿದೆ ಎನ್ನುವಂತೆ ಮಾಧ್ಯಮ ಪ್ರತಿನಿಧಿಗಳಿಗೆ ಕರೆ ಮಾಡಿ, ದೂರಿದ್ದಾರೆ. ಶಿಕ್ಷಕರ ಈ ನಡೆ ಎಷ್ಟು ಸರಿ ಎಂಬ ಪ್ರಶ್ನೆಯೂ ಮೂಡಿದೆ.

ಏ.15ರವರೆಗೆ ನೀರು ಕೊಡದಿದ್ದರೆ ಹೋರಾಟ: ಶಾಸಕಿ

ರಾಯಚೂರು: ರೈತರ ಬೆಳೆಗಳಿಗೆ ನೀರು ಕೇಳಲು ಪಾದಯಾತ್ರೆ ಮಾಡಲಾಗುತ್ತಿದ್ದು, ಆದರೆ ಪಾದಯಾತ್ರೆಯನ್ನು ಹತ್ತಿಕ್ಕಲು ಸಭೆಗಳನ್ನು ನಡೆಸಲಾಗುತ್ತಿದೆ. ಏ.15 ರವರೆಗೆ ರೈತರಿಗೆ ನೀರು ನೀಡಲು ಸರ್ಕಾರ ಮುಂದಾಗಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ದೇವದುರ್ಗ ಶಾಸಕಿ ಜಿ.ಕರೆಮ್ಮ ನಾಯಕ ಹೇಳಿದರು.

> ರೈತರಿಗೆ ಸಮರ್ಪಕವಾಗಿ ನೀರು ಹರಿಸಲು ಸರಕಾರವಾಗಲಿ, ಮಂತ್ರಿಗಳಾಗಲಿ, ಅಧಿಕಾರಿಗಳು ಸ್ಪಂಧಿಸುತ್ತಿಲ್ಲ, ಸ್ವಾರ್ಥಿಗಳಂತೆ ಅಧಿಕಾರಿಗಳು ಮಂತ್ರಿಗಳು ಆಲೋಚಿಸುತ್ತಿದ್ದು, ಮೊದಲ ಹಂತದಲ್ಲಿ ಮನವಿ ಸಲ್ಲಿಸಲಾಗುವುದು. ನೀರು ನೀಡದೇ ಇದ್ದಲ್ಲಿ ಎಲ್ಲಾ ರೈತ ಸಂಘಟನೆಗಳ ನೇತೃತ್ವದಲ್ಲಿ ಉಗ್ರ, ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.
>
> -ಎಂ.ವಿರೂಪಾಕ್ಷಿ ಜೆಡಿಎಸ್, ಜಿಲ್ಲಾಧ್ಯಕ್ಷ

ನಗರದ ಹೊರ ವಲಯದ ಸಾಥ್ ಮೈಲ್ ಕ್ರಾಸ್ ಬಳಿಯ ಗಾಯತ್ರಿ ದೇವಸ್ಥಾನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ನಾರಾಯಣಪುರ ಬಲದಂಡೆ ಕಾಲುವೆಗಳಿಗೆ ಏ.15 ರವರೆಗೆ ನೀರು ಹರಿಸುವಂತೆ ಒತ್ತಾಯಿಸಿ, ಪ್ರಾರಂಭಿಸಲಾದ ಪಾದಯಾತ್ರೆ ಎರಡನೇ ದಿನಕ್ಕೆ ತಲುಪಿದ್ದು, ಒಂದು ವೇಳೆ ರೈತರಿಗೆ ನೀರು ಹರಿಸದೇ ಇದ್ದಲ್ಲಿ ರೈತರ ಬೆಳೆಗಳು ಸಂಪೂರ್ಣವಾಗಿ ನಾಶವಾಗುತ್ತವೆ ಎಂದು ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಮಹಾಂತೇಶ ಪಾಟೀಲ್ ಅತ್ತನೂರು, ಎನ್.ಶಿವಶಂಕರ, ಸಣ್ಣ ನರಸಿಂಹ ನಾಯಕ, ಲಕ್ಷ್ಮೀಪತಿ ಗಾಣದಾಳ, ರಾಮಕೃಷ್ಣ ಸೇರಿದಂತೆ ರೈತರು ಉಪಸ್ಥಿತರಿದ್ದರು.

ಇತ್ತೀಚೆಗೆ ಮಾ.14 ರಂದು ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಏ.1ರಿಂದ 6 ರವರೆಗೆ ನೀರು ಹರಿಸುವುದಾಗಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆದರೆ ಅಧಿಕಾರಿಗಳು ಸೇರಿಕೊಂಡು ಯಾವ ಶಾಸಕರ ಗಮನಕ್ಕೆ ತರದೇ ಒಂದೆರಡು ದಿನ ನೀರು ಹರಿಸಿ ನಿಲ್ಲಿಸಿಬಿಟ್ಟಿದ್ದಾರೆ. ಏ.15 ರವರೆಗೆ ನೀರು ಹರಿಸದೇ ಇದ್ದಲ್ಲಿ ರೈತರಿಗೆ ಸಾಕಷ್ಟು ತೊಂದರೆಯಾಗುತ್ತದೆ ಎಂದರು.

ದೇವೇಗೌಡರು ಈ ಭಾಗದ ರೈತರಿಗೆ ಅನುಕೂಲವಾಗಲೆಂದು ನೀರಾವರಿ ಯೋಜನೆಯನ್ನು ಜಾರಿಗೊಳಿಸಿದ್ದರು. ಇದೀಗ ಅದೆ ನೀರಾವರಿ ಯೋಜನೆಯ ಅಧಿಕಾರಿಗಳು ನೀರು ಕೊಟ್ಟರೆ ಸಾಕಾಗಿದೆ. ಕಡ್ಡಾಯವಾಗಿ ನಾಲೆಗೆ ನೀರು ಹರಿಸುವಂತೆ 30 ಕಿ.ಮೀ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ನಂತರ ಜಿಲ್ಲಾಧಿಕಾರಿ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಈ ಎಲ್ಲಾ ಸಮಸ್ಯೆಗೆ ಕಾರಣ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಸರಕಾರಕ್ಕೆ ನೀಡಿಲ್ಲದಿರುವುದಾಗಿದೆ. ಯಾರೂ ಕೂಡ ಪಾದಯಾತ್ರೆ ಮಾಡಿ ಎಂದು ಒತ್ತಾಯಿಸಿಲ್ಲ. ಪಕ್ಷದ ಮುಖಂಡರು ಮಾತ್ರ ನಿನ್ನೆಯ ಪಾದಯಾತ್ರೆಯಲ್ಲಿದ್ದರು. ಆದರೆ ಇಂದಿನ ಪಾದಯಾತ್ರೆಯಲ್ಲಿ ಸಾಕಷ್ಟು ಜನ ರೈತರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ ಎಂದು ತಿಳಿಸಿದರು.

ಕುಟುಂಬದ ಕಡೆಗೂ ಸಮಯ ಕೊಡಿ

ಕೊಪ್ಪಳದ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಕಳೆದ ವರ್ಷ ನಿವೃತ್ತಿ ಹೊಂದಿದ ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಕೊಪ್ಪಳ: ಪೊಲೀಸ್ ಇಲಾಖೆ ಎಂದರೆನೇ ಒತ್ತಡದಲ್ಲಿ ಕೆಲಸ ಮಾಡವುದು ಸಾಮಾನ್ಯ. ಈ ಎಲ್ಲ ಒತ್ತಡಗಳ ನಡುವೆಯೂ ನಮ್ಮ ಕುಟುಂಬದ ಕಡೆಗೆ ಗಮನ ಹರಿಸಬೇಕು. ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ದುಶ್ಚಟದಿಂದ ದೂರ ಇರಬೇಕು ಎಂದು ನಿವೃತ್ತ ಪೊಲೀಸ್ ಇನ್ಸಪೆಕ್ಟರ್ ಮಿರರಪಯ್ಯ ಕಿವಿಮಾತು ಹೇಳಿದರು. ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಗೌರವ ವಂದನೆ ಸ್ವೀಕರಿಸಿ ಬುಧವಾರ ಮಾತನಾಡಿದರು. ಕರ್ತವ್ಯದಲ್ಲಿದ್ದಾಗ ಕಷ್ಟ, ತೊಂದರೆಗಳು ಬರುತ್ತವೆ. ಅವುಗಳನ್ನು ಸಹಿಸಿಕೊಂಡು, ನಿರ್ಲಕ್ಷ್ಯತೆ ತೋರದೇ ಸೇವೆ ಮಾಡಬೇಕು. ಕಾಯಕವೇ ಕೈಲಾಸ ಎಂಬ ಮಾತಿನಂತೆ ಕರ್ತವ್ಯ ನಿರ್ವಹಿಸಬೇಕು.ಯಾವುದೇ ಕೆಲಸ ಮಾಡಿ, ಅದರಲ್ಲಿ ಪರಿಪೂರ್ಣತೆ ಇದ್ದರೆ, ಯಶಸ್ಸು ಸಿಗುತ್ತದೆ. ನಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು. ಪ್ರಶಸ್ತಿಗಾಗಿ ಕೆಲಸ ಮಾಡುವ ಬದಲಿಗೆ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಬೇಕು. ಪೊಲೀಸರು ಬಡವರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು. ಮನಸ್ಸಿನಲ್ಲಿ ಬಹಳಷ್ಟು ಆಸೆಗಳನ್ನು ಇಟ್ಟುಕೊಂಡು ಓದಿರುತ್ತೇವೆ. ಈಗಿನ ಯುವಕರು ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂಬ ಆಸೆಗಳನ್ನು ಇಟ್ಟುಕೊಂಡಿರುತ್ತಾರೆ.

> ಕಳೆದ 1965 ರ ಏ. 2ರಂದು ರಾಜ್ಯ ಪೊಲೀಸ್ ಕಾಯ್ದೆ ಜಾರಿಗೆ ಬಂದಿದ್ದು, ಇದರ ಸವಿನೆನಪಿಗಾಗಿ ಪೊಲೀಸ್ ಧ್ವಜ ದಿನಾಚರಣೆ ಆಚರಿಸುತ್ತಿದ್ದೇವೆ. ಅವಿಸ್ಮರಣಿಯ ಸೇವೆ ಸಲ್ಲಿಸಿ, ನಿವೃತ್ತಾರಾದ ಪೊಲೀಸರ ಯೋಗಕ್ಷೇಮ ಮತ್ತು ಕಲ್ಯಾಣಕ್ಕೆ ಈ ಕಾರ್ಯಕ್ರಮ ಮಾಡಲಾಗುತ್ತದೆ.
>
> - ಡಾ.ರಾಮ್ ಎಲ್. ಅಸಿರದ್ದಿ, ಎಸ್ಪಿ, ಕೊಪ್ಪಳ

ಕೊನೆಗೆ ಪೊಲೀಸ್ ಕೆಲಸ ಸಿಕ್ಕೂರ ಅದರಲ್ಲೇ ಕಾಯಕ ನಿಷ್ಠೆ ಮೆರೆಯಬೇಕು. ಪೊಲೀಸ್ ಇಲಾಖೆಯಲ್ಲಿ ಸೇವೆ ಮಾಡುವ ಭಾಗ್ಯ ಸಿಕ್ಕಿರುವುದೇ ನಮ್ಮ ಪುಣ್ಯ. ಈ ಹಿನ್ನಲೆ 31 ವರ್ಷ ಪೊಲೀಸ್ ಕರ್ತವ್ಯ ನಿರ್ವಹಿಸಿ, ನಿವೃತ್ತಿ ಹೊಂದಿದ್ದೇನೆ. ಶಿಸ್ತಿಗೆ ಪೊಲೀಸ್ ಇಲಾಖೆ ಹೆಸರಾಗಿದೆ ಎಂದುರು. ಎಸ್ಪಿ ಡಾ.ರಾಮ್ ಎಲ್.ಅಸಿರದ್ದಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಪೊಲೀಸ್ ಧ್ವಜ ದಿನಾಚರಣೆ ಆಚರಿಸುತ್ತಿದ್ದೇವೆ. ಸಾರ್ವಜನಿಕರಿಗಾಗಿ ಸಮರ್ಪಣಾ ಮನೋಭಾವದಿಂದ ಸೇವೆ ಸಲ್ಲಿಸಿ, ನಿವೃತ್ತಾರದ ಪೊಲೀಸರನ್ನು ಸನ್ಮಾನಿಸಿ, ಗೌರವಿಸಲಾಗುತ್ತಿದೆ. ಪೊಲೀಸ್ ಧ್ವಜ ಮಾರಾಟ ಮಾಡಿ, ಸಂಗ್ರಹಿಸಿದ ಹಣವನ್ನು ನಿವೃತ್ತ ಪೊಲೀಸರ ಆರೋಗ್ಯ ಸೇರಿ ವಿವಿಧ ಕಲ್ಯಾಣ ಕಾರ್ಯಗಳಿಗೆ ಬಳಸಲಾಗುತ್ತದೆ ಎಂದರು.

ಕಳೆದ ವರ್ಷ ನಿವೃತ್ತಿ ಹೊಂದಿದ ಪೊಲೀಸ್ ಅಧಿಕಾರಿ ಸಿಬ್ಬಂದಿಯವರಿಗೆ ಸನ್ಮಾನಿಸಿ,ಗೌರವಿಸಲಾಯಿತು. ಪೊಲೀಸ್ ತಂಡಗಳು ಪಥಸಂಚಲನ ಮಾಡಿದುರ.

ರಾಷ್ಟ್ರಧ್ವಜ ಮತ್ತು ಪೊಲೀಸ್ ಧ್ವಜವನ್ನು ಸ್ವಾಗತಿಸಲಾಯಿತು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೇಮಂತಕುಮಾರ, ಡಿ.ವೈ.ಎಸ್.ಪಿ.ಗಳಾದ ಮುತ್ತಣ್ಣ ಸವರಗೋಳ, ಸಿದ್ದನಗೌಡ ಪಾಟೀಲ್ ಇದ್ದರು.

ಸಂಸ್ಕೃತಿ, ಸಂಸ್ಕಾರದ ಸಾರವೇ ಜನಪದ: ಬಾಲಾಜಿ

ಸರಕಾರಿ ಕಾಲೇಜಿನಲ್ಲಿ ಜನಪದ ಉತ್ಸವ, ಸಂಭ್ರಮ

ಕೊಪ್ಪಳ: ಇಂದಿಗೂ ಹಲವು ಬುಡಕಟ್ಟು ಜನಾಂಗ, ಗ್ರಾಮೀಣ ಪ್ರದೇಶದಲ್ಲಿ ಜಾನಪದ ಹಿನ್ನೆಲೆಯ ಸಂಪ್ರದಾಯ ಆಚರಣೆ ಬಳಕೆಯಲ್ಲಿವೆ. ಜಾನಪದದಲ್ಲಿ ಸಂಸ್ಕೃತಿ-ಸಂಸ್ಕಾರದ ಸಾರವಿದೆ ಎಂದು ಕನ್ನಡ ಜಾನಪದ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಜಾನಪದ ಎಸ್.ಬಾಲಾಜಿ ಹೇಳಿದರು. ನಗರದ ಸರಕಾರಿ ಪದವಿ ಕಾಲೇಜಿನಲ್ಲಿ, ಸಾಂಸ್ಕೃತಿಕ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ಜಾನಪದ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಗುರುವಾರ ಮಾತನಾಡಿದರು.

ಜಾನಪದ ಸಣ್ಣದಲ್ಲ. ತುಂಬಾ ದೊಡ್ಡದು. ನಮ್ಮ ಇಡೀ ಬದುಕೇ ಜಾನಪದ. ಗರ್ಭದಲ್ಲಿ ಇರುವ ಮಗುವಿನ ಹಂತದಲ್ಲೇ ಕುಬುಸದ ಕಾರಣ ಹೆಸರಿನಲ್ಲೇ ಜಾನಪದ ಆರಂಭಗೊಳ್ಳುತ್ತದೆ. ಬದುಕಿನುದ್ದಕ್ಕೂ ಅದು ಜೀವಂತವಾಗಿರುತ್ತದೆ. ಬರುವ ದಿನದಲ್ಲಿ ಬೆಂಗಳೂರಿನಂತೆ ಎಲ್ಲೆಡೆ ಜಾನಪದ ಬ್ರಿಗೇಡ್ ಕಟ್ಟುವ ಆಕಾಂಕ್ಷೆ ಇದೆ. ಎಲ್ಲರ ಸಹಕಾರ ಮುಖ್ಯ ಎಂದು ಕೋರಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಚಾರ್ಯ ಡಾ.ಡಿ.ಎಚ್.ನಾಯ್ಕ ಮಾತನಾಡಿ, ಇಂದಿನ ಮೊಬೈಲ್ ಯುಗದಲ್ಲಿ ಜಾನಪದ ಹಿನ್ನೆಲೆಯ ಆಟೋಪಚಾರಗಳು ಕ್ಷೀಣಿಸುತ್ತಿವೆ. ಜಾನಪದ ಕಲೆ ಉಳಿಸಿ, ಬೆಳೆಸಿಕೊಂಡು ಮುನ್ನಡೆಸುವ ಹೊಣೆ ಇಂದಿನ ಯುವಜನತೆ ಮೇಲಿದೆ ಎಂದು ಅಭಿಪ್ರಾಯಪಟ್ಟರು. ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರು, ಕಾಲೇಜಿನ ಸಾಂಸ್ಕೃತಿಕ ವಿಭಾಗದ ಸಂಚಾಲಕಿ ಡಾ.ಭಾಗ್ಯಜ್ಯೋತಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಬೋಧಕರಾದ ವೈ.ಬಿ.ಅಂಗಡಿ, ಡಾ.ಟಿ.ವಿ.ಮರಣಿ, ಶಿವಣ್ಣ ಎಂ. ಇದ್ದರು. ಡಾ. ಮಹಾಂತೇಶ ನೆಲಾಗಣಿ, ಡಾ.ತುಕಾರಾಮ ನಾಯ್ಕ, ಡಾ.ವೀರಣ್ಣ ಸಜ್ಜನರ್ ಜಾನಪದ ನಿರ್ವಹಿಸಿದರು. ಸಮಾಂರಭದಲ್ಲಿ ಡಾ.ಜಾನಪದ ಬಾಲಾಜಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಬಳಿಕ ಕಾಲೇಜಿನ ವಿದ್ಯಾರ್ಥಿಗಳಿಂದ ಜಾನಪದ ಗೀತ ಗಾಯನ, ನೃತ್ಯ ಮತ್ತಿತರ ಮನರಂಜನಾ ಕಾರ್ಯಕ್ರಮಗಳು ನಡೆದವು.

ಮೊಳಗಿದ ಆರ್‌ಸಿಬಿ ಘೋಷಣೆ

ಜಾನಪದ ಉತ್ಸವ ಕಾರ್ಯಕ್ರಮದ ನಿಮಿತ್ತ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಗೆಯಲ್ಲಿ ಸಂಭ್ರಮಿಸಿದರು. ಸಮಾಂರಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ವೇಳೆ ಆರ್‌ಸಿಬಿ.. ಆರ್‌ಸಿಬಿ.. ಆರ್‌ಸಿಬಿ... ಎಂಬ ಘೋಷಣೆ ಜೋರಾಗಿ ಮೊಳಗಿತು.

ಬೇಸಿಗೆ ಮಾಸಗಳಲಿ ಸರಕಾರಿ ಕಚೇರಿಗಳ ಸಮಯ ಬದಲಾವಣೆ: ಹಿರೇಮಠ ಸ್ವಾಗತ

ಸಿಂಧನೂರು: ಪ್ರಸಕ್ತ ಸಾಲಿನ ಏಪ್ರೀಲ್ ಮತ್ತು ಮೇ ಮಾಹೆಗಳಲ್ಲಿ ಹೆಚ್ಚಿನ ತಾಪಮಾನದ ಹಿನ್ನಲೆಯಲ್ಲಿ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರ ಮನವಿಗೆ ಸ್ಪಂದಿಸಿ, ಕಛೇರಿಗಳ ವೇಳಾಪಟ್ಟಿ ಬದಲಾಯಿಸಿ ಸರಕಾರದ ಅಧೀನ ಕಾರ್ಯದರ್ಶಿ ವಿಮಲಾಕ್ಷಿ ಬಿ ಅವರು ಆದೇಶಿಸಿ ದ್ದು, ಸರಕಾರಿ ನೌಕರರ ಸಂಘದ ರಾಜ್ಯ ವಿಭಾಗೀಯ ಉಪಾಧ್ಯಕ್ಷ, ಸಿಂಧನೂರು ತಾಲೂಕು ಘಟಕದ ಅಧ್ಯಕ್ಷ ಚಂದ್ರಶೇಖರ ಹಿರೇಮಠ ಪತ್ರಿಕಾ ಪ್ರಕಟಣೆ ಮೂಲಕ ಸ್ವಾಗತಿಸಿದ್ದಾರೆ. ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಬೆಳಗಾವಿ ವಿಭಾಗದ ವಿಜಯಪುರ, ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುವುದರಿಂದ ನೌಕರರು ಕರ್ತವ್ಯ ನಿರ್ವಹಿಸುವಲ್ಲಿ ತೊಂದರೆ ಪಡುತ್ತಿದ್ದು, ಮಾನವೀ ಯತೆ ದೃಷ್ಠಿಯಿಂದ ಕಛೇರಿ ಸಮಯದ ಸಮಯ ವನ್ನು ಬೆಳಗ್ಗೆ 8ರಿಂದ 1.30ವರೆಗೆ ನಿಗದಿಪಡಿಸಲು ಮನವಿ ಮಾಡಿದ್ದರು. ಈ ಹಿನ್ನಲೆಯಲ್ಲಿ ರಾಜ್ಯಾಧ್ಯಕ್ಷರ ಮನವಿಗೆ ಸ್ಪಂದಿಸಿದ ಸರಕಾರ, ಕಛೇರಿಯ ವೇಳಾಪಟ್ಟಿ ಬದಲಿಸಿ ಆದೇಶಿಸಿದ್ದು, ಸ್ವಾಗತಾರ್ಹವಾಗಿದೆ ಎಂದು ತಿಳಿಸಿದ್ದಾರೆ. ಸರಕಾರಿ ನೌಕರರು ಬದಲಾದ ಸಮಯ ದಲ್ಲಿ ಸಾರ್ವಜನಿಕರಿಗೆ ತೊಂದರೆಯಾ ಗದಂತೆ ತಮ್ಮ ಕರ್ತವ್ಯವನ್ನು ಎಂದಿನಂತೆ ಯಾವುದೇ ಅಡೆ-ತಡೆ ಲೋಪವಾಗದ ಂತೆ ಕಾರ್ಯನಿರ್ವ ಹಿಸಬೇಕು. ತುರ್ತು ಸಂದರ್ಭದಲ್ಲಿ ಮೇ ಲಾ ಧಿಕಾರಿಗಳ ನಿರ್ದೇಶನ ಸಮಯದ ಪರಿಮಿತಿ ಯುಲ್ಲದೇ ಕರ್ತವ್ಯ ನಿರ್ವಹಿಸ ಬೇಕೆಂದು ಮನವಿ ಮಾಡಿದ್ದಾರೆ.

ಏರ್ ಪೋರ್ಟ್‌ಗೆ ಹಸಿರು ನಿಶಾನೆ

ರಾಯಚೂರು: ರಾಯಚೂರಿನಲ್ಲಿ ನಿರ್ಮಿಸಲಾಗುತ್ತಿರುವ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣಕ್ಕೆ ಕೇಂದ್ರ ಪರಿಸರ ಮಂತ್ರಾಲಯ ಅನುಮತಿ ನೀಡಿದ್ದು ಬಹಳ ಸಂತಸದ ವಿಷಯವಾಗಿದೆ. ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಆಗಿರುವ ರಾಯಚೂರು ಜಿಲ್ಲೆಯಲ್ಲಿ ವಿಮಾನ ನಿಲ್ದಾಣದ ಕನಸು ನನಸಾಗುವ ಕಾಲ ಮತ್ತಷ್ಟು ಸನಿಹವಾಗಿದೆ ಎಂದು ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವ ಎನ್ ಎಸ್ ಬೋಸರಾಜು ಅವರು ಪತ್ರಿಕಾ ಪ್ರಕಟಣೆ ಮೂಲಕ ಸಂತಸ ವ್ಯಕ್ತಪಡಿಸಿದ್ದಾರೆ. ರಾಯಚೂರು ನಗರದಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವನ್ನ ನಿರ್ಮಿಸಬೇಕು, ಈ ಮೂಲಕ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಇಂಬು ನೀಡಬೇಕು ಎನ್ನುವುದು ನಮ್ಮ ಸರಕಾರದ ಆಶಯವಾಗಿದೆ. ಈ ನಿಟ್ಟಿನಲ್ಲಿ ಹೊಸ ಸರಕಾರ ಅಧಿಕಾರಕ್ಕೆ ಬಂದ ನಂತರ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯವನ್ನು ಚುರುಕು ಗೊಳಿಸಲಾಗಿತ್ತು. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ವಿಶೇಷ ಕಾಳಜಿ ವಹಿಸಿ ಕೇಂದ್ರ ಸರಕಾರದೊಂದಿಗೆ ಸಮನ್ವಯ ಮಾಡಿದ್ದರು. ರಾಯಚೂರು ನಗರದಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅಗತ್ಯವಿರುವ ಎಲ್ಲ ಸಹಕಾರವನ್ನು ಸರಕಾರ ನೀಡುವ ಭರವಸೆ ನೀಡಿದ್ದರು. ಇದರ ಬೆನ್ನಲ್ಲೇ, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ವತಿಯಿಂದ ಅಗತ್ಯ ಪ್ರಸ್ತಾವನೆ ಸಲ್ಲಿಸಲಾಗಿತ್ತು.



ಮದುವೆಗೆ ಸಾಕ್ಷಿಯಾದ ಉಪ ನೋಂದಣಾಧಿಕಾರಿ ಕಚೇರಿ

ಲಂಡನ್ ಯುವತಿಗೆ ಗಂಗಾವತಿ ಗಂಡ

ಗಂಗಾವತಿ: ಮ್ಯಾರೇಜಸ್ ಆರ್ ಮೇಡ್ ಇನ್ ಹೆವನ್ (ಮದುವೆ ಸ್ವರ್ಗದಲ್ಲಿ ನಿಶ್ಚಯವಾಗುರತ್ತದೆ) ಎಂಬುದು ಭಾರತೀಯರ ನಂಬಿಕೆ. ಸದ್ಯ ಗಂಗಾವತಿಯಲ್ಲಿ ನಡೆದ ಮದುವೆಯೊಂದು ಈ ನಂಬಿಕೆಯನ್ನು ಪುಷ್ಠೀಕರಿಸಿದೆ! ಹೌದು, ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು ವಿರುಪಾಪುರ ಗಡ್ಡಿ ನಿವಾಸಿ ಮುರಳಿ ಎಂಬ ಯುವಕ, ಲಂಡನ್‌ನ ಚಾರ್ಲೊಟ್ಟೆ ಮೇರಿ ಫಿಂಕ್ಲರ್ ಎಂಬ ಯುವತಿ ಕೈ ಹಿಡಿದಿದ್ದಾನೆ. ಗಂಗಾವತಿಯ ವಿವಾಹ ನೋಂದಣಿ ಕಚೇರಿಯಲ್ಲಿ ನವ ಜೋಡಿ, ಶುಕ್ರವಾರ ತಮ್ಮ ಮದುವೆ ನೋಂದಣಿ ಮಾಡಿಸಿದೆ. ಪ್ರೀತಿಸಿ ಮದುವೆ ಆಗಿರುವ ಇವರ ಬಂಧನಕ್ಕೆ ಸರಕಾರದ ಮುದ್ರೆ ಬಿದ್ದಿದೆ. ಯುವಕ ವೃತ್ತಿಯಲ್ಲಿ ಪ್ರವಾಸಿ ಮಾರ್ಗದರ್ಶಕ ಹಾಗೂ ಗೆಸ್ಟ್ ಹೌಸ್ ಮಾಲಿಕನಾಗಿದ್ದು, ಇದೀಗ ಸಿನಿಮಾರಂಗ ಕಲೆಯಲ್ಲಿ ಕತೆ ಬರೆಯುತ್ತಿದ್ದಾನೆ. ಯುವತಿ ಕೂಡ ಸಿನಿಮಾರಂಗದಲ್ಲಿ ಕೆಲಸ ಮಾಡುತ್ತಿರುವುದು ವಿಶೇಷ.

ಗಂಗಾವತಿ ಉಪ ನೋಂದನಾಧಿಕಾರಿ ಕಚೇರಿಯಲ್ಲಿ ಕಂಡ ಜೋಡಿ..

ಗಂಗಾವತಿಯ ಉಪ ನೋಂದಣಾಧಿಕಾರಿ ಕಚೇರಿಗೆ ಬಂದಿದ್ದ ಚಾರ್ಲೊಟ್ಟೆ ಮೇರಿ ಫಿಂಕ್ಲರ್, ಬಿಳಿ ಸೀರೆಯಲ್ಲಿ ಥೇಟ್ ಭಾರತೀಯ ನಾರಿಯಂತೆ ಕಂಡರು ಇತ್ತ ಮುಳಿರ, ತಮ್ಮ ಆಪ್ತೊಂರದಿಗೆ ಸಾದಾ ಸೀದಾ ವಸ್ತ್ರದಲ್ಲಿ 'ರಜಿಸ್ಟರ್ ಕಚೇರಿಗೆ ಆಗಮಿಸಿದ್ದುರ. ನೋಂದಣಿ ಬಳಿಕ ಬಳಿಕ ಅಲ್ಲಿದ್ದ ಜನರಿಗೆ ಧಾರವಾಡದ ಪೇಡಾ, ಕಾಜು ಬರ್ಫಿ ಹಂಚಿ ಸಂತಸ ಹಂಚಿಕೊಂಡುರ.

ಲಂಡನ್ ನಲ್ಲಿ ಆರತಕ್ಷತೆ: ಯುವಕ ಪ್ರವೃತ್ತಿಯಲ್ಲಿ ಸಿನಿಮಾ ನಿರ್ಮಾಣ, ನಿರ್ದೇಶನದ ಕನಸು ಹೊತ್ತವರು. ಅತ್ತ ಯುವತಿ ಕೂಡ ಸಿನಿಮಾಗಳಿಗೆ ಕತೆ ಬರೆಯುವ ಹವ್ಯಾಸ ಉಳ್ಳವರ. ಕಳೆದ ಎರಡು ವರ್ಷದ ಹಿಂದೆ ' ಕರ್ನಾಟಕಕ್ಕೆ ಬಂದಿದ್ದ ಯುವತಿ, ಮುಳಿರ ನಿರ್ಮಾಣ ಮಾಡುತ್ತಿದ್ದ 'ಐ ಲವ್ ಮೈ ಕಂಟ್ರಿ' ಎಂಬ ಕುಂಚಿತ್ರದ ಶೂಟಿಂಗ್ ಸಂದರ್ಭದಲ್ಲಿ ಪರಿಚಯವಾಗಿದೆ. ಪರಿಚಯ ಸ್ನೇಹಕ್ಕೆ ತಿರುಗಿ ನಂತರ ಪ್ರೀತಿ ಅಂಕುರಿಸಿದೆ. ಸಧ್ಯಕ್ಕೆ ಈ ಜೋಡಿ ಗಂಗಾವತಿಯಲ್ಲಿ ಮದುವೆ ಆಗಿದ್ದು, ಮೇ 9ರಂದು ಲಂಡನ್ ನಲ್ಲಿ ಅಲ್ಲಿನ ಸಂಪ್ರದಾಯದಂತೆ ಆರತಕ್ಷತೆ ಮಾಡಿಕೊಳ್ಳುವುದಾಗಿ ಹೇಳಿಕೊಂಡಿದೆ.

ಪೊಲೀಸ್ ಧ್ವಜ ದಿನಾಚರಣೆ ಇದೊಂದು ಅವಿಸ್ಮರಣೀಯ

ರಾಯಚೂರು: ಪೊಲೀಸ್ ಕಾಯ್ದೆಯ ಪ್ರಾರಂಭೋತ್ಸವವನ್ನು ಪೊಲೀಸ್ ಧ್ವಜ ದಿನಾಚರನೆಯನ್ನಾಗಿ ಆಚರಿಸಲಾಗುತ್ತಿದ್ದು, ಇದೊಂದು ಅವಿಸ್ಮರಣೀಯ ದಿನವಾಗಿದೆ ಎಂದು ಬಳ್ಳಾರಿ ವಲಯದ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್ ಅವರು ಹೇಳಿದರು. ನಗರದ ಕವಾಯತು ಮೈದಾನದಲ್ಲಿ ರಾಯಚೂರು ಜಿಲ್ಲಾ ಪೊಲೀಸ್ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. 22 ವರ್ಷಗಳ ಹಿಂದೆ ರಾಯಚೂರಿನಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕನಾಗಿ ಕೆಲಸ ಮಾಡಿದ್ದು, ಇಂದು ವೃತ್ತಿ ಜೀವನದ ಕೊನೆಯ ಪೊಲೀಸ್ ಧ್ವಜ ದಿನಾಚರಣೆಯನ್ನು ರಾಯಚೂರಿನಲ್ಲಿಯೇ ಆಚರಣೆ ಮಾಡುತ್ತಿರುವುದು ಅತ್ಯಂತ ಸಂತೋಷದ ವಿಚಾರವಾಗಿದೆ. ಪೊಲೀಸ್ ಇಲಾಖೆಯಲ್ಲಿ ಸಾಧನೆ ಮಾಡಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನೆನೆಯುವ ಅತ್ಯಂತ ಸಂಭ್ರಮದ ಕಾರ್ಯಕ್ರಮ ಇದಾಗಿದೆ ಎಂದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ಅವರು ಮಾತನಾಡಿ, ಪೊಲೀಸ್ ಕಲ್ಯಾಣ ನಿಧಿಯಲ್ಲಿ ಒಟ್ಟು 4.70 ಲಕ್ಷ ರು.ಗಳ ಹಣವನ್ನು ಖರ್ಚು ಮಾಡಲಾಗಿದೆ ಎಂದರು. ಇದಕ್ಕೂ ಮುಂಚೆ ಮುಖ್ಯ ಅತಿಥಿಗಳಾಗಿ ನಿವೃತ್ತ ಆರಕ್ಷಕ ನಿರೀಕ್ಷಕರಾದ ಹಸನ್ ಸಾಬ್ ಅವರು ಮಾತನಾಡಿ, ಪೊಲೀಸ್ ಧ್ವಜ ದಿನಾಚರಣೆ ಕೇವಲ ದಿನಾಚರಣೆ ಅಲ್ಲ. ಇದು ರಾಜ್ಯದ ಪೊಲೀಸ್ ಸಿಬ್ಬಂದಿಯ ತ್ಯಾಗ, ಬದ್ಧತೆ ಹಾಗೂ ಸಾಧನೆಗಳನ್ನು ಸ್ಮರಿಸುವ ಹಬ್ಬವಾಗಿದೆ ಎಂದರು.

ಸಮಾಚಾರ ಸಣ್ಣದಲ್ಲ

ನಾಳೆ ಜಂಗಿ ಕುಸ್ತಿ, ಉದ್ಯೋಗ ಮೇಳ

ಹರಪನಹಳ್ಳಿ: ಪಟ್ಟಣದಲ್ಲಿ ಮಾಜಿ ಶಾಸಕ ದಿ. ಎಂ.ಪಿ.ರವೀಂದ್ರ ರವರ ಹುಟ್ಟು ಹಬ್ಬದ ಪ್ರಯುಕ್ತ ಅಭಿಮಾನಿಯ ಬಳಗದಿಂದ ಪುರುಷ ಹಾಗೂ ಮಹಿಳಾ ವಿಭಾಗದ ಭಾರಿ ಬಯಲು ಜಂಗಿ ಕುಸ್ತಿ ಪಂದ್ಯಾವಳಿ ಹಾಗೂ ಬೃಹತ್ ಉದ್ಯೋಗ ಮೇಳ ಕಾರ್ಯಕ್ರಮವನ್ನು ಏ.5 ರಂದು ಆಯೋಜಿಸಲಾಗಿದೆ. ಉದ್ಯೋಗ ಮೇಳವನ್ನು ಎಡಿಬಿ ಕಾಲೇಜಿನ ಮೈದಾನದಲ್ಲಿ ಬೆಳಗ್ಗೆ 9.30ಕ್ಕೆ ಹಮ್ಮಿಕೊಂಡಿದ್ದು, ಸಚಿವ ಸಂತೋಷ ಲಾಡ್ ಉದ್ಘಾಟಿಸುವರು. ಕುಸ್ತಿ ಪಂದ್ಯಾವಳಿಗಳು ತಾಲೂಕು ಕ್ರೀಡಾಂಗಣದಲ್ಲಿ ಮಧ್ಯಾಹ್ನ 3 ಗಂಟೆಯಿಂದ ಜರುಗಲಿವೆ. ಮಹಿಳಾ ಕುಸ್ತಿಯನ್ನು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಉದ್ಘಾಟಿಸುವರು, ಪುರುಷ ಕುಸ್ತಿ ಪಂದ್ಯಾವಳಿಯನ್ನು ಹೂವಿನ ಹಡಗಲಿ ಶಾಸಕ ಕೃಷ್ಣನಾಯ್ಕ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ವಹಿಸುವರು. ಈ ಕುಸ್ತಿ ಪಂದ್ಯಾವಳಿಗೆ ನೇಪಾಳದ ದೇವ ತಾಪ್, ಸೊಲ್ಲಾಪುರದ ವಿಕಾಸ್ ದೋತ್ರಿ, ದೆಹಲಿಯ ಅಮೀತ್, ಮಧ್ಯಪ್ರದೇಶದ ಸಂದೇಶ ಠಾಕೂರು, ಕೊಲ್ಲಾಪುರದ ವಿಶಾಲ್ ಚಳ್ಳೆ, ಬಿಜಾಪುರದ ಬೀರುಬ ನಸೊಡಿ, ರಾಮಚಂದ್ರ,ದಾವಣಗೆರೆಯ ಕಿರಣ್, ಸಾಂಗ್ಲಿಯ ಅಷ್ಟಕ್ ಹಾಗೂ ಸ್ಥಳೀಯ ಪೈಲ್ವಾನರು ಪಾಲ್ಗೊಳ್ಳುವರು. ಕುಸ್ತಿ ಪಂದ್ಯಾವಳಿಯ ತೀರ್ಪುಗಾರರಾಗಿ ಅಂತರಾಷ್ಟ್ರೀಯ ಕುಸ್ತಿ ತರಬೇತಿದಾರ ಆರ್. ಶಿವಾನಂದ, ಕರ್ನಾಟಕ ಕಂಠೀರವ ಪ್ರಶಸ್ತಿ ವಿಜೇತ ಕಾರ್ತಿಕ ಖಾಟೆ ಕಾರ್ಯನಿರ್ವಹಿಸುವರು ಎಂದು ಎಂ.ಪಿ.ರವೀಂದ್ರ ಅಭಿಮಾನಿ ಬಳಗದ ಕಾರ್ಯಕರ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶರಣರ ಸಂತರ ತತ್ವಗಳ ಪಾಲಿಸಿ

ಸಂಡೂರು: ಶರಣರ ಸಂತರ ಜಯಂತಿಗಳನ್ನು ಮುಖ್ಯವಾಗಿ ಆಚರಿಸುವ ಉದ್ದೇಶವೆಂದರೆ ಅವರ ತತ್ವಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಮಾರ್ಗದಲ್ಲಿ ಸಾಗೋಣ ಎಂದು ತಾಲೂಕು ಕಚೇರಿಯ ಅಧಿಕಾರಿ ಗ್ರೇಡ್-2 ತಹಸೀಲ್ದಾರ್ ಸುಧಾ ಅರಮನೆ ತಿಳಿಸಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ದೇವರ ದಾಸಿಮಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ ಪ್ರತಿಯೊಬ್ಬರು ಸಹ ಶರಣರ ತತ್ವವನ್ನು ಪಾಲಿಸಿದಲ್ಲಿ ಸಮಾಜ ಶುದ್ಧವಾಗುತ್ತದೆ, ದಾಸಿಮಯ್ಯನವರು 12ನೇ ಶತಮಾನದಲ್ಲಿ ಶ್ರೇಷ್ಠ ವಚನಕಾರರಾಗಿ ಹೊರಹೊಮ್ಮಿದ್ದರು, ಅವರ ವಚನಗಳು ನಿತ್ಯ ಸತ್ಯವಾದವು ಎಂದರು. ದೇವರ ದಾಸಿಮಯ್ಯನವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅಧಿಕಾರಿಗಳಾದ ಸಿದ್ದಲಿಂಗಸ್ವಾಮಿ, ಮಲ್ಲಿಕಾರ್ಜುನ ಗೌಡ, ಶಿರಸ್ತೇದಾರ ಕೆ.ಶಿವಕುಮಾರ್, ಮಹೇಶ್, ಇತರೆ ಸಿಬ್ಬಂದಿಗಳು ಹಾಗೂ ಸಿದ್ದೇಶ, ಜೆ ತಿಪ್ಪೇಸ್ವಾಮಿ, ಪದ್ಮಸಾಲಿ ಬಹುಜನ ನೇಕಾರರ ಸಂಘದ ಅಧ್ಯಕ್ಷ ಹಾಗೂ ಗಣ್ಯರು ಉಪಸ್ಥಿತರಿದ್ದರು.

ಅಂತರ್ ಇಲಾಖೆಯ ಸಮನ್ವಯ ಸಮಿತಿ ಸಭೆ | ಜಿಲ್ಲಾಧಿಕಾರಿ ದಿವಾಕರ್ ಸೂಚನೆ

ದಡಾರ, ರುಬೆಲ್ಲಾ ರೋಗಿಗಳ ಬಗ್ಗೆ ವೈದ್ಯರು ಕಾಳಜಿ ವಹಿಸಿ

ಹೊಸಪೇಟೆ: ಇದೇ ವರ್ಷಾಂತ್ಯಕ್ಕೆ ದಡಾರ ಮತ್ತು ರುಬೆಲ್ಲಾ ಮುಕ್ತ ಜಿಲ್ಲೆಯನ್ನಾಗಿಸಲು ವೈದ್ಯರೊಂದಿಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ದಡಾರ ಮತ್ತು ರುಬೇಲ್ಲಾ ನಿರ್ಮೂಲನ ಕಾರ್ಯಕ್ರಮದ ಅಂತರ್ ಇಲಾಖೆಯ ಸಮನ್ವಯ ಸಮಿತಿ ಸಭೆ ಮತ್ತು ತಾಯಿ ಮತ್ತು ಶಿಶು ಮರಣಗಳ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು, ದಡಾರ, ರುಬೇಲ್ಲಾ ರೋಗಿಗಳ ಬಗ್ಗೆ ವೈದ್ಯರು ವಿಶೇಷ ಕಾಳಜಿ ವಹಿಸಬೇಕಿದೆ. ವರ್ಷಾಂತ್ಯದೊಳಗೆ ದಡಾರ ಮತ್ತು ರುಬೆಲ್ಲಾ ರೋಗಮುಕ್ತವನ್ನಾಗಿಸಲು ಗುರಿಯನ್ನು ನಿಗಧಿಪಡಿಸಿ ಜಿಲ್ಲೆಯಲ್ಲಿ ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಬೇಕಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸಂಘ-ಸಂಸ್ಥೆಗಳು, ಆಶಾ ಕಾರ್ಯಕರ್ತೆಯರ ಸಹಕಾರ ಪಡೆದುಕೊಂಡು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಆಯುಷ್ ಇಲಾಖೆಯಿಂದ ಗರ್ಭಿಣಿ ಮತ್ತು ಬಾಣಂತಿಯರ ತಪಾಸಣೆ, ಸುರಕ್ಷಿತ ಹೆರಿಗೆ ಹಾಗೂ ಪೌಷ್ಠಿಕಾಂಶದ ಬಗ್ಗೆ ಆಪ್ತ ಸಮಲೋಚನೆಯನ್ನು ಕೈಗೊಳ್ಳುವುದು. ಆಯುಷ್ ಕೇಂದ್ರದಲ್ಲಿ ನಿಯಮಿತವಾಗಿ ಗರ್ಭಿಣಿಯರು ತಪಾಸಣೆ ಮತ್ತು ಲಸಿಕೆಯನ್ನು ನೀಡಬೇಕು. ಕೇಂದ್ರ ಸರಕಾರದಿಂದ ಗರ್ಭಿಣಿಯರಿಗೆ ಮೊಬೈಲ್ ಮೂಲಕ ಶಿಕ್ಷಣ ನೀಡಿ. ಗರ್ಭಿಣಿಯರನ್ನು ಕಿಲ್ಕಾರಿ ಆಪ್ ಮೂಲಕ ನೋಂದಯಿಸಿ ಪ್ರತಿ ಗರ್ಭಿಣಿಯರ ಆರೈಕೆಗೆ ನಿಗಧಿತ ವೇಳೆಗೆ ಸಲಹೆ ಸೇರಿದಂತೆ ವೈದ್ಯಕೀಯ ಚಿಕಿತ್ಸೆಗಳ ಫಾಲೋಅಪ್‌ಗಳನ್ನು ನೇರವಾಗಿ ತಿಳಿಸುವ ಕೆಲಸ ಮಾಡುತ್ತಿದೆ. ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಫ್‌ಲೈನ್‌ನಲ್ಲಿ ನೋಂದಯಿಸಲು ಮಾಹಿತಿ ನೀಡಬೇಕಿದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿಯರು ಚಿಕಿತ್ಸೆಗೆ ಬಂದಾಗ ಕಡ್ಡಾಯವಾಗಿ ಇಸಿಜಿ ಪರೀಕ್ಷೆಯನ್ನು ಮಾಡಬೇಕು ಎಂದು ಸೂಚಿಸಿದರು. ರುಬೆಲ್ಲಾ ರೋಗವು ಗರ್ಭಿಣಿಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಗ್ಲೂಕೋಮ, ಕಣ್ಣಿನ ಪೊರೆ, ಕಿವುಡುತನ, ಮೆದಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿ ಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಆದ್ದರಿಂದ ವಿಶೇಷ ಗಮನ ಹರಿಸಿ ವೈದ್ಯರು ಕಾಳಜಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಹೇಳಿದರು.

ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ವೈದ್ಯ ಡಾ.ಹರಿಪ್ರಸಾದ್, ಡಾ.ಭಾಸ್ಕರ್, ಡಾ.ರಾಧಿಕಾ, ಡಾ. ಸತೀಶ್ ಚಂದ್ರ, ಡಾ.ಷಣ್ಮುಖ ನಾಯ್ಕ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಸೇರಿದಂತೆ ತಾಲೂಕಿನ ಎಲ್ಲಾ ತಾಲೂಕು ಆರೋಗ್ಯ ಅಧಿಕಾರಿಗಳು, ವೈದ್ಯಾಧಿಕಾರಿಗಳು ಭಾಗವಹಿಸಿದ್ದರು.

ನಗರದ ದಡಾರ, ರುಬೇಲ್ಲಾ ನಿರ್ಮೂಲನ ಕಾರ್ಯಕ್ರಮದ ಅಂತರ್ ಇಲಾಖೆಯ ಸಮನ್ವಯ ಸಮಿತಿ ಸಭೆ ನಡೆಯಿತು.

> ದಡಾರ ಮತ್ತು ರುಬೆಲ್ಲಾವು ವೈರಾಣುನಿಂದ ಬರುವ ಕಾಯಿಲೆಯಾಗಿದ್ದು, ಕೆಮ್ಮು ಮತ್ತು ಸೀನುವುದರ ಮೂಲಕ ಇತರರಿಗೆ ಹರಡುತ್ತದೆ. ದಡಾರದಿಂದ ನ್ಯೂಮೋನಿಯಾ, ಅತಿಸಾರ ಭೇದಿ, ಮೆದುಳಿನ ಸೋಂಕಿನಂತಹ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಹಾಗೇಯೆ ತುರಿಕೆ, ವೀಪರೀತ ಜ್ವರ, ಕೆಮ್ಮು, ನೆಗಡಿ ಮತ್ತು ಕೆಂಗಣ್ಣು ದಡಾರದ ಮುಖ್ಯ ಲಕ್ಷಣಗಳಾಗಿವೆ.
> -ಡಾ.ಎಲ್.ಆರ್.ಶಂಕರ್, ಜಿಲ್ಲಾ ಆರೋಗ್ಯಾಧಿಕಾರಿ

ಐಬಿ ಸರ್ಕಲ್‌ಗೆ ಅಂಬೇಡ್ಕರ್, ಸಭಾಂಗಣಕ್ಕೆ ರವೀಂದ್ರ ಹೆಸರು

ಹರಪನಹಳ್ಳಿ: ಪಟ್ಟಣದ ಪ್ರವಾಸಿ ಮಂದಿರ ವೃತ್ತಕ್ಕೆ ಡಾ.ಬಿ.ಆರ್.ಅಂಬೇಡ್ಕರವರ ಹಾಗೂ ಪುರಸಭಾ ಸಭಾಂಗಣಕ್ಕೆ ಮಾಜಿ ಶಾಸಕ , ದಿ.ಎಂ.ಪಿ.ರವೀಂದ್ರ ರವರ ಹೆಸರುಗಳನ್ನು ನಾಮಕರಣ ಮಾಡಲು ಬುಧವಾರ ನಡೆದ ಇಲ್ಲಿಯ ಪುರಸಭಾ ತುರ್ತು ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮೊದಲಿಗೆ ಐ.ಬಿ.ವೃತ್ತಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಹೆಸರನ್ನು ನಾಮಕರಣ ಮಾಡುವಂತೆ ಡಿಎಸ್ ಎಸ್ ನವರು ಸಲ್ಲಿಸಿದ ಮನವಿ ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು.

ಹಿರಿಯ ಸದಸ್ಯ ಎಂ.ವಿ.ಅಂಜಿನಪ್ಪ ನವರು ಡಾ.ಅಂಬೇಡ್ಕರ ರವರು ನೀಡಿದ ಸಂವಿಧಾನದ ಆಧಾರದ ಮೇಲೇಯೆ ನಾವೆಲ್ಲರೂ ಆಯ್ಕೆಯಾಗಿ ಬಂದಿದ್ದೇವೆ, ಬದುಕನ್ನು ಕಟ್ಟಿಕೊಟ್ಟ ಗ್ರಂಥವೇ ಸಂವಿಧಾನ.

ಅಂತಹ ಸಂವಿಧಾನ ಕೊಟ್ಟಂತಹ ಅಂಬೇಡ್ಕರ ರವರ ಹೆಸರನ್ನು ಐ.ಬಿ.ವೃತ್ತಕ್ಕೆ ನಾಮಕರಣ ಮಾಡುವುದು ಸೂಕ್ತ ಎಂದು ಹೇಳಿದರು. ಲಾಟಿದಾದಾಪೀರ, ಜಾಕೀರ್ ಹುಸೇನ್, ಜಾವೇದ್, ಕಿರಣಶಾನ್ಬಾಗ್, ಹರಾಳು ಅಶೋಕ, ವಿನಯಗೌಳಿ , ಮಂಜುನಾಥ ಇಜಂತಕರ್, ಎಂ.ಪಾತೀಮಾಬಿ, ಎಚ್.ಕೊಟ್ರೇಶ , ಎಚ್. ವಸಂತಪ್ಪ ಸೇರಿದಂತೆ ಸರ್ವರೂ ಪಕ್ಷ ಬೇದವಿಲ್ಲದೆ ಐ.ಬಿ.ವೃತ್ತಕ್ಕೆ ಡಾ.ಬಿ.ಆರ್. ಅಂಬೇಡ್ಕರ ಹೆಸರನ್ನು ನಾಮಕರಣ ಮಾಡಲು ಕೈಗೊಳ್ಳಲಾಯಿತು.

ಪುರಸಭಾ ಸಭಾಂಗಣಕ್ಕೆ ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ಹೆಸರನ್ನು ನಾಮಕರಣ ಮಾಡುವಂತೆ ಸದಸ್ಯ ಜಾಕೀರ್ ಹುಸೇನ್ ಪ್ರಸ್ಥಾಪ ಮಾಡಿದಾಗ ಚರ್ಚೆಯಾಗಿ ಕೈ ಎತ್ತುವ ಮೂಲಕ ಬಹುಮತದ ಮೂಲಕ ನಿರ್ಣಯ ಕೈಗೊಳ್ಳಲಾಯಿತು.

ಮೊದಲಿಗೆ ಪುರಸಭಾ ಸಭಾಂಗಣಕ್ಕೆ ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ರವರ ಹೆಸರನ್ನು ನಾಮಕರಣ ಮಾಡುವಂತೆ ಜಾಕೀರ ಹುಸೇನ್ ಸಲಹೆ ನೀಡಿದಾಗ ಹಿರಿಯ ಸದಸ್ಯ ಎಂ.ವಿ.ಅಂಜಿನಪ್ಪ ಅವರು ಹರಪನಹಳ್ಳಿಯಂತಹ ಹಿಂದುಳಿದ ತಾಲೂಕಿಗೆ 371 ಜೆ ಸೌಲಭ್ಯ ಸಿಗಲು ಕಾರಣ ಎಂ.ಪಿ.ರವೀಂದ್ರ ಅವರು.371 ಜೆ ಸೌಲಭ್ಯ ದೊರೆತಿದ್ದರಿಂದ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಸಾಕಷ್ಟು ಅನುದಾನ ಬರುತ್ತಲಿದೆ, ಬಡ ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗಿದೆ ಈ ವಿಚಾರದಲ್ಲಿ ರಾಜಕೀಯ ಬೇಡ ಎಂದು ಹೇಳಿದರು.

ಬಿಜೆಪಿಯ ಜಾವೇದ್ ಅವರು ಮಾಜಿ ಶಾಸಕ ದಿ.ಡಿ.ನಾರಾಯಣದಾಸ್ ಅವರ ಹೆಸರನ್ನು ಸಭಾಂಗಣಕ್ಕೆ ನಾಮಕರಣ ಮಾಡುವಂತೆ ಸಲಹೆ ನೀಡಿದರು. ಹರಾಳು ಅಶೋಕ, ಕಿರಣಶಾನ್ಬಾಗ್, ಗೌಳಿ ವಿನಾಯಕ ರವರು ಎಂ.ಪಿ.ರವೀಂದ್ರ ನಾಮಕರಣ ವಿಚಾರವನ್ನು ಮುಂದಿನ ಸಭೆಯಲ್ಲಿ ಮಂಡಿಸಿ ಚರ್ಚಿಸಿ ಎಂದು ಸಲಹೆ ನೀಡಿದರು.

ಆಗ ನಾಮನಿರ್ದೇಶಿತ ಸದಸ್ಯ ಎಚ್. ವಸಂತಪ್ಪನವರು 371 ಜೆ ಸೌಲಭ್ಯ ಕೊಡಿಸಿದ ದೀಮಂತ ನಾಯಕ ಎಂ.ಪಿ.ರವೀಂದ್ರ ಅವರ ಹೆಸರನ್ನು ಸಭಾಂಗಣಕ್ಕೆ ಇಡುವುದು ಸೂಕ್ತ ಇಂತಹ ವಿಚಾರದಲ್ಲಿ ಪಕ್ಷ ತರುವುದು ಬೇಡ ಎಂದರು. ಲಾಟಿದಾದಾಪೀರ, ಜಾಕೀರ ಸೇರಿದಂತೆ ಅನೇಕರು ಸಭಾಂಗಣಕ್ಕೆ ಎಂ.ಪಿ.ರವೀಂದ್ರ ಹೆಸರು ಸೂಕ್ತ ಎಂದು ವಾದಿಸಿದರು.

ಈ ಕುರಿತು ಚರ್ಚೆ ಮುಂದುವರೆದಾಗ ಅಂತಮವಾಗಿ ಅಧ್ಯಕ್ಷೆ ಪಾತೀಮಾಭಿ ಯವರು ಮತಕ್ಕೆ ಹಾಕಿದಾಗ ಬಿಜೆಪಿಯ ನಾಲ್ವರು ಸದಸ್ಯರಲ್ಲಿ ಕಿರಣಶಾನ್ ಬಾಗ್, ಗೌಳಿ ವಿನಯಕುಮಾರ, ಹರಾಳು ಅಶೋಕ ತಟಸ್ಥವಾಗಿ ಉಳಿದರೆ, ಜಾವೇದ್ ಮಾತ್ರ ಮಾಜಿ ಶಾಸಕ ದಿ.ಡಿ.ನಾರಾಯಣದಾಸ್ ಹೆಸರನ್ನು ಇಡಿ ಎಂದು ವಾದಿಸಿದರು.

ಉಳಿದ 11 ಸದಸ್ಯರು ಕೈ ಎತ್ತುವ ಮೂಲಕ ಪುರಸಭಾ ಸಬಾಂಗಣಕ್ಕೆ ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ಹೆಸರನ್ನು ನಾಮಕರಣ ಮಾಡಲು ಸೂಚಿಸಿದರು.

ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ ಇಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಜಿಲ್ಲಾಧಿಕಾರಿಯವರಿಗೆ ಕಳಿಸಿ ಕೊಡಲಾಗುವುದು ಎಂದು ಹೇಳಿದರು. ಪುರಸಭಾ ಅಧ್ಯಕ್ಷೆ ಪಾತೀಮಾಭಿ ಅಧ್ಯಕ್ಷತೆ ವಹಿಸಿದ್ದರು. ಉಪಾದ್ಯಕ್ಷ ಎಚ್.ಕೊಟ್ರೇಶ ಇದ್ದರು.

ಪುರಸಭಾ ತುರ್ತು ಸಾಮಾನ್ಯ ಸಭೆಯಲ್ಲಿ ಸದಸ್ಯರನ್ನು ಸನ್ಮಾನಿಸಲಾಯಿತು.

ಎಸ್ಸಿ ಫಲಾನುಭವಿಗಳಿಗೆ ಸೈಟು ನೀಡಲು ಆಗ್ರಹ

ಹೂವಿನಹಡಗಲಿ: ಪಟ್ಟಣದ ಕಾಯಕ ನಗರದಲ್ಲಿ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಹಂಚಿಕೆಯಾಗಿರುವ ನಿವೇಶನಗಳನ್ನು ಕೂಡಲೆ ಗುರುತಿಸಿಕೊಡಬೇಕು ಎಂದು ಫಲಾನುಭವಿಗಳು ಒತ್ತಾಯಿಸಿದರು.

ಕಾಯಕ ನಗರ ಹಿಂಭಾಗದಲ್ಲಿರುವ ಖಾಲಿ ಬಯಲು ಜಾಗವನ್ನು ಫಲಾನುಭವಿಗಳು ಹಾಗೂ ಕುಟುಂಬದರು ಸ್ವಚ್ಛಗೊಳಿಸಿ, ಖಾಲಿ ನಿವೇಶನಗಳನ್ನು ಸ್ವಾಧೀನಪಡಿಸಿಕೊಳ್ಳಲು ಯತ್ನಿಸಿದರು. ಕಾಯಕನಗರ ಪರಿಶಿಷ್ಟ ಪಂಗಡ ಹಿತರಕ್ಷಣಾ ಟ್ರಸ್ಟ್‌ನ ಗೌರವ ಅಧ್ಯಕ್ಷ ಬಂಗಾರಿ ಶಿವಾನಂದಪ್ಪ ಮಾತನಾಡಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಪಂಗಡ ಸಮುದಾಯದ ಫಲಾನುಭವಿಗಳಿಗೆ 2018ರಲ್ಲಿ ಸರಕಾರ ನಿವೇಶನ ಹಂಚಿಕೆ ಮಾಡಿದೆ. 7 ವರ್ಷಗಳಾದರೂ ಹಕ್ಕುಪತ್ರ ಹೊಂದಿರುವ ಫಲಾನುಭವಿಗಳಿಗೆ ನಿವೇಶನ ಗುರುತಿಸಿ ಕೊಟ್ಟಿರುವುದರಿಲ್ಲ. ಅಧಿಕಾರಿಗಳು ಬರೀ ನೆಪ ಹೇಳುತ್ತಿದ್ದಾರೆ. ನಾವು ಇತರರಿಗೆ ತೊಂದರೆ ಕೊಟ್ಟು, ನಿವೇಶನ ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ. ನಮ್ಮ ಹಕ್ಕು ನಾವು ಕೇಳುತ್ತಿದ್ದೇವೆ. ನಮಗೆ ಹಂಚಿಕೆಯಾಗಿರುವ ನಿವೇಶನಗಳನ್ನು ಅಧಿಕಾರಿಗಳು ನಮ್ಮ ಸ್ವಾಧೀನಕ್ಕೆ ಒಪ್ಪಿಸಬೇಕು ಎಂದು ಆಗ್ರಹಿಸಿದರು. ಫಲಾನುಭವಿಗಳಾದ ಎಸ್. ಯಶೋಧ, ಕೆ.ಶಿಲ್ಪಾ, ಗೀತಾ, ಮಧುರಾ ಮಾತನಾಡಿ, ಸರಕಾರ ನಮಗೆ ನಿವೇಶನ ಹಕ್ಕುಪತ್ರ ನೀಡಿದಾರೆ ಆದರೆ ಈವರೆಗೂ ನಿವೇಶನ ಗುರುತಿಸಿಕೊಟ್ಟಿಲ್ಲ. ಬೀಳುವ ಸ್ಥಿತಿಯ ಲ್ಲಿರುವ ಮನೆಗಳು, ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇವೆ. ಮಂಜೂರಾದ ನಿವೇಶನಗಳನ್ನು ನಮಗೆ ತೋರಿಸಿಕೊಟ್ಟರೆ ಗುಡಿಸಲು ಹಾಕಿಕೊಂಡಾದರೂ ನೆಮ್ಮದಿಯಿಂದ ಜೀವನ ಮಾಡುತ್ತೇವೆ. ಅಧಿಕಾರಿಗಳು ನಿವೇಶನ ಗುರುತಿಸಿಕೊಡಲು ವಿಳಂಬ ಮಾಡದಿದರೆ ಹೋರಾಟಕ್ಕೆ ಇಳಿಯುತ್ತೇವೆ ಎಂದು ಎಚ್ಚರಿಸಿದರು.

ಕಾಯಕ ನಗರ ಖಾಲಿ ಬಯಲು ಜಾಗವನ್ನು ಫಲಾನುಭವಿಗಳು ಹಾಗೂ ಕುಟುಂಬದರು ಸ್ವಚ್ಛಗೊಳಿಸಿ, ಖಾಲಿ ನಿವೇಶನಗಳನ್ನು ಸ್ವಾಧೀನಪಡಿಸಿಕೊಳ್ಳಲು ಯತ್ನಿಸಿ ಆಗ್ರಹಿಸಿದರು.

ಜಿಲ್ಲಾ ನೋಟ

ಸಹಕಾರಿಗೆ ಆಭಾರಿ ಉದ್ಯಮಕ್ಕಿಲ್ಲ ರಹದಾರಿ

ಮಾಳಿಂಗರಾಯ ಪೂಜಾರ, ಗದಗ

ತೀರಾ ಹಿಂದುಳಿದಿರುವ ಜಿಲ್ಲೆ ಎಂಬ ಹಣೆಪಟ್ಟಿ ಹೊಂದಿರುವ ಗದಗ 1997ರಲ್ಲಿ ಉದಯವಾದ ಹೊಸ ಜಿಲ್ಲೆ. ಕಲೆ, ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮ ಕ್ಷೇತ್ರಗಳಲ್ಲಿ ತನ್ನದೇ ಆದ ಪರಂಪರೆ ಹೊಂದಿದೆ. ಆದರೆ ಆಧುನಿಕ ಉದ್ಯಮ ಕ್ಷೇತ್ರದಲ್ಲಿ ಮಾತ್ರ ಹಿಂದೆ ಬಿದ್ದಿದೆ. ಇಲ್ಲಿಯ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ಕಾರ್ಖಾನೆಗಳು ತಲೆ ಎತ್ತಲಿಲ್ಲ. ಹೀಗಾಗಿ ಉದ್ಯೋಗ ಅರಸಿ ಬೇರೆ ಕಡೆ ಗುಳೆ ಹೋಗುವ ದುಸ್ಥಿತಿ ಜಿಲ್ಲೆಯ ಯುವಜನರದು. ಉದ್ಯಮಗಳಿಗೆ ಬೇಕಾದ ಸ್ಥಳಾವಕಾಶ, ಜನ ಸಂಪನ್ಮೂಲ, ಖನಿಜ ಸಂಪನ್ಮೂಲ, ಕಬ್ಬಿಣದ ಅದಿರು, ಒಬಿ ಸ್ಯಾಂಡ್, ಒಬಿ ಸ್ಟೋನ್, ಇತರೆ ಕಚ್ಚಾ ಸಂಪನ್ಮೂಲದ ಜಿಲ್ಲೆ ಇದು. ಆದರೂ ಇಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಿಲ್ಲ.

ನೆರೆ ಜಿಲ್ಲೆಗಳ ಸಾಧನೆ

ನೆರೆಯ ಜಿಲ್ಲೆ ಧಾರವಾಡ, ಕೊಪ್ಪಳ, ದಾವಣಗೆರೆ, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಹೆಚ್ಚೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗುತ್ತಿದ್ದು ಅಪಾರ ಪ್ರಮಾಣದ ಉದ್ಯೋಗಾವಕಾಶ ಸೃಷ್ಟಿಯಾಗುತ್ತಿವೆ. ಆದರೆ ಜಿಲ್ಲೆಯಲ್ಲಿ ಯಾವುದೇ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಯಾವುದೇ ಉತ್ತೇಜನ ಇಲ್ಲದೆ ಯುವಜನರು ಬೇರೆ ಜಿಲ್ಲೆಯ ನಗರಗಳತ್ತ ಹಾಗೂ ನೆರೆಯ ಗೋವಾ, ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಿದ್ದಾರೆ.

ಸಹಕಾರಿಗಳ ತವರು

ನಮ್ಮ ದೇಶದ ಮೊದಲ ಸಹಕಾರ ಸಂಘ ಸ್ಥಾಪನೆ ಆದದ್ದು ಕರ್ನಾಟಕದ ಗದಗ ಜಿಲ್ಲೆಯ ಕಣಗಿನ ಹಾಳ ಗ್ರಾಮದಲ್ಲಿ ಎಂಬ ಹೆಗ್ಗಳಿಕೆ ಇದೆ. ಸಹಕಾರಿ ಸಂಘಗಳ ಮೂಲಕ ಸಣ್ಣ ಕೈಗಾರಿಕೆ ಹಾಗೂ ನೂಲಿನ ಗಿರಣಿಗಳ ಸ್ಥಾಪನೆ ಮಾಡಿ ಅವುಗಳಿಂದ ಉದ್ಯೋಗ ಸೃಷ್ಟಿಸಲಾಗಿತ್ತು. ಅವುಗಳು ನೂಲಿನ ಬೇಡಿಕೆ ಕಡಿಮೆಯಾದಂತೆ ಜವಳಿ ಉದ್ಯಮವೂ ನೆಲಕಚ್ಚಿದ ಕಾರಣ ಕ್ರಮೇಣ ಕೈಗಾರಿಕಾ ಘಟಕಗಳು ಬಾಗಿಲು ಮುಚ್ಚಿವೆ.

ಕಪ್ಪು ನೆಲದ ಸಮೃದ್ಧಿ

ಜಿಲ್ಲೆಯ ಉತ್ತರ ಗಡಿಯಲ್ಲಿ ಮಲಪ್ರಭಾ ಮತ್ತು ದಕ್ಷಿಣ ಗಡಿ ತುಂಗಭದ್ರದಲ್ಲಿ ಹರಿಯುತ್ತದೆ. ಇದನ್ನು ಹೊರತುಪಡಿಸಿ ಬೆಣ್ಣೆ ಹಳ್ಳ ರೋಣ ಸಮೀಪ ಮಲಪ್ರಭಾಗೆ ಸೇರುತ್ತದೆ. ಜಿಲ್ಲೆಯ ಉದ್ದಕ್ಕೂ ಕಪ್ಪು ಮಣ್ಣಿನ ಫಲವತ್ತಾದ ನೆಲ. ಆದರೆ ಕೆಂಪು ಮಣ್ಣು ಕೂಡ ಕೆಲ ಕಡೆ ಇದೆ. ಆದರೂ ಕೈಗಾರಿಕೀಕರಣಕ್ಕೆ ಮುಂದಾಗಿಲ್ಲ. ನೀರಾವರಿ ಯೋಜನೆಗಳನ್ನು ಮಾಡದೇ ರೈತರಿಗೂ ಅನುಕೂಲತೆ ಒದಗಿಸಲು ಸರಕಾರ ಮುಂದಾಗಿಲ್ಲ. ನದಿಗಳು ಹರಿದರೂ ನೀರಾವರಿಯೂ ಇಲ್ಲ. ಕೈಗಾರಿಕೆಗಳೂ ಇಲ್ಲ.

- » ಉತ್ತರಕ್ಕೆ ಮಲಪ್ರಭಾ, ದಕ್ಷಿಣಕ್ಕೆ ಹರಿವ ತುಂಗಭದ್ರಾ
- » ಇತ್ತ ನೀರಾವರಿಯೂ ಇಲ್ಲ, ಅತ್ತ ಕೈಗಾರಿಕೆಯೂ ಇಲ್ಲ
- » ಕಪ್ಪು ಮಣ್ಣಿನ ಫಲವತ್ತಾದ ನೆಲದ ಜನರ ಗುಳೆಯ ಕತೆ

> ಜಿಲ್ಲೆಯ ಜನಪ್ರತಿನಿಧಿಗಳ ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಕೈಗಾರಿಕೆ ಸ್ಥಾಪನೆಯಾಗಿಲ್ಲ. ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಬೃಹತ್ತಾಗಿದೆ. ಇದರಿಂದಾಗಿ ಯುವಕರು, ಯುವತಿಯರು ನೆರೆಯ ಜಿಲ್ಲೆ ರಾಜ್ಯಗಳಿಗೆ ಗುಳೆ ಹೋಗುತ್ತಿದ್ದಾರೆ.
> -ವೆಂಕನಗೌಡ ಗೋವಿಂದಗೌಡ್ರ, ಜೆಡಿಎಸ್ ರಾಜ್ಯ ವಕ್ತಾರರು

ಭಾಷಣಕ್ಕೆ ಸೀಮಿತ

ಜಿಲ್ಲೆಯ ಅಭಿವೃದ್ಧಿ ಎನ್ನುವದು ಕೇವಲ ಭಾಷಣದಲ್ಲಿ ಮಾತ್ರ ಸೀಮಿತ ಮಾಡಿಕೊಂಡಿರುವ ಜನಪ್ರತಿನಿಧಿಗಳು ಇಂಥವರಿಂದ ಜಿಲ್ಲೆಯ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುವಂತಾಗಿದೆ. ಎಲ್ಲಡೆ ಜಾಗವಿದ್ದು, ಅದನ್ನು ಅಭಿವೃದ್ಧಿಗೊಳಿಸಿ, ಅನುದಾನ ತರುವುದು ಮುಖ್ಯ. ಅಲ್ಲದೆ ಕಪ್ಪತ್ತ ಗುಡ್ಡ ಅರಣ್ಯ ಹಸಿರು ಪ್ರದೇಶದ ಪ್ರವಾಸಿ ಸ್ಥಳ. ಆದರೂ ಪ್ರವಾಸೋದ್ಯಮ ಇಲ್ಲ ಅಲ್ಲದೆ ಪ್ರವಾಸೋದ್ಯಮ ಸಚಿವರು ಕೂಡ ಇದೇ ಜಿಲ್ಲೆಯವರಾಗಿದ್ದಾರೆ. ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಿದರೆ ಇದರಿಂದ ಉದ್ಯೋಗ ಸೃಷ್ಟಿಸಲು ಸಾಧ್ಯ.

ಗಣಿಗಾರಿಕೆ ಸಾಕು

ಅಲ್ಲದೆ ಜಿಲ್ಲೆಯಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಮರಳು ದಂಧೆ, ಮಣ್ಣು ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಇವುಗಳ ಮೇಲೆ ಸಾಕಷ್ಟು ಆಸಕ್ತಿ ತೋರಿಸುತ್ತಿರುವ ರಾಜಕಾರಣಿಗಳಿಗೆ ಕೈಗಾರಿಕೆ ಬೇಡ. ಅವರಿಗೆ ಗಣಿಗಾರಿಕೆ ಅಷ್ಟೇ ಬೇಕು. ಗ್ರಾಮ ಪಂಚಾಯಿತಿ ಸದಸ್ಯನಿಂದ ಹಿಡಿದು ಸಂಸದರು, ಶಾಸಕರ ಹೆಸರಿನಲ್ಲಿ ಜಿಲ್ಲೆಯಲ್ಲಿ ಗಣಿಗಾರಿಕೆಗಳಿವೆ.

ಬೇಕಿಲ್ಲ ಕೈಗಾರಿಕೆ

ಕೈಗಾರಿಕೆ ಸ್ಥಾಪನೆಯಾದರೆ ಜಿಲ್ಲೆ ಅಭಿವೃದ್ಧಿಯಾಗುತ್ತದೆ ಆದರೆ ಈ ಕುರಿತು ಜನಪ್ರತಿನಿಧಿಗಳಿಗೆ ಆಸಕ್ತಿ ಇಲ್ಲದಾಗಿದೆ. ಗಣಿಗಳಿಂದ ರಾಜಕಾರಣಿಗಳ ಜೇಬು ತುಂಬುತ್ತದೆ. ಅಲ್ಲದೆ ಇದರಿಂದ ಅಧಿಕಾರಿಗಳಿಗೂ ಅನುಕೂಲ ಆಗುತ್ತಿದೆ. ಇದರಿಂದ ಯಾರೊಬ್ಬರು ಕೈಗಾರಿಕೆ ಸ್ಥಾಪನೆಗೆ ಒತ್ತು ನೀಡುತ್ತಿಲ್ಲ. ಆದರೆ ಗಣಿಗಾರಿಕೆಯಿಂದ ಪರಿಸರ ನಾಶವಾಗುತ್ತದೆ. ಇದರಿಂದ ಉದ್ಯೋಗ ಸೃಷ್ಟಿಸಲು ಸಾಧ್ಯವಿಲ್ಲ. ಬಡವರಿಗೆ ಯಾವುದೇ ಅನುಕೂಲ ಆಗೋದಿಲ್ಲ. ಜಿಲ್ಲೆಯಲ್ಲಿ ಹಾಲಿ ಪ್ರಭಾವಿ ಸಚಿವರಿದ್ದರೂ ಕೈಗಾರಿಕೆ ಅಭಿವೃದ್ಧಿಗೆ ಮನಸ್ಸು ಮಾಡುತ್ತಿಲ್ಲ ಎಂದು ಅಸಮಾಧಾನ ಹೊರಹಾಕುತ್ತಾರೆ. ಉದ್ಯಮಿಗಳು.

ಸೊರಗಿದ ಉದ್ಯಮ

ಗದಗ ನಗರದ ಹೊರವಲಯದಲ್ಲಿ ಹಲವು ಕೈಗಾರಿಕಾ ಸಮುಚ್ಚಯ ಸ್ಥಾಪನೆ ಮಾಡಲಾಗಿದೆ. ಅವು ಸಣ್ಣ-ಪ್ರಮಾಣದ ಉದ್ಯಮಗಳು ಮಾತ್ರ. ಅವುಗಳ ನಿರ್ವಹಣೆ ಹಾಗೂ ನೆರವಿನ ಕೊರತೆಯಿಂದಾಗಿ ಸಮರ್ಪಕವಾಗಿ ಮುನ್ನಡೆಸಲು ಸಾಧ್ಯವಾಗದೇ ಉದ್ಯಮಿಗಳು ಪರದಾಡುತ್ತಿದ್ದಾರೆ. ಇಲ್ಲಿ ನೀರು, ನೆಲ, ಕಚ್ಚಾ ಸಂಪನ್ಮೂಲ, ರೈಲು ಸಾರಿಗೆ, ಸಮೀಪಕ್ಕೆ ಹುಬ್ಬಳ್ಳಿ ವಿಮಾನ ಯಾನ ಸಂಪರ್ಕ ಕೂಡ ಇದೆ. ಇಷ್ಟಿದ್ದೂ ಈ ಜಿಲ್ಲೆ ಔದ್ಯಮಿಕವಾಗಿ ಇಂದಿಗೂ ಹಿಂದುಳಿದಿದೆ. ಗದಗ ಎಂದರೆ ಸಹಕಾರಿ ಕ್ಷೇತ್ರದ ತವರು ಎಂಬ ಬ್ರ್ಯಾಂಡ್‌ನಿಂದ ನವೋದ್ಯಮದ ಕಡೆ ಜಿಗಿಯಬೇಕಿದೆ.



ಜಿಲ್ಲಾ ನೋಟ

ಕುವೆಂಪು ವಿವಿಗೆ ಗರ ಸಿಬ್ಬಂದಿಯದೇ ಬರ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಇನ್ನು ಮೂರ್‍ನಾಲ್ಕು ವರ್ಷ ಕಳೆದರೆ ಐವತ್ತು ವಸಂತಗಳನ್ನು ತುಂಬಿಕೊಳ್ಳುವ ಕುವೆಂಪು ವಿಶ್ವವಿದ್ಯಾನಿಲಯ ಅನೇಕ ಕೊರತೆಗಳ ನೆರಳಿನಲ್ಲಿ ನಲುಗಿ ಹೋಗಿದೆ. 1987ರಲ್ಲಿ ಅಸ್ತಿತ್ವಕ್ಕೆ ಬಂದ ಕುವೆಂಪು ವಿಶ್ವವಿದ್ಯಾಲಯ ಸಂಯೋಜನೆ ನೀಡುವ ರಾಜ್ಯ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದ್ದು ವಿಶ್ವವಿದ್ಯಾಲಯ ಧನಸಹಾಯ ಆಯೋಗ ಮನ್ನಣೆ ಪಡೆದಿದೆ. ಈ ವಿಶ್ವವಿದ್ಯಾಲಯ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ಹೊತ್ತಿದೆ. ಅದು ತನ್ನದೇ ಆದ ವಿಶಿಷ್ಟ ಶೈಕ್ಷಣಿಕ ವ್ಯಕ್ತಿತ್ವ ಹಾಗೂ ಸಾಂಸ್ಕೃತಿಕ ಗುರುತನ್ನು ಪಡೆದುಕೊಂಡಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಕುವೆಂಪು ಅವರ ಬಹುಮುಖಿ ವ್ಯಕ್ತಿತ್ವದಿಂದ ವಿಶ್ವವಿದ್ಯಾಲಯ ತನ್ನ ಅನನ್ಯ ವ್ಯಕ್ತಿತ್ವದ ಚಹರೆಗಳನ್ನು ಪಡೆದುಕೊಂಡಿದೆ. ಆದರೆ ಇದು ಕಾಯಂ ಪ್ರಾಧ್ಯಾಪಕರು ಇಲ್ಲದೇ ಎರವಲು ಸಿಬ್ಬಂದಿ ನೆಚ್ಚಿ ಆಡಳಿತ ಹಾಗೂ ತರಗತಿ ನಡೆಸುವ ದುಸ್ಥಿತಿಗೆ ಬಂದು ತಲುಪಿದೆ.

- » ಕೆಲ ವಿಭಾಗಗಳಿಗೆ ಕಾಯಂ ಮೇಷ್ಟುಗಳಿಲ್ಲ
- » ನೇಮಕ ಪ್ರಕ್ರಿಯೆಗೆ ಒಳ ಮೀಸಲು ಕಗ್ಗಂಟು
- » ಗುತ್ತಿಗೆ ಉಪನ್ಯಾಸಕರಿಂದಲೇ ನಡೆದಿವೆ ತರಗತಿ
- » ಉನ್ನತ ಶಿಕ್ಷಣದ ಕನಸು ಹೊತ್ತವರ ಕನಸು ಭಗ್ನ

ಜ್ಞಾನ ದೇಗುಲ ಖಾಲಿ

ಕಳೆದ ಐದಾರು ವರ್ಷಗಳಿಂದ ಕುವೆಂಪು ವಿವಿ ನೇಮಕ ಪ್ರಕ್ರಿಯೆ ಸರಕಾರದ ಮಟ್ಟದಲ್ಲಿಯೇ ನೆನಗುದಿಗೆ ಬಿದ್ದಿರುವುದರಿಂದ ವಿವಿಯ ಹಿರಿಯ ಪ್ರಾಧ್ಯಾಪಕರು ವಯೋನಿವೃತ್ತಿಯಿಂದ ತೆರವಾದ ಸ್ಥಾನಗಳಿಗೆ ನೇಮಕ ಮಾಡಿಕೊಳ್ಳದೇ ಜ್ಞಾನದೇಗುಲ ವಿದು ಖಾಲಿಯಾದಂತೆ ಕಾಣುತ್ತಿದೆ.

ಹೆಚ್ಚುವರಿ ಹೊಣೆ

ಇತಿಹಾಸ,ಉರ್ದು, ಪ್ರವಾಸೋದ್ಯಮ ಸೇರಿದಂತೆ ಐದಾರು ವಿಭಾಗಗಳಿಗೆ ಯಾವುದೇ ಕಾಯಂ ಮೇಷ್ಟುಗಳಿಲ್ಲ. ಈ ಹಿಂದೆ ಎಲ್ಲ ವಿಭಾಗಗಳಲ್ಲೂ ಗುತ್ತಿಗೆ ಆಧಾರಿತ ಉಪನ್ಯಾಸಕರ ಸಹಕಾರದಿಂದ ತರಗತಿಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಈಗ ಆ ಎಲ್ಲ ವಿಭಾಗಗಳಲ್ಲೂ ನಿವೃತ್ತಿಯಾಗಿದ್ದಾರೆ. ಈಗ ಗುತ್ತಿಗೆ ಆಧಾರಿತ ಉಪನ್ಯಾಸಕರಿಗೆ ಆ ವಿಭಾಗಗಳ ಜವಾಬ್ದಾರಿ ನೀಡಲು ಸಾಧ್ಯವಿಲ್ಲ. ಹೀಗಾಗಿ ಬೇರೆ ವಿಭಾಗಗಳ ಮುಖ್ಯಸ್ಥರನ್ನು ಖಾಲಿ ಇರುವ ವಿಭಾಗಗಳಿಗೂ ನಿಯೋಜನೆ ಮಾಡಲಾಗುತ್ತಿದೆ. ಕಾಯಂ ಪ್ರಾಧ್ಯಾಪಕರು ಇಲ್ಲದ ವಿಭಾಗಗಳಲ್ಲಿ ನಿಯೋಜನೆಗೊಂಡಿರುವವರು ಇನ್ನೊಂದು ಹೊಣೆ ಹೊತ್ತುಕೊಳ್ಳಬೇಕಾಗಿದೆ.

ನೇಮಕ ಪ್ರಕ್ರಿಯೆ ಇಲ್ಲ

ಈಗಾಗಲೇ ಬಹುತೇಕ ಪ್ರಾಧ್ಯಾಪಕರು ನಿವೃತ್ತಿ ಅಂಚಿನಲ್ಲಿದ್ದಾರೆ. ಕಳೆದ ಐದಾರು ವರ್ಷಗಳಿಂದ ನೇಮಕ ಪ್ರಕ್ರಿಯೆ ನಡೆದಿಲ್ಲ. ಒಳ ಮೀಸಲಾತಿಯ ಕಾರಣದಿಂದ ನೇಮಕ ಪ್ರಕ್ರಿಯೆ ಸ್ಥಗಿತಗೊಂಡಿದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿಯೇ ನೇಮಕ ಕಡತಗಳು ಧೂಳು ಹಿಡಿಯುತ್ತಿವೆ. ಹೀಗಾಗಿ ವಿಶ್ವವಿದ್ಯಾನಿಲಯ ಜ್ಞಾನ ದಾನದ ಕೊರತೆ ಎದುರಿಸುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮೇಷ್ಟ್ರುಗಳು ನಿವೃತ್ತಿಯಾದರೆ ಅಲ್ಲಿಗೆ ಕಾಯಂ ಸಿಬ್ಬಂದಿಯನ್ನು ದುರ್ಬೀನು ಹಾಕಿ ಹುಡುಕಬೇಕಾಗುತ್ತದೆ.

ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನ ನೀಡಬೇಕಾದ ಪ್ರಾಧ್ಯಾಪಕರೇ ಇಲ್ಲದ ಪರಿಸ್ಥಿತಿ ಬಗ್ಗೆ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆಗಳು ನಡೆದಿವೆ. ದಿನೇ ದಿನೇ ನಿವೃತ್ತಿಯಿಂದಾಗಿ ಜ್ಞಾನದ ಕಣಜ ಮುಂದೊಂದು ದಿನ ಖಾಲಿ ಖಾಲಿಯಾಗಿ ನೋಡಬೇಕಾಗುತ್ತದೆ ಎಂಬ ಆತಂಕ ಎಲ್ಲನ್ನು ಕಾಡುತ್ತಿದೆ.



ಸರಕಾರ ಸೈಲೆಂಟ್

ಕಳೆದ ನಾಲ್ಕು ವರ್ಷದ ಹಿಂದೆ 25 ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಸಿದ್ಧತೆಗಳನ್ನು ಮಾಡಿಕೊಂಡು ಅದಕ್ಕೆ ಸರಕಾರದ ಅನುಮತಿ ಕೇಳಲಾಗಿತ್ತು. ನಿಯಾಮನುಸಾರ ನೇಮಕ ಪ್ರಕ್ರಿಯೆ ನಡೆಸುವಂತೆ ಸರಕಾರ ಮಂಜೂರು ನೀಡಿತು. ಆದರೆ, ಒಳ್ಳೆಯ ಕೆಲಸಕ್ಕೆ ನೂರೆಂಟು ವಿಘ್ನ ಎಂಬಂತೆ ತಾಂತ್ರಿಕ ತೊಡಕು ಮುಂದೊಡ್ಡಿ ನೇಮಕವನ್ನು ಸ್ಥಗಿತಗೊಳಿಸಲಾಯಿತು.

ಒಳ ಮೀಸಲು ಕಗ್ಗಂಟು

ಅಲ್ಲಿಂದ ಸರಕಾರದ ಉನ್ನತ ಶಿಕ್ಷಣ ಇಲಾಖೆ 25 ಮಂದಿ ನೇಮಕಕ್ಕೆ ಅನುಮೋದನೆ ನೀಡಲೇ ಇಲ್ಲ. ಒಳ ಮೀಸಲು ಹಾಗೂ ಇನ್ನಿತರ ಕಾರಣಗಳನ್ನು ನೀಡಿ ಪದೇ ಪದೇ ನೇಮಕ ಪ್ರಕ್ರಿಯೆ ಮುಂದೂಡುತ್ತಲೇ ಇದೆ. ಇದರಿಂದ ತೊಂದರೆಗೆ ಒಳಗಾಗಿರುವುದು ವಿದ್ಯಾರ್ಥಿ ಸಮೂಹ. ಇದರ ಬಗ್ಗೆ ವಿಶ್ವವಿದ್ಯಾನಿಲಯ ನಿರಂತರ ಪತ್ರ ವ್ಯವಹಾರ ನಡೆಸಿದೆಯಾದರೂ, ಸರಕಾರದ ಪ್ರತಿಕ್ರಿಯೆ ಶೂನ್ಯ.

ಅಡ್ಡ ಪರಿಣಾಮ ನೂರು

ಕುವೆಂಪು ವಿವಿ ಸೇರುವ ಸಾವಿರಾರು ವಿದ್ಯಾರ್ಥಿಗಳ ಆಶೋತ್ತರಕ್ಕೆ ಸರಕಾರವೇ ಕೊಡಲಿ ಪೆಟ್ಟು ಕೊಡುತ್ತಿದೆ. ಇಂತಹ ಪರಿಸ್ಥಿತಿಯ ಬಗ್ಗೆ ಅರಿವು ಇರುವ ಖಾಸಗಿ ಕಂಪನಿಗಳು ವಿವಿ ವಿದ್ಯಾರ್ಥಿಗಳಿಗೆ ಕೆಲಸ ನೀಡಲು ಹಿಂದೇಟು ಹಾಕುವ ಪರಿಸ್ಥಿತಿ ತಲೆದೋರಿದೆ. ನಿಗಧಿತ ಗುಣಮಟ್ಟದ ಶಿಕ್ಷಣ ಪಡೆದಿಲ್ಲ ಅಥವಾ ಅಂತಹ ಕೌಶಲವಿಲ್ಲ ಎಂಬ ಕಾರಣವೊಡ್ಡಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗುವಂತಹ ಸ್ಥಿತಿ ಎದುರಾಗಿದೆ.

ಸಮಸ್ಯೆ ನೂರೆಂಟು

ಇತ್ತ ಅನುದಾನವೂ ಹೆಚ್ಚು ನೀಡದೇ, ಹೊಸ ನೇಮಕವೂ ಮಾಡದೇ, ನಿವೃತ್ತಿಯಾದ ಸ್ಥಾನಗಳಿಗೂ ತುಂಬಲು ಮೀನಮೇಷ ಎಣಿಸುತ್ತಿರುವ ಸರಕಾರ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ವಿವಿ ಅಧಿಕಾರಿಗಳು ನೇಮಕದಲ್ಲಿ ತಮ್ಮ ಪಾತ್ರವಿಲ್ಲ ಎಂದು ಹೇಳಿ ಕೈ ತೊಳೆದುಕೊಳ್ಳುತ್ತಾರೆ. ಎಲ್ಲದಕ್ಕೂ ಸರಕಾರವೇ ಉತ್ತರ ಕೊಡಬೇಕು ಎಂಬ ಅವರ ಜಾಣ್ಮೆಯ ನಡೆ ಹಾಗೂ ಸರಕಾರದ ಕುರುಡು ನಡೆ ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲೆಗೆ ತಳ್ಳಿವೆ..!

ಬೇರೆ ವಿವಿಗಳ ಕತೆ

ಇದು ಕೇವಲ ಕುವೆಂಪು ವಿವಿ ಮಾತ್ರವಲ್ಲ, ರಾಜ್ಯದ ಬಹುತೇಕ ವಿವಿಗಳಲ್ಲೂ ಇದೆ ಕತೆ ಎನ್ನುತ್ತಾರೆ ನಿವೃತ್ತ ಕುಲಪತಿಯೊಬ್ಬರು. ಬೆಂಗಳೂರು ವಿವಿಯಿಂದ ಹಿಡಿದು ರಾಜ್ಯದ ಬಹುತೇಕ ವಿವಿಗಳು ಗುತ್ತಿಗೆ ಉಪನ್ಯಾಸಕರಿಂದಲೇ ನಡೆಯುತ್ತಿವೆ. ಈ ಕುರಿತು ಉನ್ನತ ಶಿಕ್ಷಣ ಸಚಿವರಿಗೆ ಮನವರಿಕೆ ಮಾಡಿಯಾಗಿದೆ. ಆದರೆ, ಸರಕಾರವೇ ಕಿವುಡಾಗಿರುವಾಗ ವಿದ್ಯಾರ್ಥಿಗಳ ಭವಿಷ್ಯ ಕುರಿತು ಕಾಳಜಿ ಎಲ್ಲಿಂದ ಬರಬೇಕು ಎಂದು ಬೇಸರ ವ್ಯಕ್ತಪಡಿಸುತ್ತಾರೆ ಪ್ರಾಜ್ಞರು.

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ವಿಶ್ವವಾಣಿ

@vishwavaninews

ಬೆಂಗಳೂರು
04-04-2025
ಶುಕ್ರವಾರ

ಚಿತ್ತವಿಹಾರ

ನಿರೀಕ್ಷೆ ಎಂಬ ವರದಾನ

ಜೀವನವೇ ಅನಿರೀಕ್ಷಿತ. ಪ್ರತಿದಿನವೂ ಒಂದು ಹೊಸತನವು ಕಾಣುತ್ತದೆ. ಹೀಗಾಗಿ ಬದುಕಿನಲ್ಲಿ ನಾವು ಏನು ಅಂದುಕೊಂಡಿರುತ್ತೇವೋ ಅದು ಆಗದೆ ಬೇರೆಯೇ ಏನೋ ಸಂಭವಿಸಿರುತ್ತದೆ. ಈ ಕಾರಣಗಳಿಂದ ನಿರೀಕ್ಷೆ ಮೀರಿ ನಡೆವ ಈ ಘಟನೆಗಳು ಅಚ್ಚರಿಯನ್ನು ಮೂಡಿಸುತ್ತವೆ. ಯಾವ ತೊಂದರೆ ಇಲ್ಲದೆ, ಅಡತಡೆಗಳಿಲ್ಲದೇ ಬದುಕಬೇಕು, ಜೊತೆಗೆ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಕೀರ್ತಿ ಗಳಿಸಿ ಉನ್ನತ ಸ್ಥಾನಕ್ಕೇರಬೇಕೆಂಬ ನಿರೀಕ್ಷೆ ಎಲ್ಲರಲ್ಲೂ ಇರುತ್ತದೆ. ಆದರೆ ಬದುಕು ಹಾಗಲ್ಲ, ನಾವೆಣಿಸಿದಂತೆ ನಡೆಯುವುದಿಲ್ಲ. ಕೆಲವು ಬಾರಿ ಕೈ ಹಿಡಿದು ಮೇಲಕ್ಕೆ ಎತ್ತುತ್ತದೆ ಮತ್ತೆ ಹಲವು ಬಾರಿ ಉತ್ತಮ ಸ್ಥಿತಿಯಿಂದ ಕೆಳಕ್ಕೆ ಇಳಿಸಿಬಿಡುತ್ತದೆ. ಹಾಗೆಂದ ಮಾತ್ರಕ್ಕೆ ಎಲ್ಲವೂ ಮುಗಿದೇ ಹೋಗುವುದಿಲ್ಲ. ಕೆಲವೊಮ್ಮೆ ವಾಹನ ಸ್ವಲ್ಪ ನಿಂತು ಮತ್ತೆ ಮುಂದಕ್ಕೆ ಹೋಗುವಂತೆ ತಣ್ಣಗಾದ ಪರಿಸ್ಥಿತಿ ಮತ್ತೆ ಗತಿ ಪಡೆದು ನಂತರ ವೇಗ ಹೆಚ್ಚಿಸಿಕೊಳ್ಳುವುದುಂಟು. ಹೀಗಾಗುವುದಕ್ಕೆ ನಮ್ಮಲ್ಲಿರುವ ಮುಂದೆ ಹೋಗಬೇಕೆಂಬ ಛಲ ಮತ್ತು ನಿರೀಕ್ಷೆಯ ಫಲ ಕಾರಣ. ಈ ರೀತಿಯ ಸಕಾರಾತ್ಮಕ ನಿರೀಕ್ಷೆಗಳು ಸುಂದರ ಬದುಕನ್ನು ರೂಪಿಸುವುದರ ಜೊತೆಗೆ ನಮ್ಮ ಜೀವನವನ್ನು ಹಸನಾಗಿಸುತ್ತವೆ.

ನಮ್ಮ ಪೋಷಕರು, ಹಿರಿಯರು ಮತ್ತು ನಮ್ಮನ್ನು ನಂಬಿದವರು ನಮ್ಮ ಮೇಲೆ ಸಾಕಷ್ಟು ನಿರೀಕ್ಷೆ ಇಟ್ಟಿರುತ್ತಾರೆ. ಹಾಗೇಂದ್ರ ಮಾತ್ರಕ್ಕೆ ಎಲ್ಲ ನಿರೀಕ್ಷೆಗಳಿಗೂ ಫಲ ದೊರೆಯಲೇಬೇಕು ಎಂಬುದು ದುರಾಸೆ ಆಗುತ್ತದೆ. ಈ ನಿರೀಕ್ಷೆಗಳು ಸಾಕಾರವಾಗಲು ನಮ್ಮ ಗುಣ ಮತ್ತು ನಾವು ಜೀವನದ ಹಾದಿಯಲ್ಲಿ ಹೇಗೆ ನಡೆದುಕೊಳ್ಳುತ್ತೇವೆ ಎಂಬುದು ನಿರ್ಭರವಾಗುತ್ತದೆ. ಬೆಟ್ಟದ ಎತ್ತರದಷ್ಟು ನಿರೀಕ್ಷೆಗಳ ಕನಸು ಕಾಣುವ ಪರಿ ಮಾನವ ಸಹಜ ಗುಣ ನಿಜ. ಕೆಲವೊಮ್ಮೆ ನಮ್ಮ ನಿರೀಕ್ಷೆ ಹುಸಿಯಾದಾಗ ವೈಯಕ್ತಿಕ ಜೀವನದಲ್ಲಿ ಸೋಲುಂಡಾಗ ಅದಕ್ಕೆ ಕಾರಣ ಮತ್ತೊಬ್ಬರು ಎಂಬುದು ಮೂರ್ಖತನ. ಜೀವನದ ಗೆಲುವಿಗೆ ಅಥವಾ ಸೋಲಿಗೆ ನಾವೇ ಕಾರಣ ಹೊರತು ನಮ್ಮ ನಿರೀಕ್ಷೆಗಳಲ್ಲ ಎಂಬುದು ಸದಾ ನೆನಪಿನಲ್ಲಿರಬೇಕು.

ನಿರೀಕ್ಷೆ ಬದುಕಿಗೆ ಒಂದು ವರದಾನ. ನಿರೀಕ್ಷೆಗಳಿಂದ ಬದುಕು ಎಷ್ಟೆಲ್ಲಾ ಬದಲಾಗುತ್ತದೆ. ಇದು ಸಾಕಾರವಾಗಲು ವಿವೇಕಯುತವಾಗಿ ನಡೆದುಕೊಳ್ಳಬೇಕು. ಈ ನಿರೀಕ್ಷೆಗಳಿಂದ ಬದುಕು ಕಠಿಣ ಪರೀಕ್ಷೆ, ಒತ್ತಡ ಎದುರಿಸಬೇಕಾಗಿ ಬಂದರೂ ಆತ್ಮವಿಶ್ವಾಸದ ಕುಸಿತಕ್ಕೆ ಬೀಳದೆ ಗುರಿಯ ಕಡೆ ಮುನ್ನುಗ್ಗಿ ನಿರೀಕ್ಷೆಯನ್ನು ಸಾಕಾರಗೊಳಿಸುತ್ತೇವೆ ಎಂದು ಬದ್ಧತೆಯಿಂದ ಮತ್ತು ಜವಾಬ್ದಾರಿಯಿಂದ ನಿರೀಕ್ಷೆಗಳ ಸಾಕಾರಗೊಳಿಸುವ ಬದುಕಿಗೆ ಸರಿಸಾಟಿಯಾದುದು ಮತ್ತೊಂದಿಲ್ಲ.

● ವಿಜಯಕುಮಾರ್ ಕಟ್ಟೆ

ಹನಿ ಮಳೆ

ಭೂಕಂಪನ

ಬೆಳ್ಳಂಬೆಳಗ್ಗೆ
ಭೂಕಂಪನವಾಯಿತೆ?
ಅಡುಗೆ ಮನೆಯಲ್ಲಿ
ಪಾತ್ರೆಗಳ ವಿಪರೀತ ಸದ್ದು
ಕಾರಣ ಇಷ್ಟೆ
ಬೆಳಿಗ್ಗೆ ಹತ್ತಾದರೂ
ಇನ್ನೂ ಮಲಗಿದ್ದೆ ಹೊದ್ದು!

● ಮಹಾಂತೇಶ ಮಾಗನೂರ

ಆಕರ್ಷಕ ಸಾರಿಗೆ ವ್ಯವಸ್ಥೆ

● ವೀಣಾ ಭಟ್

ಸ್ಯಾನ್ ಫ್ರಾನ್ಸಿಸ್ಕೋ ಅಮೇರಿಕಾದ ಪ್ರಸಿದ್ಧ ನಗರಗಳಲ್ಲಿ ಒಂದು. ಇಲ್ಲಿ ಅನೇಕ ಐತಿಹಾಸಿಕ ಅಚ್ಚರಿಗಳಿವೆ. ನಗರದಲ್ಲಿರುವ ಎಲೆಕ್ಟ್ರಿಕ್ ಟ್ರಾಮ್ ಅವುಗಳಲ್ಲಿ ಒಂದು. ಇದರಲ್ಲಿ ಪಯಣಿಸುವಾಗ ಹಳೆಯ ಇಂಗ್ಲೀಷ್ ಸಿನೆಮಾದ ನೆನಪಾಗುತ್ತದೆ.

ಸ್ಯಾನ್ ಫ್ರಾನ್ಸಿಸ್ಕೋದ ವಿಂಟೇಜ್ ಎಲೆಕ್ಟ್ರಿಕ್ ಟ್ರಾಮ್‌ಗಳು ಆರಂಭಗೊಂಡು ನೂರೈವತ್ತು ವರ್ಷ ಮೀರಿದೆ. ಇಂದಿಗೂ ಹಳೆಯದನ್ನು ಉಳಿಸಿಕೊಂಡು, ಪ್ರವಾಸಿ ಆಕರ್ಷಣೆಯನ್ನಾಗಿಸಿದ್ದರ ಜತೆ, ಅದು ಸಾರ್ವಜನಿಕ ಸಾರಿಗೆಯ ಭಾಗವೂ ಆಗಿದೆ!

ಸ್ಯಾನ್ ಫ್ರಾನ್ಸಿಸ್ಕೋವು ಐಕಾನಿಕ್ ಕೇಬಲ್ ಕಾರುಗಳು ಮತ್ತು ಫಿಶರ್‌ಮನ್ಸ್ ವಾರ್ಫ್ ನಡುವೆ ಚಲಿಸುವ ವಿಂಟೇಜ್ ಎಲೆಕ್ಟ್ರಿಕ್ ಟ್ರಾಮ್ ಮಾರ್ಗವಾದ ಎಫ್ ಮಾರ್ಕೆಟ್ ವಾರ್ವ್ಸ್ ಸ್ಟ್ರೀಟ್‌ಕಾರ್ ಲೈನ್ ಎರಡನ್ನೂ ಒಳಗೊಂಡಿರುವ ವಿಶಿಷ್ಟ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. ಇದು ಸುಮಾರು ನೂರೈವತ್ತು ವರ್ಷಗಳಷ್ಟು ಹಳೆಯದು. ಅಂದರೆ ಈ ವ್ಯವಸ್ಥೆಯಲ್ಲಿರುವ ಟ್ರಾಮ್ ಇತರ ಮಾರ್ಗಗಳಿಗಿಂತ ಭಿನ್ನವಾಗಿ, ಪಾರಂಪರಿಕ ಸ್ಟ್ರೀಟ್‌ಕಾರ್ ಸೇವೆಯಾಗಿ ಕಾರ್ಯನಿರ್ವಹಿಸುತ್ತದೆ, ಐತಿಹಾಸಿಕ ಉಪಕರಣಗಳನ್ನು ಪ್ರತ್ಯೇಕವಾಗಿ ಬಳಸುತ್ತದೆ. ಸ್ಯಾನ್ ಫ್ರಾನ್ಸಿಸ್ಕೋ ಕೇಬಲ್ ಕಾರ್ ವ್ಯವಸ್ಥೆಯು ವಿಶ್ವದ ಕೊನೆಯ ಹಸ್ತಚಾಲಿತವಾಗಿ ಕಾರ್ಯನಿರ್ವಹಿಸುವ ಕೇಬಲ್ ಕಾರ್ ವ್ಯವಸ್ಥೆಯಾಗಿದ್ದು, ಬೀದಿಯಲ್ಲಿ ಹುದುಗಿರುವ ಕೇಬಲ್‌ಗಳ ಮೂಲಕ ಕಾರುಗಳನ್ನು ಎಳೆಯುವ ಟ್ರಾಮ್‌ವೇ ಆಗಿದೆ. ಇದು ವಿದ್ಯುತ್‌ನಲ್ಲಿ ಚಲಿಸುವ ವಿಂಟೇಜ್ ಕಾರುಗಳನ್ನು ಬಳಸುತ್ತದೆ.

1869 ರಲ್ಲಿ, ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಕೇಬಲ್ ಕಾರ್ ವ್ಯವಸ್ಥೆಯ ಕಲ್ಪನೆಯನ್ನು ಆಂಡ್ರ್ಯೂ ಸ್ಮಿತ್ ಹ್ಯಾಲಿಡೀ ಎಂಬವರು ಹೊಂದಿದ್ದರು. ಮೊದಲ ಯಶಸ್ವಿ ಕೇಬಲ್-ಚಾಲಿತ ಬೀದಿ ಓಡುವ ರೈಲು ಕ್ಲೇ ಸ್ಟ್ರೀಟ್ ಹಿಲ್ ರೈಲ್ ರೋಡ್, ಇದು ಆಗಸ್ಟ್ 2, 1873 ರಂದು ಉದ್ಘಾಟನಾ ಓಟವನ್ನು ಹೊಂದಿತ್ತು. ಈ ಮಾರ್ಗವು ಸೆಪ್ಟೆಂಬರ್ 1, 1873 ರಂದು ನಿಯಮಿತ ಸೇವೆಯನ್ನು ಪ್ರಾರಂಭಿಸಿತು.

ಮೂಲತಃ ಈ ಕೇಬಲ್‌ಗಳು ಉಗಿ ಎಂಜಿನ್‌ಗಳಿಂದ ಚಲಿಸುತ್ತಿದ್ದವು. ಕಲ್ಲಿದ್ದಲಿನ ಉಗಿ ಎಂಜಿನ್‌ಗಳನ್ನು ಬಳಸುತ್ತಿದ್ದರು. ನಂತರ ವಿದ್ಯುತ್ ಚಾಲಿತ ಕೇಬಲ್ ಕಾರುಗಳು ಬಂದವು. ಹಳೆಯ ಹೊಗೆ ಬಣವೆಯನ್ನು ಇಂದಿಗೂ ವಸ್ತುಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ.

ಕೇಬಲ್ ಕಾರುಗಳನ್ನು ಪ್ರಯಾಣಿಕರು ಸ್ವಲ್ಪ ಮಟ್ಟಿಗೆ ಬಳಸುತ್ತಿದ್ದರೂ, ಪ್ರತಿ ವರ್ಷ ವ್ಯವಸ್ಥೆಯನ್ನು ಬಳಸುವ ಲಕ್ಷಾಂತರ ಪ್ರಯಾಣಿಕರಲ್ಲಿ ಬಹುಪಾಲು ಪ್ರವಾಸಿಗರು. ಅಲ್ಕಾಟ್ರಾಜ್ ದ್ವೀಪ, ಗೋಲ್ಡನ್ ಗೇಟ್ ಸೇತುವೆ ಮತ್ತು ಫಿಶರ್‌ಮನ್ಸ್ ವಾರ್ಫ್ ಜೊತೆಗೆ ಅವು ನಗರದ ಪ್ರವಾಸಿ ಆಕರ್ಷಣೆಗಳಲ್ಲಿ ಸೇರಿವೆ.

1984 ರಿಂದ, ಸ್ಯಾನ್ ಫ್ರಾನ್ಸಿಸ್ಕೋ ರೈಲ್ವೇ ಕಾರ್ಪೊರೇಷನ್ ಈ ವ್ಯವಸ್ಥೆಯನ್ನು ನವೀಕರಿಸುವುದನ್ನು ಮುಂದುವರಿಸಿದೆ. ಹಳೆಯದನ್ನು ಉಳಿಸಿಕೊಂಡು ಬೆಳೆಸಿ, ಯುವ ಪೀಳಿಗೆಗೂ ಅದನ್ನು ಪರಿಚಯಿಸಿ ಪ್ರವಾಸಿ ಆಕರ್ಷಣೆಯಾಗಿ ಮಾಡಿರುವುದು ಅಮೇರಿಕನ್ನರ ಸಾಧನೆಯೇ ಸರಿ.

ಇಂದು ಅಲ್ಲಿಗೆ ಹೋದ ಪ್ರವಾಸಿಗರೆಲ್ಲರೂ ಈ ಒಂದು ಆಕರ್ಷಣೆಯನ್ನು ನೋಡಲು ಮರೆಯುವುದಿಲ್ಲ; ಇದರಿಂದಾಗಿ, ಅಮೆರಿಕದ ಪ್ರವಾಸೋದ್ಯಮದ ಆದಾಯಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿವೆ ಈ ಕೇಬಲ್ ಕಾರುಗಳು.

ಪಲ್ಲಕ್ಕಿ

● ಹೊಸ್ಮನೆ ಮುತ್ತು

ಮೇನೆ, ಡೋಲಿ, ಪರ್ಯಂಕ, ಆಂದೋಲಿಕಾ, ಅಂದಣ ಎಂದೆಲ್ಲಾ ಹೆಸರಿಸುವ ಪಲ್ಲಕ್ಕಿ ನಮ್ಮ ಪರಂಪರೆಯ ಸಾಧನವಾಗಿದ್ದು; ಭಾರತೀಯ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಇದು ಹಲವಾರು ಶತಮಾನಗಳಿಂದ ಭಾರತದಲ್ಲಿ ಬಳಕೆಯಲ್ಲಿದ್ದು, ಪ್ರಾಚೀನ ಕಾಲದಲ್ಲಿ ರಾಜ, ಮಹಾರಾಜರು, ರಾಣಿಯರು, ಗುರುಗಳು ಮತ್ತು ಅಧಿಕಾರಿಗಳು ದೀರ್ಘ ಪ್ರಯಾಣಕ್ಕಲ್ಲದೇ, ತಮ್ಮ ಸಾಮಾಜಿಕ ಸ್ಥಾನಮಾನವನ್ನು ಪ್ರದರ್ಶಿಸಲು ಪಲ್ಲಕ್ಕಿಯನ್ನು ಬಳಸುತ್ತಿದ್ದರು. ಅದರಲ್ಲೂ ಅಲಂಕೃತ ಪಲ್ಲಕ್ಕಿಗಳಲ್ಲಿ ಪ್ರಯಾಣಿಸುವುದು ಶ್ರೇಷ್ಠತೆಯ ಸೂಚಕವಾಗಿತ್ತು.

ಪಲ್ಲಕ್ಕಿ, ಕಲಾತ್ಮಕ ಕೆತ್ತನೆ ಮತ್ತು ಚಿತ್ರಗಳಿಂದ ಅಲಂಕರಿಸಲ್ಪಟ್ಟ ಮರ ಅಥವಾ ಲೋಹದಿಂದ ಕೂಡಿದ ಸಾಂಪ್ರದಾಯಿಕ ವಾಹನ. ಪಲ್ಲಕ್ಕಿಯ ಅಲಂಕಾರಗಳು,

ವಿನ್ಯಾಸಗಳು ಮತ್ತು ಬಳಕೆಯ ವಿಧಾನಗಳು ಆಯಾ ಪ್ರದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ವಿವಾಹಗಳು ಮತ್ತು ಧಾರ್ಮಿಕ ಉತ್ಸವಗಳಲ್ಲಿ ವಧು, ವರ ಅಥವಾ ದೇವರ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಸೌಲಭ್ಯಗಳು ಕಡಿಮೆ ಇದ್ದ ಕಾರಣ, ರೋಗಿಗಳು ಮತ್ತು ವಯಸ್ಸಾದವರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸಲು ಪಲ್ಲಕ್ಕಿ ಬಳಕೆಯಾಗುತ್ತಿತ್ತು.

ಸಂಪರ್ಕ ಕ್ರಾಂತಿಯಿಂದಾಗಿ ಬಳಕೆಗೆ ಬಂದ ಕಾರು, ಬಸ್ ಮತ್ತು ರೈಲುಗಳಂತಹ ಸಾರಿಗೆ ವ್ಯವಸ್ಥೆಗಳ ಆಗಮನದೊಂದಿಗೆ ಪಲ್ಲಕ್ಕಿಯ ಬಳಕೆ ನಿಂತುಹೋಯಿತು. ಇಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಕೆಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮತ್ತು ಪ್ರವಾಸಿ ಆಕರ್ಷಣೆಯಾಗಿಯಷ್ಟೇ ಪಲ್ಲಕ್ಕಿಯನ್ನು ಬಳಸಲಾಗುತ್ತಿದೆ.

ಸಾಕು ಎಂಬುದನ್ನ ಕಲಿಯಬೇಕು!

ಬೇಕು ಬೇಕದು ಬೇಕು ಬೇಕಿದೆನಗಿನ್ನೊಂದು?
ಬೇಕೆನುತ ಬೊಬ್ಬಿಡುತಲಿಹ ಘಟವನಿದನು?
ಏಕೆಂದು ರಚಿಸಿದನೊ ಬೊಮ್ಮನೀ ಬೇಕು ಜಪ?
ಸಾಕೆನಿಪುದೆಂದಿಗೆಲೊ - ಮಂಕುತಿಮ್ಮ॥

ಅವಶ್ಯಕವಿದೆಯೋ? ಅಥವಾ ಅನಾವಶ್ಯಕವೋ ಎನ್ನುವ ಅರಿವು ನಮಗಿರದೆ ನಾವು ವಿವೇಚನಾರಹಿತವಾಗಿ, ಅದೂ ಬೇಕು, ಇದೂ ಬೇಕು, ಎಲ್ಲವೂ ಬೇಕೆನ್ನುವ ಆಸೆಗಳ ಖನಿಯಾದ ಈ ಮನುಷ್ಯನೆಂಬುವ ಘಟವನ್ನು ಆ ಭಗವಂತನಾದರೂ ಏಕಾದರೂ ರಚಿಸಿದನೊ? ಮನುಷ್ಯನ ಮನಸ್ಸಿಗೆ ಬೇಕು ಎನ್ನುವ ಜಪ ಎಂದಿಗೆ ಕೊನೆಯಾಗಿ, ತನಗೆ ಸಾಕು ಎಂದು ಎಂದಾದರೂ ಹೇಳುತ್ತಾನೋ? ಎಂದು ಈತನ ಆಸೆಗಳ ಪರಿಯ ಮುಕ್ತಾಯವಾದರೂ ಎಂದು?

ಮನುಷ್ಯನು ಹುಟ್ಟಿನಿಂದ ಲಾಗಾಯ್ತು, ತನ್ನ ಜೀವನದ ಕೊನೆಯ ಪಯಣದವರೆಗೂ ಜೀವಿತ ಕಾಲದಲ್ಲಿ ಎಂದಾದರೂ ಇಷ್ಟು ಸಾಕು ನನಗೆ! ಎಂದು ಹೇಳಿರುವುದು ಎಲ್ಲಾದರೂ ಉಂಟೇ? ಈತನ ಪೂರ್ಣ ಜೀವಿತಕಾಲದಲ್ಲಿ ಈತನಿಗೆ ಕಂಡಿದ್ದೆಲ್ಲವೂ ಬೇಕು, ಬೇಕೆನಿಸಿರುವುದೆಲ್ಲವನ್ನೂ ಅನುಭವಿಸಲೇಬೇಕು. ಅದು ಹಣವೇ ಇರಲಿ, ಅಂತಸ್ತೇ ಇರಲಿ, ಅಧಿಕಾರವೇ ಇರಲಿ, ಹೀಗೆ ಕಂಡಿದ್ದೆಲ್ಲವೂ ಈತನಿಗೆ ಬೇಕೇ ಬೇಕು ಎನ್ನುವ ಮನಸ್ಥಿತಿ. ಈ ಜಗತ್ತೇ ನನ್ನ ಅಡಿಯಾಳಾಗಬೇಕು ಎಂಬುವ ಉತ್ಕಟವಾದ ವಾಂಛೆ ಈತನದು. ಕ್ಷಣಕ್ಷಣಕ್ಕೂ ಈತನ ಮನದಲ್ಲಿ ಹೊಸ ಆಸೆಗಳ ಸೃಷ್ಟಿ, ಆ ಆಸೆಗಳ ಪೂರೈಕೆಗೆ ನಿತ್ಯವೂ ಹೋರಾಟ, ಪರದಾಟ. ಆ ಸೃಷ್ಟಿಕರ್ತನು ಈ ಜಗದ ಎಲ್ಲಾ ಜೀವಿಗಳಿಗೂ ಮೂಲಭೂತವಾಗಿ ಹಸಿವು, ಬೆದೆ, ಬೆದರು ಎಂಬ ಮೂರು ಅಂಶಗಳನ್ನು ಕೊಟ್ಟು, ಈ ಮೂರು ಅಂಶಗಳನ್ನು ತಣಿಸುವಂತೆ ಎಲ್ಲವನ್ನೂ ಸೃಷ್ಟಿಸಿದ್ದಾನೆ. ಆದರೆ ಈ ಮನುಷ್ಯನೆಂಬ ಜೀವಿಯಲ್ಲಿಯೂ ಸಹ ಮೂಲಭೂತವಾಗಿ ಬೆದೆ, ಬೆದರು, ಹಸಿವುಗಳನ್ನು ನೀಡಿ, ಇವುಗಳ ತೃಪ್ತಿಗಾಗಿ ಈ ಜಗತ್ತಿನಲ್ಲಿ ಆ ಭಗವಂತ ಎಲ್ಲವನ್ನೂ ಸೃಷ್ಟಿ ಮಾಡಿಟ್ಟಿದ್ದರೂ ಸಹ ಮನುಜನಲ್ಲಿ ಬೆದೆ, ಬೆದರು, ಹಸಿವುಗಳನ್ನು ಮೀರಿ ಇಲ್ಲಿ ಎಲ್ಲವೂ ನನ್ನ ಅಧೀನವಾಗಬೇಕು ಎಂಬ ಮನಸ್ಥಿತಿಯನ್ನು ಸಹ ಆ ಭಗವಂತನು ಇಟ್ಟು ಬಿಟ್ಟನು. ಇಂಥಹ ಮನಸ್ಥಿಯಿಂದಲೇ ಮನುಷ್ಯನು ಆಸೆಗಳ ಬೆನ್ನೇರಿಕೊಂಡು ಇರುವ ಸುಖ, ಶಾಂತಿಯನ್ನು ಅನುಭವಿಸದೆ, ಜೀವನಾಮೃತವನ್ನು ಮರೆತು ಈತನು ಜೀವಿಸುತ್ತಾ, ಬಾಳೆಲ್ಲವೂ ಪರದಾಟ, ಹೋರಾಟಗಳನ್ನೇ ಮಾಡುತ್ತಾ, ನಿಶ್ಚಿಂತತೆಯ ಬಾಳನ್ನು ಆತನು ಕಳೆದುಕೊಂಡಿದ್ದಾನೆ. ಮನುಷ್ಯನ ಮನದಲ್ಲಿಯ ಆಸೆಗಳೋ ಎಂದಿಗೂ ಬತ್ತಲಾರದಿರುವಂಥಹ ಖನಿಯೇ ಆಗಿರುತ್ತದೆ. ಒಂದು ತೀರಿದರೆ ಮತ್ತೊಂದು, ಮತ್ತೊಂದು ತೀರಿದರೆ ಮಗದೊಂದು ಆಸೆಗಳು ಈತನ ಮನಸ್ಸಿನಲ್ಲಿ ಉದ್ಭವಿಸುತ್ತಲೇ ಇರುತ್ತವೆ. ಆದುದರಿಂದ ಈ ಕಗ್ಗದಲ್ಲಿ ಬೇಕು ಬೇಕದು ಬೇಕು ಬೇಕಿದೆನಗಿನ್ನೊಂದು, ಬೇಕೆನುತ ಬೊಬ್ಬಿಡುತಲಿಹ ಘಟವನಿದನು? ಎಂದು ಪ್ರಶ್ನಿಸಿರುವುದು.



ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಈತನಿಗೆ ಆಸೆಯ ಸೆಲೆಯು ಬತ್ತುವುದೇ ಇಲ್ಲ. ಈತನ ಜೀವನದ ಪ್ರತಿಯೊಂದು ಘಟ್ಟದಲ್ಲಿಯೂ ಆ ವಯಸ್ಸಿಗೆ ಸಹಜವಾದ ಆಸೆಗಳು ಒಂದಾದಮೇಲೊಂದರಂತೆ ಉದ್ಭವಿಸುತ್ತಲೇ ಹೋಗುತ್ತವೆ. ಆದುದರಿಂದಲೇ ಈತನು ತನ್ನ ಅಂತಿಮ ಪಯಣ ಸಾಗುವವರೆಗೂ ಈತನಲ್ಲಿ ಬೇಕು, ಬೇಕೆನ್ನುವ ಆಸೆಗಳು ನಿಲ್ಲುವುದೇ ಇಲ್ಲ. ಈ ಕಗ್ಗದಲ್ಲಿ ಪೂಜ್ಯರು ಈ ಮನುಷ್ಯನೆಂಬ ಜೀವಿಯು ತನಗೆ ಬೇರೆ ಯಾವುದೂ ಬೇಡ, ಇರುವುದರಲ್ಲಿಯೇ ಸಂತೋಷಿಸುವೆ, ಇನ್ನು ನನಗೆ ಬೇಕುಗಳು ಬೇಡ, ನನಗೆ ಕೊಟ್ಟಿರುವುದೇ ಸಾಕು ಎಂದು ಎಂದಿಗಾದರೂ ಹೇಳುತ್ತಾನೋ! ಎಂದು ಮನುಷ್ಯನ ಜೀವನದ ವಿವೇಚನಾರಹಿತವಾದ ಆಸೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಭಗವಂತನು ಮನುಷ್ಯನಿಗೆ ಆಸೆಗಳ ಹೂರಣವನ್ನು ತುಂಬಿದ್ದರೂ ಸಹ ಆತನಲ್ಲಿ ವಿವೇಚನೆ, ವಿವೇಕಗಳೆಂಬ ಸ್ವಾತಂತ್ರ್ಯವನ್ನೂ ಸಹ ಕೊಟ್ಟಿದ್ದಾನೆ. ಮಾನವನ ಜ್ಞಾನ ಹೆಚ್ಚಾದಂತೆಲ್ಲಾ ಈತನು ತನ್ನ ವಿವೇಚನೆ, ವಿವೇಕಗಳನ್ನು ಬಳಸಿ ಯಾವುದು ಅವಶ್ಯಕ, ಯಾವುದು ಅನಾವಶ್ಯಕ ಎಂದು ನಿರ್ಧರಿಸಿ ಆಸೆಗಳನ್ನು ಪೂರೈಸಿಕೊಂಡರೆ ಈತನಿಗೆ ಯಾವ ಸಮಸ್ಯೆಗಳೂ ಇರುವುದಿಲ್ಲ. ಆದರೆ ಕಂಡದ್ದೆಲ್ಲವೂ ಬೇಕೆನ್ನುವ ಈ ಘಟಕ್ಕೆ ಸಾಕು ಎನ್ನುವ ಮನಸ್ಥಿತಿಯಾದರೂ ಎಲ್ಲಿ? ಎಂದು ಈ ಕಗ್ಗದಲ್ಲಿ ಪ್ರಸ್ತಾಪಿಸಿದ್ದಾರೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಪ್ರೋತ್ಸಾಹ ಕೊಡುವಿಕೆ (4)
4. ತಿರುಳಿಲ್ಲದಿರುವುದು ಅಥವಾ ನಿಸ್ಸಾರವಾದುದು (3)
5. ಪ್ರಜ್ಞಾವಂತ ಪ್ರಜೆ ಇಲ್ಲಿ ಅಸ್ತವ್ಯಸ್ತವಾಗಿದ್ದಾನೆ (4)
7. ಇನ್ನೊಬ್ಬರ ಉಸಾಬರಿ (3)
8. ಜಾಣೆ ಅಥವಾ ನಿಪುಣೆ (3)
9. ಅತಿಥಿಗೆ ಆದರ ನೀಡುವವನು (4)
11. ಜೈನರ ದೇವಾಲಯ (3)
12. ಕಾಣಲು ಚೆಲುವಾದುದು (4)
14. ಮತ್ತೇರಿಸುವಂತಹ (3)
15. ಶ್ರೀಗಂಧಕ್ಕೆ ಮತ್ತೊಂದು ಹೆಸರು (3)
16. ಇರುಳು ಹೊತ್ತಿನಲ್ಲಿ ಸಂಚರಿಸುವವನು (4)
18. ಹೊಡೆಯುವುದು ಅಥವಾ ಶಿಕ್ಷಿಸುವುದು (3)
19. ಸಾಕುಪಕ್ಷಿಗಳಿರುವ ವಾಡೆ! (4)

ಮೇಲಿಂದ ಕೆಳಕ್ಕೆ

1. ವಿಶೇಷ ಸಂದರ್ಭದಲ್ಲಿ ನೀಡಿದ ಕಾಣಿಕೆ (4)
2. ವಂಚನೆಗೆ ಇದು ಹೆಸರುವಾಸಿ (2)
3. ಪರೀಕ್ಷೆಯಲ್ಲಿ ಪಡೆದ ಮಾರ್ಕ್ಸ್ (2)
6. ಗತಿಯ ನಡುವೆಯೇ ಇರುವ ಪತಿವ್ರತೆ (3)
8. ಹಂದರಕ್ಕೆ ಮತ್ತೊಂದು ಹೆಸರು (3)
9. ಮೂಲ ಅಥವಾ ಪ್ರಾರಂಭ ಎಂದರ್ಥ (2)
10. ಮೃತ್ಯು ದೇವನೊಂದಿಗೆ ಬಂದಿರುವ ಜೋಡಿ (3)
11. ಹೆದರಿಕೆಯು ಅಲ್ಪಪ್ರಾಣವಾಗಿದೆ! (2)
13. ತಿರುಗಿ ಬಂದಿರುವ ನೂಲುವ ಯಂತ್ರ (3)
14. ಅಳತೆಗೋಲು (4)
16. ಸಂಪತ್ತು (2)
17. ಒರಟು ಬಟ್ಟೆ ತಲೆ ಕೆಳಗು! (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಉತ್ತೇಜನ 4. ಬರಡು
5. ರಿಗನಾಕ 7. ಗೊಡವೆ 8. ಚತುರೆ
9. ಆತಿಥೇಯ 11. ಬಸದಿ
12. ರಮಣೀಯ
14. ಮಾದಕ 15. ಚಂದನ 16. ನಿಶಾಚರ 18. ದಂಡನೆ 19. ಕೋಳಿವಾಡ

ಮೇಲಿಂದ ಕೆಳಕ್ಕೆ
1. ಉಡುಗೊರೆ 2. ನರಿ
3. ಅಂಕ 6. ಗರತಿ 8. ಚಪ್ಪರ
9. ಆದಿ 10. ಯಮಕ
11. ಬಯ 13. ಕರಚ
14. ಮಾನದಂಡ 16. ನಿಧಿ
17. ಕೋರ

ಅಪರಿಚಿತರೊಡನೆ ಸ್ನೇಹ ಆಪತ್ತಿಗೆ ಆಹ್ವಾನ

ಅರಣ್ಯವೊಂದರಲ್ಲಿ ಜಿಂಕೆ ಮತ್ತು ಕಾಗೆ ಆತ್ಮೀಯ ಸ್ನೇಹಿತರಾಗಿ ವಾಸಿಸುತ್ತಾ ಇರುತ್ತವೆ. ಒಂದು ದಿನ, ಒಂದು ಗುಳ್ಳೆನರಿ ಕಾಡಿನಲ್ಲಿ ಜಿಂಕೆ ಮೇಯುವುದನ್ನು ನೋಡಿತು. ಈ ಜಿಂಕೆಯ ಮಾಂಸವನ್ನು ಹೇಗಾದರೂ ತಿನ್ನಬೇಕು ಎಂದು ಬಯಸಿತು. ಜಿಂಕೆಗೆ ಹತ್ತಿರವಾಗಲು ಅದರ ಸ್ನೇಹ ಮಾಡಬೇಕೆಂದು ನಿರ್ಧರಿಸಿತು. ಜಿಂಕೆ ಬಳಿ ಬಂದ ನರಿ ನಾನು ಇಲ್ಲಿಯವರೆಗೆ ಯಾವುದೇ ಸ್ನೇಹಿತರಿಲ್ಲದೆ ಬದುಕಿದ್ದೇನೆ, ಆದರೆ ಈಗ ನಾನು ನಿನ್ನನ್ನು ಭೇಟಿಯಾಗಿದ್ದೇನೆ, ಈಗ ನನಗೆ ನಾನು ಸಾಕಷ್ಟು ಸ್ನೇಹಿತರೊಂದಿಗೆ ಹೊಸ ಜೀವನವನ್ನು ಪ್ರಾರಂಭಿಸಬೇಕು ಎಂದೆನಿಸುತ್ತಿದೆ ಎಂದು ಹೇಳಿತು. ಜಿಂಕೆ ಹೆಚ್ಚು ಯೋಚಿಸದೆ ನರಿಯ ಸ್ನೇಹವನ್ನು ಒಪ್ಪಿಕೊಂಡಿತು.

ಸೂರ್ಯ ಮುಳುಗುತ್ತಿದ್ದಂತೆ ಜಿಂಕೆಯು ನರಿಯೊಂದಿಗೆ ಚಂಪಕ ಮರದ ಕೆಳಗಿರುವ ತನ್ನ ಮನೆಗೆ ಹಿಂದಿರುಗಿತು. ಮರದ ಮೇಲೆ ಜಿಂಕೆಯ ಸ್ನೇಹಿತ ಕಾಗೆ ವಾಸಿಸುತ್ತಿತ್ತು. ಜಿಂಕೆಯು ನರಿಯನ್ನು ತನ್ನ ಹೊಸ ಸ್ನೇಹಿತ ಎಂದು ಕಾಗೆಗೆ ಪರಿಚಯಿಸಿತು. ಕಾರಣವಿಲ್ಲದೆ ಬರುವ ಅಪರಿಚಿತರನ್ನು ನಂಬುವುದು ಸರಿಯಲ್ಲ ಎಂದು ಕಾಗೆ ಜಿಂಕೆಯನ್ನು ಪಕ್ಕಕ್ಕೆ ಕರೆದು ಹೇಳಿತು. ಯಾರಲ್ಲೂ ಕೆಟ್ಟದ್ದನ್ನು ಕಾಣದ ಜಿಂಕೆ ಕಾಗೆಯ ಬುದ್ಧಿವಾದವನ್ನು ಲೆಕ್ಕಿಸಲಿಲ್ಲ. ಬದಲಾಗಿ ಕಾಗೆಗೆ ಬುದ್ಧಿ ಹೇಳುತ್ತಾ, ಎಲ್ಲರಲ್ಲೂ ಒಳ್ಳೆಯದನ್ನು ಕಾಣಬೇಕು ನಾವು ಮೂವರೂ ಒಳ್ಳೆ ಸ್ನೇಹಿತರಾಗಿ ಸುಖವಾಗಿ ಬಾಳೋಣವೆಂದು ಹೇಳಿತು.

ನರಿ ಈ ಇಬ್ಬರೂ ಹೊಸ ಸ್ನೇಹಿತರೊಂದಿಗೆ ವಾಸಿಸಲು ಪ್ರಾರಂಭಿಸಿತು. ನರಿಯು ಒಂದು ದಿನ ಜಿಂಕೆಗೆ ನಿನಗೆ ಸಾಕಷ್ಟು ರುಚಿರುಚಿಯಾದ ಆಹಾರ ಸಿಗುವ ಜಾಗ ತೋರಿಸುತ್ತೇನೆ ಎಂದು ಅದನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ ಜೋಳದಿಂದ ತುಂಬಿದ ಹೊಲವೊಂದನ್ನು ತೋರಿಸಿತು. ಜೋಳದ ಹೊಲದಲ್ಲಿ ರೈತ ಹಾಕುವ ಬಲೆಗೆ ಜಿಂಕೆ ಸಿಕ್ಕಿಬಿದ್ದಲ್ಲಿ ರೈತನಿಗೆ ಸಿಗುವ ಜಿಂಕೆ ಮಾಂಸದಲ್ಲಿ ತಾನೂ ಪಾಲು ಕೇಳಬಹುದೆಂದು ಮೋಸಗಾರ ನರಿ ಈ ಉಪಾಯ ಮಾಡಿತ್ತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒದು ದಿನ ಜಿಂಕೆ ಅಲ್ಲಿ ಮೇಯುತ್ತಿದ್ದಾಗ ರೈತ ಹಾಕಿದ ಬಲೆಗೆ ಸಿಕ್ಕಿಬಿದ್ದಿತು. ಬಲೆಯನ್ನು ಕತ್ತರಿಸಲು ಜಿಂಕೆ ನರಿಯನ್ನು ವಿನಂತಿಸಿತು. ಆದರೆ ಇದನ್ನೇ ಬಹು ದಿನಗಳಿಂದ ಕಾಯುತ್ತಿದ್ದ ನರಿ ನಿರಾಕರಿಸಿತು. ಇಂದು ನನ್ನ ಉಪವಾಸದ ದಿನ, ಈ ದಿನ ನಾನು ಚರ್ಮದಿಂದ ಮಾಡಿದ ಬಲೆಯನ್ನು ಮುಟ್ಟುವಂತಿಲ್ಲ ಎಂದು ಸುಳ್ಳು ಹೇಳಿತು. ಜಿಂಕೆ ಮನೆಗೆ ಹಿಂತಿರುಗದಿದ್ದಾಗ ಆತಂಕಗೊಂಡ ಅದರ ಸ್ನೇಹಿತ ಕಾಗೆ ಅದನ್ನು ಹುಡುಕಲು ಆರಂಭಿಸಿತು. ಆದರೆ ಅಷ್ಟರಲ್ಲಾಗಲೇ ರೈತ ಹರಿತವಾದ ಆಯುಧವೊಂದನ್ನು ಹಿಡಿದು ಹೊಲದೆಡೆ ಬರುತ್ತಿದ್ದ. ಮರದ ಮೇಲೆ ಕುಳಿತು ಅಷ್ಟು ದೂರದಿಂದಲೇ ರೈತನನ್ನು ನೋಡಿದ ಕಾಗೆ ಉಪಾಯವೊಂದನ್ನು ಮಾಡಿತು. ಹಾರಿ ಜಿಂಕೆಯ ಬಳಿ ಬಂದು, 'ಸದ್ಯಕ್ಕೆ ನೀನು ಸತ್ತಂತೆ ವರ್ತಿಸು' ಎಂದು ಹೇಳಿತು.

ಜಿಂಕೆ ಸತ್ತಂತೆ ನೆಲದ ಮೇಲೆ ಮಲಗಿತು. ಜಿಂಕೆ ಮೃತಪಟ್ಟಿದೆ ಎಂದು ನಿರಾಳನಾದ ರೈತ ಬಲೆಯನ್ನು ಕತ್ತರಿಸುತ್ತಾನೆ. ಆಗ ಕಾಗೆ ಕೂಗಿತು ಅದೇ ಸಮಯಕ್ಕೆ ಕಾಯುತ್ತಿದ್ದ ಜಿಂಕೆ ಮಿಂಚಿನಂತೆ ಎದ್ದು ಓಡಿತು. ಕೋಪಗೊಂಡ ರೈತ ಆಯುಧವನ್ನು ಜಿಂಕೆಯೆಡೆ ಎಸೆಯುತ್ತಾನೆ. ಆದರೆ ಅದು ಗುರಿ ತಪ್ಪಿ ಪೊದೆಯಲ್ಲಿ ಅಡಗಿಕೊಂಡಿದ್ದ ನರಿಗೆ ತಗುಲಿ ಬೆನ್ನ ಮೂಳೆ ಮುರಿಯುತ್ತದೆ. ಅಂತೂ ಕಾಗೆಯ ಜಾಣತನದಿಂದ ಜಿಂಕೆ ಪಾರಾಯಿತು.

ಸಾಮಾಜಿಕ ಜಾಲದಲ್ಲಿ, ಡೇಟಿಂಗ್ ಆ್ಯಪ್‌ಗಳ ಮೂಲಕ ಸ್ನೇಹ ಬೆಳೆಸುವಾಗ ದಯವಿಟ್ಟು ಜಾಗರೂಕರಾಗಿರಿ. ಅಲ್ಲಿ ಸಿಗುವ ಮಾಹಿತಿ ಕಾಣುವ ಚಿತ್ರಗಳೆಲ್ಲ ನಿಜವಲ್ಲ. ಜನ ನಮ್ಮನ್ನು ನಂಬಿಸಲೆಂದೇ ತಮ್ಮ ಜೀವನ ಶೈಲಿಯನ್ನು ಅದ್ಭುತವಾಗಿ ಅಲ್ಲಿ ಬಿಡಿಸಿಡುತ್ತಾರೆ. ಆದರೆ ಅವರ ಅಸಲಿಯತ್ತು ಬೇರೆಯದೇ ಇರುತ್ತದೆ. ಅಪರಿಚಿತರ ಜೊತೆ ಸ್ನೇಹ ಬೆಳೆಸುವಾಗ, ಅವರನ್ನು ಭೇಟಿಯಾಗಲು ಹೊರಟಾಗ ನಿಮ್ಮ ಮನೆಯವರಿಗೆ ಅಥವಾ ಆಪ್ತ ಸ್ನೇಹಿತರಿಗೆ, ಅದರ ಬಗ್ಗೆ ತಿಳಿಸಿರಿ. ಯಾರಿಗೋ ಒಬ್ಬರಿಗಾದರೂ ನಿಮ್ಮ ಚಲನವಲನದ ಬಗ್ಗೆ ತಿಳಿದಿರಬೇಕು. ಆಪತ್ತಿನಲ್ಲಿ ಇಂತಹ ವಿಷಯಗಳೇ ನೆರವಿಗೆ ಬರುವುದು. ಯಾರನ್ನೂ ಪೂರ್ತಿಯಾಗಿ ನಂಬುವ ಬದಲು ನಮ್ಮ ಹುಷಾರಿನಲ್ಲಿ ನಾವಿರೋಣ.

ಶಾಶ್ವತ ಸುಖ

ಕೃಷ್ಣ ಹೇಳುತ್ತಾನೆ: ಯಾರು ಬ್ರಹ್ಮಸ್ಥಿತಿಯನ್ನು ಹೊಂದಿರುತ್ತಾರೋ, ಯಾರಿಗೆ ದೈವಿಜ್ಞಾನ ಇರುತ್ತದೆಯೋ ಯಾರು ಭ್ರಮೆಗೆ ಒಳಗಾಗಿರುವುದಿಲ್ಲವೋ ಅವರು ಸುಖ ಬಂದಾಗ ಸಂಭ್ರಮಿಸುವುದಿಲ್ಲ ಹಾಗೂ ಕಷ್ಟ ಬಂದಾಗ ಕುಗ್ಗುವುದಿಲ್ಲ. (5.20) ಪರಿಸ್ಥಿತಿಗಳಿಗೆ ಹಾಗೂ ಜನರಿಗೆ ನಾವು ಸುಖಕರ ಹಾಗೂ ದುಃಖಕರ ಎಂಬ ಹಣೆಪಟ್ಟಿ ಹಚ್ಚುತ್ತೇವೆ. ನಿಜವಾಗಿ ಇದು ಹಣೆಪಟ್ಟಿ ನೀಡುವುದನ್ನು ಬಿಟ್ಟು ಬಿಡುವುದಾಗಿದೆ.(2.50)

ನಮ್ಮದು ಹಾಗೂ ನಮ್ಮದಲ್ಲದ್ದು ಎಂದು ತಪ್ಪಾಗಿ ಗುರುತಿಸಿ ಕೊಳ್ಳುವಿಕೆಯಿಂದಾಗಿ ಉಂಟಾಗುವ ಮೋಹದಿಂದ ಹೊರಬರಬೇಕೆಂದು ಕೃಷ್ಣ ಅರ್ಜುನನಿಗೆ ಪದೇ ಪದೇ ಹೇಳುತ್ತಾನೆ. ನಮ್ಮ ಇಂದ್ರಿಯಗಳಿಂದ ನಾವು ಸುಖ ಪಡುತ್ತೇವೆ ಎನ್ನುವುದೇ ನಮ್ಮ ದೊಡ್ಡ ಭ್ರಮೆಯಾಗಿದೆ. ಮತ್ತೊಂದೆಡೆ ಕೃಷ್ಣ ಕೊನೆಯಿಲ್ಲದ ಸುಖಕ್ಕೆ ಪರಿಹಾರ ನೀಡುತ್ತಾನೆ. ಅದಕ್ಕಾಗಿ ಹೇಳುತ್ತಾನೆ. ಯಾರು ಬಾಹ್ಯ ಇಂದ್ರಿಯ ಸುಖಗಳಿಗೆ ಅಂಟಿಕೊಳ್ಳುವುದಿಲ್ಲವೋ ಅವರು ಅಂತರಾತ್ಮನಲ್ಲಿ ಪರಮಾನಂದ ಪಡೆಯುತ್ತಾರೆ. ಯೋಗದ ಮೂಲಕ ಭಗವಂತನೊಂದಿಗೆ ಒಂದಾಗಿ ಅವರು ಕೊನೆಯಿಲ್ಲದ ಆನಂದ ಪಡೆಯುತ್ತಾರೆ.(5.21) ಕೃಷ್ಣ ಒಂದು ಎಚ್ಚರಿಕೆಯನ್ನೂ ನೀಡುತ್ತಾನೆ -ಇಂದ್ರಿಯಾಸಕ್ತ ವಸ್ತುಗಳ ಸಂಪರ್ಕದಿಂದ ಉಂಟಾಗುವ ಸಂತೋಷವೂ ಲೌಕಿಕ ಮನಸ್ಸಿನ ವ್ಯಕ್ತಿಗಳಿಗೆ ಸುಖಕರವಾಗಿ ಕಂಡರೂ ಅದು ಮೂಲತಃ ದುಃಖಕ್ಕೆ ಕಾರಣವಾಗಿರುತ್ತದೆ. ಓ ಕುಂತಿಪುತ್ರನೇ ಅಂತಹ ಸುಖಗಳಿಗೆ ಪ್ರಾರಂಭ ಹಾಗೂ ಕೊನೆ ಇದ್ದೇ ಇರುತ್ತದೆ. ಆದ್ದರಿಂದ ಜ್ಞಾನಿಗಳು ಅದರಲ್ಲಿ ಸಂತುಷ್ಟಗೊಳ್ಳುವುದಿಲ್ಲ. (5.22)

ಗೀತೆಯ ಪ್ರಾರಂಭದಲ್ಲಿ ಕೃಷ್ಣ ಏನು ಹೇಳಿದ್ದಾನೋ ಅದರ ಮುಂದುವರಿದ ಭಾಗ ಇದು. ಇಂದ್ರಿಯಗಳು ಬಾಹ್ಯ ವಸ್ತುಗಳೊಂದಿಗೆ ಸೇರಿಕೊಂಡಾಗ ನೋವು ನಲಿವಿನ ದ್ವಂದ್ವ ಉಂಟಾಗುತ್ತದೆ.



ನಿತ್ಯಜೀವನದಲ್ಲಿ ಭಗವದ್ಗೀತೆ

ಕೆ.ಶಿವಪ್ರಸಾದ್

ಹಿರಿಯ ಐಎಎಸ್ ಅಧಿಕಾರಿ

ಅದನ್ನು ಸಹಿಸುವುದನ್ನು ಕಲಿಯಬೇಕು ಯಾಕೆಂದರೆ ಅವು ನಿತ್ಯವಾಗಿರುತ್ತವೆ, (2.14) ಇದರ ಅರ್ಥ ಏನೆಂದರೆ ಕಾರ್ಯಕ್ರಮದಲ್ಲಿ ನೋವು ನಲಿವು ಎರಡು ಅನಿವಾರ್ಯವಾಗಿ ಕೊನೆಗೊಳ್ಳುತ್ತವೆ. ನಮಗೆ ಸುಖವಿಲ್ಲದಾಗ ನೋವಾಗುತ್ತದೆ ಹಾಗೂ ಬೇಸರವಾದಾಗಲೂ ನೋವಾಗುತ್ತದೆ ಎಂಬುದು ನಮ್ಮ ಅನುಭವ. ಅದರಂತೆಯೇ ನೋವಿಲ್ಲದಾಗ ನಮಗೆ ಸುಖದ ಅನುಭವವಾಗುತ್ತದೆ ಇದರಿಂದ ಹೊರಬರಲು ನಾವು ತಾತ್ಕಾಲಿಕವಾಗಿ ಸುಖದ ಕ್ಷಣವನ್ನು ಹೊರ ಸೂಸುತ್ತೇವೆ ಅಥವಾ ದೂಷಣೆಯನ್ನು ಅವಲಂಬಿಸುತ್ತೇವೆ. ಆದರೆ ಅವುಗಳನ್ನು ನಾವು ಅನುಭವಿಸುವಾಗ ಅವುಗಳ ಆಶಾಶ್ವತೆಯ ಬಗ್ಗೆ ಜಾಗ್ರತ ವಾಗಿರುವುದೇ ಮುಖ್ಯ ವಿಷಯವಾಗಿದೆ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

04-04-2025, ಶುಕ್ರವಾರ
vishwavani.news



ಇಂದಿನ ಪಂದ್ಯ

7.30 PM

ಲಕ್ನೋ ಸೂಪರ್ ಜೈಂಟ್ಸ್
VS
ಮುಂಬೈ ಇಂಡಿಯನ್ಸ್

ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂ ಲಕ್ನೋ

ಇನ್‌ಸ್ಟಾದಲ್ಲಿ ಆರ್‌ಸಿಬಿ ಹವಾ

ರಾಯಲ್ ಚಾಲೆಂಜರ್ಸ್ ಬೆಂಗಳೂರು ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣದಲ್ಲಿ ಅತಿ ಹೆಚ್ಚು ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ಫ್ರಾಂಚೈಸಿಯಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಆರ್‌ಸಿಬಿಯು 1.8 ಕೋಟಿ ಫಾಲೋವರ್ಸ್‌ಗಳನ್ನು ಹೊಂದಿದೆ. ಈ ಹಾದಿಯಲ್ಲಿ ಆರ್‌ಸಿಬಿಯು ತಲಾ ಐದು ಬಾರಿಯ ಚಾಂಪಿಯನ್ ತಂಡಗಳಾದ ಚೆನ್ನೈ ಸೂಪರ್ ಕಿಂಗ್ಸ್ (1.77 ಕೋಟಿ) ಮತ್ತು ಮುಂಬೈ ಇಂಡಿಯನ್ಸ್ (1.62 ಕೋಟಿ) ತಂಡಗಳನ್ನು ಹಿಂದಿಕ್ಕಿದೆ. ಕಳೆದ 17 ಆವೃತ್ತಿಗಳಲ್ಲಿ ಆರ್‌ಸಿಬಿ ತಂಡವು ಒಂದು ಬಾರಿಯೂ ಚಾಂಪಿಯನ್ ಆಗಿಲ್ಲ. ಆದರೆ ಇದರಿಂದ ಅಭಿಮಾನಿಗಳ ನಿರೀಕ್ಷೆ, ನಿಷ್ಠೆ ಎಂದೂ ಕಡಿಮೆಯಾಗಿಲ್ಲ. ಕಳೆದ ತಿಂಗಳ 23ರಂದು ಆರ್‌ಸಿಬಿ 1.70 ಕೋಟಿ ಫಾಲೋವರ್ಸ್ ಹೊಂದಿತ್ತು. 10 ದಿನಗಳ ಅವಧಿಯಲ್ಲಿ ಇದು 1.80 ಕೋಟಿಗೆ ಏರಿಕೆಯಾಗಿದೆ.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	02	02	00	04
ಡೆಲ್ಲಿ	02	02	00	04
ಬೆಂಗಳೂರು	03	02	01	04
ಗುಜರಾತ್	03	02	01	04
ಕೋಲ್ಕತ್ತಾ	04	02	02	04
ಮುಂಬೈ	03	01	02	02
ಲಖನೌ	03	01	02	02
ಚೆನ್ನೈ	03	01	02	02
ರಾಜಸ್ಥಾನ್	03	01	02	02
ಹೈದರಾಬಾದ್	04	01	03	02

ಮುಂಬೈ ಇ ಕ್ರಿಕೆಟ್ ಲೀಗ್ ಫ್ರಾಂಚೈಸಿ ಖರೀದಿಸಿದ ಸಚಿನ್ ಪುತ್ರಿ

ಕ್ರಿಕೆಟ್ ಜಗತ್ತಿಗೂ ಕಾಲಿಟ್ಟ ಸಾರಾ ತೆಂಡೂಲ್ಕರ್

ದೆಹಲಿ: ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಈಗಾಗಲೇ ಕ್ರಿಕೆಟಿಗನಾಗಿ ಗುರುತಿಸಿಕೊಂಡಿದ್ದಾರೆ. ಇದೀಗ ಮಗಳು ಸಾರಾ ತೆಂಡೂಲ್ಕರ್ ಕೂಡ ಕ್ರೀಡಾ ಕ್ಷೇತ್ರ ಪ್ರವೇಶಿಸಿದ್ದಾರೆ. ಸಾರಾ ಗ್ಲೋಬಲ್ ಇ-ಕ್ರಿಕೆಟ್ ಪ್ರೀಮಿಯರ್ ಲೀಗ್ (ಜಿಇಪಿಎಲ್) ನಲ್ಲಿ ಮುಂಬೈ

ಫ್ರಾಂಚೈಸಿಯನ್ನು ಖರೀದಿಸಿದ್ದಾರೆ. ಡಿಜಿಟಲ್ ಮನರಂಜನೆ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಜೆಟ್ ಸಿಂಥೆಸಿಸ್‌ನಿಂದ ನಡೆಸಲ್ಪಡುವ ಜಿಇಪಿಎಲ್ ವಿಶ್ವದ ಅತಿದೊಡ್ಡ ಇ-ಕ್ರಿಕೆಟ್ ಮತ್ತು ಮನರಂಜನಾ ಲೀಗ್ ಎಂದು ಪರಿಗಣಿಸಲಾಗಿದೆ.

ಇ-ಕ್ರಿಕೆಟ್ ಪ್ರೀಮಿಯರ್ ಲೀಗ್: ಸಾರಾ ತೆಂಡೂಲ್ಕರ್ ಮುಂಬೈ ತಂಡದ ಮಾಲೀಕರಾಗಿ ಸೇರಿಕೊಂಡಿದ್ದಾರೆ. ಈ ಲೀಗ್ ಸ್ಪರ್ಧಾತ್ಮಕ ಗೇಮಿಂಗ್ ಅನ್ನು ಹೊಸ ರೀತಿಯಲ್ಲಿ ತೋರಿಸಲು ಮತ್ತು ಕ್ರಿಕೆಟ್ ಅಭಿಮಾನಿಗಳ ಸಂಖ್ಯೆಯನ್ನು ಡಿಜಿಟಲ್ ಜಗತ್ತಿನಲ್ಲಿ ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಸಾರಾ ತೆಂಡೂಲ್ಕರ್ ಈ ಬಗ್ಗೆ ಮಾತನಾಡುತ್ತಾ, ಕ್ರಿಕೆಟ್ ನಮ್ಮ ಕುಟುಂಬದಲ್ಲಿ ಒಂದು ಪ್ರಮುಖ ಭಾಗವಾಗಿದೆ. ಇ-ಸ್ಪೋರ್ಟ್ಸ್‌ನಲ್ಲಿ ಕ್ರಿಕೆಟ್‌ನ ಸಾಧ್ಯತೆಗಳನ್ನು ನೋಡುವುದು ತುಂಬಾ ಖುಷಿಯಾಗಿದೆ. ಜಿಇಪಿಎಲ್‌ನಲ್ಲಿ ಮುಂಬೈ ತಂಡವನ್ನು ಹೊಂದುವ ನನ್ನ ಕನಸು ಸಾಕಾರಗೊಂಡಂತಿದೆ. ಇದು ಕ್ರೀಡೆಯ ಮೇಲಿನ ನನ್ನ ಪ್ರೀತಿಯನ್ನು ಮತ್ತು ಮುಂಬೈ ನಗರದ ಮೇಲಿನ ಪ್ರೀತಿಯನ್ನು ಒಂದುಗೂಡಿಸಿದೆ. ನಮ್ಮ ತಂಡದ ಜೊತೆಗೆ ಒಂದು ಉತ್ತಮ ಇ-ಸ್ಪೋರ್ಟ್ಸ್ ತಂಡವನ್ನು ಕಟ್ಟಲು ಮತ್ತು ಜನರಿಗೆ ಸ್ಫೂರ್ತಿ ಮತ್ತು ಮನರಂಜನೆ ನೀಡಲು ನಾನು ಕಾತರದಿಂದ ಕಾಯುತ್ತಿದ್ದೇನೆ ಎಂದು ಹೇಳಿದ್ದಾರೆ.

ಇ-ಸ್ಪೋರ್ಟ್ಸ್ ವ್ಯಾಪ್ತಿ ಹೆಚ್ಚಲಿದೆ: ಜೆಟ್ ಸಿಂಥೆಸಿಸ್‌ನ ಸಿಇಒ ರಾಜನ್ ನವಾನಿ ಮಾತನಾಡಿ, ಸಾರಾ ಭಾರತದ ಹೊಸ ತಲೆಮಾರಿನ ಜನರ ಪ್ರತಿನಿಧಿಯಾಗಿದ್ದಾರೆ. ಅವರಿಗೆ ಕ್ರೀಡೆ ಮತ್ತು ಇ-ಸ್ಪೋರ್ಟ್ಸ್ ಬಗ್ಗೆ ಆಸಕ್ತಿ ಇದೆ ಮತ್ತು ಅವರು ಜನಪ್ರಿಯರೂ ಆಗಿದ್ದಾರೆ. ಇ-ಸ್ಪೋರ್ಟ್ಸ್ ಅನ್ನು ಎಲ್ಲರಿಗೂ ತಲುಪಿಸುವ ನಮ್ಮ ಗುರಿಗೆ ಅವರು ಒಳ್ಳೆಯ ಸಹಾಯಕರಾಗಿದ್ದಾರೆ, ಎಂದು ತಿಳಿಸಿದ್ದಾರೆ.

ರಿಯಲ್ ಕ್ರಿಕೆಟ್ 24 ಎಂಬ ಗೇಮ್‌ನಲ್ಲಿ ಆಡಲಾಗುವ ಈ ಲೀಗ್, ಮೇ 2025ರಲ್ಲಿ ಒಂದು ದೊಡ್ಡ ಫೈನಲ್ ಪಂದ್ಯದೊಂದಿಗೆ ಮುಗಿಯಲಿದೆ. ಇದರಲ್ಲಿ ಗೆದ್ದ ತಂಡಕ್ಕೆ 'ಇ-ಕ್ರಿಕೆಟ್ ಐಕಾನ್' ಎಂಬ ಬಿರುದು ಸಿಗಲಿದೆ. ಸಾರಾ ತೆಂಡೂಲ್ಕರ್ ಅವರ ಈ ಹೊಸ ಹೆಜ್ಜೆ ಇ-ಸ್ಪೋರ್ಟ್ಸ್ ಜಗತ್ತಿನಲ್ಲಿ ಕ್ರಿಕೆಟ್‌ಗೆ ಹೊಸ ಆಯಾಮ ತರುತ್ತದೆ ಎಂದು ಭಾವಿಸಲಾಗಿದೆ.

ರಘುವಂಶಿ, ವೆಂಕಟೇಶ್ ಅಯ್ಯರ್ ಅರ್ಧಶತಕ, ! ಹೈದರಾಬಾದ್‌ಗೆ 80 ರನ್‌ಗಳ ಸೋಲು

ಕೆಕೆಆರ್ ಎದುರು ಮಂಕಾದ ಸನ್

ಕೋಲ್ಕತ್ತಾ: ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಐಪಿಎಲ್ 2025ರ 15ನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಸುಲಭದ ಗೆಲುವು ಸಾಧಿಸಿದೆ.

ಕೆಕೆಆರ್ ನೀಡಿದ 201 ರನ್‌ಗಳ ಬೃಹತ್ ಗುರಿ ಬೆಂಬತ್ತಿದ ಎಸ್‌ಆರ್‌ಎಚ್ 120 ರನ್‌ಗಳಿಗೆ ತನ್ನ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಆರಂಭದಲ್ಲೇ ಟ್ರಾವಿಸ್ ಹೆಡ್ (4), ಅಭಿಶೇಕ್ ಶರ್ಮಾ (2) ಇಶಾನ್ ಕಿಶನ್ (2) ಮತ್ತು ನಿತೀಶ್ ಕುಮಾರ್ ರೆಡ್ಡಿ (19) ಅವರ ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿತು. ಕೆಕೆಆರ್ ಪರ ವೈಭವ್ ಅರೋರಾ ಮತ್ತು ವರುಣ್ ಚಕ್ರವರ್ತಿ ಅದ್ಭುತ ದಾಳಿ ಸಂಘಟಿಸಿ ತಲಾ ವಿಕೆಟ್ ಪಡೆದರು. ಎಸ್‌ಆರ್‌ಎಚ್ ಪರ ಕಮಿಂದು ಮೆಂಡಿಸ್ (27) ಮತ್ತು ಹೆನ್ರಿಕ್ ಕ್ಲಾಸೆನ್ (33) ಸ್ವಲ್ಪ ಮಟ್ಟಿಗೆ ಪ್ರತಿರೋಧ ತೋರಿದ್ದು ಬಿಟ್ಟರೆ ಉಳಿದವರಿಂದ ಉಪಯುಕ್ತ ಆಟ ಬರಲಿಲ್ಲ. ಕೊನೆಯಲ್ಲಿ ಅಭಿಷೇಕ್ ವರ್ಮಾ (6), ಪ್ಯಾಟ್ ಕಮಿನ್ಸ್(14) ಹರ್ಷಲ್ ಪಟೇಲ್ (3) ರನ್ ಗಳಿಸಲಷ್ಟೇ ಶಕ್ತರಾದರು. ಶಮಿ 2 ರನ್ ಗಳಿಸಿ ಔಟಾಗದೇ ಉಳಿದರು.

ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್, ವೆಂಕಟೇಶ್ ಅಯ್ಯರ್ ಮತ್ತು ಅಂಗ್‌ಕ್ರಿಶ್ ರಘುವಂಶಿ ಅವರ ಅರ್ಧಶತಕಗಳ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 200 ರನ್ ಗಳಿಸಿತು. ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಆರಂಭಿಕರನ್ನು ಅಲ್ಪಮೊತ್ತಕ್ಕೆ ವಿಕೆಟ್ ಕಳೆದುಕೊಂಡರೂ 200ರ ಗಡಿ ದಾಟುವಲ್ಲಿ ಕೆಕೆಆರ್ ಯಶಸ್ವಿಯಾಗಿದೆ.

ಟಾಸ್ ಸೋತು ಇನ್ನಿಂಗ್ಸ್ ಆರಂಭಿಸಿದ ಕೆಕೆಆರ್ ಆರಂಭಿಕ ಆಟಗಾರ ಡಿ ಕಾಕ್ ಒಂದು ರನ್ ಗಳಿಸಿದ್ದಾಗ ಕಮ್ಮಿನ್ಸ್ ಎಸೆತದಲ್ಲಿ ಜಿಶಾನ್ ಅನ್ಸಾರಿಗೆ ಕ್ಯಾಚ್ ನೀಡಿ ಔಟಾದರು. ಸುನೀಲ್ ನರೈನ್ ಕೇವಲ 7 ರನ್ ಗಳಿಸಿದ್ದಾಗ ಶಮಿ ಎಸೆತದಲ್ಲಿ ವಿಕೆಟ್ ಹಿಂದೆ ಕ್ಯಾಚ್ ನೀಡಿ ಔಟಾದರು. ನಾಯಕ ರಹಾನೆ 27 ಎಸೆತಗಳಲ್ಲಿ 38 ರನ್ ಗಳಿಸಿ ಇನ್ನಿಂಗ್ಸ್‌ಗೆ ಚೇತರಿಕೆ ನೀಡಿದರು. ಆದರೆ ಅಂಗ್



ಕ್ರಿಶ್ ರಘುವಂಶಿ 32 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಸಹಿತ 50 ರನ್ ಗಳಿಸುವ ಮೂಲಕ ತಂಡವನ್ನು ಆರಂಭಿಕ ಆಘಾತದಿಂದ ಚೇತರಿಕೆ ನೀಡಿದಲ್ಲದೆ, ದೊಡ್ಡ ಮೊತ್ತಕ್ಕೂ ಬುನಾದಿ ಹಾಕಿದರು.

ನಂತರ ವೆಂಕಟೇಶ್ ಅಯ್ಯರ್ ಮತ್ತು ರಿಂಕು ಸಿಂಗ್ ಕೊನೆಯವರೆಗೂ ಎಚ್ಚರಿಕೆಯಿಂದ ಆಡಿ,ತಂಡದ ಮೊತ್ತವನ್ನ 200ಕ್ಕೆ ಏರಿಸಿದರು. ವೆಂಕಟೇಶ್ ಅಯ್ಯರ್ ಒಟ್ಟಾರೆ 29 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಹಿತ 60 ರನ್ ಗಳಿಸಿ ಔಟಾದರು. ರಿಂಕು ಸಿಂಗ್ 17 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 32 ರನ್ ಗಳಿಸಿದರು. ಎಸ್‌ಆರ್‌ಎಚ್ ಪರ ಮೊಹಮ್ಮದ್ ಶಮಿ, ಪ್ಯಾಟ್ ಕಮ್ಮಿನ್ಸ್, ಜಿಶಾನ್ ಅನ್ಸಾರಿ, ಹರ್ಷಲ್ ಪಟೇಲ್, ಕಮಿಂದು ಮೆಂಡಿಸ್ ತಲಾ ಒಂದು ವಿಕೆಟ್ ಪಡೆದರು.

ಟೆನಿಸ್ ಟೂರ್ನಿ: ಭಾರತೀಯರ ಪಾರಮ್ಯ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ರಾಘವ್ 2-6, 6-3, 6-4ರಿಂದ ಇಟಲಿಯ ಆಟಗಾರನನ್ನು ಸೋಲಿಸಿದರು. 27 ವರ್ಷ ವಯಸ್ಸಿನ ರಾಘವ್, ಕ್ವಾಲಿಫೈಯರ್ ಹಂತದಲ್ಲಿ ಎರಡು ಪಂದ್ಯಗಳನ್ನು ಗೆದ್ದು ಮುಖ್ಯಸುತ್ತು ಪ್ರವೇಶಿಸಿದ್ದರು.

ಅಗ್ರ ಶ್ರೇಯಾಂಕದ ಬ್ರಿಟನ್‌ನ ಜೇ ಕ್ಲಾರ್ಕ್ 6-4, 4-6, 7-6 (2)ರಿಂದ ಭಾರತದ ಕಬೀರ್ ಹನ್ಸ್ ಅವರನ್ನು ಹಿಮ್ಮೆಟ್ಟಿಸಿದರು. ಎರಡನೇ ಶ್ರೇಯಾಂಕದ ಆಲಿವರ್ ಕ್ರಾಫರ್ಡ್ (ಬ್ರಿಟನ್) 4-6, 7-6 (2), 7-5ರಿಂದ ಆಸ್ಟ್ರೇಲಿಯಾದ ಕೋಡೆ ಆ್ಯಂಡರ್ಸನ್ ಅವರನ್ನು ಸೋಲಿಸಿದರು.

ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಬಿಂದಾ ಮೊದಲ ಸುತ್ತಿನಲ್ಲೇ ನಿರಾಸೆ ಮೂಡಿಸಿದರು. ಶ್ರೇಯಾಂಕರಹಿತ ಭಾರತದ ಆಟಗಾರ ರಾಘವ್ ಜೈಸಿಂಘನಿ 2-6, 6-3, 6-4ರಿಂದ ಇಟಲಿಯ ಆಟಗಾರನಿಗೆ ಆಘಾತ ನೀಡಿದರು. ಮೈಸೂರಿನ ಎಸ್.ಡಿ. ಪ್ರಜ್ವಲ್ ದೇವ್ 6-4, 6-4ರಿಂದ ಕೃಷ್ ತ್ಯಾಗಿ ವಿರುದ್ಧ, ಕರಣ್ ಸಿಂಗ್ 6-1, 7-5ರಿಂದ ಆದಿಲ್ ಕಲ್ಯಾಣಪುರ

ವಿರುದ್ಧ; ಮನೀಷ್ ಸುರೇಶ್‌ಕುಮಾರ್ 6-2, 7-6 (2)ರಿಂದ ಯುವನ್ ನಂದಲ್ ವಿರುದ್ಧ; ಇಶಾಕ್ ಇಕ್ಬಾಲ್ 6-2, 6-1ರಿಂದ ಮಾನ್ ಕೇಶರ್ವಾನಿ ವಿರುದ್ಧ ಮತ್ತು ಆರ್ಯನ್ ಶಾ 6-2, 3-6, 6-3ರಿಂದ ನಿತಿನ್ ಕುಮಾರ್ ವಿರುದ್ಧ ಗೆಲುವು ಸಾಧಿಸಿದರು.

ಇಂದು ಮುಂಬೈಇಂಡಿಯನ್ಸ್‌ಗೆ ಲಖನೌ ಸೂಪರ್ ಜಯಂಟ್ಸ್ ಸವಾಲು

ಮುಂಬೈ-ಲಖನೌಗೆ 2ನೇ ಗೆಲುವಿನ ತುಡಿತ

ಲಖನೌ: ಪ್ರಸ್ತುತ ನಡೆಯುತ್ತಿರುವ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಎರಡನೇ ಗೆಲುವಿನ ನಿರೀಕ್ಷೆಯಲ್ಲಿರುವ ಮುಂಬೈ ಇಂಡಿಯನ್ ಹಾಗೂ ಲಖನೌ ಸೂಪರ್ ಜಯಂಟ್ಸ್ ತಂಡಗಳು ಏಪ್ರಿಲ್ 4 ರಂದು ಇಲ್ಲಿನ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಟೂರ್ನಿಯ 16ನೇ ಪಂದ್ಯದಲ್ಲಿ ಕಾದಾಟ ನಡೆಸಲಿವೆ. ಈ ಎರಡೂ ತಂಡಗಳು ಇಲ್ಲಿಯವರೆಗೂ ಆಡಿದ ಮೂರು ಪ್ರತ್ಯೇಕ ಪಂದ್ಯಗಳಲ್ಲಿ ತಲಾ ಒಂದೊಂದು ಪಂದ್ಯವನ್ನು ಗೆದ್ದು, ಇನ್ನುಳಿದ ಎರಡರಲ್ಲಿ ಸೋಲು ಅನುಭವಿಸಿವೆ. ಹಾಗಾಗಿ ಇದೀಗ ಎರಡನೇ ಗೆಲುವನ್ನು ತನ್ನದಾಗಿಸಿಕೊಳ್ಳಲು ಉಭ ಯ ತಂಡಗಳು ಎದುರು ನೋಡುತ್ತಿವೆ.

ಟೂರ್ನಿಯಲ್ಲಿ ತನ್ನ ಆರಂಭಿಕ ಎರಡು ಪಂದ್ಯಗಳನ್ನು ಸೋತಿದ್ದ ಐದು ಬಾರಿ ಚಾಂಪಿಯನ್ಸ್ ಮುಂಬೈ ಇಂಡಿಯನ್ಸ್, ಕೊನೆಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ ಗೆಲುವು ಪಡೆದಿತ್ತು. ಇನ್ನು ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್ ಜಯಂಟ್ಸ್ ತಂಡ ತವರಿನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸೋಲು ಅನುಭವಿಸಿತ್ತು. ಇದೀಗ ತವರು ಅಂಗಣದಲ್ಲಿ ಮುಂಬೈ ಎದುರು ಶಕ್ತಿಯುತವಾಗಿ ಮರಳಲು ರಣನೀತಿ ಹೆಣೆದಿದೆ.

ಕೆಕೆಆರ್ ವಿರುದ್ಧ ಮುಂಬೈ ಇಂಡಿಯನ್ಸ್ ಸಂಘಟಿತ ಪ್ರದರ್ಶನವನ್ನು ತೋರಿತ್ತು. ಅದರಲ್ಲಿಯೂ ವಿಶೇಷವಾಗಿ ಮುಂಬೈ ವೇಗಿ ಅಶ್ವನಿ ಕುಮಾರ್ ಚೊಚ್ಚಲ ಪಂದ್ಯದಲ್ಲಿ ಮಾರಕ ದಾಳಿ ನಡೆಸಿ 24 ರನ್ ನೀಡಿ 4 ವಿಕೆಟ್‌ಗಳನ್ನು ಕಬಳಿಸಿದ್ದರು. ಆ ಮೂಲಕ ಮೊದಲು ಬ್ಯಾಟ್ ಮಾಡಿದ್ದ ಕೋಲ್ಕತಾವನ್ನು 116 ರನ್‌ಗಳಿಗೆ ಆಲ್‌ಔಟ್ ಮಾಡಲು ಕಾರಣರಾಗಿದ್ದರು. ಬಳಿಕ ಸಾಧಾರಣ ಗುರಿಯನ್ನು ಹಿಂಬಾಲಿಸಿದ್ದ ಮುಂಬೈ ಇಂಡಿಯನ್ಸ್, ಕೇವಲ 12.2 ಓವರ್‌ಗಳಿಗೆ ಗೆದ್ದು ಬೀಗಿತ್ತು. ಮುಂಬೈ ಪರ ಸ್ಫೋಟಕ ಬ್ಯಾಟ್ ಮಾಡಿದ್ದ ರಿಯಾನ್ ರಿಕೆಲ್ಟನ್ 41 ಎಸೆತಗಳಲ್ಲಿ 62 ರನ್‌ಗಳನ್ನು ಸಿಡಿಸಿದ್ದರು. ಇದರೊಂದಿಗೆ ಹಾರ್ದಿಕ್ ಪಾಂಡ್ಯ ಪಡೆ ಪ್ರಸಕ್ತ ಟೂರ್ನಿಯಲ್ಲಿ ಮೊದಲ ಗೆಲುವನ್ನು ತನ್ನದಾಗಿಸಿಕೊಂಡಿತ್ತು.

ಇನ್ನು ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್ ಜಯಂಟ್ಸ್ ತಂಡ ತವರು ಅಂಗಣದ ತನ್ನ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳಿಂದ ಸೋಲು ಅನುಭವಿಸಿತ್ತು. ಈ ಪಂದ್ಯದಲ್ಲಿ ಪಂಜಾಬ್ ತಂಡ, ಎಲ್ಲಾ ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನವನ್ನು ತೋರಿತ್ತು. ಈ ಹಿನ್ನೆಲೆಯಲ್ಲಿ ಲಖನೌ ಸೋಲು ಅನುಭವಿಸಬೇಕಾಯಿತು. ಲಖನೌಗೆ ನಿಕೋಲಸ್ ಪೂರನ್ ಪ್ರಮುಖ ಬ್ಯಾಟ್ಸ್‌ಮನ್ ಆಗಿದ್ದು, ಈ ತನಕ 189 ರನ್‌ಗಳ ಮೂಲಕ ಆರೆಂಜ್ ಕ್ಯಾಪ್ ತನ್ನಲ್ಲಿಯೇ ಉಳಿಸಿಕೊಂಡಿದ್ದಾರೆ.

ಪಿಚ್ ರಿಪೋರ್ಟ್: ಮುಂಬೈ ಇಂಡಿಯನ್ಸ್ ಹಾಗೂ ಲಖನೌ ಸೂಪರ್ ಜಯಂಟ್ಸ್ ನಡುವಣ ಪಂದ್ಯ ನಡೆಯುವ ಲಖನೌದ ಏಕನಾ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಸಮತೋಲನದಿಂದ ಕೂಡಿದೆ. ಲಖನೌ ಹಾಗೂ ಪಂಜಾಬ್ ಕಳೆದ ಪಂದ್ಯವನ್ನು ಆಡಿದ್ದು ಕೂಡ ಇದೇ ಅಂಗಣದಲ್ಲಿ, ಹಾಗಾಗಿ ಇಲ್ಲಿ 170 ರನ್‌ಗಳು ಸರಾಸರಿ ಮೊತ್ತವಾಗಿದೆ. ಈ ಎರಡೂ ತಂಡಗಳಲ್ಲಿ ಬ್ಯಾಟಿಂಗ್ ವಿಭಾಗ ಅತ್ಯಂತ ಬಲಿಷ್ಠವಾಗಿರುವ ಕಾರಣ 200ರ ಮೇಲಿನ ಮೊತ್ತ ನಿರೀಕ್ಷೆ ಮಾಡಬಹುದಾಗಿದೆ. ಟಾಸ್ ಗೆದ್ದ ತಂಡ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಳ್ಳುವ ನಿರೀಕ್ಷೆ ಇದೆ. ಎರಡನೇ ಇನಿಂಗ್ಸ್‌ನಲ್ಲಿ ಪಿಚ್ ಬ್ಯಾಟಿಂಗ್‌ಗೆ ಅನುಕೂಲವಾಗಲಿದೆ.

ಇತ್ತಂಡಗಳ ಸಂಭಾವ್ಯ ಪ್ಲೇಯಿಂಗ್ ಇಲೆವೆನ್

ಲಖನೌ ಸೂಪರ್ ಜಯಂಟ್ಸ್: ಮಿಚೆಲ್ ಮಾರ್ಷ್, ಏಡೆನ್ ಮಾರ್ಕ್ರಮ್, ನಿಕೋಲಸ್ ಪೂರನ್, ರಿಷಭ್ ಪಂತ್ (ನಾಯಕ, ವಿ.ಕೀ), ಆಯುಷ್ ಬದೋನಿ, ಡೇವಿಡ್ ಮಿಲ್ಲರ್, ಅಬ್ದುಲ್ ಸಮದ್, ದಿಗ್ವೇಶ್ ರಾಠಿ, ಶಾರ್ದುಲ್ ಠಾಕೂರ್, ಆವೇಶ್ ಖಾನ್, ರವಿ ಬಿಷ್ಣೋಯ್

ಇಂಪ್ಯಾಕ್ಟ್ ಪ್ಲೇಯರ್: ಪ್ರಿನ್ಸ್ ಯಾದವ್

ಮುಂಬೈ ಇಂಡಿಯನ್ಸ್: ರೋಹಿತ್ ಶರ್ಮಾ (ವಿ.ಕೀ), ವಿಲ್ ಜ್ಯಾಕ್ಸ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ (ನಾಯಕ), ನಮನ್ ಧಿರ್, ಮಿಚೆಲ್ ಸ್ಯಾಂಟ್ನರ್, ದೀಪಕ್ ಚಹರ್, ಟ್ರೆಂಟ್ ಬೌಲ್ಟ್, ಅಶ್ವನಿ ಕುಮಾರ್

ಇಂಪ್ಯಾಕ್ಟ್ ಪ್ಲೇಯರ್: ವಿಘ್ನೇಶ್ ಪುತ್ತೂರು

ಪಂದ್ಯದ ವಿವರ

ಐಪಿಎಲ್ 2025, 16ನೇ ಪಂದ್ಯ
ಮುಂಬೈ ಇಂಡಿಯನ್ಸ್ ವರ್ಸಸ್ ಲಖನೌ ಸೂಪರ್ ಜಯಂಟ್ಸ್
ದಿನಾಂಕ: ಏಪ್ರಿಲ್ 4, 2025
ಸಮಯ: ಸಂಜೆ 07:30
ಸ್ಥಳ: ಏಕನಾ ಕ್ರಿಕೆಟ್ ಕ್ರೀಡಾಂಗಣ, ಲಖನೌ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್‌ಸ್ಟ್ರೀಮಿಂಗ್: ಡಿಸ್ನಿ ಹಾಟ್‌ಸ್ಟಾರ್

ಮುಂಬೈ-ಲಖನೌ ಮುಖಾಮುಖಿ ದಾಖಲೆ

ಐಪಿಎಲ್ ಟೂರ್ನಿಯ ಇತಿಹಾಸದಲ್ಲಿ ಲಖನೌ ಸೂಪರ್ ಜಯಂಟ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಆರು ಬಾರಿ ಕಾದಾಟ ನಡೆಸಿವೆ. ಇದರಲ್ಲಿ ಎಲ್‌ಎಸ್‌ಜಿ ಐದು ಬಾರಿ ಗೆಲುವು ಪಡೆದಿದೆ. ಮುಂಬೈ ಕೇವಲ ಒಂದು ಬಾರಿ ಗೆದ್ದಿದೆ. 2024ರ ಐಪಿಎಲ್ ಟೂರ್ನಿಯ ಕೊನೆಯ ಮುಖಾಮುಖಿಯಲ್ಲಿ ಮುಂಬೈ ಎದುರು ಲಖನೌ ತಂಡ 18 ರನ್‌ಗಳಿಂದ ಗೆಲುವು ಪಡೆದಿತ್ತು.

ಫುಟ್‌ಬಾಲ್: ಇಂಡಿಯನ್ ಸೂಪರ್ ಲೀಗ್ ಫೈನಲ್ ಸನಿಹಕ್ಕೆ ಛೆಟ್ರಿ ಪಡೆ

ಗೋವಾ ಎದುರು ಬಿಎಫ್‌ಸಿ ಜಯಭೇರಿ

ಬೆಂಗಳೂರು: ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಬುಧವಾರ ಇಂಡಿಯನ್ ಸೂಪರ್ ಲೀಗ್‌ನ ಸೆಮಿಫೈನಲ್‌ನ ಮೊದಲ ಲೆಗ್‌ನ ಪಂದ್ಯದಲ್ಲಿ 2-0 ಗೋಲುಗಳಿಂದ ಗೋವಾ ಎಫ್‌ಸಿ ತಂಡವನ್ನು ಮಣಿಸಿತು.

ಐಪಿಎಲ್ ಹವಾದ ನಡುವೆಯೂ ಕಂಠೀರವ ಕ್ರೀಡಾಂಗಣದಲ್ಲಿ ನೆರೆದ ಸಾವಿರಾರು ಅಭಿಮಾನಿಗಳ ಮುಂದೆ ಸಾಂಘಿಕ ಆಟ ಪ್ರದರ್ಶಿಸಿದ ಅತಿಥೇಯ ತಂಡವು ಫೈನಲ್‌ಗೆ ಮತ್ತಷ್ಟು ಹತ್ತಿರವಾಯಿತು. ಸುನಿಲ್ ಚೆಟ್ರಿ ಬಳಗವು ಇದೇ ತಂಡದ ವಿರುದ್ಧ ಶನಿವಾರ ಗೋವಾದಲ್ಲಿ ರಿವರ್ಸ್ ಲೆಗ್ ಪಂದ್ಯವನ್ನು ಆಡಲಿದೆ.

ಇದೇ ಕ್ರೀಡಾಂಗಣದಲ್ಲಿ ವಾರದ ಹಿಂದೆ ಪ್ಲೇ ಆಫ್ ಪಂದ್ಯದಲ್ಲಿ 5-0 ಗೋಲುಗಳಿಂದ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಣಿಸಿದ್ದ ಬೆಂಗಳೂರು ತಂಡವು ಅದೇ ಆತ್ಮವಿಶ್ವಾಸದಲ್ಲಿ ಆಡಲಿಳಿಯಿತು. ಆರಂಭದಲ್ಲಿ ಉಭಯ ತಂಡಗಳ ನಡುವೆ ಸಮಬಲದ ಹೋರಾಟ ಕಂಡುಬಂತು. 42ನೇ ನಿಮಿಷದಲ್ಲಿ ಗೋವಾ ತಂಡದ ಸಂದೇಶ್ ಜಿಂಗನ್ 'ಉಡುಗೊರೆ' ಗೋಲು ನೀಡಿದ್ದರಿಂದ ವಿರಾಮದ ವೇಳೆಗೆ ಬೆಂಗಳೂರು ತಂಡಕ್ಕೆ 1-0 ಮುನ್ನಡೆ ಲಭಿಸಿತು.

ಉತ್ತರಾರ್ಧದಲ್ಲಿ ಎರಡೂ ತಂಡಗಳ ಆಟಗಾರರು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು. 51ನೇ ನಿಮಿಷದಲ್ಲಿ ಸ್ಪೇನ್‌ನ ಎಡ್ಮಂಡ್ ಮೆಂಡೇಜ್ ಅವರು ಗೋವಾ ತಂಡದ ರಕ್ಷಣಾ ವ್ಯೂಹವನ್ನು ಭೇದಿಸಿ ಚೆಂಡನ್ನು ಅಮೋಘವಾಗಿ ಗುರಿ ಸೇರಿಸಿದರು. ಹೀಗಾಗಿ ಆತಿಥೇಯ ತಂಡಕ್ಕೆ 2-0 ಮುನ್ನಡೆ ಲಭಿಸಿತು. ಅದೇ ಅಂತರವನ್ನು ಕೊನೆಯವರೆಗೆ ಕಾಯ್ದುಕೊಳ್ಳುವಲ್ಲಿ ಬೆಂಗಳೂರು ತಂಡದ ಆಟಗಾರರು ಯಶಸ್ವಿಯಾದರು. ಉಭಯ ತಂಡಗಳ ತಲಾ ಒಬ್ಬರು ಆಟಗಾರರಿಗೆ ಹಳದಿ ಕಾರ್ಡ್‌ನ ದರ್ಶನವಾಯಿತು.

ಮೋಹನ್ ಬಾಗನ್‌ಗೆ ಜಮ್‌ಶೆಡ್‌ಪುರ ಸವಾಲು

ಅತಿಥೇಯ ಜಮ್‌ಶೆಡ್‌ಪುರ ತಂಡವು ಇಂಡಿಯನ್ ಸೂಪರ್ ಲೀಗ್‌ನ ಮತ್ತೊಂದು ಸೆಮಿಫೈನಲ್‌ನ ಮೊದಲ ಲೆಗ್‌ನ ಪಂದ್ಯದಲ್ಲಿ ಪ್ರಬಲ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವನ್ನು ಗುರುವಾರ ಎದುರಿಸಲಿದೆ. ಈ ಎರಡು ತಂಡಗಳು ಪ್ಲೇ ಆಫ್‌ನಲ್ಲಿ ಇದೇ ಮೊದಲ ಬಾರಿಗೆ ಮುಖಾಮುಖಿಯಾಗುತ್ತಿವೆ. ಮೋಹನ್ ಬಾಗನ್ ತಂಡವು ಲೀಗ್ ಹಂತದಲ್ಲಿ ಅಗ್ರಸ್ಥಾನದೊಂದಿಗೆ ಐಎಲ್ ಲೀಗ್ ಶೀಲ್ಡ್ ಗೆದ್ದು, ನೇರವಾಗಿ ಸೆಮಿಫೈನಲ್‌ನ ಪ್ರವೇಶಿಸಿದೆ. ಲೀಗ್ ಹಂತದಲ್ಲಿ ಐದನೇ ಸ್ಥಾನ ಪಡೆದಿದ್ದ ಜಮ್‌ಶೆಡ್‌ಪುರ ಪ್ಲೇ ಆಫ್ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ತಂಡವನ್ನು 2-0 ಗೋಲುಗಳಿಂದ ಮಣಿಸಿ ಸೆಮಿಫೈನಲ್ ತಲುಪಿದೆ. ಇದೇ ತಂಡಗಳ ನಡುವೆ ರಿವರ್ಸ್ ಲೆಗ್ ಪಂದ್ಯ ಇದೇ 7 ರಂದು ಕೋಲ್ಕತ್ತ ದಲ್ಲಿ ನಡೆಯಲಿದೆ. 12ರಂದು ಫೈನಲ್ ಪಂದ್ಯ ನಡೆಯಲಿದೆ.

ಆಡಲು ಬಿಡಿ: ಗೋಯೆಂಕಾಗೆ ಮದನ್‌ಲಾಲ್ ಸಲಹೆ

ದೆಹಲಿ: ಫ್ರಾಂಚೈಸಿಗಳ ಮಾಲೀಕರು ಮೈದಾನದಲ್ಲಿ ಪ್ರತಿಪಂದ್ಯವನ್ನೂ ಖುದ್ದಾಗಿ ವೀಕ್ಷಿಸಿ ಸಲಹೆ ಸೂಚನೆಗಳನ್ನು ನೀಡುವುದು ಒಳ್ಳೆಯದೇ. ಆದರೆ ಅದು ಆಟಗಾರರನ್ನು ಮುಜುಗರಕ್ಕೀಡು ಮಾಡಬಾರದು ಅಷ್ಟೇ. ಆದರೆ ಲಖನೌ ಸೂಪರ್ ಜೈಂಟ್ಸ್ ಸಂಜೀವ ಗೋಯೆಂಕಾ ಅವರ ನಡೆ ಪ್ರತಿ ಪಂದ್ಯದಲ್ಲೂ ಚರ್ಚೆಯಾಗುತ್ತಿದೆ.

ಈ ಹಿಂದೆ ಕರ್ನಾಟಕದ ಕೆಎಲ್ ರಾಹುಲ್ ಅವರನ್ನು ಹೇಗೆ ನಡೆಸಿಕೊಳ್ಳಲಾಯಿತೋ ಅದೇ ರೀತಿ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಪಂತ್ ಅವರಿಗೂ ಅನುಭವ ಆಗುತ್ತಿದೆ ಎನ್ನಲಾಗಿದೆ. ಜಾಲತಾಣದಲ್ಲಿ ಈ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. 1983ರ ವಿಶ್ವಕಪ್ ವಿಜೇತ ತಂಡದ ಸದಸ್ಯರಾಗಿರುವ ಮಾಜಿ ಮಧ್ಯಮ ವೇಗದ ಬೌಲರ್ ಮದನ್ ಲಾಲ್ ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರತಿಕ್ರಿಯೆ ನೀಡಿದ್ದು, ''ರಿಷಬ್ ಮತ್ತು ಸಂಜೀವ್ ಗೋಯೆಂಕಾ ನಡುವಿನ ಚರ್ಚೆ ಏನೆಂದು ನನಗೆ ತಿಳಿದಿಲ್ಲ. ತಂಡದೊಳಗೆ ಇವೆಲ್ಲವೂ ನಡೆಯುವುದು ಸಾಮಾನ್ಯ. ಹುಡುಗರು ಆಟವನ್ನು ಆನಂದಿಸಲಿ, ಅವರು ಮುಕ್ತವಾಗಿ ಆಡಲಿ. 20/20 ಕ್ರಿಕೆಟ್ ತುಂಬಾ ಅನಿರೀಕ್ಷಿತ.'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಫಿಟ್ನೆಸ್ ಟೆಸ್ಟ್ ಪಾಸ್, ಪಂಜಾಬ್ ವಿರುದ್ಧ ಪಂದ್ಯಕ್ಕೆ ನಾಯಕ

ನಾಯಕತ್ವ ವಹಿಸಲು ಸಂಜು ಸ್ಯಾಮ್ಸನ್ ರೆಡಿ

ಬೆಂಗಳೂರು: ರಾಜಸ್ಥಾನ ರಾಯಲ್ಸ್ ತಂಡದಲ್ಲಿದ್ದರೂ ಈ ತನಕ ನಾಯಕತ್ವ ವಹಿಸಿಕೊಳ್ಳದ ಸಂಜು ಸ್ಯಾಮ್ಸನ್ ಗಾಯದ ಸಮಸ್ಯೆಯಿಂದ ಚೇತರಿಸಿಕೊಂಡು ತಂಡವನ್ನು ಮುನ್ನಡೆಸಲು ಸಜ್ಜಾಗಿದ್ದಾರೆ.

ಕೈಬೆರಳಿನ ಗಾಯದಿಂದ ಸಂಪೂರ್ಣ ಗುಣಮುಖರಾಗಿರುವ ಸ್ಯಾಮ್ಸನ್ ಮುಂದಿನ ಪಂದ್ಯಗಳಲ್ಲಿ ಬ್ಯಾಟಿಂಗ್‌ನೊಂದಿಗೆ ವಿಕೆಟ್ ಹಿಂದುಗಡೆ ಸಹ ಕಾರ್ಯ ನಿರ್ವಹಿಸಬಹುದು ಎಂದು ಬೆಂಗಳೂರಿನಲ್ಲಿನಲ್ಲಿರುವ ಸೆಂಟರ್ ಆಫ್ ಎಕ್ಸಲೆನ್ಸ್ ಹಸಿರು ನಿಶಾನೆ ತೋರಿದೆ. ಚೆನ್ನೈ ವಿರುದ್ಧದ ಪಂದ್ಯ ಮುಗಿದ ಬಳಿಕ ಬೆಂಗಳೂರಿನ ಕೇಂದ್ರದಲ್ಲಿ ಫಿಟ್ನೆಸ್ ಟೆಸ್ಟ್‌ಗೆ ಒಳಗಾಗಿರುವ ಅವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಇದರಿಂದ ಹಂಗಾಮಿ ನಾಯಕ ರಿಯಾನ್ ಪರಾಗ್ ನಾಯಕತ್ವದಿಂದ ಮುಕ್ತರಾಗಲಿದ್ದಾರೆ. ಈವರೆಗೆ ವಿಕೆಟ್ ಕೀಪಿಂಗ್ ಕಾರ್ಯ ನಿರ್ವಹಿಸುತ್ತಿದ್ದ ಧ್ರುವ ಜ್ಯುರೆಲ್ ಅವರ ಸ್ಥಾನದ ಬಗ್ಗೆ ಇನ್ನೂ ಯಾವುದೇ ಮಾಹಿತಿ ದೊರಕಿಲ್ಲ.

ಏನಾಗಿತ್ತು?: ಐಸಿಸಿ ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಪ್ರವಾಸಿ ಇಂಗ್ಲೆಂಡ್ ವಿರುದ್ಧ ನಡೆದ 5ನೇ ಟಿ20 ಪಂದ್ಯದಲ್ಲಿ ಸ್ಯಾಮ್ಸನ್ ಕೈಬೆರಳಿಗೆ ಗಾಯವಾಗಿತ್ತು. ಈ ಹಿನ್ನೆಲೆಯಲ್ಲಿ ಶಸ್ತ್ರಚಿಕಿತ್ಸೆಯನ್ನೂ ನಡೆಸಲಾಗಿತ್ತು. ಒಂದು

ತಿಂಗಳಲ್ಲಿ ಸಂಜು ಅವರು ಗುಣಮುಖರಾದರೂ ವೈದ್ಯರು ಅವರಿಗೆ ಕೀಪಿಂಗ್ ನಡೆಸಲು ಅನುಮತಿ ನೀಡಿರಲಿಲ್ಲ. ಕೇವಲ ಬ್ಯಾಟಿಂಗ್ ಮಾತ್ರ ನಡೆಸಬಹುದು ಎಂಬ ಸೂಚನೆಯನ್ನು ನೀಡಿದ್ದರು. ಈ ವೇಳೆ ತಂಡದ ಮ್ಯಾನೇಜ್ ಮೆಂಟ್ ರಿಯಾನ್ ಪರಾಗ್ ಅವರಿಗೆ ನಾಯಕತ್ವದ ಜವಾಬ್ದಾರಿಯನ್ನು ನೀಡಿ ಸಂಜು ಸ್ಯಾಮ್ಸನ್ ಅವರನ್ನು ಕೇವಲ ಬ್ಯಾಟರ್ ಆಗಿ ತಂಡದಲ್ಲಿ ಇರಿಸಿಕೊಳ್ಳಲಾಯಿತು. ಧ್ರುವ ಜ್ಯುರೆಲ್ ಅವರು ವಿಕೆಟ್ ಕೀಪರ್ ಕಾರ್ಯವನ್ನು ನಿರ್ವಹಿಸಿದರು.

ಸ್ಯಾಮ್ಸನ್ ಸನ್‌ರೈಸರ್ಸ್ ವಿರುದ್ಧ ನಡೆದ ಪಂದ್ಯದಲ್ಲಿ 66, ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ 13 ಮತ್ತು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 20 ರನ್ ಗಳಿಸಿದ್ದರು. ರಾಜಸ್ಥಾನ ರಾಯಲ್ಸ್ ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಪರಾಭವಗೊಂಡು ಮೂರನೇ ಪಂದ್ಯವನ್ನು ಜಯಿಸಿದೆ.

ವಿಶ್ವ ಬಾಕ್ಸಿಂಗ್: ಮೂವರು ಸೆಮಿಗೆ

ದೆಹಲಿ: ಭಾರತದ ಮನೀಷ್ ರಾಥೋಡ್, ಹಿತೇಶ್ ಮತ್ತು ಅಭಿನಾಶ್ ಜಾಮವಾಲ್ ಅವರು ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಕಪ್ ಟೂರ್ನಿಯ ತಮ್ಮ ತಮ್ಮ ತೂಕ ವಿಭಾಗಗಳಲ್ಲಿ ಸೆಮಿಫೈನಲ್ ತಲುಪಿದ್ದಾರೆ.

ಜಾಮವಾಲ್ 65 ಕೆ.ಜಿ. ವಿಭಾಗದಲ್ಲಿ ಸರ್ವಾನುಮತದ ತೀರ್ಪಿನಲ್ಲಿ ಜರ್ಮನಿಯ ಡೆನಿಸ್ ಬ್ರಿಲ್ ಅವರನ್ನು ಮಣಿಸಿದರೆ, ಹಿತೇಶ್ 70 ಕೆ.ಜಿ. ವಿಭಾಗದಲ್ಲಿ ಇಟಲಿಯ ಗೇಬ್ರಿಯಲ್ ಗಿಡಿ ರೊಂಟಾನಿ ಅವರನ್ನು ಸೋಲಿಸಿದರು.

55 ಕೆ.ಜಿ. ವಿಭಾಗದಲ್ಲಿ ರಾಥೋಡ್ ಭಿನ್ನತೀರ್ಪಿನ ಆಧಾರದಲ್ಲಿ ಪ್ಯಾರಿಸ್ ಒಲಿಂಪಿಯನ್, ಆಸ್ಟ್ರೇಲಿಯಾದ ಯೂಸುಫ್ ಚೊಥಿಯಾ ಅವರನ್ನು ಸೋಲಿಸಿದರು. ಮೂರನೇ ಸುತ್ತಿನವರೆಗೂ ತೀವ್ರ ಹಣಾಹಣೆ ಕಂಡುಬಂತು. ಮೂವರು ತೀರ್ಪುಗಾರರು ರಾಥೋಡ್ ಪರ ತೀರ್ಪು ನೀಡಿದರೆ, ಇಬ್ಬರು ತೀರ್ಪುಗಾರರು ರಾಥೋಡ್ ಮತ್ತು ಯೂಸುಫ್ ಅವರಿಗೆ ಸಮಾನ ಪಾಯಿಂಟ್ಸ್ ಕೊಟ್ಟರು.

ಸೆಮಿಫೈನಲ್‌ನಲ್ಲಿ ರಾಥೋಡ್ , ಕಜಕಸ್ತಾನದ ನೂರ್‌ಸುಲ್ತಾನ್ ಅಲ್ತಿನ್ಬೆಕ್ ಅವರನ್ನು, ಹಿತೇಶ್, ಮಕಾನ್ ಟ್ರೋರ್ ಅವರನ್ನು, ಜಾಮವಾಲ್, ಇಟಲಯ ಗಿಯಾನ್‌ಲುಯಿಗಿ ಮಲಂಗ ಅವರನ್ನು ಎದುರಿಸಲಿದ್ದಾರೆ.

ನೆನಪುಗಳ ಓಟದ ನಡುವೆ ಪಂದ್ಯ ಶ್ರೇಷ್ಠ ಪ್ರಶಸ್ತಿ ಸ್ವೀಕರಿಸಿದ ಬೌಲರ್

ಆರ್‌ಸಿಬಿ ವಿರುದ್ಧ ಗೆದ್ದು ಬೀಗಿದ ಸಿರಾಜ್

ಬೆಂಗಳೂರು: ಹಾಲಿ ಆವೃತ್ತಿಯ ಐಪಿಎಲ್‌ನ ಮೊದಲೆರಡು ಪಂದ್ಯಗಳನ್ನು ಗೆದ್ದು, ಮೂರನೇ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡದ ಸವಾಲು ಎದುರಿಸಿ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಬುಧವಾರದ ಪಂದ್ಯದಲ್ಲಿ ಮಾಜಿ ಆರ್‌ಸಿಬಿ ಆಟಗಾರ ಮೊಹಮ್ಮದ್ ಸಿರಾಜ್ ಅವರೇ ಕಂಟಕವಾದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅದ್ಭುತ ಪ್ರದರ್ಶನ ನೀಡಿದ ಮೊಹಮ್ಮದ್ ಸಿರಾಜ್, ಗುಜರಾತ್ ಟೈಟನ್ಸ್ ತಂಡದ ಪರವಾಗಿ ಆಡಿ ತಮ್ಮ ಹಳೆಯ ತಂಡ ಆರ್‌ಸಿಬಿ ವಿರುದ್ಧ 3 ವಿಕೆಟ್ ಪಡೆದು ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು. 2018 ರಿಂದ 2024 ರವರೆಗೆ ಆರ್‌ಸಿಬಿ ತಂಡದಲ್ಲಿದ್ದ ಸಿರಾಜ್, ಕಳೆದ ಹರಾಜಿನಲ್ಲಿ ಜಿಟಿ ತಂಡದ ಪಾಲಾಗಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಯಾವಾಗಲೂ ಬ್ಯಾಟಿಂಗ್ ಸ್ನೇಹಿ. ಇಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ತಂಡ ರನ್ ಮಳೆ ಸುರಿಸುತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಗುಜರಾತ್



ಬೌಲರ್ಸ್ ಆರ್‌ಸಿಬಿ ತಂಡವನ್ನು ಕೇವಲ 169 ರನ್‌ಗಳ ಅಲ್ಪ ಮೊತ್ತಕ್ಕೆ ಕಟ್ಟಿ ಹಾಕಿದರು. ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ ಸೇರಿದಂತೆ ಅಗ್ರ ಕ್ರಮಾಂಕದ ಮೂವರು ಬ್ಯಾಟರ್‌ಗಳು ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಸಿರಾಜ್, ಪವರ್‌ಪ್ಲೇನಲ್ಲಿ ಅದ್ಭುತವಾಗಿ ಬೌಲಿಂಗ್ ಮಾಡಿ , ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್ ಮತ್ತು ಲಿಯಾಮ್ ಲಿವಿಂಗ್‌ಸ್ಟನ್ ವಿಕೆಟ್‌ಗಳನ್ನು ಪಡೆದರು. ನಂತರ ಕ್ರಿಸ್ಟಿಯಾನೋ ರೊನಾಲ್ಡೊ ಅವರ 'ಸಿಯು' ಶೈಲಿಯಲ್ಲಿ ಸಂಭ್ರಮಿಸಿದರು.

ಭಾವುಕರಾದ ಸಿರಾಜ್

ಪಂದ್ಯ ಶ್ರೇಷ್ಠ ಪ್ರಶಸ್ತಿ ಸ್ವೀಕರಿಸಿದ ನಂತರ ಸಿರಾಜ್ ಮಾತನಾಡಿ, ನಾನು ಸ್ವಲ್ಪ ಭಾವನಾತ್ಮಕನಾಗಿದ್ದೆ. ನಾನು 7 ವರ್ಷ ಇಲ್ಲಿ (ಆರ್‌ಸಿಬಿ) ಇದ್ದೆ. ಇದೀಗ ಕೆಂಪು ಜೆರ್ಸಿಯಿಂದ ನೀಲಿ ಜೆರ್ಸಿಗೆ ಬದಲಾಗಿದ್ದೇನೆ. ಪಂದ್ಯದ ಆರಂಭಕ್ಕೂ ಮುನ್ನ ಸ್ವಲ್ಪ ಆತಂಕ ಇತ್ತು. ಆದರೆ ಕೈಗೆ ಚೆಂಡು ಸಿಕ್ಕಿದ ತಕ್ಷಣ, ನಾನು ಬೌಲಿಂಗ್‌ನತ್ತ ಪೂರ್ಣ ಗಮನಹರಿಸಿದೆ ಎಂದು ಹೇಳಿದರು. ಜೋಸ್ ಬಟ್ಲರ್ ಮತ್ತು ಸಾಯಿ ಸುದರ್ಶನ್ ಅವರ ಮಿಂಚಿನ ಆಟದ ಫಲವಾಗಿ ಗುಜರಾತ್ ಟೈಟನ್ಸ್ ತಂಡ ಆರ್‌ಸಿಬಿ ನೀಡಿದ 170 ರನ್‌ಗಳ ಗುರಿಯನ್ನು ಸುಲಭವಾಗಿ ಭೇದಿಸಿತು. 13 ಎಸೆತಗಳು ಬಾಕಿ ಇರುವಂತೆಯೇ 8 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತು.

ಕೊಹ್ಲಿಗೆ ಗಾಯ: ಅಭಿಮಾನಿಗಳಲ್ಲಿ ಆತಂಕ

ಬೆಂಗಳೂರು: ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ಅವರ ಕೈ ಬೆರಳಿಗೆ ಗಾಯವಾಗಿರುವುದು ಅಭಿಮಾನಿಗಳ ಆತಂಕಕ್ಕೆ ಕಾರಣವಾಗಿದೆ. ಏಪ್ರಿಲ್ ಏಳರಂದು ನಡೆಯುವ ಮುಂಬಯಿ ವಿರುದ್ಧದ ಪಂದ್ಯಕ್ಕೆ ಕೊಹ್ಲಿ ಲಭ್ಯತೆ ಬಗ್ಗೆ ಸಂದೇಹ ಉಂಟಾಗಿದೆ.

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಬುಧವಾರ ನಡೆದ ಪಂದ್ಯದ ವೇಳೆ ಡೀಪ್ ಮಿಡ್ ವಿಕೆಟ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ವೇಳೆ ಕೊಹ್ಲಿ ಅವರ ಕೈ ಬೆರಳಿಗೆ ಗಾಯವಾಗಿದೆ. 12ನೇ ಓವರ್‌ನಲ್ಲಿ ಕೃಣಾಲ್ ಪಾಂಡ್ಯ ಓವರ್‌ನ ಐದನೇ ಎಸೆತದಲ್ಲಿ ಗುಜರಾತ್‌ನ ಸಾಯಿ ಸುದರ್ಶನ್ ಬಲವಾಗಿ ಸ್ವೀಪ್ ಹೊಡೆದರು. ಈ ವೇಳೆ ಚೆಂಡು ನೇರವಾಗಿ ಡೀಪ್ ಮಿಡ್ ವಿಕೆಟ್ ನತ್ತ ಸಾಗಿದಾಗ ವಿರಾಟ್ ಕೊಹ್ಲಿ ಚೆಂಡನ್ನು ಹಿಡಿಯಲು ಪ್ರಯತ್ನಿಸಿದ್ದರು ಈ ವೇಳೆ ಚೆಂಡು ಕೊಹ್ಲಿ ಕೈಗೆ ತಾಗಿ ಬೌಂಡರಿ ಲೈನ್ ದಾಟಿತು. ಈ ವೇಳೆ ಕೊಹ್ಲಿ ಕೈ ಬೆರಳಿಗೆ ಗಾಯವಾಗಿತು. ನೋವಿಗೆ ತುತ್ತಾದ ಕೊಹ್ಲಿ ಮೈದಾನದಲ್ಲೇ ಕೆಲ ಹೊತ್ತು ಒದ್ದಾಡಿದರು. ಕೂಡಲೇ ತಂಡದ ವೈದ್ಯರು ಕೊಹ್ಲಿಯನ್ನು ಪರೀಕ್ಷಿಸಿ, ಪ್ರಥಮ ಚಿಕಿತ್ಸೆ ನೀಡಿದರು. ಕೂಡಲೇ ಚೇತರಿಸಿಕೊಂಡು ಕೊಹ್ಲಿ ಫೀಲ್ಡಿಂಗ್ ಮುಂದುವರಿಸಿದರು. ಆದರೆ, ನೋವಿನಿಂದಾಗಿ ಕೊಹ್ಲಿ ಕೈ ಕುಲುಕುತ್ತಲೇ ಇದ್ದರು.

ಈ ಮಧ್ಯೆ ಕೊಹ್ಲಿ ಬೆರಳಿನ ಗಾಯದ ಕುರಿತು ಆರ್‌ಸಿಬಿ ತಂಡದ ಮುಖ್ಯ ಕೋಚ್ ಆಂಡಿ ಫ್ಲವರ್ ಪ್ರತಿಕ್ರಿಯಿಸಿದ್ದು, ಗಾಯ ಅಷ್ಟೇನೂ ಗಂಭೀರವಾಗಿಲ್ಲ. ಮುಂದಿನ ಪಂದ್ಯದ ವೇಳೆ ಅವರು ಚೇತರಿಸಿಕೊಳ್ಳಲಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.